ಗುರುವಾರ, ಮಾರ್ಚ್ 27, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 86 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಹಕಾರ ಸಂಘಗಳ ಸ್ಥಿತಿಗತಿ

8.32 ಲಕ್ಷ ದೇಶದಲ್ಲಿರುವ ಒಟ್ಟು ಸಹಕಾರ ಸಂಘಗಳ ಸಂಖ್ಯೆ

6.37 ಲಕ್ಷ ಕಾರ್ಯಾಚರಣೆಯಲ್ಲಿ ಇರುವ ಸಂಘಗಳ ಸಂಖ್ಯೆ

1.50 ಲಕ್ಷ ಕಾರ್ಯಾಚರಣೆ ಸ್ಥಗಿತಗೊಳಿಸಿರುವ ಸಂಘಗಳು

45,811 ದುರಾಡಳಿತ, ಸ್ವಜನಪಕ್ಷಪಾತದಿಂದ ದಿವಾಳಿ ಅಂಚಿಗೆ ತಲುಪಿರುವ ಸಂಘಗಳು

(ರಾಜ್ಯಸಭೆಗೆ ಕೇಂದ್ರ ಸರ್ಕಾರ ನೀಡಿರುವ ಮಾಹಿತಿ)

ಆಳ–ಅಗಲ
ಸಂತೃಪ್ತ ಜೀವನ ಭಾರತ ಹಿಂದೆ

ಅತ್ಯಾಚಾರ: ಹೈಕೋರ್ಟ್ ಮಾತಿಗೆ 'ಸುಪ್ರೀಂ' ತಡೆ 4

ಗ್ರೇಟರ್ ಬೆಂಗಳೂರು ಮಸೂದೆ ವಾಪಸ್ 5A

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
77,288	23,486	₹92,640 (ಬೆಂಗಳೂರು)	₹1.04 ಲಕ್ಷ (ಬೆಂಗಳೂರು)	85.69

ಮಧುಬಲೆ

ಪ್ರಾಥಮಿಕ ತನಿಖೆಗೆ ಸಚಿವರ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧುಬಲೆಗೆ (ಹನಿಟ್ರ್ಯಾಪ್) ಕೆಡವಲು ಯತ್ನಿಸಿದ ಪ್ರಕರಣದ ಕುರಿತು ಉನ್ನತಮಟ್ಟದ ತನಿಖೆ ನಡೆಸುವಂತೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರು ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ಸಲ್ಲಿಸಿದ್ದ ಪತ್ರವನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರಿಗೆ ರವಾನೆ ಮಾಡಲಾಗಿದೆ.

'ಪ್ರಕರಣದ ಸಂಬಂಧ ಪ್ರಾಥಮಿಕ ತನಿಖೆ ನಡೆಸಿ, ಮಾಹಿತಿ ಕಲೆ ಹಾಕುವಂತೆ ಡಿಜಿಪಿಗೆ ಗೃಹ ಸಚಿವರು ಸೂಚಿಸಿದ್ದಾರೆ' ಎಂದು ಗೊತ್ತಾಗಿದೆ.

ಮೂರು ಪುಟಗಳ ಪತ್ರವನ್ನು ರಾಜಣ್ಣ ಅವರು ಗೃಹ ಸಚಿವರಿಗೆ ನೀಡಿದ್ದರು. ಆ ಪತ್ರವನ್ನು ಮಂಗಳವಾರ ರಾತ್ರಿಯೇ ಡಿಜಿಪಿ ಕಚೇರಿಗೆ ರವಾನೆ ಮಾಡಲಾಗಿತ್ತು. ಕಾನೂನು ತಜ್ಞರ ಸಲಹೆ ಪಡೆದು ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳುವಂತೆಯೂ ಗೃಹ ಸಚಿವರು ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಜಯೇಂದ್ರ ವಿರುದ್ಧ ತೊಡೆತಟ್ಟಿದ್ದ ನಾಯಕ • ಪಕ್ಷದಿಂದ 6 ವರ್ಷ ಉಚ್ಚಾಟನೆ

ಯತ್ನಾಳ ಹೊರದಬ್ಬಿದ ಬಿಜೆಪಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಹಾಗೂ ಆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಸಮರ ಸಾರಿ ನಿರಂತರ ಟೀಕಾ ಪ್ರಹಾರ ನಡೆಸಿದ್ದ ವಿಜಯಪುರ ನಗರ ಕ್ಷೇತ್ರದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳಿಗೆ ಉಚ್ಚಾಟನೆ ಮಾಡಲಾಗಿದೆ. ಆ ಮೂಲಕ ವಿಜಯೇಂದ್ರ ಅವರು ಮೇಲುಗೈ ಸಾಧಿಸಿದಂತಾಗಿದೆ.

ಯಡಿಯೂರಪ್ಪ ಕುಟುಂಬ ಭ್ರಷ್ಟಾ ಚಾರ, ಹೊಂದಾಣಿಕೆ ರಾಜಕಾರಣದಲ್ಲಿ ತೊಡಗಿದೆ ಎಂದು ಆರೋಪಿಸಿ ಯತ್ನಾಳ ಅವರು ಕಳೆದೊಂದು ವರ್ಷದಿಂದ ವಾಚಾಮ ಗೋಚರವಾಗಿ ಬೈದಿದ್ದರು. ವಿಜಯೇಂದ್ರ ಅವರನ್ನು ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಸಬಾರದು ಎಂದು ಪಟ್ಟು ಹಿಡಿದಿದ್ದರು. ರಾಜ್ಯ ಘಟಕದ ಅಧ್ಯಕ್ಷರ ವಿರುದ್ಧ ದೂರು ಸಲ್ಲಿಸಲು ವರಿಷ್ಠರ ಭೇಟಿಗೆ ಪ್ರಯತ್ನ ಪಟ್ಟಿದ್ದರೂ ಅವರಿಗೆ ಅವಕಾಶ ಸಿಕ್ಕಿರಲಿಲ್ಲ.

4ನೇ ಪುಟ ನೋಡಿ

'ಸತ್ಯವಂತರಿಗಿದು ಕಾಲವಲ್ಲ ದುಷ್ಟರಿಗೆ ಸುಭಿಕ್ಷಕಾಲ'

ಬಸನಗೌಡ ಯತ್ನಾಳ

ಬೆಂಗಳೂರು: 'ಪಕ್ಷದೊಳಗಿನ ಕುಟುಂಬ ರಾಜಕಾರಣ, ಭ್ರಷ್ಟಾಚಾರದ ವಿರುದ್ಧ ಮಾತನಾಡಿದ ಕಾರಣಕ್ಕೆ ಸಿಕ್ಕ ಪ್ರತಿಫಲವಿದು' ಎಂದು ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ.

ತಮ್ಮನ್ನು ಪಕ್ಷದಿಂದ ಆರು ವರ್ಷ ಅವಧಿಗೆ ಉಚ್ಚಾಟಿಸಿರುವ ಕುರಿತು 'ಎಕ್ಸ್'ನಲ್ಲಿ ಅವರು ಪ್ರತಿಕ್ರಿಯಿಸಿದ್ದಾರೆ. 'ಪಕ್ಷದಲ್ಲಿ ಏಕವ್ಯಕ್ತಿಯ ಆಧಿಪತ್ಯ ವನ್ನು ತೊಡೆದು ಹಾಕುವುದಕ್ಕಾಗಿ ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಹೋರಾಟ ನಡೆಸಿದ್ದ ಕ್ಕಾಗಿ ಹಾಗೂ ಇದ್ದದ್ದನ್ನು ಇದ್ದ ಹಾಗೇ ಹೇಳಿದ್ದಕ್ಕಾಗಿ ನನಗೆ ಉಚ್ಚಾಟನೆಯ ಬಹುಮಾನ ನೀಡಿದ್ದಾರೆ. ಸ್ಥಾಪಿತ ಹಿತಾಸಕ್ತಿಗಳು ಅವರ ಕಾರ್ಯಸೂಚಿಯನ್ನು ಯಶಸ್ವಿಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿವೆ' ಎಂದು ಅವರು ಹೇಳಿದ್ದಾರೆ. 'ಸತ್ಯವಂತರಿಗಿದು ಕಾಲ ವಲ್ಲ, ದುಷ್ಟಜನರಿಗೆ ಸುಭಿಕ್ಷಕಾಲ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

4ನೇ ಪುಟ ನೋಡಿ

'ಈ ಕ್ರಮ ದುರದೃಷ್ಟಕರವೆಂದು ದುಃಖಿಸುವೆ, ಸಂಭ್ರಮ ಬೇಡ'

ವಿಜಯೇಂದ್ರ

'ಬಸನಗೌಡ ಪಾಟೀಲ ಯತ್ನಾಳ ವಿರುದ್ಧದ ಶಿಸ್ತುಕ್ರಮ ವರಿಷ್ಠರು ಸುದೀರ್ಘ ಅವಧಿಯಿಂದ ಸ್ಥಿತಿ–ಗತಿಗಳನ್ನು ಅವಲೋಕಿಸಿ ಅನಿವಾರ್ಯವಾಗಿ ತೆಗೆದುಕೊಂಡಿ ರುವ ಕ್ರಮ. ಈ ಶಿಸ್ತು ಕ್ರಮವನ್ನು ನಾನು ಸಂಭ್ರಮಿಸಲಾರೆ. ಬದಲಾಗಿ ಈ ಬೆಳವಣಿಗೆಯನ್ನು ದುರದೃಷ್ಟಕರವೆಂದು ದುಃಖಿಸುತ್ತೇನೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿರುವ ಅವರು, ಅಶಿಸ್ತಿನ ವಿರುದ್ಧ ಪಕ್ಷದ ವರಿಷ್ಠರು ಕೈಗೊಂಡಿರುವ ನಿರ್ಧಾರವನ್ನು ಯಾರೂ ಸಂಭ್ರಮಿಸುವುದು ಬೇಡ. ಶಿಸ್ತುಬದ್ಧ ಸಂಘಟನೆಯ ವ್ಯವಸ್ಥೆಯಲ್ಲಿರುವ ನಾವು ಪಕ್ಷದ ವರಿಷ್ಠರ ನಿರ್ಧಾರವನ್ನು ಗೌರವಿಸಿ, ಮುಂಬರುವ ದಿನಗಳಲ್ಲಿ ಪಕ್ಷ ಕಟ್ಟುವತ್ತ ಹಾಗೂ ರಾಜ್ಯದಲ್ಲಿ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಕೈಗೊಳ್ಳಬೇಕಿರುವ ಹೋರಾಟಗಳತ್ತ ಒಗ್ಗಟ್ಟಿನ ಸಂಕಲ್ಪ ತೊಟ್ಟು ಮುನ್ನಡೆಯೋಣ' ಎಂದಿದ್ದಾರೆ.

4ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸತೀಶ–ಎಚ್‌ಡಿಕೆ ಭೇಟಿ ಸಂಚಲನ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯ ರಾಜಕಾರಣದಲ್ಲಿ ಮಧುಬಲೆ (ಹನಿ ಟ್ರ್ಯಾಪ್) ಪ್ರಕರಣ ಭಾರಿ ಸಂಚಲನ ಸೃಷ್ಟಿಸಿರುವ ಹೊತ್ತಿನಲ್ಲೇ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಬುಧವಾರ ಇಲ್ಲಿ ಭೇಟಿ ಮಾಡಿ ಸಮಾಲೋಚನೆ ನಡೆಸಿರುವುದು ಚರ್ಚೆಗೆ ಗ್ರಾಸವಾಗಿದೆ.

ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಹಾಗೂ ಕಾಂಗ್ರೆಸ್ ಹೈಕಮಾಂಡ್ ನಾಯಕರ ಭೇಟಿ ಗಾಗಿ ರಾಷ್ಟ್ರ ರಾಜಧಾನಿಗೆ ಬಂದಿರುವ ಜಾರಕಿಹೊಳಿ ಅವರು ಸಂಸತ್ ಭವನದಲ್ಲಿ ಕುಮಾರಸ್ವಾಮಿ ಜತೆಗೆ ಸುಮಾರು 40 ನಿಮಿಷ ಚರ್ಚಿಸಿದರು. ಇದೇ ವೇಳೆ, ದೇವೇಗೌಡರನ್ನು ಭೇಟಿ ಮಾಡಿ ಸಮಾಲೋಚಿಸಿದರು.

ಕುಮಾರಸ್ವಾಮಿ ಅವರೊಂದಿಗೆ ಸತೀಶ ಜಾರಕಿಹೊಳಿ ಸಮಾಲೋಚಿಸಿದರು

ಮಧುಬಲೆ ಪ್ರಕರಣ ಸಂಬಂಧ ರಾಷ್ಟ್ರೀಯ ನಾಯಕರು ಮಧ್ಯಪ್ರವೇಶಿಸಬೇಕು ಎಂದು ಒತ್ತಾಯಿಸಿ ಜಾರಕಿಹೊಳಿ ಅವರು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ದೂರು ಸಲ್ಲಿಸಿದ್ದರು. ಅದರ ಬೆನ್ನಲ್ಲೇ, ಜೆಡಿಎಸ್‌ನ ಉನ್ನತ ನಾಯಕರನ್ನು ಭೇಟಿ ಮಾಡಿರುವುದು ಕುತೂಹಲಕ್ಕೆ ಕಾರಣವಾಗಿದೆ.

> **ಕುಮಾರಸ್ವಾಮಿ ಭೇಟಿ ಬಗ್ಗೆ ಇಲ್ಲಿ ಪ್ರತಿಕ್ರಿಯೆ ನೀಡುವುದಿಲ್ಲ. ಬೆಂಗಳೂರಿಗೆ ಮರಳಿದ ಬಳಿಕ ವಿಸ್ತೃತವಾಗಿ ಮಾತನಾಡುತ್ತೇನೆ**
> **ಸತೀಶ ಜಾರಕಿಹೊಳಿ,** ಲೋಕೋಪಯೋಗಿ ಸಚಿವ

'ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಹಲವು ಪ್ರಸ್ತಾವಗಳು ಕೇಂದ್ರದಲ್ಲಿ ಅನುಮೋದನೆಗೆ ಬಾಕಿ ಉಳಿದಿವೆ. ಕಳೆದ 20 ತಿಂಗಳಲ್ಲಿ ಹತ್ತು ಬಾರಿ ಗಡ್ಕರಿ ಅವರನ್ನು ಭೇಟಿ ಮಾಡಿದ್ದೇನೆ. 11 ಯೋಜನೆಗಳ ಅನುಷ್ಠಾನಕ್ಕೆ ಇದ್ದ ತೊಡಕುಗಳನ್ನು ಬಗೆಹರಿಸಲಾಗಿದೆ' ಎಂದರು.

5ನೇ ಪುಟ ನೋಡಿ

₹8.63 ಕೋಟಿ ಮರುಪಾವತಿ ಬಿಡಿಎಗೆ ಕೋರ್ಟ್ ಆದೇಶ

ಅರಸು ಟ್ರಕ್ ಟರ್ಮಿನಲ್‌ಗೆ ಭೂಮಿ ಹಸ್ತಾಂತರ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತಕ್ಕೆ (ಡಿಡಿಯುಟಿಟಿಎಲ್) ಭೂಮಿ ಹಸ್ತಾಂತರಿಸಲು ವಿಳಂಬ ಮಾಡಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕಾರ್ಯವೈಖರಿಗೆ, 85ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಚಾಟಿ ಬೀಸಿದೆ.

ಸುಸಜ್ಜಿತ ಟ್ರಕ್ ನಿರ್ಮಾಣಕ್ಕೆ ಸಕಾಲದಲ್ಲಿ ಜಮೀನು ಸಿಗದೆ ತೊಂದರೆಗೆ ಸಿಲುಕಿದ ಡಿಡಿಯುಟಿಟಿಎಲ್‌ಗೆ ₹8.63 ಕೋಟಿಯನ್ನು ಶೇ 6ರಷ್ಟು ಬಡ್ಡಿದರದಲ್ಲಿ ಮರುಪಾವತಿಸುವಂತೆ ಬಿಡಿಎಗೆ ಆದೇಶಿಸಿದೆ.

ಪ್ರಕರಣ ಏನು?: ಬೆಂಗಳೂರು ನಗರದ ವಾಹನ ಸಂಚಾರ ದಟ್ಟಣೆ ನಿಯಂತ್ರಿಸುವ ಉದ್ದೇಶದಿಂದ ಬಿಡಿಎ ಆಡಳಿತವು 2006ರಲ್ಲಿ ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣಕ್ಕೆ ಮುಂದಾಗಿತ್ತು. ಇದಕ್ಕೆ ಹೊಂದಿಕೊಂಡಂತೆ ರಾಷ್ಟ್ರೀಯ ಹೆದ್ದಾರಿ/ವರ್ತುಲ ರಸ್ತೆಯಲ್ಲಿ ಸುಸಜ್ಜಿತ ಟ್ರಕ್ ನಿರ್ಮಾಣಕ್ಕೆ ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತವು ನಿರ್ಧರಿಸಿತ್ತು.

2006ರ ಜುಲೈ 3ರಂದು ನಡೆದ ಡಿಡಿಯುಟಿಟಿಎಲ್ ಆಡಳಿತ ಮಂಡಳಿ ಸಭೆಯು ಅಗತ್ಯ ಜಮೀನು ಮಂಜೂರು ಮಾಡುವಂತೆ ಕೋರಿ ಬಿಡಿಎಗೆ ಮನವಿ ಸಲ್ಲಿಸಲು ನಿರ್ಣಯ ಅಂಗೀಕರಿಸಿತ್ತು. ಬಳಿಕ ಪ್ರತಿ ಎಕರೆಗೆ ₹2.20 ಕೋಟಿಯಂತೆ 255 ಎಕರೆ ಜಮೀನನ್ನು ಹಸ್ತಾಂತರಿಸುವಂತೆ ಮನವಿ ಸಲ್ಲಿಸಿತ್ತು.

ರಾಜ್ಯ ಸರ್ಕಾರ ಕೂಡ 2007ರ ಜ.23ರಂದು ₹5 ಕೋಟಿಯನ್ನು ಡಿಡಿಯುಟಿಟಿಎಲ್‌ಗೆ ಬಿಡುಗಡೆ ಮಾಡಿತ್ತು. ಆ ನಂತರ ಡಿಡಿಯುಟಿಟಿಎಲ್ ಆಡಳಿತವು ಒಟ್ಟು ₹6 ಕೋಟಿಯನ್ನು ಆರು ಕಂತುಗಳಲ್ಲಿ ಬಿಡಿಎಗೆ ಬಿಡುಗಡೆ ಮಾಡಿತ್ತು. ಆದರೆ, ಭೂಮಿ ಹಸ್ತಾಂತರ ಮಾಡಿರಲಿಲ್ಲ. ಈ ವಿಳಂಬದ ಬಗ್ಗೆ 2008ರ ಜನವರಿ 30ರಂದು ಬಿಡಿಎಗೆ ಮನವಿ ಕೂಡ ಸಲ್ಲಿಸಲಾಗಿತ್ತು.

ಈ ಬಗ್ಗೆ 2020ರ ಮಾರ್ಚ್ 7ರಂದು ಡಿಡಿಯುಟಿಟಿಎಲ್‌ಗೆ ಮಾಹಿತಿ ನೀಡಿದ್ದ ಬಿಡಿಎ, ಅಗತ್ಯವಿರುವ ಜಮೀನನ್ನು ಸ್ವಾಧೀನಪಡಿಸಿಕೊಂಡು ಆದ್ಯತೆ ಮೇರೆಗೆ ಹಸ್ತಾಂತರ ಮಾಡುವುದಾಗಿ ತಿಳಿಸಿತ್ತು.

ಜಮೀನು ಹಸ್ತಾಂತರ ವಿಳಂಬದ ಬಗ್ಗೆ ಅಸಮಾಧಾನಗೊಂಡಿದ್ದ ಡಿಡಿಯುಟಿಟಿಎಲ್ ಆಡಳಿತ ಮಂಡಳಿಯು 2022ರ ಮೇ 9ರಂದು ನಡೆದ ಸಭೆಯಲ್ಲಿ ಬಡ್ಡಿಸಹಿತ ₹6 ಕೋಟಿಯನ್ನು ವಾಪಸ್ ಪಡೆಯಲು ನಿರ್ಣಯ ಅಂಗೀಕರಿಸಿ, ಬಿಡಿಎಗೆ ಕೋರಿಕೆ ಪತ್ರ ಸಲ್ಲಿಸಿತ್ತು.

ಆದರೆ, ಬಿಡಿಎ ಆಡಳಿತವು 2023ರ ಆ.9ರಂದು ₹3 ಕೋಟಿಯನ್ನಷ್ಟೇ ವರ್ಗಾಯಿಸಿತ್ತು. ಉಳಿದ ಮೊತ್ತವನ್ನು ಮರುಪಾವತಿಸಿರಲಿಲ್ಲ. ಇದನ್ನು ಪ್ರಶ್ನಿಸಿ ಡಿಡಿಯುಟಿಟಿಎಲ್ ಕೋರ್ಟ್ ಮೊರೆ ಹೋಗಿತ್ತು.

ಬಿಜೆಪಿಯ ದ್ವಿಮುಖ ನೀತಿ ಪ್ರಶ್ನಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

‘ಈದ್ ಕಿಟ್ ವಿತರಣೆ ತುಷ್ಟೀಕರಣವಲ್ಲವೆ’

ಪ್ರಜಾವಾಣಿ ವಾರ್ತೆ

ದಿನೇಶ್ ಗುಂಡೂರಾವ್

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ಹೆಸರಿನಲ್ಲಿ ಬಿಜೆಪಿ ಮುಖಂಡರು ‘ಈದ್ ಕಿಟ್’ ನೀಡುತ್ತಿದ್ದಾರೆ. ಇದು ತುಷ್ಟೀಕರಣ ಅಲ್ಲವೆ? ಓಲೈಕೆ ರಾಜಕಾರಣ ಅಲ್ಲವೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರಶ್ನಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಂಜಾನ್ ಪ್ರಯುಕ್ತ ಮುಸ್ಲಿಮರಿಗೆ ಈದ್ ಕಿಟ್ ವಿತರಿಸುತ್ತಿರುವುದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ, ಇದೇ ಕಾರ್ಯಕ್ರಮವನ್ನು ಕಾಂಗ್ರೆಸ್‌ನವರು ಮಾಡಿದ್ದರೆ ಪರಿಸ್ಥಿತಿ ಬೇರೆಯೇ ಆಗಿರುತ್ತಿತ್ತು. ಕಾಂಗ್ರೆಸ್‌ನವರು ಈದ್ ಕಿಟ್ ನೀಡಿದರೆ ಬಿಜೆಪಿಯ ನಾಯಕರು ಇಷ್ಟೊತ್ತಿಗಾಗಲೇ ಬೀದಿಗಿಳಿಯುತ್ತಿದ್ದರು. ಕಾಂಗ್ರೆಸ್ ಪಕ್ಷವು ಮುಸ್ಲಿಮರ ತುಷ್ಟೀಕರಣ ಮಾಡುತ್ತಿದೆ, ಓಲೈಕೆ ರಾಜಕಾರಣ ಮಾಡುತ್ತಿದೆಯೆಂದು ಬೊಂಬಡ ಬಜಾಯಿಸುತ್ತಿದ್ದರು’ ಎಂದರು.

‘ದೇಶದಲ್ಲಿ ಎಲ್ಲರೂ ಒಂದೇ. ಅನಗತ್ಯವಾಗಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂದು ಬಿಜೆಪಿ ಮುಖಂಡರು ತಿರುಗಾಡಿಕೊಂಡಿದ್ದಾರೆ. ಈ ರೀತಿ ಏಕೆ ಮಾಡುತ್ತಿದ್ದಾರೆ ಎಂಬುದನ್ನು ವಿಜಯೇಂದ್ರ, ಅಶೋಕ, ಅಶ್ವತ್ಥನಾರಾಯಣ, ಸಿ.ಟಿ.ರವಿ ಹೇಳಲಿ’ ಎಂದರು.

ಡಿ.ಕೆ. ಶಿವಕುಮಾರ್ ಅವರು ಸಂವಿಧಾನ ಬದಲಾಯಿಸುವ ಬಗ್ಗೆ ಹೇಳಿಕೆ ನೀಡಿದ್ದಾರೆ ಎನ್ನಲಾದ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, ‘ಸುಳ್ಳಿನ ಮೇಲೆ ಬಿಜೆಪಿಯರು ಹೋರಾಟ ಮಾಡುತ್ತಿದ್ದಾರೆ. ಕೇಂದ್ರ ಸಚಿವ ಕಿರಣ್ ರಿಜಿಜು ರಾಜೀನಾಮೆ ನೀಡಬೇಕು’ ಎಂದರು.

ಆಹಾರ ಕಿಟ್ ವಿತರಣೆ

ಪುಲಕೇಶಿನಗರ ವಿಧಾನಸಭಾ ಕ್ಷೇತ್ರವ್ಯಾಪ್ತಿಯ ಪೆರಿಯಾರ್ ನಗರದಲ್ಲಿ ರಂಜಾನ್ ಪ್ರಯುಕ್ತ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಬಡಜನರಿಗೆ ಆಹಾರದ ಕಿಟ್‌ಗಳನ್ನು ವಿತರಿಸಿದರು.

‘ಪುಲಕೇಶಿನಗರ ಕೇತ್ರ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಡಜನರು ವಾಸಿಸುತ್ತಿದ್ದು, ಸಂತೋಷದಿಂದ ರಂಜಾನ್ ಆಚರಿಸಲಿ ಎಂಬ ಉದ್ದೇಶದಿಂದ ಶಾಸಕ ಶ್ರೀನಿವಾಸ್ ಹಾಗೂ ಕಾಂಗ್ರೆಸ್ ಮುಖಂಡರು ಆಹಾರದ ಕಿಟ್ ವಿತರಿಸುತ್ತಿರುವುದು ಶ್ಲಾಘನೀಯ’ ಎಂದರು.

ಶಾಸಕ ಎ.ಸಿ.ಶ್ರೀನಿವಾಸ್ ಮಾತನಾಡಿ, ‘ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಅಲ್ಪಸಂಖ್ಯಾತರು, ಹಿಂದುಳಿದವರ್ಗ ಹಾಗೂ ಬಡಜನರು ಚುನಾವಣೆಯಲ್ಲಿ ಅತಿಹೆಚ್ಚು ಮತಗಳಿಂದ ಜಯಗಳಿಸಲು ನನಗೆ ಬೆಂಬಲ ನೀಡಿದ್ದಾರೆ. ಅವರಿಗೆ ಅನುಕೂಲವಾಗಲಿ ಎಂದು 10 ಸಾವಿರಕ್ಕೂ ಹೆಚ್ಚು ಆಹಾರದ ಕಿಟ್‌ಗಳನ್ನು ವಿತರಿಸಲಾಗಿದೆ’ ಎಂದು ತಿಳಿಸಿದರು.

ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಆಹಾರದ ಕಿಟ್ ವಿತರಿಸಿದರು. ಶಾಸಕ ಎ.ಸಿ. ಶ್ರೀನಿವಾಸ್ ಉಪಸ್ಥಿತರಿದ್ದರು

ಕಾವೇರಿ ನೀರಿಗಾಗಿ ಸರದಿಯಲ್ಲಿ ಕಾಯುತ್ತಿರುವ ಮಹಿಳೆಯರು

‘ಕೆಂಗುಂಟೆಯಲ್ಲಿ ನೀರಿಲ್ಲ ಆದರೂ ಬರುತ್ತಿದೆ ಬಿಲ್’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಆರ್.ಆರ್.ನಗರ ವ್ಯಾಪ್ತಿಯ ಜ್ಞಾನಭಾರತಿ ವಾರ್ಡ್‌ನ ಮಲ್ಲತ್ತಹಳ್ಳಿ ಎಂಪಿಎಂ ಲೇಔಟ್‌ಗೆ ಹೊಂದಿಕೊಂಡಂತಿರುವ ಕೆಂಗುಂಟೆಯ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಕಾವೇರಿ ನೀರು ಪೂರೈಕೆಯಾಗದಿದ್ದರೂ ಪ್ರತಿ ತಿಂಗಳು ಬಿಲ್ ಮಾತ್ರ ಹೆಚ್ಚು ಬರುತ್ತಿದೆ ಎಂದು ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೀರಿನ ಬಿಲ್

ಎಂಪಿಎಂ ಲೇಔಟ್‌ನ ಕೆಂಗುಂಟೆಯ ರೆವಿನ್ಯೂ ಬಡಾವಣೆಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸಲಾಗಿತ್ತು, ಎರಡು ವರ್ಷದ ಹಿಂದೆ ಹಳೆಯ ಪೈಪುಗಳನ್ನು ಕಿತ್ತುಹಾಕಿ ಹೊಸ ಪೈಪುಗಳನ್ನು ಅಳವಡಿಸಿದ ನಂತರ ಕೆಲವು ಮನೆಗಳಿಗೆ ನೀರು ಪೂರೈಕೆ ಸಮಯವೂ ಕಡಿಮೆಯಾಗಿದ್ದು, ಸಣ್ಣದಾಗಿ ನೀರು ಬರುತ್ತದೆ. ಆದರೆ ನೀರಿನ ಬಿಲ್ಲು ಮಾತ್ರ ಹೆಚ್ಚು ಬರುತ್ತಿದೆ’ ಎಂದು ನಾಗರಿಕರು ದೂರುತ್ತಿದ್ದಾರೆ.

’ಪ್ರತಿ ತಿಂಗಳು ₹350ರಿಂದ ₹450ರವರೆಗೂ ನೀರಿನ ಬಿಲ್ಲು ಪಾವತಿಸುತ್ತೇವೆ. ಸರಿಯಾಗಿ ನೀರು ಬರುತ್ತಿಲ್ಲ. ಹಳೆಯ ಕೊಳವೆಗಳಿದ್ದಾಗ ಸರಿಯಾಗಿ ನೀರು ಬರುತ್ತಿತ್ತು’ ಎಂದು ಸ್ಥಳೀಯ ನಿವಾಸಿ ಕುಮಾರಿ ಹೇಳಿದರು.

‘ಸರಿಯಾಗಿ ನೀರು ಬಂದಿಲ್ಲ. ಈ ತಿಂಗಳು ₹1534 ಬಿಲ್ ಬಂದಿದೆ. ನಾವು ಕೂಲಿ ಮಾಡುವವರು. ಎಲ್ಲಿಂದ ಇಷ್ಟೊಂದು ಹಣ ಹೊಂದಿಸುವುದು. ನೀರು ಬಂದಿಲ್ಲ ಅಂತ ಹಣಕೊಟ್ಟು ಟ್ಯಾಂಕರ್ ನೀರು ಹಾಕಿಸಿಕೊಳ್ಳುತ್ತಿದ್ದೇವೆ’ ಎಂದು ಗೌರಮ್ಮ ದೂರಿದರು.

‘ಕೆಲವು ಮನೆಗಳಿಗೆ ಸರಿಯಾಗಿ ಕಾವೇರಿ ನೀರು ಬರದಿದ್ದರೂ ಪ್ರತಿ ತಿಂಗಳು ನೀರಿನ ಬಿಲ್ ಬರುತ್ತದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಪರಿಸ್ಥಿತಿ ಬದಲಾಗಿಲ್ಲ ಎಂದು ನಿವಾಸಿಗಳಾದ ಹೇಮಾವತಿ, ರಂಜಿತಾ, ಶುಭಾ, ಉಷಾ, ಧನಲಕ್ಷ್ಮೀ, ಶಿವಣ್ಣ ಬೇಸರ ವ್ಯಕ್ತಪಡಿಸಿದರು.

‘ಕೊಳವೆ ಬಾವಿ ನೀರಿನ ಸಂಪರ್ಕವಿದ್ದರೂ ಆ ನೀರನ್ನು ಸಹ ಸರಿಯಾಗಿ ಪೂರೈಸುತ್ತಿಲ್ಲ. ಮೂರು ದಿನಕ್ಕೊಮ್ಮೆ ಒಂದು ಗಂಟೆ ನೀರು ಬಿಡುತ್ತಾರೆ. ಅದು ಯಾವುದಕ್ಕೂ ಸಾಕಾಗುವುದಿಲ್ಲ’ ಎಂದು ಹೇಳಿದರು.

ಬೆಂಗಳೂರು ಜಲಮಂಡಳಿಯ ನಾಗರಭಾವಿ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹರಿಕುಮಾರ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದಾಗ, ಅವರು ಲಭ್ಯವಾಗಲಿಲ್ಲ. ಸಹಾಯಕ ಎಂಜಿನಿಯರ್ ಯಶವಂತರಾಜ್ ಅವರನ್ನು ಸಂಪರ್ಕಿಸಿದಾಗ, ‘ನಿಮಗೆ ದೂರು ನೀಡಿದವರು ಯಾರು? ಎಲ್ಲಿ ನೀರು ಬರುತ್ತಿಲ್ಲ? ಎಂದು ಪ್ರಶ್ನಿಸಿದರು.

ಪದವಿ ಪ್ರದಾನ

ಜಾಗತಿಕ ಮಟ್ಟದಲ್ಲಿ ಆಭರಣ ಉದ್ಯಮಕ್ಕೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಜೋಯ್ ಅಲುಕ್ಕಾಸ್ ಅವರಿಗೆ (ಮಧ್ಯದಲ್ಲಿ ಇರುವವರು) ಪಂಜಾಬ್‌ನ ಚಿತ್ಕಾರ ವಿಶ್ವವಿದ್ಯಾಲಯವು ಡಿ.ಲಿಟ್ (ಆನರಿಸ್ ಕೌಸಾ) ಪದವಿ ನೀಡಿ ಗೌರವಿಸಿದೆ

ಮಾಲತಿ, ಸಿದ್ಧರಾಮಯ್ಯಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಾಲತಿ



ಸಿದ್ಧರಾಮಯ್ಯ

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘದ ವತಿಯಿಂದ ಗುರುಲಿಂಗ ಕಾಪಸೆ ದತ್ತಿಯಡಿ ನೀಡಲಾಗುವ ಗುರುಲಿಂಗ ಕಾಪಸೆ ಸಾಹಿತ್ಯ ಪ್ರಶಸ್ತಿಗೆ ಸಾಹಿತಿಗಳಾದ ಪ್ರೊ. ಮಾಲತಿ ಪಟ್ಟಣಶೆಟ್ಟಿ ಮತ್ತು ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಆಯ್ಕೆ ಆಗಿದ್ದಾರೆ.

‘ಪುರಸ್ಕಾರವು ತಲಾ ₹25 ಸಾವಿರ ನಗದು, ಫಲಕ ಒಳಗೊಂಡಿದೆ. ಏಪ್ರಿಲ್ 2ರಂದು ನಡೆಯುವ ಕಾಪಸೆ ಅವರ ಜನ್ಮದಿನ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ 40 ಸಾವಿರಕ್ಕೂ ಹೆಚ್ಚು ಮನೆಗಳಲ್ಲಿ 'ಮಳೆ ನೀರು ಸಂಗ್ರಹ'ಕ್ಕೆ ನಿರ್ಲಕ್ಷ್ಯ

ಜಲಮಂಡಳಿ: ₹32 ಕೋಟಿ ದಂಡ

• ಗಾಣಧಾಳು ಶ್ರೀಕಂಠ

ಬೆಂಗಳೂರು: ನಗರದಲ್ಲಿ 2,400 ಚದರಡಿ ಮತ್ತು ಅದಕ್ಕಿಂತ ಹೆಚ್ಚಿನ ವಿಸ್ತೀರ್ಣವಿರುವ ಎಲ್ಲ ಕಟ್ಟಡಗಳಿಗೆ ಮಳೆ ನೀರು ಸಂಗ್ರಹ ವಿಧಾನವನ್ನು ಜಲಮಂಡಳಿ ಕಡ್ಡಾಯಗೊಳಿಸಿದ್ದರೂ ನಗರದಲ್ಲಿ 40 ಸಾವಿರಕ್ಕೂ ಹೆಚ್ಚು ಮನೆಗಳಲ್ಲಿ ಈ ವಿಧಾನಗಳನ್ನು ಅಳವಡಿಸಿಕೊಂಡಿಲ್ಲ.

ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿ ಕೊಳ್ಳಲು ನಿರಾಸಕ್ತಿ ತೋರುತ್ತಿರುವ ನಾಗರಿಕರಿಗೆ ಕಾಯ್ದೆ ಪ್ರಕಾರ ದಂಡ ವಿಧಿಸಲಾಗಿದ್ದು, ಕಳೆದ ವರ್ಷ ಪ್ರತಿ ತಿಂಗಳು ₹2.7 ಕೋಟಿಯಂತೆ, ವಾರ್ಷಿಕ ಸುಮಾರು ₹32.40 ಕೋಟಿ ದಂಡ ಹಾಕಿದೆ. 2023ರಲ್ಲಿ ₹21 ಕೋಟಿ ದಂಡವನ್ನು ಸಂಗ್ರಹಿಸಿದೆ.

ನಗರದಲ್ಲಿ ದಿನೇ ದಿನೇ ನೀರಿನ ಬೇಡಿಕೆ ಹೆಚ್ಚುತ್ತಿದೆ. ಬೇಡಿಕೆ ಪೂರೈಸುವುದಕ್ಕಾಗಿ 100 ಕಿ.ಮೀ ದೂರದಿಂದ ಕಾವೇರಿ ನೀರನ್ನು ನಗರಕ್ಕೆ ಪೂರೈಸಲಾಗುತ್ತಿದೆ. ದೀರ್ಘಕಾಲದಲ್ಲಿ ಈ ಅವಲಂಬನೆ ಕಷ್ಟವಾಗಿದ್ದು, ಇದಕ್ಕೆ ಪರಿಹಾರವಾಗಿ ಕಟ್ಟಡಗಳಿಗೆ ಮಳೆ ನೀರು ಸಂಗ್ರಹ ಪದ್ಧತಿ ಅಳವಡಿಕೆಯನ್ನು ಜಲಮಂಡಳಿ ಕಡ್ಡಾಯಗೊಳಿಸಿದೆ.

ಜಲಮಂಡಳಿಯ ಕಾಯ್ದೆ 72ಎ ಪ್ರಕಾರ, ಬಿಬಿಎಂಪಿ ವ್ಯಾಪ್ತಿಯಲ್ಲಿರುವ 2,400 ಚದರ ಅಡಿ ಮತ್ತು ಅದಕ್ಕಿಂತ ಹೆಚ್ಚು ವಿಸ್ತೀರ್ಣದ ನಿವೇಶನದಲ್ಲಿ, ಈಗಾಗಲೇ ನಿರ್ಮಾಣಗೊಂಡಿರುವ ಕಟ್ಟಡಗಳಲ್ಲಿ ಹಾಗೂ ನೂತನವಾಗಿ ನಿರ್ಮಿಸುವ 1,200 ಚದರ ಅಡಿ ಮತ್ತು ಅದಕ್ಕಿಂತ ಹೆಚ್ಚು ವಿಸ್ತೀರ್ಣದ ಎಲ್ಲ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸುವುದು ಕಡ್ಡಾಯ. 2009ರ ಆಗಸ್ಟ್‌ನಿಂದ ಈ ಕಾನೂನು ಜಾರಿಯಲ್ಲಿದೆ.

ಪ್ರಸ್ತುತ ನಗರದಲ್ಲಿ 11.09 ಲಕ್ಷ ಮನೆಗಳಿಗೆ ಕಾವೇರಿ ನೀರು ಪೂರೈಸಲಾಗುತ್ತಿದೆ. ಈವರೆಗೆ 2,08,994 ಮನೆಗಳಿಗೆ ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿಕೊಳ್ಳಲಾಗಿದೆ. ಇದರಲ್ಲಿ 2,08,727 ಖಾಸಗಿ ಆಸ್ತಿಗಳು ಮತ್ತು 267 ಸರ್ಕಾರಿ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಇದೆ. 42,234 ಮನೆಗಳಿಗೆ ಮಳೆ ನೀರಿನ ಸಂಗ್ರಹ ವ್ಯವಸ್ಥೆ ಇಲ್ಲದ್ದರಿಂದ ಅವರಿಗೆ ದಂಡ ವಿಧಿಸಲಾಗುತ್ತಿದೆ.

ಬೆಂಗಳೂರಿಗೆ ವರ್ಷಕ್ಕೆ 19 ಟಿಎಂಸಿ ಅಡಿ ನೀರು ಪೂರೈಕೆಯಾಗುತ್ತಿದೆ. ನಗರದಲ್ಲಿ ಮಳೆ ನೀರು ಸಂಗ್ರಹ ಪದ್ಧತಿಯನ್ನು ಅಳವಡಿಸಿಕೊಂಡರೆ, ಸುಮಾರು 15 ಟಿಎಂಸಿ ಅಡಿಯಷ್ಟು ನೀರು ನಗರದಲ್ಲಿಯೇ ಸಿಗಲಿದೆ ಎಂಬುದು ತಜ್ಞರ ಅಭಿಮತ. ಇದೇ ಕಾರಣಕ್ಕೇ ಮಳೆ ನೀರು ಸಂಗ್ರಹ ಅಳವಡಿಕೆಯನ್ನು ಮಂಡಳಿ ಕಡ್ಡಾಯಗೊಳಿಸಿದೆ.

ನಗರದಲ್ಲಿ ಮಳೆ ನೀರು ಸಂಗ್ರಹಕ್ಕೆ ಸಾಕಷ್ಟು ಅವಕಾಶವಿದೆ. ಆದರೆ, ಒಂದು ಕಡೆ ಜನರ ನಿರಾಸಕ್ತಿ, ಇನ್ನೊಂದೆಡೆ, ಮಳೆ ನೀರು ಹಿಡಿದರೆ ಅದನ್ನು ಸಂಗ್ರಹಿಸಿಕೊಂಡು ಬಳಸುವ, ಹೆಚ್ಚಾದ್ದನ್ನು ಇಂಗಿಸಲು ಸ್ಥಳಾವಕಾಶದ ಕೊರತೆಯಿಂದ ಈ ವಿಧಾನ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಹೀಗಾಗಿ, ಕೆಲವರು ದಾಖಲಾತಿಗಾಗಿಯಷ್ಟೇ ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿಕೊಳ್ಳುತ್ತಿದ್ದಾರೆ. ಇನ್ನೂ ಕೆಲವರು ದಂಡ ಕಟ್ಟಿ ಸುಮ್ಮನಾಗುತ್ತಿದ್ದಾರೆ.

ಜಯನಗರದ 'ಸುಗ್ಗಿ' ಕೇಂದ್ರದಲ್ಲಿರುವ ಮಳೆ ನೀರು ಸಂಗ್ರಹದ ಮಾದರಿ ಮನೆ

ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿಕೊಳ್ಳುವುದು ಅತಿ ಸುಲಭ. ಎಲ್ಲರೂ ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿಕೊಳ್ಳಿ. ಕಾವೇರಿ ನೀರು ಪೂರೈಕೆ ಮೇಲಿನ ಒತ್ತಡ ತಗ್ಗಿಸಿ

ರಾಮ್‌ಪ್ರಸಾತ್ ಮನೋಹರ್
ಅಧ್ಯಕ್ಷ, ಜಲಮಂಡಳಿ

'ಸುಗ್ಗಿ ಕೇಂದ್ರ'ದಲ್ಲಿ ಮಾಹಿತಿ ಲಭ್ಯ

ಜಯನಗರದ ಸರ್ ಎಂ. ವಿಶ್ವೇಶ್ವರಯ್ಯ ಮಳೆ ನೀರು ಸುಗ್ಗಿ ಕೇಂದ್ರದಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆಯ 21 ಮಾದರಿಗಳು ಇವೆ. ವ್ಯವಸ್ಥೆಯ ಬಗ್ಗೆ ಸಂಪೂರ್ಣ ಮತ್ತು ಸಮಗ್ರ ಮಾಹಿತಿ ಪಡೆಯಬಹುದು. ಮಾಹಿತಿಗೆ 080–266 53666 ಸಂಪರ್ಕಿಸಬಹುದು.

ದಂಡ ಎಷ್ಟು, ಹೇಗೆ ?

ನೀರಿನ ಬಳಕೆಯ ಶುಲ್ಕ ₹100 ಇದ್ದರೆ, ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಳ್ಳದ ಕಟ್ಟಡಗಳ ಮಾಲೀಕರಿಗೆ ಮೊದಲ ಮೂರು ತಿಂಗಳು ತಲಾ ₹25 (ಶೇ 25) ದಂಡ ಹಾಕಲಾಗುತ್ತದೆ. ನಾಲ್ಕರಿಂದ ಆರು ತಿಂಗಳವರೆಗೆ ಶೇ 50ರಷ್ಟು, ಏಳರಿಂದ ಒಂಬತ್ತನೇ ತಿಂಗಳವರೆಗೆ ಶೇ 75ರಷ್ಟು ದಂಡ ವಿಧಿಸಲಾಗುತ್ತದೆ. ನಂತರವೂ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಿಕೊಳ್ಳದಿದ್ದರೆ, ದಂಡದ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ.

ಹೂವು ಚೆಲುವೆಲ್ಲ ನಂದೆಂದಿತು...

ನಗರದ ಸಾರಕ್ಕಿ ಕೆರೆಯಲ್ಲಿ 'ಟಬುಬಿಯ ರೋಸಾ' ಮರದ ತುಂಬಾ ಅರಳಿ ನಿಂತಿರುವ ಹೂವುಗಳು ವಾಯುವಿಹಾರಿಗಳಿಗೆ ಆಹ್ಲಾದ ಮೂಡಿಸುತ್ತಿವೆ ಚಿತ್ರ: ರಂಜು ಪಿ.

'ಹನಿಟ್ರ್ಯಾಪ್ ಪ್ರಕರಣ ತನಿಖೆಗೆ ತಂಡ ರಚಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸದನದಲ್ಲಿ ಕೋಲಾಹಲಕ್ಕೆ ಕಾರಣವಾಗಿದ್ದ ಹನಿಟ್ರ್ಯಾಪ್ ಪ್ರಕರಣದ ಬಗ್ಗೆ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಮೂರ್ತಿಯವರ ನೇತೃತ್ವದಲ್ಲಿ ವಿಶೇಷ ತಂಡ ರಚಿಸಬೇಕು' ಎಂದು ಮಾಜಿ ಸಚಿವ ಸೊಗಡು ಶಿವಣ್ಣ ಆಗ್ರಹಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹನಿಟ್ರ್ಯಾಪ್ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ರಾಜಕಾರಣಿಗಳು, ಉದ್ಯಮಿಗಳು ಹಾಗೂ ಮಠಾಧೀಶರನ್ನು ಗುರಿಯಾಗಿಸಿ, ಅವರ ಹೆಸರಿಗೆ ಕಳಂಕ ತರುವ ಕೆಲಸವಾಗುತ್ತಿದೆ. ಇಂತಹ ಪ್ರಕರಣಗಳಿಗೆ ಕೆಲ ರಾಜಕಾರಣಿಗಳೂ ಕುಮ್ಮಕ್ಕು ನೀಡುತ್ತಿದ್ದಾರೆ. ಆದ್ದರಿಂದ ಸಮಗ್ರ ತನಿಖೆ ನಡೆಸಬೇಕು. ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಿ, ಆರು ತಿಂಗಳೊಳಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದರು.

'ಹನಿಟ್ರ್ಯಾಪ್ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಜೀವಾವಧಿ ಶಿಕ್ಷೆ ವಿಧಿಸಬೇಕು' ಎಂದು ಆಗ್ರಹಿಸಿದರು.

ಯುಗಾದಿ, ರಂಜಾನ್ 2000 ವಿಶೇಷ ಬಸ್

ಬೆಂಗಳೂರು: ಯುಗಾದಿ ಮತ್ತು ರಂಜಾನ್ ಹಬ್ಬಗಳಿಗಾಗಿ ಊರಿಗೆ, ಪ್ರವಾಸಕ್ಕೆ ಹೋಗುವವರ ಸಂಖ್ಯೆ ಹೆಚ್ಚಲಿರುವುದರಿಂದ ಕೆಎಸ್‌ಆರ್‌ಟಿಸಿ 2,000 ವಿಶೇಷ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿದೆ. ಮಾರ್ಚ್ 28ರಿಂದ 30ರವರೆಗೆ ಬೆಂಗಳೂರಿನಿಂದ ವಿವಿಧ ಪ್ರದೇಶಗಳಿಗೆ ಹಾಗೂ ಮಾರ್ಚ್ 31ರಂದು ವಿವಿಧೆಡೆಯಿಂದ ಬೆಂಗಳೂರಿಗೆ ವಿಶೇಷ ಸಾರಿಗೆ ಇರಲಿದೆ.

ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಮತ್ತು ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣಗಳಿಂದ ಬಸ್‌ಗಳು ಸಂಚರಿಸಲಿವೆ.

ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ ಹಾಗೂ ಹೊರರಾಜ್ಯಗಳ ಮಧುರೈ, ಕುಂಭಕೋಣಂ, ಚೆನ್ನೈ, ಕೊಯಮತ್ತೂರು, ತಿರುಚ್ಚಿ, ಪಾಲಕ್ಕಾಡ್, ತ್ರಿಶ್ಶೂರ್, ಎರ್ನಾಕುಲಂ, ತಿರುಪತಿ, ವಿಜಯವಾಡ ಸಹಿತ ವಿವಿಧೆಡೆ ವಿಶೇಷ ಬಸ್‌ಗಳು ಸಂಚರಿಸಲಿವೆ. ನಿಗಮದ ಕಾರ್ಯಾಚರಣೆ ವ್ಯಾಪ್ತಿಯ ಎಲ್ಲ ತಾಲ್ಲೂಕು, ಜಿಲ್ಲಾ ಬಸ್ ನಿಲ್ದಾಣಗಳಿಂದ ಸಂಚಾರ ಒತ್ತಡಕ್ಕೆ ಅನುಗುಣವಾಗಿ ವಿಶೇಷ ಸಾರಿಗೆಗಳ ಕಾರ್ಯಾಚರಣೆ ಮಾಡಲಾಗುವುದು.

'ವಾಣಿಜ್ಯ ರಹಸ್ಯ' ಎಂಬ ಕಾರಣ ನೀಡಿದ ಕೇಂದ್ರ ವಿದ್ಯುತ್ ಪ್ರಾಧಿಕಾರ

ಶರಾವತಿ ಡಿಪಿಆರ್ ಬಹಿರಂಗಕ್ಕೆ ನಕಾರ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿ) ಅನುಷ್ಠಾನಗೊಳಿಸುತ್ತಿರುವ ₹8,005 ಕೋಟಿ ವೆಚ್ಚದ 'ಶರಾವತಿ ಪಂಪ್ಡ್ ಸ್ಟೋರೇಜ್' ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಹಂಚಿಕೊಳ್ಳಲು ಕೇಂದ್ರ ವಿದ್ಯುತ್ ಪ್ರಾಧಿಕಾರ ನಿರಾಕರಿಸಿದೆ. ಇನ್ನೊಂದೆಡೆ, ಯೋಜನೆಗೆ ಅರಣ್ಯ ಅನುಮೋದನೆ ನೀಡುವಂತೆ ಕೋರಿ ಕರ್ನಾಟಕ ಅರಣ್ಯ ಇಲಾಖೆಯು ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ ಸೆಕ್ಷನ್ 8 (1) (ಡಿ) ಪ್ರಕಾರ, ವಾಣಿಜ್ಯ ರಹಸ್ಯ ಹಾಗೂ ಬೌದ್ಧಿಕ ಆಸ್ತಿಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಬಹಿರಂಗಪಡಿಸುವುದರಿಂದ ಯೋಜನೆ ಅನುಷ್ಠಾನ ಮಾಡುವವರ ಸ್ಪರ್ಧಾತ್ಮಕ ಹಿತಾಸಕ್ತಿಗೆ ಹಾನಿಯಾಗುತ್ತದೆ ಎಂದು ಪ್ರಾಧಿಕಾರವು ಕಾರಣ ನೀಡಿದೆ. ಯೋಜನೆಯ ಡಿಪಿಆರ್ ಅನ್ನು ಒದಗಿಸುವಂತೆ ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಅವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಯೋಜನೆಗೆ ವನ್ಯಜೀವಿ ಹಾಗೂ ಅರಣ್ಯ ಅನುಮೋದನೆ ಪಡೆಯಲು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸುವ ಸಂದರ್ಭದಲ್ಲಿ ಕರ್ನಾಟಕ ಅರಣ್ಯ ಇಲಾಖೆಯು ಯೋಜನಾ ವರದಿಯನ್ನು ಲಗತ್ತಿಸಿಲ್ಲ.

ಅರಣ್ಯ ಇಲಾಖೆಯ ಈ ನಡೆ ಚರ್ಚೆಗೆ ಗ್ರಾಸವಾಗಿದೆ.

ಸಾಗರ, ಶಿವಮೊಗ್ಗ ಹಾಗೂ ಹೊನ್ನಾವರ ವನ್ಯಜೀವಿ ವಲಯಗಳ ವಿವಿಧ ಗ್ರಾಮಗಳ 54.15 ಹೆಕ್ಟೇರ್ ಅರಣ್ಯ ಬಳಕೆಗೆ ಅನುಮತಿ ನೀಡುವಂತೆ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರು ಪರಿಸರ ಸಚಿವಾಲಯದ ಕಾರ್ಯದರ್ಶಿಗೆ ಇದೇ 20ರಂದು ಪ್ರಸ್ತಾವ ಸಲ್ಲಿಸಿದ್ದಾರೆ. ಈ ಯೋಜನೆಯನ್ನು ಮೂರು ವಲಯಗಳ ಡಿಸಿಎಫ್‌ಗಳು ಶಿಫಾರಸು ಮಾಡಿದ್ದರು. ಜತೆಗೆ, ಯೋಜನೆಯ ಅನುಷ್ಠಾನದಿಂದ ಪಶ್ಚಿಮ ಘಟ್ಟದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಲಿದೆ ಎಂದು ಎಚ್ಚರಿಸಿದ್ದರು.

ವಿದ್ಯುತ್ ಉತ್ಪಾದನೆಗೆ ಬಳಸಿದ ನೀರನ್ನು ಮತ್ತೆ ಮತ್ತೆ ಪಂಪ್‌ಗಳ ಮೂಲಕ ಹಿಂದಕ್ಕೆ ಕೊಂಡೊಯ್ದು, ತಲಾ 250 ಮೆಗಾವಾಟ್ ಸಾಮರ್ಥ್ಯದ ಎಂಟು ಜಲ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಬಳಸುವ ಯೋಜನೆ ಇದು. ಒಟ್ಟು 2,000 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಯೋಜನೆ ರೂಪಿಸಲಾಗಿದೆ. ಡಿಪಿಆರ್‌ಗೆ ಕೇಂದ್ರ ವಿದ್ಯುತ್ ಪ್ರಾಧಿಕಾರವು 2024ರ ಆಗಸ್ಟ್‌ನಲ್ಲಿ ಅನುಮೋದನೆ ನೀಡಿತ್ತು.

ಎತ್ತಿನಹೊಳೆ: ಅರಣ್ಯ ಬಳಸಿ ಮತ್ತೆ ಅನುಮೋದನೆಗೆ ಪ್ರಸ್ತಾವ

ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ಹೆಚ್ಚುವರಿ 500 ಎಕರೆ ಅರಣ್ಯ ಬಳಕೆಗೆ ಒಪ್ಪಿಗೆ ನೀಡುವಂತೆ ವಿನಂತಿಸಿ ಅರಣ್ಯ ಇಲಾಖೆಯು ಪರಿಸರ ಸಚಿವಾಲಯಕ್ಕೆ ಇದೇ 17ರಂದು ಪ್ರಸ್ತಾವ ಸಲ್ಲಿಸಿದೆ.

ಹಾಸನ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಮುಖ್ಯ ಕಾಲುವೆ ನಿರ್ಮಾಣಕ್ಕೆ ಈ ಅರಣ್ಯ ಬಳಸಿಕೊಳ್ಳಲಾಗುತ್ತದೆ. ಕಾಲುವೆ ನಿರ್ಮಾಣದ ಸಂದರ್ಭದಲ್ಲಿ ತುಮಕೂರು ಜಿಲ್ಲೆಯಲ್ಲಿ 7,554 ಮರಗಳು ಹಾಗೂ ಹಾಸನ ಜಿಲ್ಲೆಯಲ್ಲಿ 1,439 ಮರಗಳ ಹನನವಾಗಲಿದೆ ಎಂದು ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದೆ.

108 ಹೆಕ್ಟೇರ್ ಅರಣ್ಯ ಬಳಕೆಯಲ್ಲಿ ನಿಯಮ ಉಲ್ಲಂಘನೆ ಆಗಿದೆ. ಅನುಮೋದನೆಗೆ ಮುನ್ನವೇ ವಿಶ್ವೇಶ್ವರಯ್ಯ ಜಲ ನಿಗಮವು ಕಾಲುವೆ ನಿರ್ಮಾಣ ಕಾಮಗಾರಿ ಆರಂಭಿಸಿ ವನ ಸಂರಕ್ಷಣಾ ಕಾಯ್ದೆ 1980 ಅನ್ನು ಉಲ್ಲಂಘಿಸಿದೆ ಎಂದು ಹಾಸನ ಡಿಸಿಎಫ್ ಅವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಕರ್ನಾಟಕ ಅರಣ್ಯ ಕಾಯ್ದೆ ಉಲ್ಲಂಘಿಸಿದ ಕಾರಣಕ್ಕೆ ಎಫ್‌ಐಆರ್ ದಾಖಲಿಸಲಾಗಿದೆ. ನಿಯಮ ಉಲ್ಲಂಘಿಸಿದ ಕಾರಣಕ್ಕೆ ವಿಶ್ವೇಶ್ವರಯ್ಯ ಜಲ ನಿಗಮಕ್ಕೆ ಸೂಕ್ತ ದಂಡ ವಿಧಿಸಬಹುದು ಎಂದು ಅರಣ್ಯ ಪಡೆಯ ಮುಖ್ಯಸ್ಥೆ ಮೀನಾಕ್ಷಿ ನೇಗಿ ಶಿಫಾರಸು ಮಾಡಿದ್ದಾರೆ.

ಅಭಿವೃದ್ಧಿ ಯೋಜನೆಗಳಿಗೆ 2,991 ಹೆಕ್ಟೇರ್ ಅರಣ್ಯ

ರಾಜ್ಯದಲ್ಲಿ ಕಳೆದ 10 ವರ್ಷಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ 2,991 ಹೆಕ್ಟೇರ್ ಅರಣ್ಯ ಬಳಸಲಾಗಿದೆ.

ರಾಷ್ಟ್ರೀಯ ಹೆದ್ದಾರಿ ಯೋಜನೆಗಳು, ನೀರಾವರಿ, ಜಲವಿದ್ಯುತ್, ಗಣಿಗಾರಿಕೆ ಮತ್ತಿತರ ಉದ್ದೇಶಗಳಿಗೆ ಈ ಅರಣ್ಯ ಬಳಕೆಯಾಗಿದೆ ಎಂದು ಕೇಂದ್ರ ಪರಿಸರ ಸಚಿವಾಲಯವು ಲೋಕಸಭೆಗೆ ಸೋಮವಾರ ಮಾಹಿತಿ ನೀಡಿದೆ.

ಸ್ನಾನಘಟ್ಟಗಳ ಬಳಿ ಶಾಂಪೂ ನಿಷೇಧಿಸಲು ಆದೇಶ ಹೊರಡಿಸಿದ್ದನ್ನು ನೋಡಿ ಅರಣ್ಯ ಸಚಿವರಿಗೆ ಜಲಮೂಲಗಳ ರಕ್ಷಣೆ ಬಗ್ಗೆ ಇರುವ ಕಾಳಜಿ ಕುರಿತು ಖುಷಿಯಾಗಿತ್ತು. ಆದರೆ, ಶರಾವತಿ ನದಿ ಮೇಲೆ ಬರೆ ಎಳೆಯಲಿರುವ ಕಾನೂನುಬಾಹಿರ ಭೂಗರ್ಭ ವಿದ್ಯುತ್ ಯೋಜನೆಗೆ ರಾಜ್ಯ ಸರ್ಕಾರ ಹಸಿರು ನಿಶಾನೆ ತೋರಿರುವುದು, ಅರಣ್ಯ ರಕ್ಷಣೆಯಲ್ಲಿ ತೊಡಗಿರುವ ವನವಾಸಿಗಳನ್ನು ರಾಜ್ಯದ ವಿವಿಧೆಡೆ ಕಾನೂನುಬಾಹಿರವಾಗಿ ಸ್ಥಳಾಂತರಿಸುವ ಆತುರ ನೋಡಿ ನಿರೀಕ್ಷೆ ಹುಸಿಯಾಗಿದೆ

ರಾಮಪ್ರಸಾದ್, ಪರಿಸರ ಕಾರ್ಯಕರ್ತ

ಶರಾವತಿ ಯೋಜನೆಯ ವಿಸ್ತೃತ ಯೋಜನಾ ವರದಿ ಬಹಿರಂಗಪಡಿಸದಿರುವುದು ಕಾನೂನುಬಾಹಿರ. ಕೇಂದ್ರ ಪರಿಸರ ಸಚಿವಾಲಯ ಹೊರಡಿಸಿದ ಮಾರ್ಗಸೂಚಿಯನ್ನು ರಾಜ್ಯ ಸರ್ಕಾರ ಉಲ್ಲಂಘಿಸಿದೆ

ಗಿರಿಧರ ಕುಲಕರ್ಣಿ
ವನ್ಯಜೀವಿ ಸಂರಕ್ಷಣಾವಾದಿ

ಸುದ್ದಿ 2 ನಿಮಿಷ

ಮಲ್ಟಿಪ್ಲೆಕ್ಸ್‌ನಲ್ಲಿ ಐಪಿಎಲ್ ಕ್ರಿಕೆಟ್ ಪ್ರಸಾರ ತಡೆಗೆ ಮನವಿ

ಬೆಂಗಳೂರು: ನಗರದ ಮಲ್ಟಿಪ್ಲೆಕ್ಸ್ ಹಾಗೂ ಕೆಲ ಚಿತ್ರಮಂದಿರಗಳಲ್ಲಿ ಐಪಿಎಲ್ ಕ್ರಿಕೆಟ್ ಪಂದ್ಯ ಪ್ರಸಾರ ನಿಷೇಧಿಸಬೇಕೆಂದು ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘ ಬುಧವಾರ ಜಿಲ್ಲಾಧಿಕಾರಿ, ನಗರ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದೆ.

'ಸೆನ್ಸಾರ್ ಇಲ್ಲದಿರುವ ವಿಷಯಗಳನ್ನು ಚಿತ್ರಮಂದಿರ ಹಾಗೂ ಮಲ್ಟಿಪ್ಲೆಕ್ಸ್‌ಗಳು ಪ್ರಸಾರ ಮಾಡುವಂತಿಲ್ಲ. ಆದರೆ ಇವು ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಿಯಮಗಳನ್ನು ಪಾಲಿಸದೆ ಕಾನೂನು ಬಾಹಿರವಾಗಿ ಕ್ರಿಕೆಟ್ ಪ್ರದರ್ಶನಕ್ಕೆ ಮುಂದಾಗಿವೆ. ಇದರಿಂದಾಗಿ ಬಿಡುಗಡೆಗೆ ಸಿದ್ಧವಾಗಿರುವ ಕನ್ನಡ ಚಿತ್ರಗಳ ನಿರ್ಮಾಪಕರು ಸಂಕಷ್ಟ ಎದುರಿಸುವಂತಾಗಿದೆ. ಹೀಗಾಗಿ ಈ ಬಗ್ಗೆ ಕಾನೂನು ಕ್ರಮ ಜರುಗಿಸುವಂತೆ ಮನವಿ ಸಲ್ಲಿಸಿದ್ದೇವೆ' ಎಂದು ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ತಿಳಿಸಿದರು.

'ಈ ಪಂದ್ಯಗಳಿಂದ ಅಪಾರ ಪ್ರಮಾಣದಲ್ಲಿ ಬೆಟ್ಟಿಂಗ್ ನಡೆಯುವ ಆಪಾಯವು ಇದೆ. ಈಗಾಗಲೇ ಆನ್‌ಲೈನ್ ಬೆಟ್ಟಿಂಗ್ ಮೂಲಕ ಹಣ ಕಳೆದುಕೊಂಡ ಯುವಕರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇದನ್ನು ಸಂಬಂಧಿಸಿದವರ ಗಮನಕ್ಕೆ ತರಲಾಗಿದೆ. ರಾಜ್ಯದ ಎಲ್ಲಾ ಚಿತ್ರಮಂದಿರಗಳಿಗೂ ಕ್ರಿಕೆಟ್ ಪಂದ್ಯಗಳನ್ನು ಪ್ರಸಾರ ಮಾಡದಂತೆ ನಿರ್ದೇಶನ ನೀಡಲು ಕೋರಿದ್ದೇವೆ' ಎಂದು ಬಣಕಾರ್ ಹೇಳಿದರು.

ಯತ್ನಾಳ ಉಚ್ಚಾಟನೆ ವಿಜಯಪುರದಲ್ಲಿ ಸಂಭ್ರಮ



ವಿಜಯಪುರ: ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರ ಉಚ್ಚಾಟನೆ ಸ್ವಾಗತಿಸಿ, ಅವರ ಸ್ವಕ್ಷೇತ್ರ ವಿಜಯಪುರ ನಗರದಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ನಗರದ ಶಿವಾಜಿ ವೃತ್ತ, ಗಾಂಧಿ ವೃತ್ತ, ಬಸವೇಶ್ವರ ವೃತ್ತ, ಸಿದ್ಧೇಶ್ವರ ಗುಡಿ ಸೇರಿ ವಿವಿಧೆಡೆ ಕಾರ್ಯಕರ್ತರು ಪಟಾಕಿ ಸಿಡಿಸಿ, ಘೋಷಣೆ ಕೂಗಿದರು. ಸಿಹಿ ಹಂಚಿ ಸಂಭ್ರಮಿಸಿದರು.

'ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸಿರುವ ಕ್ರಮವನ್ನು ಸ್ವಾಗತಿಸುತ್ತೇನೆ. ಈ ಮೊದಲೇ ಈ ಕೆಲಸ ಆಗಬೇಕಿತ್ತು. 10 ವರ್ಷಗಳಿಂದ ಪಕ್ಷವನ್ನು ಮತ್ತು ನಾಯಕರನ್ನು ಮುಜುಗರ ಉಂಟು ಮಾಡಿದ್ದರು. ಅವರ ಉಚ್ಚಾಟನೆಯಿಂದ ಪಕ್ಷಕ್ಕೆ ಹಾನಿಯಾಗದು' ಎಂದು ಮಾಜಿ ಸಚಿವ ಅಪ್ಪು ಪಟ್ಟಣಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

ಬೆಂಬಲಿಗರಿಂದ ರಾಜೀನಾಮೆ: ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟಿಸಿದ್ದನ್ನೂ ವಿರೋಧಿಸಿ, ಅವರು ಬೆಂಬಲಿಗರು ಪಕ್ಷದ ವಿವಿಧ ಹುದ್ದೆಗಳಿಗೆ ರಾಜೀನಾಮೆ ಸಲ್ಲಿಸಿದ್ದಾರೆ. ಬಿಜೆಪಿ ವಿಜಯಪುರ ನಗರ ಮಂಡಳಿ ಉಪಾಧ್ಯಕ್ಷ ಸ್ಥಾನಕ್ಕೆ ಬಸವರಾಜ ಗೊಳಸಂಗಿ, ಬಿಜೆಪಿ ವಿಜಯಪುರ ನಗರ ಮಂಡಲ ರೈತ ಮೋರ್ಚಾಕ್ಕೆ ರಚ್ಚು ಬಿರಾದಾರ, ಬಿಜೆಪಿ ನಗರ ಮಂಡಲ ಅಧ್ಯಕ್ಷ ಸ್ಥಾನಕ್ಕೆ ಶಂಕರ ಹೂಗಾರ, ಒಬಿಸಿ ನಗರ ಮಂಡಲ ಪ್ರಧಾನ ಕಾರ್ಯದರ್ಶಿ ಪಿಂಟು ಚೋರಗಿ ರಾಜೀನಾಮೆ ನೀಡಿದ್ದಾರೆ.

'ಅಧ್ಯಕ್ಷರ ಸಮರ್ಥನೆ ಪಕ್ಷ ವಿರೋಧ ಚಟುವಟಿಕೆಯೇ?'

ರೇಣುಕಾಚಾರ್ಯ

ಬೆಂಗಳೂರು: 'ಬಿ.ಎಸ್.ಯಡಿಯೂರಪ್ಪ ಮತ್ತು ಬಿ.ವೈ. ವಿಜಯೇಂದ್ರ ಅವರ ಪರ ಮಾತನಾಡುವುದು ಮತ್ತು ಪಕ್ಷವನ್ನು ಸಮರ್ಥನೆ ಮಾಡಿಕೊಳ್ಳುವುದು ಪಕ್ಷ ವಿರೋಧ ಚಟುವಟಿಕೆಯಾ? ಇವರಿಬ್ಬರನ್ನು ಟೀಕೆ ಮಾಡಿದ್ದರೆ ಒಳ್ಳೆಯವನಾಗುತ್ತಿದ್ದೆನಾ' ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಪ್ರಶ್ನಿಸಿದರು.

ಪಕ್ಷದ ಶಿಸ್ತು ಸಮಿತಿ ತಮಗೆ ನೋಟಿಸ್ ನೀಡಿರುವ ಕುರಿತು ಪ್ರತಿಕ್ರಿಯಿಸಿದ ಅವರು, 'ನೋಟಿಸ್ ನೀಡಿದ್ದಕ್ಕೆ ಭಯವಿಲ್ಲ, ಹೆದರುವುದೂ ಇಲ್ಲ. ಎಲ್ಲದಕ್ಕೂ ಉತ್ತರ ನೀಡುತ್ತೇನೆ. ಎರಡು ಬಾರಿ ಜೈಲಿಗೆ ಹೋಗಿ ಬಂದಿದ್ದೇನೆ. ಪಕ್ಷವನ್ನು ಸಂಘಟನೆ ಮಾಡಿದ್ದೇನೆ. ಆದರೂ ನನಗೆ ನೋಟಿಸ್ ನೀಡಲಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ಶೋಕಾಸ್ ನೋಟಿಸ್‌ನ ಹಿಂದೆ ಮಹಾ ನಾಯಕರೊಬ್ಬರ ಕೈವಾಡವಿದೆ. ಅವರು ಯಾರು ಎಂಬುದನ್ನು ಮುಂದಿನ ದಿನಗಳಲ್ಲಿ ಹೇಳುತ್ತೇನೆ. ನೋಟಿಸ್ ಬಂದ ವಿಚಾರ ಗೊತ್ತಾಗುತ್ತಿದ್ದ ಹಾಗೆ ಕಾರ್ಯಕರ್ತರು, ಶಾಸಕರು, ಮಾಜಿ ಶಾಸಕರು ಮತ್ತು ವೀರಶೈವ ಮುಖಂಡರು ಕರೆ ಮಾಡಿ ಧೈರ್ಯ ತುಂಬಿದ್ದಾರೆ. ಕಳೆದ ಐದಾರು ವರ್ಷಗಳಿಂದ ಪಕ್ಷದಲ್ಲಿನ ಗೊಂದಲಗಳು ಮತ್ತು ಪಕ್ಷ ವಿರೋಧಿ ಚಟುವಟಿಕೆಗಳ ಬಗ್ಗೆ ಪಕ್ಷದ ವರಿಷ್ಠರಿಗೆ ಪತ್ರ ಬರೆದು ಎಲ್ಲ ವಿವರಗಳನ್ನು ತಿಳಿಸುತ್ತೇನೆ' ಎಂದು ಅವರು ಹೇಳಿದರು.

ಬಿಜೆಪಿ ಕೇಂದ್ರದ ಶಿಸ್ತು ಸಮಿತಿಯ ನೋಟಿಸ್‌ಗೆ ಶಾಸಕ ಎಸ್‌.ಟಿ.ಸೋಮಶೇಖರ್ ಪ್ರತಿಕ್ರಿಯೆ

'ಯಾವುದೇ ಕ್ರಮ ತೆಗೆದುಕೊಂಡರೂ ಸ್ವಾಗತ'

ಪ್ರಜಾವಾಣಿ ವಾರ್ತೆ

ಸೋಮಶೇಖರ್

ಬೆಂಗಳೂರು: 'ನಾನು ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದೇನೆ ಎನ್ನುವುದಾದರೆ 2028ರ ವಿಧಾನಸಭಾ ಚುನಾವಣೆ ದಿನಾಂಕ ಘೋಷಣೆ ಆಗುವುದಕ್ಕೂ ಮೊದಲು ಕ್ರಮ ತೆಗೆದುಕೊಳ್ಳಲಿ. ಇಲ್ಲವಾದರೆ ನಾನೇ ಮುಂದಿನ ತೀರ್ಮಾನ ಮಾಡುತ್ತೇನೆ' ಎಂದು ಬಿಜೆಪಿ ಶಾಸಕ ಎಸ್. ಟಿ.ಸೋಮಶೇಖರ್ ಹೇಳಿದ್ದಾರೆ.

ಪಕ್ಷ ವಿರೋಧಿ ಚಟುವಟಿಕೆ ಆರೋಪದ ಕಾರಣ ತಮಗೆ ನೀಡಿರುವ ನೋಟಿಸಿನ ಕುರಿತು ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು, 'ನಾನು ಪಕ್ಷ ವಿರೋಧಿ ಚಟುವಟಿಕೆ ನಡೆಸಿಲ್ಲ. ಸಕಾರಾತ್ಮಕ ರಾಜಕೀಯ ಮಾಡಿಕೊಂಡು ಬಂದಿದ್ದೇನೆ. ಹೀಗಾಗಿ ಯಾವುದೇ ಕ್ರಮ ತೆಗೆದುಕೊಂಡರೂ ಸ್ವಾಗತಿಸುತ್ತೇನೆ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಲಿ' ಎಂದರು.

'ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಜತೆ ಹೋದರೆ ಅಪರಾಧವೇ? ಕ್ಷೇತ್ರದ ವಿಚಾರವಾಗಿ ಅವರ ಬಳಿ ಹೋಗುತ್ತೇನೆ. ನನಗೆ ಪಕ್ಷಕ್ಕಿಂತ ಕ್ಷೇತ್ರ ಮುಖ್ಯ. ಹೀಗಾಗಿ ಅವರ ಬಳಿ ಹೋಗುತ್ತೇನೆ. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರನ್ನು ರಾತ್ರಿ 9 ಗಂಟೆಯ ಬಳಿಕ ಭೇಟಿ ಮಾಡುವವರೂ ಇದ್ದಾರೆ. ನಾನು ರಾತ್ರಿ ಹೊತ್ತು ಭೇಟಿ ಮಾಡಿಲ್ಲ. ಸರ್ಕಾರದ ಕಾರ್ಯಕ್ರಮಗಳಲ್ಲಿ ಭಾಗಿಯಾವುದು ಪಕ್ಷ ವಿರೋಧಿ ಚಟುವಟಿಕೆ ಅಲ್ಲ' ಎಂದು ಹೇಳಿದರು.

'ಕಾಂಗ್ರೆಸ್ ಸೇರುವ ಉದ್ದೇಶವಿಲ್ಲ. ಸಾಕಷ್ಟು ಬಹುಮತ ಹೊಂದಿರುವ ಆ ಪಕ್ಷಕ್ಕೆ ನಮ್ಮ ಅಗತ್ಯವೂ ಇಲ್ಲ. 2028ಕ್ಕೆ ವಿಧಾನಸಭೆ ಚುನಾವಣೆ ನಡೆಯಲಿದೆ. ಆಗ ಸ್ಪರ್ಧೆ ಮಾಡಬೇಕೇ? ಮಾಡುವುದಾದರೆ ಎಲ್ಲಿಂದ ಸ್ಪರ್ಧಿಸಬೇಕು ಎಂಬುದನ್ನು ಕಾರ್ಯಕರ್ತರ ಜತೆ ಚರ್ಚಿಸಿ ತೀರ್ಮಾನಿಸುತ್ತೇನೆ' ಎಂದು ಅವರು ಹೇಳಿದರು.

'ಪಕ್ಷದ ಯಾವುದೇ ಸಭೆಗೂ ನನ್ನನ್ನು ಆಹ್ವಾನಿಸುತ್ತಿಲ್ಲ. ಶಾಸಕಾಂಗ ಪಕ್ಷದ ಸಭೆ ಮತ್ತು ಬೆಂಗಳೂರು ಅಭಿವೃದ್ಧಿ ಕುರಿತ ಸಭೆಗೂ ಕರೆದಿಲ್ಲ. ಲೋಕಸಭಾ ಚುನಾವಣೆ, ವಿಧಾನಪರಿಷತ್ ಚುನಾವಣೆ ವೇಳೆ ಪ್ರಚಾರಕ್ಕೆ ನನ್ನನ್ನು ಕರೆಯದೇ ನಿರ್ಲಕ್ಷಿಸಲಾಗಿದೆ. ಲೋಕಸಭಾ ಚುನಾವಣೆಯಲ್ಲಿ ಪೋಸ್ಟರ್‌ಗಳಲ್ಲಿ ನನ್ನ ಚಿತ್ರಗಳನ್ನು ಹಾಕಿರಲಿಲ್ಲ' ಎಂದು ಸೋಮಶೇಖರ್ ದೂರಿದರು.

'ವಿಧಾನಸಭೆ ಅಧಿವೇಶನದ ವೇಳೆ ಪಕ್ಷದಲ್ಲಿ ಸಮನ್ವಯ ಇರಲಿಲ್ಲ. ಯಾವುದೋ ವಿಷಯದ ಮೇಲೆ ಇನ್ನಾರೋ ಮಾತನಾಡುತ್ತಿದ್ದರು. ಕಲಾಪಕ್ಕೆ ಬಹಿಷ್ಕಾರ ಹಾಕಿದರೆ ಪ್ರಯೋಜನವೇನು? ಸರ್ಕಾರದ ವಿರುದ್ಧ ಸಂಘಟಿತ ಹೋರಾಟ ಮಾಡಿ ಕಟ್ಟಿ ಹಾಕುವ ಕೆಲಸ ಮಾಡಬೇಕಿತ್ತು. ಸಭಾಧ್ಯಕ್ಷರ ಪೀಠದ ಬಳಿ ಏರಿ ಪ್ರತಿಭಟಿಸುವ ಅಗತ್ಯ ಇರಲಿಲ್ಲ. ಬಡಪಾಯಿಗಳನ್ನು ಮೇಲೆ ಹತ್ತಿಸಿ, ಪ್ರಭಾವಿಗಳು ಮಾತ್ರ ದೂರ ಉಳಿದರು' ಎಂದರು.

'ಜಿಲೇಬಿ ತಿನ್ನುವವನೇ ಬೇರೆ: ಜೈಲಿಗೆ ಹೋಗುವವನೇ ಬೇರೆ'



ಶಿವರಾಮ ಹೆಬ್ಬಾರ

'ಕಾರವಾರ: 'ಬಿಜೆಪಿಯಲ್ಲಿ ಜೈಕಾರ ಹಾಕುವವನು ಮತ್ತು ಜಿಲೇಬಿ ತಿನ್ನುವವನು ಇಬ್ಬರೂ ಬೇರೆ ಬೇರೆ. ಕೊನೆಗೆ ಜೈಲಿಗೆ ಹೋಗುವವನೇ ಬೇರೆ. ಈ ವಾಸ್ತವ ಎಲ್ಲರಿಗೂ ಗೊತ್ತು' ಎಂದು ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

ಬಿಜೆಪಿ ಕೇಂದ್ರದ ಶಿಸ್ತು ಸಮಿತಿ ನೀಡಿದ ನೋಟಿಸ್ ಬಗ್ಗೆ ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿ ಅಧ್ಯಕ್ಷರ ವಿರುದ್ಧ ಬಿ.ಪಿ.ಹರೀಶ್ ಮಾತನಾಡಿದರು. ಯಾರನ್ನು ಗೌರವಿಸಬೇಕು ಎಂಬ ಗೊಂದಲ ರೇಣುಕಾಚಾರ್ಯ ಅವರಿಗಿತ್ತು. ಇನ್ನೂ ಹಲವರು ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆ. ಆದರೆ, ಯಾರ ಮೇಲೂ ಕ್ರಮವಾಗಿಲ್ಲ' ಎಂದರು.

'ನನಗೆ ಪಕ್ಷದ ಶಿಸ್ತು ಸಮಿತಿಯ ನೋಟಿಸ್ ತಲುಪಿಲ್ಲ. ನೋಟಿಸ್ ತಲುಪಿದ ನಂತರ ಬಳಿಕ ಉತ್ತರಿಸುವೆ. ನಾನು ಯಾವ ಅಪರಾಧ ಮಾಡಿಲ್ಲ. ನನಗೆ ಆದ ನೋವು, ಪ್ರಚೋದನೆ ನೀಡಿದ್ದರ ಬಗ್ಗೆ ಪತ್ರದ ಮೂಲಕ ತಿಳಿಸುವೆ' ಎಂದರು.

'ನಾನು ಪಕ್ಷದ ಚಟುವಟಿಕೆಯಲ್ಲಿ ಸಕ್ರಿಯ ಇಲ್ಲದಿರುವುದಕ್ಕೆ ಸಕಾರಣವಿದೆ. ಆದರೆ, ನಾನೆಲ್ಲೂ ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ನಾಯಕರ ವಿರುದ್ಧ ಮಾತನಾಡಿಲ್ಲ. ಆದರೂ ನನಗೆ ನೋಟಿಸ್ ನೀಡಲಾಗಿದೆ. ಬಿಜೆಪಿಯಲ್ಲಿ ಜಿಲೇಬಿ ತಿನ್ನುವವರು ತಿನ್ನುತ್ತ ಇರುತ್ತಾರೆ. ನಮ್ಮಂಥವರು ಜೈಲಿಗೆ ಹೋಗುತ್ತೇವೆ' ಎಂದರು. ಜಿಲ್ಲೆಗೆ ಭೇಟಿ ನೀಡಿದ ಗೃಹ ಸಚಿವ ಜಿ.ಪರಮೇಶ್ವರ ಅವರೊಂದಿಗೆ ಶಿವರಾಮ ಹೆಬ್ಬಾರ ಕಾಣಿಸಿಕೊಂಡರು.

ಹೊಂದಾಣಿಕೆ ರಾಜಕಾರಣ ಕೊನೆಯಾಗಲಿ

ಬಿ.ಪಿ ಹರೀಶ್

ದಾವಣಗೆರೆ: 'ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ನಡುವಿನ ಹೊಂದಾಣಿಕೆ ರಾಜಕಾರಣ ಕೊನೆಗೊಂಡು ಪಕ್ಷದ ಪ್ರಾಮಾಣಿಕ ಕಾರ್ಯಕರ್ತರಿಗೆ ನ್ಯಾಯ ಸಿಗಬೇಕು' ಎಂದು ಹರಿಹರದ ಬಿಜೆಪಿ ಶಾಸಕ ಬಿ.ಪಿ.ಹರೀಶ್ ಕೋರಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಹೈಕಮಾಂಡ್ ಶೋಕಾಸ್ ನೋಟಿಸ್ ನೀಡಿದೆ. ರಾಜ್ಯದಲ್ಲಿನ ಬೆಳವಣಿಗೆಗಳ ಕುರಿತು ವರಿಷ್ಠರ ಗಮನಕ್ಕೆ ತರಲು ಈ ನೋಟಿಸ್ ಅವಕಾಶ ಕಲ್ಪಿಸಿದೆ. 72 ಗಂಟೆಯೊಳಗೆ ಉತ್ತರ ನೀಡುವೆ. ನೋಟಿಸ್ ನೀಡಿರುವುದರಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಕೈವಾಡ ಇಲ್ಲ' ಎಂದರು.

'ಪಕ್ಷದ ಕೆಲ ನಾಯಕರು ಕಾಂಗ್ರೆಸ್ ಏಜೆಂಟರಂತೆ ಕೆಲಸ ಮಾಡುತ್ತಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿ ಕಾಂಗ್ರೆಸ್ ಅಭ್ಯರ್ಥಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಚುನಾವಣೆಗೂ ಮುನ್ನವೇ ಇದನ್ನು ಪಕ್ಷದ ಗಮನಕ್ಕೆ ತರಲಾಗಿತ್ತು. ಈ ಬಗ್ಗೆ ಮತ್ತೊಮ್ಮೆ ವರಿಷ್ಠರಿಗೆ ಮನವರಿಕೆ ಮಾಡಲು ಪ್ರಯತ್ನಿಸುವೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ಪಕ್ಷಕ್ಕೆ ಮುಜುಗರ ಆಗುವಂತೆ ನಾನು ನಡೆದುಕೊಳ್ಳುವುದಿಲ್ಲ. ಪಕ್ಷದ ಕಾರ್ಯಕರ್ತರಿಗೆ ಒಳಿತಾಗುವ ದಿನಗಳು ಸಮೀಪಿಸಿವೆ. 'ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿರುವುದು ಮಾಧ್ಯಮಗಳ ಮೂಲಕ ಗಮನಕ್ಕೆ ಬಂದಿದೆ. ಈ ಕುರಿತು ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ' ಎಂದು ಅವರು ಹೇಳಿದರು.

ಬೈಲಹೊಂಗಲ, ಕೊಡಗು: ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ ಚಿಕ್ಕಮಗಳೂರು: ಕೊಡಗು, ಚಿಕ್ಕಮಗಳೂರು ಮತ್ತು ಬೆಳಗಾವಿ ಜಿಲ್ಲೆಗಳ ವಿವಿಧೆಡೆ ಬುಧವಾರ ಮಳೆಯಾಗಿದೆ. ಕೊಡಗು ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಗುಡುಗು, ಸಿಡಿಲುಗಳ ಅಬ್ಬರದ ನಡುವೆ ಬುಧವಾರ ಭಾರಿ ಮಳೆ ಸುರಿದಿದೆ. ಸುಂಟಿಕೊಪ್ಪ, ನಾಪೋಕ್ಲುವಿನಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕೊಟ್ಟಿಗೆಹಾರ ಸುತ್ತಮುತ್ತ ಬಿರುಗಾಳಿ ಸಹಿತ ಮಳೆ ಸುರಿಯಿತು. ಆಲ್ದೂರು, ಬಾಳೆಹೊನ್ನೂರು, ನರಸಿಂಹರಾಜಪುರ ಸುತ್ತಮುತ್ತ ಉತ್ತಮ ಮಳೆಯಾಗಿದೆ. ಮಲೆನಾಡಿನಲ್ಲಿ ಮಳೆಯಾಗುತ್ತಿರುವುದರಿಂದ ಕಾಫಿ ಬೆಳೆಗೆ ಹೆಚ್ಚು ಅನುಕೂಲವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದೆ. ಬೆಳ್ತಂಗಡಿ, ಉಜಿರೆ ಸುತ್ತಲಿನ ಪ್ರದೇಶದಲ್ಲಿ ಸಾಮಾನ್ಯ ಮಳೆಯಾಗಿದೆ.

ಕೊಡಗು ಜಿಲ್ಲೆಯ ನಾಪೋಕ್ಲು ಹೋಬಳಿಯಲ್ಲಿ ಸುಮಾರು ಒಂದೂವರೆಗಂಟೆಗೂ ಅಧಿಕ ಕಾಲ ಬಿರುಗಾಳಿ, ಆಲಿಕಲ್ಲು ಮಳೆಯಾಗಿದೆ. ಕೆಲವೆಡೆ ಮರಗಳು ಉರುಳಿ ಬಿದ್ದಿವೆ. ಕುಶಾಲನಗರ, ಗೋಣಿಕೊಪ್ಪಲಿನಲ್ಲಿಯೂ ಸಿಡಿಲು ಸಹಿತ ಮಳೆಯಾಗಿದೆ. ಸೋಮವಾರಪೇಟೆ, ಹಾಸನ ಜಿಲ್ಲಾ ಕೇಂದ್ರ ಹಾಗೂ ಅರಕಲಗೂಡು ತಾಲ್ಲೂಕಿನಲ್ಲಿ ಸಾಧಾರಣ ಮಳೆ ಸುರಿದಿದೆ. ಮಡಿಕೇರಿ ನಗರದಲ್ಲಿ ಮಧ್ಯಾಹ್ನದಿಂದಲೂ ಗುಡುಗು, ಸಿಡಿಲುಗಳು ಅಬ್ಬರಿಸಿತು. ಸಂಜೆಯ ನಂತರ ಸಾಧಾರಣ ಮಳೆಯಾಯಿತು.

ಹುಬ್ಬಳ್ಳಿ ವರದಿ: ಬೆಳಗಾವಿ ಜಿಲ್ಲೆಯ ಬೈಲವಾಡ, ಅಮಟೂರ, ನಯಾನಗರ, ಜಾಲಿಕೊಪ್ಪ, ಗರ್ಜೂರ, ಸಂಗೊಳ್ಳಿ, ಆನಿಗೋಳ ಗ್ರಾಮ ಸೇರಿದಂತೆ ಹಲವು ಗ್ರಾಮಗಳಲ್ಲಿ ಮಳೆಯಾಯಿತು. 'ಮಳೆಯಿಂದ ತಗ್ಗು ಪ್ರದೇಶ ಮತ್ತು ಗದ್ದೆಗಳಲ್ಲಿ ನೀರು ನಿಂತಿದೆ. ಕಟಾವು ಮಾಡಿದ್ದ ಕಬ್ಬಿನ ಗದ್ದೆಗಳಲ್ಲಿನ ಕೂಳೆ ಕಬ್ಬಿಗೆ ಇದರಿಂದ ಅನುಕೂಲವಾಗಿದೆ' ಎಂದು ರೈತರು ತಿಳಿಸಿದರು.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಪಟ್ಟಣ, ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿ ಹೋಬಳಿಯಲ್ಲಿ ತುಂತುರು ಮಳೆಯಾಯಿತು.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಕಿತ್ತೂರು, ಬೈಲಹೊಂಗಲ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಮಂಗಳವಾರ ತಡರಾತ್ರಿ ಮತ್ತು ಬುಧವಾರ ಮಧ್ಯಾಹ್ನ ಭಾರಿ ಗಾಳಿ ಜೊತೆ ಮಳೆ ಸುರಿಯಿತು. ಅಲ್ಲಲ್ಲಿ ಗಿಡ, ಮರ ಮತ್ತು ಕಂಬಗಳು ಧರೆಗುರುಳಿದವು. ಕೆಲ ಕಡೆ ಮನೆಯ ಚಾವಣಿಗಳು ಹಾರಿ ಹೋದವು.

ಭೇಟಿ ಮಾಡಿದರೆ ತಪ್ಪೇನು: ಎಂ.ಬಿ. ಪಾಟೀಲ

ಬೆಂಗಳೂರು: 'ರಾಜ್ಯದ ಸಚಿವರು ಕೇಂದ್ರದ ಸಚಿವರನ್ನು ಭೇಟಿ ಮಾಡುವುದು ತಪ್ಪೇನಲ್ಲ. ರಾಜ್ಯದ ಅನುಕೂಲಕ್ಕಾಗಿ ಅಥವಾ ವೈಯಕ್ತಿಕವಾಗಿಯೂ ಭೇಟಿಮಾಡಬಹುದು' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿರುವ ಕುರಿತು ಸುದ್ದಿಗಾರರಿಗೆ ಬುಧವಾರ ಪ್ರತಿಕ್ರಿಯಿಸಿದ ಅವರು, 'ರಾಜ್ಯದ ಸಚಿವರು ಕೇಂದ್ರದ ಸಚಿವರನ್ನು ಭೇಟಿಮಾಡಬಾರದು, ಜೊತೆಯಲ್ಲಿ ತಿಂಡಿ– ಊಟ ಮಾಡಬಾರದು ಎಂದರೆ ಹೇಗೆ?' ಎಂದರು.

'ನಾನು ದೆಹಲಿಗೆ ಹೋದಾಗ ಕೇಂದ್ರ ಸಚಿವರಾದ ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ರಾಜನಾಥ ಸಿಂಗ್, ಪೀಯೂಷ್ ಗೋಯಲ್ ಸೇರಿ ಅನೇಕರನ್ನು ಭೇಟಿ ಮಾಡುತ್ತಿರುತ್ತೇನೆ' ಎಂದರು. 'ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಇಲಾಖೆಯಲ್ಲಿ ಹಲವು ಒಳ್ಳೆಯ ಯೋಜನೆಗಳಿವೆ. ಅವುಗಳ ಅನುಕೂಲವನ್ನು ರಾಜ್ಯಕ್ಕೆ ಪಡೆಯಲು ಶೋಭಾ ಕರಂದ್ಲಾಜೆ ಅವರನ್ನು ಭೇಟಿಮಾಡಲು ನಾನು ಮತ್ತು ಶರಣಬಸಪ್ಪ ದರ್ಶನಾಪೂರ ಒಟ್ಟಿಗೆ ಹೋಗಲು ನಿರ್ಧರಿಸಿದ್ದೇವೆ' ಎಂದು ಹೇಳಿದರು.

ನೀವು ಅವರ(ಸತೀಶ ಜಾರಕಿಹೊಳಿ) ಜೊತೆ ಚರ್ಚೆ ಮಾಡಿದರೆ ಗೊತ್ತಾಗುತ್ತದೆ. ಅವರು ವೈಯಕ್ತಿಕವಾಗಿ, ರಾಜಕೀಯವಾಗಿ ಮಾತನಾಡಿರಬಹುದು. ನಾನು ಅದಕ್ಕೆ ಪ್ರತಿಕ್ರಿಯಿಸುವುದಿಲ್ಲ

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ರಥೋತ್ಸವ ಕೊಪ್ಪಳ ತಾಲ್ಲೂಕಿನ ಬೆಟಗೇರಿ ಗ್ರಾಮದಲ್ಲಿ ಬುಧವಾರ ನಡೆದ ದುರ್ಗಾದೇವಿ ಜಾತ್ರೆಯ ಮಹಾರಥೋತ್ಸವದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ –ಚಿತ್ರ/ಜುನಾಸಾಬ ವಡ್ಡಟ್ಟಿ

'ಮಧುಬಲೆ ಹಿಂದೆ ಡಿಕೆಶಿ ಕೈವಾಡವಿಲ್ಲ'

ಪ್ರಜಾವಾಣಿ ವಾರ್ತೆ

ಡಾ.ಯತೀಂದ್ರ ಸಿದ್ದರಾಮಯ್ಯ

ಮೈಸೂರು: 'ಹನಿಟ್ರ್ಯಾಪ್ ಹಿಂದೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೈವಾಡವಿಲ್ಲ. ಬಿಜೆಪಿಯವರ ಆರೋಪ ಸುಳ್ಳು' ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ' ಈ ಹಿಂದೆ ಬಿಜೆಪಿಯ 17 ಮಂದಿ ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದರು. ಹಾಗಾದರೆ ಅವರ ವಿಡಿಯೊ ಬಿಜೆಪಿಯವರೇ ಮಾಡಿಸಿದ್ದಾ?' ಆ ಪಕ್ಷದವರಿಗೆ ಕಾಂಗ್ರೆಸ್‌ನ ಯಾವುದೇ ನಾಯಕರ ವಿರುದ್ಧ ಮಾತನಾಡುವ ನೈತಿಕ ಹಕ್ಕಿಲ್ಲ' ಎಂದು ಹೇಳಿದರು.

ಸಚಿವ ಕೆ.ಎನ್. ರಾಜಣ್ಣ ದೂರು ನೀಡಲು ವಿಳಂಬ ಮಾಡಿದ ಕುರಿತು ಪ್ರತಿಕ್ರಿಯಿಸಿ, 'ಆ ಬಗ್ಗೆ ರಾಜಣ್ಣ ಅವರನ್ನೇ ಕೇಳಬೇಕು. ಗೃಹ ಸಚಿವರ ಜೊತೆ ಈಗಾಗಲೇ ಮಾತನಾಡಿದ್ದಾರೆ' ಎಂದರು.

'ರಾಜಣ್ಣ ಮನೆಯಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಇಲ್ಲವೆಂಬ ವಿಷಯ ಗೊತ್ತಿಲ್ಲ. ಸಿ.ಸಿ.ಟಿ.ವಿ. ಕ್ಯಾಮೆರಾ ಇದ್ದರೆ ಒಳ್ಳೆಯದು. ಪ್ರಕರಣದಲ್ಲಿ ರಾಜಣ್ಣ ಟಾರ್ಗೆಟ್ ಆಗಿಲ್ಲ. ಯಾರೂ ಯಾರನ್ನೂ ಟಾರ್ಗೆಟ್ ಮಾಡುವುದಕ್ಕೆ ಆಗಲ್ಲ. ಅವರು ತಮ್ಮ ಅನುಭವವನ್ನು ಸದನದಲ್ಲಿ ಹೇಳಿದ್ದಾರಷ್ಟೇ. ತನಿಖೆ ನಡೆಯಲಿದ್ದು, ಮುಂದೆ ಸತ್ಯ ಹೊರಬರಲಿದೆ' ಎಂದರು.

ರಾಜಕೀಯ ದುರುದ್ದೇಶ ಇಲ್ಲ; ಕಳಕಳಿ ಅಷ್ಟೇ

ಮಧುಗಿರಿ (ತುಮಕೂರು): 'ನನ್ನ ವಿರುದ್ಧ ನಡೆದ ಹನಿಟ್ರ್ಯಾಪ್ ಯತ್ನದ ವಿರುದ್ಧ ದೂರು ನೀಡಿದ ಹಿಂದೆ ಯಾವುದೇ ರಾಜಕೀಯ ದುರುದ್ದೇಶ ಇಲ್ಲ' ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಸ್ಪಷ್ಟಪಡಿಸಿದ್ದಾರೆ.

'ಮುಂದಿನ ದಿನಗಳಲ್ಲಿ ಯಾರೂ ಹನಿಟ್ರ್ಯಾಪ್‌ಗೆ ಒಳಗಾಗದಂತೆ ಎಚ್ಚರವಹಿಸಲಿ ಎನ್ನುವ ಕಳಕಳಿಯಿಂದ ದೂರು ನೀಡಿದ್ದೇನೆಯೇ ಹೊರತು ಬೇರೆ ಉದ್ದೇಶ ಇಲ್ಲ' ಎಂದರು.

ಹನಿಟ್ರ್ಯಾಪ್ ಪ್ರಕರಣವನ್ನು ಸಿಬಿಐ ಇಲ್ಲವೇ ನ್ಯಾಯಾಂಗ ತನಿಖೆಗೆ ನೀಡುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದ ಕುರಿತ ಸುದ್ದಿಗಾರರ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

'ನನ್ನನ್ನು ಹನಿಟ್ರ್ಯಾಪ್ ಮಾಡುವ ಪ್ರಯತ್ನ ನಡೆದಿತ್ತು. ಆದರೆ, ನಾನು ಹನಿಟ್ರ್ಯಾಪ್‌ಗೆ ಒಳಗಾಗಿಲ್ಲ' ಎಂದು ಸ್ಪಷ್ಟಪಡಿಸಿದರು.

ಹನಿಟ್ರ್ಯಾಪ್ ವಿರುದ್ಧ ತನಿಖೆ ನಡೆದು, ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಮುಂದಿನ ದಿನಗಳಲ್ಲಿ ಈ ರೀತಿಯ ಕೃತ್ಯಗಳಿಗೆ ಕಡಿವಾಣ ಬೀಳಬೇಕು. ಬೇರೆಯವರು ಹನಿಟ್ರ್ಯಾಪ್‌ಗೆ ಬಲಿಯಾಗಬಾರದು ಎಂದರು.

ಸಮಾಲೋಚನಾ ಸಭೆಯಲ್ಲಿ ಆಹಾರ ಸಚಿವ ಕೆ.ಎಚ್‌.ಮುನಿಯಪ್ಪ

ಮೂರು ತಿಂಗಳ ಒಳಗೆ ಒಳಮೀಸಲು ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿಯು ಮೂರು ದಿನ, ಮೂವತ್ತು ದಿನ, ಇಲ್ಲವೇ ಮೂರು ತಿಂಗಳಲ್ಲಿ ಜಾರಿಯಾಗಲಿದೆ. ಅದಕ್ಕಿಂತ ಹೆಚ್ಚು ಸಮಯ ಹಿಡಿಯುವುದಿಲ್ಲ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಒಳಮೀಸಲಾತಿ ಚಳವಳಿಯ ಮುಂದಿನ ಹಂತದ ಹೋರಾಟದ ಬಗ್ಗೆ ಮಾದಿಗ ಸಮುದಾಯಗಳ ಸ್ವಾಭಿಮಾನ ಒಕ್ಕೂಟ (ಎಂಎಸ್‌ಎಸ್‌ಒ) ಬುಧವಾರ ಹಮ್ಮಿಕೊಂಡಿದ್ದ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

ಆರಂಭದಲ್ಲಿ ಮಾತನಾಡಿದ ಆಲ್ ಇಂಡಿಯಾ ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ , 'ಒಳಮೀಸಲಾತಿಯಿಂದ ಪರಿಶಿಷ್ಟ ಜಾತಿ ಸಮುದಾಯಗಳಲ್ಲಿ ಒಡಕು ಉಂಟಾಗುತ್ತದೆ ಎಂಬುದೆಲ್ಲ ಸುಳ್ಳು. ಒಳಮೀಸಲಾತಿ ಜಾರಿಯಾಗಲು ಎಷ್ಟು ಸಮಯ ಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಒಳಮೀಸಲಾತಿಯ ವಿರುದ್ಧ ಇರುವವರನ್ನು ಮುಂದಿನ ಚುನಾವಣೆಯಲ್ಲಿ ಸೋಲಿಸಲಾಗುವುದು' ಎಂದು ಹೇಳಿದರು.

ಒಳಮೀಸಲಾತಿ ಚಳವಳಿಯ ಮುಂದಿನ ಹಂತದ ಹೋರಾಟದ ಬಗ್ಗೆ ನಡೆದ ಸಮಾಲೋಚನಾ ಸಭೆಯಲ್ಲಿ ತೇಗನೂರ್, ಕೆ.ಎಚ್. ಮುನಿಯಪ್ಪ, ಮಾರಸಂದ್ರ ಮುನಿಯಪ್ಪ, ಗುರುಮೂರ್ತಿ, ವೈ.ಸಿ. ಕಾಂಬಳೆ ಪಾಲ್ಗೊಂಡಿದ್ದರು
ಪ್ರಜಾವಾಣಿ ಚಿತ್ರ

ಅಬಕಾರಿ ಸಚಿವ ಆರ್.ಬಿ. ತಿಮ್ಮಾಪೂರ ಮಾತನಾಡಿ, 'ಒಳ ಮೀಸಲಾತಿಗಾಗಿ 30 ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ಸಮಾವೇಶ ಮಾಡಿದಾಗ ಘರ್ಷಣೆಗಳಾಗಿದ್ದವು. ಈಗ ಯಾವ ಪಂಗಡದವರೂ ಒಳಮೀಸಲಾತಿಗೆ ವಿರೋಧ ವ್ಯಕ್ತಪಡಿಸುತ್ತಿಲ್ಲ. ವೈಜ್ಞಾನಿಕವಾಗಿ ನಡೆಯಲಿ ಎಂದು ಬಯಸುತ್ತಿದ್ದಾರೆ. ಇಷ್ಟೇ ದಿನಗಳ ಒಳಗೆ ಎಂದು ಗಡುವು ಹೇಳಲು ಸಾಧ್ಯವಿಲ್ಲ. ನಾವು ಗಡುವು ತಿಳಿಸಿದರೆ ಒಂದರೆಡು ದಿನ ಆಚೀಚೆ ಆದರೂ ನೀವು ಧಿಕ್ಕಾರ ಕೂಗುತ್ತೀರಿ. ಆರು ತಿಂಗಳು–ಒಂದು ವರ್ಷವೆಲ್ಲ ಬೇಕಾಗಿಲ್ಲ. ಮುಖ್ಯಮಂತ್ರಿಯವರ ಮೇಲೆ, ನಮ್ಮ ಮೇಲೆ ನಂಬಿಕೆ ಇಡಿ' ಎಂದರು.

ಕೊನೆಯಲ್ಲಿ ಮಾತನಾಡಿದ ಕೆ.ಎಚ್. ಮುನಿಯಪ್ಪ, 'ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರಾದಿಯಾಗಿ ಎಲ್ಲರೂ ಒಳಮೀಸಲಾತಿ ಜಾರಿ ಮಾಡಲು ಬದ್ಧರಾಗಿದ್ದಾರೆ. ಸಚಿವರಾದ ಜಿ. ಪರಮೇಶ್ವರ, ಎಚ್‌.ಸಿ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಶಿವರಾಜ ತಂಗಡಗಿ ಸಹಿತ ಎಲ್ಲರೂ ಒಳಮೀಸಲಾತಿಯ ಪರವಾಗಿ ಮಾತನಾಡಿದ್ದಾರೆ. ಇಲ್ಲಿಯವರೆಗೆ ಯಾರ ಬಗ್ಗೆ ಎಲ್ಲ ನಿಮಗೆ ಸಂಶಯಗಳಿದ್ದವೋ ಅದನ್ನು ತಲೆಯಿಂದ ತೆಗೆದು ಹಾಕಿ. ಯಾರ ವಿರೋಧವೂ ಇಲ್ಲ. ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ತರುವಂತೆ ಒಳಮೀಸಲಾತಿ ಜಾರಿ ಇರಬಾರದು ಎಂಬ ಕಾರಣಕ್ಕೆ ವೈಜ್ಞಾನಿಕವಾಗಿ ದತ್ತಾಂಶಗಳನ್ನು ಸಂಗ್ರಹಿಸಲಾಗುತ್ತಿದೆ. ಜಾರಿ ನಿರ್ಣಯ ಆದ ಮೇಲೆ ಮತ್ತೆ ನಿಮ್ಮಲ್ಲಿಗೆ ನಾವು ಬರುತ್ತೇವೆ. ನಾವು ನೀವು ಸೇರಿಯೇ ಮುಂದಿನ ಕ್ರಮಗಳ ಬಗ್ಗೆ ಚರ್ಚಿಸೋಣ' ಎಂದು ಹೇಳಿದರು.

ಮುಖಂಡರಾದ ಆರ್.ಮುನಿರಾಜು, ಕನಕೇನಹಳ್ಳಿ ಕೃಷ್ಣಪ್ಪ, ಕೇಶವಮೂರ್ತಿ, ಭೀಮರಾಜ್, ಗುರುಮೂರ್ತಿ, ಜೆ.ಬಿ. ರಾಜು, ಗೋನಾಳ ಭೀಮಪ್ಪ, ಬಾಬುರಾವ್ ಮುಡಗಿ, ಎಚ್‌.ಆರ್. ಭೀಮಾಶಂಕರ್, ತೇಗನೂರು, ವೈ.ಸಿ. ಕಾಂಬಳೆ, ಹನುಮಂತಪ್ಪ ಕಾಕರಗಲ್ಲು, ಮಂಜುನಾಥ್ ಭಾಗವಹಿಸಿದ್ದರು.

ಮಧ್ಯಂತರ ವರದಿ ಇಂದು

ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ ಸಮುದಾಯಗಳಿಗೆ ಒಳ ಮೀಸಲಾತಿ ಕಲ್ಪಿಸುವ ಸಂಬಂಧ ಅಧ್ಯಯನ ನಡೆಸಿ, ಶಿಫಾರಸುಗಳನ್ನು ಸಲ್ಲಿಸಲು ನೇಮಕಗೊಂಡಿರುವ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನದಾಸ್ ನೇತೃತ್ವದ ಆಯೋಗವು ಗುರುವಾರ ಮಧ್ಯಂತರ ವರದಿ ಸಲ್ಲಿಸಲಿದೆ.

ಒಳ ಮೀಸಲು ಕಲ್ಪಿಸಲು ರಾಜ್ಯ ಸರ್ಕಾರಗಳಿಗೂ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಬಳಿಕ ರಾಜ್ಯದಲ್ಲಿ ಈ ಬೇಡಿಕೆ ಬಲ ಪಡೆದಿತ್ತು. ಈ ಸಂಬಂಧ ಅಧ್ಯಯನ ನಡೆಸಲು ಆಯೋಗ ನೇಮಿಸಿ ರಾಜ್ಯ ಸರ್ಕಾರವು 2024ರ ನವೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು.

ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯ ಸರ್ಕಾರಗಳು ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲು ಕಲ್ಪಿಸುವ ತೀರ್ಮಾನಗಳನ್ನು ಜಾರಿಗೊಳಿಸಿವೆ. ಆ ಬಳಿಕ ರಾಜ್ಯದಲ್ಲೂ ಮಧ್ಯಂತರ ವರದಿ ಪಡೆದು ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಒಳ ಮೀಸಲಾತಿ ಪರ ಹೋರಾಟಗಾರರು ಆಗ್ರಹಿಸಿದ್ದರು. ನಾಗಮೋಹನದಾಸ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿಧಾನಸೌಧದಲ್ಲಿ ಗುರುವಾರ ಬೆಳಿಗ್ಗೆ ಭೇಟಿಮಾಡಿ ಮಧ್ಯಂತರ ವರದಿ ಸಲ್ಲಿಸಲಿದ್ದಾರೆ.

ಎಲಿವೇಟ್– 2024 ಕಾರ್ಯಕ್ರಮದಡಿಯಲ್ಲಿ ವಿಜೇತರಾದ ಸ್ಟಾರ್ಟ್‌ಅಪ್‌ಗಳ ಪ್ರವರ್ತಕರನ್ನು ಸಚಿವ ಪ್ರಿಯಾಂಕ್ ಖರ್ಗೆ, ಏಕ್‌ರೂಪ್ ಕೌರ್ ಸನ್ಮಾನಿಸಿದರು

ಸ್ಟಾರ್ಟ್‌ಅಪ್ ಪ್ರವರ್ತಕರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಎಲಿವೇಟ್-2024 ಕಾರ್ಯಕ್ರಮದಡಿಯಲ್ಲಿ ವಿಜೇತರಾದ 101 ಸ್ಟಾರ್ಟ್‌ಅಪ್‌ಗಳ ಪ್ರವರ್ತಕರನ್ನು ಸನ್ಮಾನಿಸಲಾಯಿತು.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಇಲಾಖೆಯ ಕಾರ್ಯದರ್ಶಿ ಏಕ್‌ರೂಪ್ ಕೌರ್, ನಿರ್ದೇಶಕ ರಾಹುಲ್ ಶರಣಪ್ಪ ಸಂಕನೂರ್, ಉಪ ಕಾರ್ಯದರ್ಶಿ ದಲ್ಜೀತ್ ಕುಮಾರ್ ಭಾಗವಹಿಸಿದ್ದರು.

ಎಲಿವೇಟ್ 2024 ಕಾರ್ಯಕ್ರಮವು ಕ್ಲೀನ್‌ಟೆಕ್, ಸ್ಮಾರ್ಟ್ ಸಿಟಿಸ್, ಐಟಿ, ಆರೋಗ್ಯ ಸೇವೆ, ಮೆಡ್‌ಟೆಕ್, ಬಯೋಟೆಕ್ನಾಲಜಿ ಮತ್ತು ಜೀವ ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ನಾವೀನ್ಯ ಚಾಲಿತ ಉದ್ಯಮಶೀಲತೆಯನ್ನು ಉತ್ತೇಜಿಸುತ್ತದೆ. ಈ ಯೋಜನೆಯ ಅಡಿಯಲ್ಲಿ ಕನಿಷ್ಠ ₹21 ಲಕ್ಷ, ಗರಿಷ್ಠ ₹50 ಲಕ್ಷಗಳವರೆಗೆ ಅನುದಾನ ನೀಡಲಾಗುತ್ತದೆ. ಅನುದಾನ ಮಂಜೂರು ಪ್ರಕ್ರಿಯೆ ತೀರ್ಪುಗಾರರ ಶಿಫಾರಸುಗಳ ಆಧಾರದ ಮೇಲೆ ನಡೆಯುತ್ತದೆ.

101 ವಿಜೇತ ಸ್ಟಾರ್ಟ್‌ಅಪ್‌ಗಳಲ್ಲಿ 42 ಮಹಿಳಾ ನೇತೃತ್ವದ್ದಾಗಿವೆ. 36 ಬೆಂಗಳೂರೇತರ ಸ್ಟಾರ್ಟ್‌ಅಪ್‌ಗಳಾಗಿವೆ. ವಿಜೇತರು ಸಂಚಿತ ಅನುದಾನ ₹25 ಕೋಟಿ ಸ್ವೀಕರಿಸಲು ಅರ್ಹರಾಗಿರುತ್ತಾರೆ.

ಏಪ್ರಿಲ್ 1ರಿಂದ ಜಾರಿಗೊಳಿಸಲು ಜಲಮಂಡಳಿ ನಿರ್ಧಾರ

ಕಾವೇರಿ: ಇಎಂಐ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನೀರಿನ ಹೊಸ ಸಂಪರ್ಕದ 'ಪ್ರೊರೇಟಾ' ಶುಲ್ಕವನ್ನು ಏಪ್ರಿಲ್ 1 ರಿಂದ ಕಂತುಗಳಲ್ಲಿ (ಇಎಂಐ) ಪಾವತಿಸಲು ಬೆಂಗಳೂರು ಜಲಮಂಡಳಿ ಅವಕಾಶ ಮಾಡಿಕೊಡಲಿದೆ.

'ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಈಚಿನ ಸಭೆಯಲ್ಲಿ ಶೇವಣಿ ಪಾವತಿಗೆ ಕಂತುಗಳ ಸೌಲಭ್ಯ ಕಲ್ಪಿಸಲು ಅನುಮೋದನೆ ನೀಡಲಾಗಿದೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪ್ರೊರೇಟಾ ಶುಲ್ಕ ದುಬಾರಿ ಎಂಬ ಕಾರಣದಿಂದ ಹಲವು ಅಪಾರ್ಟ್‌ಮೆಂಟ್‌ಗಳು ಸೇರಿದಂತೆ ಅನೇಕರು ಕಾವೇರಿ 5ನೇ ಹಂತದ ಯೋಜನೆಯಡಿ ಹೊಸದಾಗಿ ನೀರಿನ ಸಂಪರ್ಕ ಪಡೆಯಲು ಮುಂದೆ ಬರುತ್ತಿಲ್ಲ. ಇದಕ್ಕೆ ಪರಿಹಾರವಾಗಿ ಮಂಡಳಿಯು ಇಎಂಐ ಆಯ್ಕೆಯನ್ನು ಪರಿಚಯಿಸುತ್ತಿದೆ' ಎಂದು ಅವರು ಮಾಹಿತಿ ನೀಡಿದರು.

ಎಷ್ಟು ಕಂತುಗಳು : 'ಪ್ರೊರೇಟಾ ಶುಲ್ಕವನ್ನು 12 ಕಂತುಗಳಲ್ಲಿ ಪಾವತಿಸುವುದಕ್ಕೆ ಅವಕಾಶ ನೀಡಲು ಮಂಡಳಿಯ ಸಭೆ ಒಪ್ಪಿಗೆ ನೀಡಿದೆ. ನಿವಾಸಿಗಳು ಶುಲ್ಕದ ಶೇ 20ರಷ್ಟನ್ನು ಮುಂಗಡವಾಗಿ ಪಾವತಿಸಬೇಕು. ಆಗ ನೀರಿನ ಸಂಪರ್ಕ ನೀಡಲಾಗುತ್ತದೆ. ಉಳಿದ ಶೇ 80ರಷ್ಟನ್ನು 12 ಮಾಸಿಕ ಕಂತುಗಳಲ್ಲಿ ಪಾವತಿಸಬಹುದು' ಎಂದು ರಾಮ್‌ಪ್ರಸಾತ್ ವಿವರಿಸಿದರು.

ಕಾವೇರಿ 5ನೇ ಹಂತಕ್ಕೆ ಚಾಲನೆ ನೀಡಿದ ನಂತರ ಹೊಸದಾಗಿ ನೀರಿನ ಸಂಪರ್ಕ ಪಡೆಯುವಂತೆ ನಾಗರಿಕರಲ್ಲಿ ಜಾಗೃತಿ ಮೂಡಿಸಲು ಜಲಮಂಡಳಿ ಹಲವು ಕಾರ್ಯಕ್ರಮಗಳನ್ನು ರೂಪಿಸಿತ್ತು. 'ಕಾವೇರಿ ಸಂಪರ್ಕ ಅಭಿಯಾನ' ನಡೆಸಿ ಮನೆ ಮನೆಗೆ ಅರ್ಜಿಗಳನ್ನು ವಿತರಿಸಿತು. ಇಷ್ಟೆಲ್ಲ ಪ್ರಯತ್ನಗಳ ನಡುವೆ, 1 ಲಕ್ಷ ನೀರಿನ ಸಂಪರ್ಕ ನೀಡುವ ಗುರಿಯಿಟ್ಟುಕೊಂಡಿದ್ದ ಜಲಮಂಡಳಿಗೆ ಕೇವಲ 33 ಸಾವಿರ ಸಂಪರ್ಕ ನೀಡಲು ಸಾಧ್ಯವಾಗಿದೆ.

ಈ ಅಭಿಯಾನದ ಭಾಗವಾಗಿ ನಡೆದ ಅಪಾರ್ಟ್‌ಮೆಂಟ್ ಕ್ಷೇಮಾಭಿವೃದ್ಧಿ ಸಂಘಗಳೊಂದಿಗಿನ ಸಭೆಗಳಲ್ಲಿ, 'ಪ್ರೊರೇಟಾ' ಶುಲ್ಕ ಹೆಚ್ಚಾಗಿದ್ದು, ಅದನ್ನು ಪಾವತಿಸಲು ಇಎಂಐ ಸೌಲಭ್ಯ ಕಲ್ಪಿಸುವಂತೆ ನಿವಾಸಿಗಳು ಬೇಡಿಕೆ ಸಲ್ಲಿಸಿದ್ದರು. ಬೇಡಿಕೆ ಪರಿಶೀಲಿಸುವುದಾಗಿ ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಭರವಸೆ ನೀಡಿದ್ದರು.

'ಪ್ರೊರೇಟಾ' ಶುಲ್ಕ

2020ರ ಮಾರ್ಚ್‌ನಲ್ಲಿ ಕಾವೇರಿ ನೀರು ಸಂಪರ್ಕದ ಪ್ರೊರೇಟಾ ಶುಲ್ಕ ಪರಿಷ್ಕರಿಸುವ ಮೂಲಕ ಚದರ ಅಡಿಗೆ ₹250 ಇದ್ದ ಮೊತ್ತವನ್ನು ₹400ಕ್ಕೆ ಏರಿಕೆ ಮಾಡಲಾಗಿತ್ತು. ಅಲ್ಲದೆ, ನೀರಿನ ಸಂಪರ್ಕ ಹಾಗೂ ಒಳಚರಂಡಿ ಸಂಸ್ಕರಣಾ ಘಟಕ ಸೇರಿಸಿದರೆ ಈ ವೆಚ್ಚ ಶೇ 62ರಷ್ಟು ಏರಿಕೆಯಾಗಿತ್ತು. ಇದರಿಂದ ಒಂದೊಂದು ಮನೆಗೆ ಕಾವೇರಿ ನೀರಿನ ಸಂಪರ್ಕ ಪಡೆಯಲು ₹1.2 ಲಕ್ಷ ವೆಚ್ಚವಾಗುತ್ತದೆ. ಇನ್ನು 500 ಫ್ಲ್ಯಾಟ್‌ಗಳಿರುವ ಅಪಾರ್ಟ್‌ಮೆಂಟ್‌ಗೆ ₹3.6 ಕೋಟಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಅಪಾರ್ಟ್‌ಮೆಂಟ್ ಮಾಲೀಕರು ಇಎಂಐ ಸೌಲಭ್ಯಕ್ಕೆ ಬೇಡಿಕೆ ಇಟ್ಟಿದ್ದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು 'ಎಚ್‌ಪಿವಿ' ಲಸಿಕೆ ಬಗ್ಗೆ ಜಾಗೃತಿ ಮೂಡಿಸಿದರು. ದಿನೇಶ್ ಗುಂಡೂರಾವ್, ಡಾ.ಹೇಮಾ ದಿವಾಕರ್, ಅಲೆಕ್ಸ್ ಥಾಮಸ್, ಡಾ. ವಿಶಾಲ್ ರಾವ್ ಉಪಸ್ಥಿತರಿದ್ದರು

'ಗರ್ಭಕಂಠ ಕ್ಯಾನ್ಸರ್ ತಡೆಗೆ ಲಸಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು 'ಎಚ್‌ಪಿವಿ' ಲಸಿಕೆ ಸಹಕಾರಿಯಾಗಿದೆ. ಪ್ರಥಮ ಹಂತದಲ್ಲಿ ಗಣಿಬಾಧಿತ ಪ್ರದೇಶ ಮತ್ತು ಕಲ್ಯಾಣ ಕರ್ನಾಟಕ ಭಾಗದ 14 ವರ್ಷದ ಹೆಣ್ಣು ಮಕ್ಕಳಿಗೆ ಈ ಲಸಿಕೆ ವಿತರಿಸಲು ರಾಜ್ಯ ಸರ್ಕಾರ ಕ್ರಮಕೈಗೊಂಡಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಆರ್ಟಿಸ್ಟ್ ಫಾರ್ ಹರ್ ಸಂಸ್ಥೆಯು ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 'ಕರ್ನಾಟಕದಲ್ಲಿ ಗರ್ಭಕಂಠ ಕ್ಯಾನ್ಸರ್ ನಿರ್ಮೂಲನಾ ಅಭಿಯಾನ'ಕ್ಕೆ ಚಾಲನೆ ನೀಡಿ, ಮಾತನಾಡಿದರು.

'ಮಹಿಳೆಯರಲ್ಲಿ ಹೆಚ್ಚಾಗಿ ಗರ್ಭಕಂಠ ಮತ್ತು ಸ್ತನ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಗರ್ಭಕಂಠ ಕ್ಯಾನ್ಸರ್ ನಿರ್ಮೂಲನೆಗೆ ಎಚ್‌ಪಿವಿ ಲಸಿಕೆ ಸಹಕಾರಿ. ರಾಷ್ಟ್ರೀಯ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ಈ ಲಸಿಕೆ ಸೇರ್ಪಡೆ ಮಾಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇದು ಕಾರ್ಯಗತವಾಗುವ ವಿಶ್ವಾಸವಿದೆ. ನವದೆಹಲಿ, ಪಂಜಾಬ್ ಮತ್ತು ಸಿಕ್ಕಿಂ ರಾಜ್ಯದಲ್ಲಿ ಶಾಲಾ ಹಂತದಲ್ಲಿಯೇ ವಿದ್ಯಾರ್ಥಿನಿಯರಿಗೆ ಲಸಿಕೆ ನೀಡಲಾಗುತ್ತಿದೆ. ನಮ್ಮ ರಾಜ್ಯದಲ್ಲಿಯೂ ಈ ಲಸಿಕೆ ವಿತರಣೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಜತೆಗೆ ಚರ್ಚಿಸಿ, ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಲಾಗಿದೆ' ಎಂದರು.

'ಪ್ರಾಥಮಿಕ ಹಂತದಲ್ಲೇ ಕಾನ್ಸರ್ ಪತ್ತೆಯಾದರೆ ಸೂಕ್ತ ಚಿಕಿತ್ಸೆ ಮೂಲಕ ರೋಗವನ್ನು ಗುಣಪಡಿಸಬಹುದಾಗಿದೆ. ಆದರೆ, ಹಿಂಜರಿಕೆ, ಭಯದ ಕಾರಣ ಅನೇಕ ಮಹಿಳೆಯರು ಪರೀಕ್ಷೆ ಮಾಡಿಸಿಕೊಳ್ಳಲು ಹಿಂದೇಟು ಹಾಕುತ್ತಾರೆ. ಆದ್ದರಿಂದ 'ಗೃಹ ಆರೋಗ್ಯ' ಯೋಜನೆಯಡಿಯೂ ಕ್ಯಾನ್ಸರ್ ಪತ್ತೆಗೆ ಆದ್ಯತೆ ನೀಡಲಾಗುತ್ತದೆ. ಸ್ತನ, ಗರ್ಭಕಂಠ ಮತ್ತು ಬಾಯಿ ಕ್ಯಾನ್ಸರ್ ಪ್ರಕರಣವನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ, ಚಿಕಿತ್ಸೆಗೂ ಕ್ರಮವಹಿಸಲಾಗುವುದು' ಎಂದು ಹೇಳಿದರು.

ಆರ್ಟಿಸ್ಟ್ ಫಾರ್ ಹರ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಹೇಮಾ ದಿವಾಕರ್, 'ವಿವಿಧ ಸಂಘಟನೆಗಳ ನೆರವಿನಿಂದ ಗರ್ಭಕಂಠ ಕ್ಯಾನ್ಸರ್ ನಿರ್ಮೂಲನೆಗೆ ಶ್ರಮಿಸಲಾಗುತ್ತಿದೆ. ಕಳೆದ ಮೂರು ತಿಂಗಳ ಅವಧಿಯಲ್ಲಿ ಎಚ್‌ಡಿಆರ್ ಫೌಂಡೇಷನ್ ವತಿಯಿಂದ ರಾಜ್ಯದ ವಿವಿಧೆಡೆ 4,560 ಹೆಣ್ಣು ಮಕ್ಕಳಿಗೆ ಉಚಿತವಾಗಿ ಲಸಿಕೆ ನೀಡಲಾಗಿದೆ' ಎಂದು ತಿಳಿಸಿದರು.

ಪನೀರ್ ಮಾದರಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಅಧಿಕಾರಿಗಳು ರಾಜ್ಯಾದ್ಯಂತ 163 ಪನೀರ್ ಮಾದರಿಗಳನ್ನು ಸಂಗ್ರಹಿಸಿ, ಪ್ರಯೋಗಾಲಯ ಪರೀಕ್ಷೆಗೆ ಒಳಪಡಿಸಿದ್ದಾರೆ.

ಇವುಗಳಲ್ಲಿ 17 ಮಾದರಿಗಳ ವರದಿ ಬಂದಿದ್ದು, ಎರಡು ಮಾದರಿಗಳು ಅಸುರಕ್ಷಿತ ಎನ್ನುವುದನ್ನು ಪ್ರಯೋಗಾಲಯದ ವರದಿ ದೃಢಪಡಿಸಿದೆ. ರಾಸಾಯನಿಕ ಅಂಶದ ಜತೆಗೆ ಸೂಕ್ಷ್ಮಾಣು ಜೀವಿಗಳು ಸಹ ಪತ್ತೆಯಾಗಿದ್ದು, ಕ್ಯಾಲ್ಸಿಯಂ ಮತ್ತು ಪ್ರೋಟೀನ್ ಅಂಶ ಕಡಿಮೆ ಇರುವುದು ವರದಿಯಿಂದ ತಿಳಿದು ಬಂದಿದೆ.

ಇಲಾಖೆ ಅಧಿಕಾರಿಗಳು ವಿವಿಧ ಐಸ್‌ಕ್ರೀಂ, ತಂಪು ಪಾನೀಯ ತಯಾರಿಕಾ ಘಟಕಗಳ ಮೇಲೂ ದಾಳಿ ನಡೆಸಿದ್ದು, ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

'ಪನೀರ್ ಮಾದರಿಗಳ ಪರೀಕ್ಷಾ ವರದಿ ಬಗ್ಗೆ ಮಾಹಿತಿ ಇಲ್ಲ. ಶೀಘ್ರವೇ ವರದಿ ತರಿಸಿಕೊಂಡು, ಪರಿಶೀಲಿಸಲಾಗುವುದು. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಪ್ರತಿ ತಿಂಗಳು ವಿವಿಧ ಆಹಾರಗಳ ಗುಣಮಟ್ಟ ಪರೀಕ್ಷೆ ನಡೆಸುತ್ತಿದೆ. ಈಗಾಗಲೇ ಕೆಲ ಆಹಾರ ಪದಾರ್ಥಗಳಲ್ಲಿ ಕಲಬೆರಕೆ ಆಗಿರುವುದು ಪ್ರಯೋಗಾಲಯ ಪರೀಕ್ಷೆಯಿಂದ ದೃಢಪಟ್ಟಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ. ಎನ್.ರಾಮಮೂರ್ತಿ

ಜನನ: 09-06-1943 ಮರಣ: 26-03-2025

ಇವರು ದಿನಾಂಕ 26-03-2025 ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ಇಂತಿ ದುಃಖತಪ್ತರು
ಡಾ.ಎಂ.ಆರ್.ಜಯರಾಮ್,
ಸಹೋದರರು ಮತ್ತು ಕುಟುಂಬದವರು

ಶ್ರೀಮತಿ ಸಂಪಂಗಮ್ಮ, ಗುರುಪ್ರಸಾದ್, ವರಲಕ್ಷ್ಮಿ, ಸರಸ್ವತಿ, ಪಾರ್ವತಿ ಮತ್ತು ಕುಟುಂಬದವರು

- 10 am to 8 pm · Open All Days · Master / Visa Card Accepted

INNERWEAR • LEISUREWEAR • ACTIVEWEAR • KIDSWEAR • SOCKS

Venues In Bangalore

Kundalahalli Gate:	S K R Convention hall, Thubarahalli, Varthur Main Road.
Infantry Road:	Safina Plaza, No.84/85.
Jayanagar:	Srinivasa Sagar Kalyan Mahal, 2nd block, (Near Ashoka Pillar).
Banshankari:	Sri Hari Kalyana Mantap, 30th Main,B.S.K. 3rd Stage, Near K.I.M.S. Hospital.
HSR Layout 6th Sector:	White Housse, #4(B) P1 & P2, 14th Main Road, Next to BDA Complex, Bengaluru
Bannerghatta Road:	Billava Bhavana, Next to Royal Meenakshi Mall, Opp. Meenakshi Temple.
R.R. Nagar:	Vasavi Mahal Kalyana Mantapa, Next To Reliance Digital, Ideal Homes I Phase.
Vijay Nagar:	Five O Gallery 17th Cross, M.C. Road, Near Vijay Nagar Bus Stop.
Rajajinagar:	Raja Rajeshwari Kalyan Mantap, Ground Floor, Dr. Rajkumar Road, 2nd Block, Next to Blue Hyundai Showroom.
Malleswaram:	The Canara Union, No.42, 8th Main, Canara Union Road.
Nanjappa Circle:	Sri Dwaraka Convention Hall, Vidyaranyapura Main Road.
Koramangala:	Apoorva International, #35A,Raheja Arcade, Opp Star Box, Bangalore -95
Basavanagudi:	Amolak Apparels, #104, Bull Temple Road, Near Ramakrishna Ashram, Bangalore-37

Org. by: Surya Agency Pvt. Ltd.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/97/2025
ದಿನಾಂಕ : 20–03–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ತುಮಕೂರು – ಅರಸೀಕೆರೆ ಸೆಕ್ಷನ್‌ನಲ್ಲಿ ಕಿ.ಮೀ.98/400–500 ನಲ್ಲಿನ ಎಲ್‌ಸಿ ಸಂ.59ರ ಬದಲಿಗೆ 1x36ಮೀ ಕಾಂಪೊಸಿಟ್ ಗರ್ಡರ್‌ನೊಂದಿಗೆ 2 ಪಥದ ರಸ್ತೆ ಮೇಲ್ಸೇತುವೆ + ನಿಟ್ಟೂರು ಕಡೆಗೆ 7x18.7ಮೀ ಪಿಎಸ್‌ಸಿ ಗರ್ಡರ್ + ಸಂಪಿಗೆ ಗ್ರಾಮದ ಕಡೆಗೆ 5x18.7ಮೀ ಪಿಎಸ್‌ಸಿ ಗರ್ಡರ್ + ನಿಟ್ಟೂರು ಯಾರ್ಡ್‌ನಲ್ಲಿ ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ ಆರ್‌ಇ ಬ್ಲಾಕ್ ಮತ್ತು ರೀಟೇನಿಂಗ್ ಗೋಡೆಯ ನಿರ್ಮಾಣ (ಸಂಯೋಜಿತ ಕಾಮಗಾರಿ) (ಟೆಂಡರ್ ಉಲ್ಲೇಖ ಸಂ. ಆರ್‌ಓಬಿ–ಎಲ್‌ಸಿ59–ಟಿಕೆ–ಎಎಸ್‌ಕೆ)	ರೂ. 37,23,42,785/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 16–04–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು

ಪಿಯುಬಿ/866/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 07/2025 ದಿನಾಂಕ : 21–03–2025

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು, ಕೆಳಗಿನ ಐಟಂಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮೂಲಕ ಮಾತ್ರ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **ಟೆಂಡರ್ ಮುಕ್ತಾಯದ ಸಮಯ : 10.30 ಗಂಟೆಗಳು**

ಕ್ರ.	ಟೆಂಡರ್ ಸಂಖ್ಯೆ	ಸಂಕ್ಷಿಪ್ತ ವಿವರಣೆ	ಪ್ರಮಾಣ	ಟೆಂಡರ್ ಮುಕ್ತಾಯದ ದಿನಾಂಕ
1	60252029	ಎಂ.ಎಸ್. ಲೀನಿಯರ್ 60 ಕೆಜಿ ಟಿ–3740ರ ತಯಾರಿಕೆ ಮತ್ತು ಸರಬರಾಜು	339600 ಸಂಖ್ಯೆಗಳು	03.04.2025
2	31255004	140 ಕೆಎನ್ ಎಮರ್ಜೆನ್ಸಿ ಸ್ಪ್ರಿಂಗ್‌ನೊಂದಿಗೆ ಏರ್ ಸ್ಪ್ರಿಂಗ್ ಅಸೆಂಬ್ಲಿ ಕಂಪ್ಲೀಟ್	40 ಸಂಖ್ಯೆಗಳು	07.04.2025
3	45251481	ಸೆಲ್ಫ್ ಪ್ರೈಮಿಂಗ್ ಮೊನೊ ಬ್ಲಾಕ್ ಪಂಪ್ 0.5 ಹೆಚ್‌ಪಿ/0.37 ಕೆಡಬ್ಲ್ಯು	2832 ಸಂಖ್ಯೆಗಳು	08.04.2025
4	29251647	ಕಂಪ್ರೆಸ್ಸರ್‌ಗಾಗಿ ಇಂಡಕ್ಷನ್ ಮೋಟಾರ್ 15 ಕೆಡಬ್ಲ್ಯು, 20 ಹೆಚ್‌ಪಿ	69 ಸಂಖ್ಯೆಗಳು	10.04.2025
5	33255004	ಏರ್ ಸ್ಪ್ರಿಂಗ್ ಅಸೆಂಬ್ಲಿ (120 ಕೆಎನ್ ಸಾಮರ್ಥ್ಯ)	40 ಸಂಖ್ಯೆಗಳು	15.04.2025
6	33251342	ಆರ್ಟಿಕ್ಯುಲೇಟೆಡ್ ಸ್ಫೆರೋ ಎಲಾಸ್ಟಿಕ್ ರಬ್ಬರ್ ಬೇರಿಂಗ್	436 ಸಂಖ್ಯೆಗಳು	24.04.2025
7	33251033	ಯಾ ಡ್ಯಾಂಪರ್	3763 ಸಂಖ್ಯೆಗಳು	30.04.2025
8	33255010	ಇಂಪ್ರೂವ್ಡ್ ಹೈ ಟೆನ್ಸೈಲ್ ಟೈಟ್ ಲಾಕ್ ಸೆಂಟರ್ ಬಫರ್ ಕಪ್ಲರ್	100 ಸೆಟ್‌ಗಳು	05.05.2025
9	33251341	ಎಲ್‌ಹೆಚ್‌ಬಿ ಕೋಚ್‌ಗಳಿಗಾಗಿ SANROK ಡ್ರಾಯಿಂಗ್ ಸಂ. 1ಇಡಿ–1067ಗೆ ಅನುಸಾರವಾಗಿ ನಕಲ್	252 ಸಂಖ್ಯೆಗಳು	13.05.2025

ಹೆಚ್ಚಿನ ವಿವರಗಳಿಗೆ www.ireps.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/868/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25 ಪ್ರಧಾನ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು, ಹುಬ್ಬಳ್ಳಿ

South Western Railway - SWR sw_railways SWRRLY southwesternrailway SWRRLY

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.

ಸಂ: ಬಿಐಎಎಪಿಎ/ಟಿಪಿ/ಭೂಪ/660/2024–25/3472 ದಿನಾಂಕ: 25.03.2025

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರಾದ ಶ್ರೀ ಕೆ.ಶ್ರೀನಿವಾಸ್ ಬಿನ್ ಇ.ಕೃಷ್ಣಪ್ಪ ರವರು ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಕನ್ನಮಂಗಲ ಗ್ರಾಮದ ಸರ್ವೆ ನಂ. 137 ರಲ್ಲಿ 1ಎ–00ಗು ವಿಸ್ತೀರ್ಣದ ಜಮೀನನ್ನು "ಶೈಕ್ಷಣಿಕ (higher primary schools with minimum sital area of 2000 sq mts)" ಉದ್ದೇಶಕ್ಕಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಿದ್ದು, ಈ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ. ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110 ಇವರಿಗೆ ಲಿಖಿತ ರೂಪದಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/5925/2024–25

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ಆಯುಕ್ತರ ಕಛೇರಿ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂ ಸಂ (080)–22253783, 22254071

ಸಂ:ಸಕನಿ/ಇಡಿ–6/ಸಿಆರ್–1/2024–25, (Call-2) ದಿನಾಂಕ : 04.03.2025

ಇ–ಟೆಂಡರ್ ಪ್ರಕಟಣೆ

ಸಮಾಜ ಕಲ್ಯಾಣ ಇಲಾಖೆಯಿಂದ **ದಿನಾಂಕ: 05.04.2025** ರಂದು **ಡಾ.ಬಾಬು ಜಗಜೀವನ್ ರಾಂ** ರವರ 118ನೇ ಜನ್ಮದಿನಾಚರಣೆ ಹಾಗೂ **ದಿನಾಂಕ:14.04.2025** ರಂದು **ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್** ರವರ **134ನೇ** ಜನ್ಮದಿನಾಚರಣೆಗಳನ್ನು ಆಚರಿಸುವ ಸಲುವಾಗಿ ಸಮಾರಂಭ ಆಯೋಜನೆಯ ಅಗತ್ಯ ವ್ಯವಸ್ಥೆ ಮತ್ತು ಪರಿಕರಗಳನ್ನು ಒದಗಿಸಲು ಮರು ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜು ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ (ವಿಳಾಸ: **http://kppp.karnataka.gov.in.**) ನಿಂದ **ದಿನಾಂಕ: 25.03.2025** ರಿಂದ ಪಡೆಯಬಹುದಾಗಿದ್ದು, ಟೆಂಡರನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ **ದಿನಾಂಕ: 02.04.2025 ಬೆಳಿಗ್ಗೆ 11.00 ಗಂಟೆ.**

ಸಹಿ/–
ಜಂಟಿ ನಿರ್ದೇಶಕರು (ಶಿಕ್ಷಣ),
ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/5911/ಎಸ್‌ಎಸ್‌ಸಿ/2024–25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ನಯೋಸ/CLU-419/3514/2024–25 ದಿನಾಂಕ:26/03/2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೇ ನಂ:	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ:	ಬದಲಾವಣೆ ಕೋರಿರುವ ಭೂ ಉಪಯೋಗ:
1	M/s. Anandaa Ventures rep by its partners Smt.Lakshmi Tummala and others	ಆನೇಕಲ್	ಸರ್ಜಾಪುರ	ಹುಸ್ಕೂರು	149/2	0–27	ವ್ಯವಸಾಯ ವಲಯ	ವಸತಿ
2					149/3	0–20		
3					150/1	2–25		
					ಒಟ್ಟು	3–32		

ಷರಾ: ಅರ್ಜಿದಾರರು ಬೆಂಗಳೂರು ನಗರ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಹುಸ್ಕೂರು ಗ್ರಾಮದ ಸರ್ವೆ ನಂ. 149/2, 149/3 ಮತ್ತು 150/1 ರಲ್ಲಿ ಒಟ್ಟು 03ಎ–32ಗುಂ ಜಮೀನುಗಳನ್ನು ವ್ಯವಸಾಯಕ್ಕೆ ಬಳಸಲು ಸಾಧ್ಯವಿರುವುದಿಲ್ಲ. ನಮ್ಮ ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂ ಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ರಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ' ವಲಯದಿಂದ 'ವಸತಿ' ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ / कर्मचारी भविष्य निधि संगठन

EMPLOYEES' PROVIDENT FUND ORGANISATION
REGIONAL OFFICE-BENGALURU (KORAMANGALA)
क्षेत्रीय कार्यालय, बेंगलुरु, (कोरमंगाला
ANNAPOORNESHWARI COMPLEX, NO 37/1,6th MAIN, SINGASANDRA, BENGALURU–560068
Ph: 080-29550597 E mail: ro.koramangala@epfindia.gov.in

EPFO ನ ಕೇಂದ್ರೀಕೃತ ಪಿಂಚಣಿ ಪಾವತಿ ವ್ಯವಸ್ಥೆ ಯಶಸ್ವಿಯಾಗಿ ಜಾರಿಗೆ ಬಂದಿದೆ.

EPFO ನವೆಂಬರ್ 2024 ರಲ್ಲಿ ನೌಕರರ ಪಿಂಚಣಿ ಯೋಜನೆಗಾಗಿ ಕೇಂದ್ರೀಕೃತ ಪಿಂಚಣಿ ಪಾವತಿ ವ್ಯವಸ್ಥೆ (CPPS) ಅನ್ನು ಯಶಸ್ವಿಯಾಗಿ ಜಾರಿಗೆ ತಂದಿದೆ. CPPS ರಾಷ್ಟ್ರೀಯ ಮಟ್ಟದ ಕೇಂದ್ರೀಕೃತ ವ್ಯವಸ್ಥೆಯನ್ನು ಸ್ಥಾಪಿಸಿದೆ, ಇದು ಭಾರತದಾದ್ಯಂತ ಯಾವುದೇ ಬ್ಯಾಂಕ್, ಯಾವುದೇ ಶಾಖೆಯ ಮೂಲಕ ಪಿಂಚಣಿ ವಿತರಣೆಯನ್ನು ಸಕ್ರಿಯಗೊಳಿಸುತ್ತದೆ.

CPPS ಅನುಷ್ಠಾನವು EPFO ನ ಆಧುನೀಕರಣದಲ್ಲಿ ಮಹತ್ವದ ಮೈಲಿಗಲ್ಲನ್ನು ಗುರುತಿಸುತ್ತದೆ. ಭಾರತದಾದ್ಯಂತ ಯಾವುದೇ ಬ್ಯಾಂಕ್, ಯಾವುದೇ ಶಾಖೆಯಿಂದ ಪಿಂಚಣಿದಾರರು ತಮ್ಮ ಪಿಂಚಣಿಗಳನ್ನು ಪಡೆಯಲು ಅನುವು ಮಾಡಿಕೊಡುವ ಮೂಲಕ, ಈ ಉಪಕ್ರಮವು ಪಿಂಚಣಿದಾರರು ಎದುರಿಸುತ್ತಿರುವ ದೀರ್ಘಕಾಲೀನ ಸವಾಲುಗಳನ್ನು ಪರಿಹರಿಸುತ್ತದೆ ಮತ್ತು ಸುಗಮ ಮತ್ತು ಪರಿಣಾಮಕಾರಿ ವಿತರಣಾ ಕಾರ್ಯವಿಧಾನವನ್ನು ಖಚಿತಪಡಿಸುತ್ತದೆ.

CPPS ಪ್ರಸ್ತುತ EPFO ನ 78 ಲಕ್ಷಕ್ಕೂ ಹೆಚ್ಚು EPS ಪಿಂಚಣಿದಾರರಿಗೆ ಪ್ರಯೋಜನವನ್ನು ನೀಡುತ್ತಿದೆ. ಮುಂದುವರಿದ ಐಟಿ ಮತ್ತು ಬ್ಯಾಂಕಿಂಗ್ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ಮೂಲಕ, ಇದು ಪಿಂಚಣಿದಾರರಿಗೆ ಹೆಚ್ಚು ಪರಿಣಾಮಕಾರಿ, ಸುಗಮ ಮತ್ತು ಬಳಕೆದಾರ ಸ್ನೇಹಿ ಅನುಭವವನ್ನು ನೀಡುತ್ತದೆ.

ಪಿಂಚಣಿದಾರರು ಪಿಂಚಣಿ ಪ್ರಾರಂಭವಾಗುವ ಸಮಯದಲ್ಲಿ ಯಾವುದೇ ಪರಿಶೀಲನೆಗಾಗಿ ಶಾಖೆಗೆ ಭೇಟಿ ನೀಡುವ ಅಗತ್ಯವಿಲ್ಲ ಮತ್ತು ಪಿಂಚಣಿ ಬಿಡುಗಡೆಯಾದ ತಕ್ಷಣ ಜಮಾ ಮಾಡಲಾಗುತ್ತದೆ. ಪಿಂಚಣಿದಾರರು ಒಂದು ಸ್ಥಳದಿಂದ ಮತ್ತೊಂದು ಕಚೇರಿಗೆ ಸ್ಥಳಾಂತರಗೊಂಡಾಗ ಅಥವಾ ತಮ್ಮ ಬ್ಯಾಂಕ್ ಅಥವಾ ಶಾಖೆಯನ್ನು ಬದಲಾಯಿಸಿದಾಗಲೂ ಸಹ, ಒಂದು ಕಚೇರಿಯಿಂದ ಮತ್ತೊಂದು ಕಚೇರಿಗೆ ಪಿಂಚಣಿ ಪಾವತಿ ಆದೇಶಗಳನ್ನು (PPO) ವರ್ಗಾಯಿಸುವ ಅಗತ್ಯವಿಲ್ಲದೆ, ಭಾರತದಾದ್ಯಂತ ಪಿಂಚಣಿ ವಿತರಣೆಯನ್ನು CPPS ಖಚಿತಪಡಿಸುತ್ತದೆ.

ಸಹಿ/-
(ಸಲೀಲ್ ಶಂಕರ್)
ಪ್ರಾದೇಶಿಕ ಪಿ.ಎಫ್. ಆಯುಕ್ತರು-I
ಪ್ರಾದೇಶಿಕ ಕಛೇರಿ ಬೆಂಗಳೂರು (ಕೋರಮಂಗಲ)

ಭಾರತ ಸರ್ಕಾರ

ಬಾಹ್ಯಾಕಾಶ ಇಲಾಖೆ, ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)
ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ, ಬೆಂಗಳೂರು – 560 094. ದೂ: (080)22172614/2613

इसरो isro

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗಳಿಗೆ ಇ–ಟೆಂಡರಿಂಗ್ ಮೂಲಕ ಆನ್‌ಲೈಲ್ ಐಟಂ ದರದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂಖ್ಯೆ	ಟೆಂಡರ್‌ಗಿಟ್ಟ ಅಂದಾಜು ಮೊತ್ತ	ಪೂರ್ಣಗೊಳಿಸುವ ಅವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ
01	ಐಎಸ್‌ಐಟಿಇ, ಮಾರತಹಳ್ಳಿ ಇಲ್ಲಿರುವ ಎಐಟಿಎಫ್–2ರ 4ನೇ ಮಹಡಿಯಲ್ಲಿ ಕುಳಿತುಕೊಳ್ಳುವ ಸ್ಥಳಕ್ಕೆ ಅಲ್ಯುಮಿನಿಯಂ ಪಾರ್ಟಿಷನ್ ಒದಗಿಸುವುದು (ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳು). HSFC/CMG/MM/C/E/138/2024-25, Dt: 26.03.2025	ರೂ.12.70 ಲಕ್ಷಗಳು	02 ತಿಂಗಳು	27.03.2025 (11.00 ಗಂಟೆ) ರಿಂದ 02.04.2025 (23.30ಗಂಟೆ) ವರೆಗೆ	04.04.2025 11.00 ಗಂಟೆ ವರೆಗೆ	04.04.2025 11.30 ಗಂಟೆಗೆ	ರೂ. 25,400/–
02	ಎಚ್‌ಎಸ್‌ಎಫ್‌ಸಿ, ಇಸ್ರೋ ಕಾರ್ಯಸ್ಥಾನ, ಬೆಂಗಳೂರು ಇಲ್ಲಿರುವ ತಾಂತ್ರಿಕ ಮತ್ತು ಆಡಳಿತ ಬ್ಲಾಕ್‌ಗಳ ಮೊದಲನೆ ಮಹಡಿಗೆ ಹವಾ ನಿಯಂತ್ರಣ ವ್ಯವಸ್ಥೆ ಒದಗಿಸುವುದು. HSFC/CMG/MM/AC/139/2024-25, Dt: 26.03.2025	ರೂ.17.66 ಲಕ್ಷಗಳು	01 ತಿಂಗಳು				ರೂ. 35,320/–
03	ಆಡಳಿತ ಮತ್ತು ತಾಂತ್ರಿಕ ಕಟ್ಟಡ, ಹೆಚ್‌ಎಸ್‌ಎಫ್‌ಸಿ, ಇಸ್ರೋ ಕಾರ್ಯಸ್ಥಾನ, ಬೆಂಗಳೂರು ಇಲ್ಲಿಗೆ ವಿದ್ಯುತ್ ಪೂರೈಕೆಯಲ್ಲಿ ಸುಧಾರಣೆಗಾಗಿ ವಿದ್ಯುತ್ ಕಾಮಗಾರಿಗಳು (ವಿದ್ಯುತ್ ಕಾಮಗಾರಿ) HSFC/CMG/MM/E/140/2024-25, Dt: 26.03.2025	ರೂ.6.28 ಲಕ್ಷಗಳು	01 ತಿಂಗಳು				ರೂ. 12,560/–
04	ಹೆಚ್‌ಎಸ್‌ಎಫ್‌ಸಿ, (ಇಸ್ರೋ ಕಾರ್ಯ ಸ್ಥಾನ ಮತ್ತು ಮಾರತ್‌ಹಳ್ಳಿ) ಬೆಂಗಳೂರು ಇಲ್ಲಿಗೆ ವಿದ್ಯುತ್ ಕಾಮಗಾರಿಗಳಿಗೆ ವಾರ್ಷಿಕ ಅವಧಿಯ ಗುತ್ತಿಗೆ HSFC/CMG/MM/E/141/2024-25, Dt: 26.03.2025	ರೂ.12.70 ಲಕ್ಷಗಳು	12 ತಿಂಗಳು				ರೂ. 25,400/–

ಟೆಂಡರ್ ದಸ್ತಾವೇಜುಗಳನ್ನು ಟೆಂಡರ್ ವಿಜಾರ್ಡ್‌ನೊಂದಿಗೆ ನೋಂದಾಯಿಸಿ ಮತ್ತು ಟೆಂಡರ್ ಸಂಸ್ಕರಣಾ ಶುಲ್ಕವನ್ನು ಪಾವತಿಸುವುದರ ಮೂಲಕ ವೆಬ್‌ಸೈಟ್ **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾರಾಟಗಾರರ ನೋಂದಣಿ ಪ್ರಕ್ರಿಯೆಯನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗಿದೆ. ಆಸಕ್ತ ಟೆಂಡರ್‌ದಾರರು ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆಗಾಗಿ (ಎನ್‌ಐಟಿ) ವೆಬ್‌ಸೈಟ್ **www.isro.gov.in** ನೋಡುವುದು ಹಾಗೂ ಇತರೆ ವಿವರಗಳು ಮತ್ತು ಟೆಂಡರ್ ದಸ್ತಾವೇಜುಗಳ ಖರೀದಿಗೆ ವೆಬ್‌ಸೈಟ್ **www.tenderwizard.com/ISRO** ಗೆ ಭೇಟಿ ನೀಡಿ.

ಸಹಿ/– ಮುಖ್ಯಸ್ಥರು, ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ಕಲಾಪಕ್ಕೆ ಹಾಜರಾಗಲು ರಶೀದ್‌ಗೆ ಅನುಮತಿ

ನವದೆಹಲಿ (ಪಿಟಿಐ): ಜಮ್ಮು ಕಾಶ್ಮೀರದ ಸಂಸದ, ಸದ್ಯ ಜೈಲಿನಲ್ಲಿರುವ ಅಬ್ದುಲ್ ರಶೀದ್ ಶೇಖ್ ಅವರಿಗೆ ಸಂಸತ್ ಕಲಾಪದಲ್ಲಿ ಭಾಗಿಯಾಗಲು ದೆಹಲಿ ಹೈಕೋರ್ಟ್ ಅವಕಾಶ ಕಲ್ಪಿಸಿದೆ.

ಜೈಲಿನಿಂದ ಹೊರಗಿದ್ದಾಗ ರಶೀದ್ ಅವರು ಮೊಬೈಲ್ ಫೋನ್, ಸ್ಥಿರ ದೂರವಾಣಿ ಬಳಸುವಂತಿಲ್ಲ, ಮಾಧ್ಯಮಗಳ ಜೊತೆ ಮಾತನಾಡುವಂತಿಲ್ಲ ಎಂದು ಪೀಠ ಆದೇಶಿಸಿತು.

ನ್ಯಾಯಮೂರ್ತಿಗಳಾದ ಚಂದ್ರಧಾರಿ ಸಿಂಗ್ ಮತ್ತು ಅನೂಪ್ ಜೈರಾಮ್ ಭಂಭಾನಿ ಅವರಿದ್ದ ಪೀಠ, 'ಮಾ. 26ರಿಂದ ಏ.4ರವರೆಗೆ ಸಂಸದ ರಶೀದ್ ಅಲಿಯಾಸ್ ಎಂಜಿನಿಯರ್ ರಶೀದ್ ಅವರು ಪೊಲೀಸರ ವಶದಲ್ಲಿ ಕಲಾಪಕ್ಕೆ ತೆರಳಬಹುದು' ಎಂದು ಸೂಚಿಸಿತು.

ಉಗ್ರ ಚಟುವಟಿಕೆಗಳಿಗೆ 2017ರಲ್ಲಿ ಆರ್ಥಿಕ ನೆರವನ್ನು ನೀಡಿದ್ದ ಆರೋಪದಡಿ ಬಂಧಿತರಾಗಿರುವ ರಶೀದ್ ಅವರ ವಿರುದ್ಧ ಕಾನೂನುಬಾಹಿರ ಚಟುವಟಿಕೆ (ನಿಯಂತ್ರಣ) ಕಾಯ್ದೆಯಡಿ ಮೊಕದ್ದಮೆ ದಾಖಲಿಸಲಾಗಿದೆ.

ಆದೇಶದಲ್ಲಿರುವ ಮಾತು ಅಸೂಕ್ಷ್ಮ, ಅಮಾನವೀಯ– ಸುಪ್ರೀಂ ಕೋರ್ಟ್

ಅತ್ಯಾಚಾರ: ಹೈಕೋರ್ಟ್ ಮಾತಿಗೆ ತಡೆ

ನವದೆಹಲಿ (ಪಿಟಿಐ): ಯಾವುದು ಅತ್ಯಾಚಾರ ಅಲ್ಲ ಎಂಬ ವಿಚಾರವಾಗಿ ಅಲಹಾಬಾದ್ ಹೈಕೋರ್ಟ್ ಈಚೆಗೆ ಆದೇಶವೊಂದರಲ್ಲಿ ಆಡಿದ್ದ ಮಾತುಗಳಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಹೈಕೋರ್ಟ್‌ನ ಆ ಮಾತುಗಳಿಗೆ ತಡೆ ನೀಡಿದೆ. ಅಲ್ಲದೆ, ಆ ಮಾತುಗಳು 'ಅಸೂಕ್ಷ್ಮವಾದವು, ಅಮಾನವೀಯ' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸಂತ್ರಸ್ತ ಬಾಲಕಿಯ ಸ್ತನಗಳನ್ನು ಹಿಡಿದ ಮಾತ್ರಕ್ಕೆ, ಆಕೆಯ ಪೈಜಾಮಾದ ದಾರವನ್ನು ಎಳೆದ ಮಾತ್ರಕ್ಕೆ ಅದು ಅತ್ಯಾಚಾರ ಅಥವಾ ಅತ್ಯಾಚಾರ ಯತ್ನ ಆಗುವುದಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಮಾರ್ಚ್ 17ರ ಆದೇಶದಲ್ಲಿ ಹೇಳಿತ್ತು.

'ಇದು ಬಹಳ ಗಂಭೀರ ಸಂಗತಿ' ಎಂದು ಹೇಳಿರುವ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು, 'ಸಾಮಾನ್ಯ ಸಂದರ್ಭಗಳಲ್ಲಿ ನಾವು ಈ ಹಂತದಲ್ಲಿ ತಡೆ ನೀಡುವ ಕೆಲಸವನ್ನು ನಿಧಾನವಾಗಿ ಮಾಡುತ್ತೇವೆ. ಆದರೆ, ಆದೇಶದ 21, 24 ಮತ್ತು 26ನೆಯ ಪ್ಯಾರಾಗಳಲ್ಲಿ ಹೇಳಿರುವ ಮಾತುಗಳು ಕಾನೂನಿಗೆ ಗೊತ್ತೇ ಇಲ್ಲದವು ಹಾಗೂ ಅಸೂಕ್ಷ್ಮವೂ ಅಮಾನವೀಯವೂ ಆದವು. ಹೀಗಾಗಿ ನಾವು ಈ ಮಾತುಗಳಿಗೆ ತಡೆ ನೀಡಬೇಕಿದೆ' ಎಂದು ಸ್ಪಷ್ಟಪಡಿಸಿದೆ.

'ವಿ ದಿ ವಿಮೆನ್ ಆಫ್ ಇಂಡಿಯಾ' ಸಂಘಟನೆಯು ಅಲಹಾಬಾದ್ ಹೈಕೋರ್ಟ್ ಆದೇಶದಲ್ಲಿನ ಮಾತುಗಳನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರ ಗಮನಕ್ಕೆ ತಂದಿತ್ತು. ನಂತರ ಸುಪ್ರೀಂ ಕೋರ್ಟ್, ಈ ವಿಷಯವನ್ನು ಸ್ವಯಂಪ್ರೇರಿತವಾಗಿ ವಿಚಾರಣೆಗೆ ಕೈಗೆತ್ತಿಕೊಂಡಿತ್ತು.

ಬಾಲಕಿಯೊಬ್ಬಳ ಮೇಲೆ ಅತ್ಯಾಚಾರ ಎಸಗಲು ಯತ್ನಿಸಿದ್ದ ಆರೋಪದ ಅಡಿಯಲ್ಲಿ ವಿಚಾರಣಾ ನ್ಯಾಯಾಲಯವು ವಿಚಾರಣೆಗೆ ಹಾಜರಾಗಲು ಸಮನ್ಸ್ ನೀಡಿದ್ದನ್ನು ಪ್ರಶ್ನಿಸಿ ಇಬ್ಬರು ಆರೋಪಿಗಳು ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ್ದ ಹೈಕೋರ್ಟ್ ನ್ಯಾಯಮೂರ್ತಿ ರಾಮ ಮನೋಹರ ನಾರಾಯಣ ಮಿಶ್ರಾ ಅವರು ಆದೇಶದಲ್ಲಿ ಈ ಮಾತು ಹೇಳಿದ್ದರು.

ಆರೋಪಿಗಳು ಅತ್ಯಾಚಾರ ನಡೆಸಲು ಯತ್ನಿಸಿದ್ದಾರೆನ್ನುವುದನ್ನು ಹೇಳಲು ಆಧಾರಗಳಿಲ್ಲ ಎಂದು ಹೈಕೋರ್ಟ್ ಹೇಳಿತ್ತು. ಆರೋಪಿಗಳನ್ನು ಕಡಿಮೆ ಪ್ರಮಾಣದ ಅಪರಾಧವಾದ ಹಲ್ಲೆ ಅಥವಾ ಮಹಿಳೆಯ ಬಟ್ಟೆ ಬಿಚ್ಚುವ ಉದ್ದೇಶದಿಂದ ಆಕೆಯ ಮೇಲೆ ಕ್ರಿಮಿನಲ್ ಬಲ ಪ್ರಯೋಗ ನಡೆಸಿದ್ದಕ್ಕೆ ಸಂಬಂಧಿಸಿದ ಸೆಕ್ಷನ್‌ಗಳ ಅಡಿಯಲ್ಲಿ ವಿಚಾರಣೆಗೆ ಕರೆಸಬಹುದು ಎಂದು ಕೂಡ ವಿವರಿಸಿತ್ತು.

'ಹೈಕೋರ್ಟ್‌ನ ಮಾತುಗಳನ್ನು ನಾನು ಬಹಳ ಗಂಭೀರವಾಗಿ ವಿರೋಧಿಸುತ್ತೇನೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

'ಇದು ಬಹಳ ಗಂಭೀರವಾದ ಸಂಗತಿ. ಇದು ನ್ಯಾಯಮೂರ್ತಿಯು ಅಸೂಕ್ಷ್ಮವಾಗಿ ನಡೆದುಕೊಂಡಿರುವುದನ್ನು ತೋರಿಸುತ್ತಿದೆ. ನ್ಯಾಯಮೂರ್ತಿಯ ವಿರುದ್ಧ ಇಷ್ಟು ಕಟುವಾದ ಪದಗಳನ್ನು ಬಳಸಲು ನಮಗೆ ವಿಷಾದವಾಗುತ್ತದೆ' ಎಂದು ಪೀಠವು ಹೇಳಿತು.

ಪ್ರಕರಣದ ವಿಚಾರಣೆಯನ್ನು ಮುಂದೂಡಿರುವ ಪೀಠವು, ಎರಡು ವಾರಗಳ ನಂತರ ಇದನ್ನು ಕೈಗೆತ್ತಿಕೊಳ್ಳಲಿದೆ.

ಐಪಿಸಿಯ ಸೆಕ್ಷನ್ 376 (ಅತ್ಯಾಚಾರ) ಅಡಿಯಲ್ಲಿ ವಿಶೇಷ ನ್ಯಾಯಾಲಯವು ತಮಗೆ ಸಮನ್ಸ್ ಜಾರಿ ಮಾಡಿದ್ದನ್ನು ಪ್ರಶ್ನಿಸಿ ಇಬ್ಬರು ಆರೋಪಿಗಳು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಆರೋಪಿಗಳು ಸಂತ್ರಸ್ತ ಬಾಲಕಿಯ ಸ್ತನಗಳನ್ನು ಹಿಡಿದರು, ಆರೋಪಿ ಆಕಾಶ್ ಎಂಬಾತ ಸಂತ್ರಸ್ತೆಯನ್ನು ಮೋರಿಯ ಅಡಿ ಎಳೆದೊಯ್ದು ಆಕೆಯ ಪೈಜಾಮಾದ ದಾರವನ್ನು ಎಳೆದ ಎಂದು ದೂರಲಾಗಿತ್ತು.

ಸಂತ್ರಸ್ತೆಯ ಮೇಲೆ ಅತ್ಯಾಚಾರ ಎಸಗಲು ಆರೋಪಿಗಳು ನಿರ್ಧರಿಸಿದ್ದರು ಎಂದು ಹೇಳುವುದಕ್ಕೆ ಈ ಕೃತ್ಯಗಳಷ್ಟೇ ಸಾಕಾಗುವುದಿಲ್ಲ ಎಂದು ಹೈಕೋರ್ಟ್ ಹೇಳಿತ್ತು. ಈ ಕೃತ್ಯವನ್ನು ಹೊರತುಪಡಿಸಿದರೆ ಅವರು ಅತ್ಯಾಚಾರ ಎಸಗಲು ನಿರ್ಧರಿಸಿದ್ದರು ಎನ್ನಲು ಬೇರೆ ಯಾವುದೇ ಚಟುವಟಿಕೆಯನ್ನು ವಿವರಿಸಿಲ್ಲ ಎಂದು ಕೂಡ ಅದು ಹೇಳಿತ್ತು.

ಸುದ್ದಿ 2 ನಿಮಿಷ

ಹಿಂದೂಗಳು ಸುರಕ್ಷಿತವಾಗಿದ್ದರೆ ಮುಸ್ಲಿಮರೂ ಸುರಕ್ಷಿತ: ಯೋಗಿ

ಲಖನೌ: 'ರಾಜ್ಯದಲ್ಲಿ ಮುಸ್ಲಿಮರು ಸುರಕ್ಷಿತವಾಗಿದ್ದಾರೆ. 2017ರಲ್ಲಿ ನಾವು ಅಧಿಕಾರ ವಹಿಸಿಕೊಂಡಾಗಿನಿಂದ ಈವರೆಗೆ ಕೋಮುಗಲಭೆ ನಡೆದಿಲ್ಲ' ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಬುಧವಾರ ಹೇಳಿದರು.

ಖಾಸಗಿ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು, 'ಹಿಂದೂಗಳು ಸುರಕ್ಷಿತವಾಗಿದ್ದರೆ ಮುಸಲ್ಮಾನರೂ ಸುರಕ್ಷಿತವಾಗಿರುತ್ತಾರೆ. 100 ಹಿಂದೂ ಕುಟುಂಬಗಳ ನಡುವೆ ಒಂದು ಮುಸ್ಲಿಂ ಕುಟುಂಬ ಸುರಕ್ಷಿತವಾಗಿರುತ್ತದೆ. ಆದರೆ 100 ಮುಸ್ಲಿಂ ಕುಟುಂಬಗಳ ನಡುವೆ ಸುಮಾರು 50 ಹಿಂದೂ ಕುಟುಂಬಗಳಿದ್ದರೂ ಆ ಹಿಂದೂಗಳು ಸುರಕ್ಷಿತವಾಗಿರುತ್ತಾರೆಯೇ? 'ಇಲ್ಲ' ಎಂದು ಬಾಂಗ್ಲಾದೇಶದ ಉದಾಹರಣೆ ನೀಡಿದರು.

ಶ್ರೀಕೃಷ್ಣ ಜನ್ಮಭೂಮಿ ಮಥುರಾ ವಿವಾದದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು 'ನಾವು ನ್ಯಾಯಾಲಯದ ಆದೇಶವನ್ನು ಪಾಲಿಸುತ್ತಿದ್ದೇವೆ. ಇಲ್ಲದೇ ಹೋದರೆ ಅಲ್ಲಿ ಬಹಳಷ್ಟು ಸಮಸ್ಯೆ ಎದುರಾಗುತ್ತಿತ್ತು' ಎಂದರು.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು 'ವಿದೂಷಕ' (ನಮೂನಾ) ಎಂದು ಕರೆದ ಅವರು, 'ಇಂತಹ ವಿದೂಷಕರು ಇರಬೇಕು. ಇದರಿಂದ ಬಿಜೆಪಿಗೆ ಲಾಭವಾಗಲಿದೆ' ಎಂದರು.

ಕಪ್ಪು ಬಣ್ಣ: ನೋವು ಹಂಚಿಕೊಂಡ ಕೇರಳ ಸಿ.ಎಸ್

ತಿರುವನಂತಪುರ: ಚರ್ಮದ ಬಣ್ಣವನ್ನು ಆಧರಿಸಿ ಜನರ ನಡುವೆ ಭೇದ–ಭಾವ ತೋರುವ ಮನಸ್ಥಿತಿ ಇನ್ನೂ ಸಮಾಜದಲ್ಲಿದೆ. ಕೇರಳದ ಮುಖ್ಯ ಕಾರ್ಯದರ್ಶಿ ಶಾರದಾ ಮುರಳೀಧರನ್ ಅವರು ಈಗ ಇಂತಹ ಭೇದ–ಭಾವದ ಮಾತಿಗೆ ಗುರಿಯಾಗಿದ್ದಾರೆ.

ಅವರು, ಈ ಕುರಿತು ತಮ್ಮ ಅನುಭವವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. ಮೊದಲಿಗೆ, ಜಾಲತಾಣದಿಂದ ತಮ್ಮ ಪೋಸ್ಟ್ ಅನ್ನು ಅಳಿಸಿಹಾಕಿದ್ದ ಅವರು, ಆಪ್ತರ ಸಲಹೆ ಮೇರೆಗೆ ಹೆಚ್ಚಿನ ವಿವರಣೆಯೊಂದಿಗೆ ಮತ್ತೆ ಹಂಚಿಕೊಂಡಿದ್ದಾರೆ.

"ಮುಖ್ಯ ಕಾರ್ಯದರ್ಶಿಯಾಗಿ ನನ್ನ ಅಧಿಕಾರಾವಧಿಯ ಕುರಿತಂತೆ ಆಸಕ್ತಿದಾಯಕ ಅಭಿಪ್ರಾಯ ಗಮನಿಸಿದೆ. 'ನನ್ನ ಕೆಲಸದ ಶೈಲಿ ಕಪ್ಪು ಮತ್ತು ನನ್ನ ಪತಿ ಅವರ ಕೆಲಸದ ಶೈಲಿ ಬಿಳುಪು (ಪತಿ ಹಿಂದೆ ಮುಖ್ಯ ಕಾರ್ಯದರ್ಶಿಯಾಗಿದ್ದ ವಿ.ವೇಣು)' ಎಂಬುದು ಆ ಅಭಿಪ್ರಾಯ" ಎಂದಿದ್ದಾರೆ. 'ಬಣ್ಣದಿಂದ ಜನರ ಕೆಲಸ ಗುರುತಿಸುವ ಮನಸ್ಥಿತಿ ಇನ್ನೂ ಈ ಸಮಾಜದಲ್ಲಿದೆ' ಎಂದು ಬೇಸರ ಹಂಚಿಕೊಂಡಿದ್ದಾರೆ. 'ಇಂತಹ ಸಂಗತಿಗಳು ಚರ್ಚೆ ಆಗಬೇಕು' ಎಂಬ ಆತ್ಮೀಯರ ಸಲಹೆ ಆಧರಿಸಿ ಮತ್ತೆ ಪೋಸ್ಟ್ ಮಾಡಿದ್ದಾಗಿಯೂ ವಿವರಣೆ ನೀಡಿದ್ದಾರೆ.

ನಟಿ ರನ್ಯಾ ರಾವ್ ಪ್ರಕರಣ ಮೂರನೇ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಚಿನ್ನ ಕಳ್ಳ ಸಾಗಣೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ರೆವೆನ್ಯೂ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ಮತ್ತೊಬ್ಬ ಆರೋಪಿಯನ್ನು ಬುಧವಾರ ಬಂಧಿಸಿದ್ದಾರೆ.

ಬಳ್ಳಾರಿಯ ಸಾಹಿಲ್ ಸಕಾರಿಯಾ ಜೈನ್ ಬಂಧಿತ ಆರೋಪಿ.

'ಆರೋಪಿಯನ್ನು ಬಂಧಿಸಿ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಲಯವು ಆರೋಪಿಯನ್ನು ಮಾರ್ಚ್ 29ರ ವರೆಗೆ ಡಿಆರ್‌ಐ ಕಸ್ಟಡಿಗೆ ನೀಡಿ ಆದೇಶಿಸಿದೆ' ಎಂದು ಮೂಲಗಳು ತಿಳಿಸಿವೆ.

ದುಬೈನಿಂದ ಚಿನ್ನ ಕಳ್ಳ ಸಾಗಣೆ ಮಾಡಿಕೊಂಡು ಬಂದಿದ್ದ ಪ್ರಕರಣದಲ್ಲಿ ನಟಿ ರನ್ಯಾ ರಾವ್ ಹಾಗೂ ತರುಣ್ ರಾಜು ಅವರನ್ನು ಡಿಆರ್‌ಐ ಅಧಿಕಾರಿಗಳು ಈ ಹಿಂದೆ ಬಂಧಿಸಿದ್ದರು. ಮತ್ತೊಬ್ಬ ಆರೋಪಿಯನ್ನು ಬಂಧಿಸುವ ಮೂಲಕ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ.

'ರನ್ಯಾ ರಾವ್ ಮತ್ತು ತರುಣ್ ಅವರ ಸ್ನೇಹಿತ ಸಾಹಿಲ್ ಜೈನ್, ಬಳ್ಳಾರಿ ಮತ್ತು ಬೆಂಗಳೂರಿನಲ್ಲಿ ಚಿನ್ನಾಭರಣ ಮಳಿಗೆ ಹೊಂದಿದ್ದು, ರನ್ಯಾ ಮತ್ತು ತರುಣ್ ವಿದೇಶದಿಂದ ತರುತ್ತಿದ್ದ ಚಿನ್ನದ ಬಿಸ್ಕತ್ ಅನ್ನು ಪಡೆದು, ಬೇರೆ ಬೇರೆ ಚಿನ್ನದ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಿದ್ದ. ಅಲ್ಲದೇ ಚಿನ್ನವನ್ನು ಹೇಗೆ ಮಾರಾಟ ಮಾಡಬೇಕೆಂದು ರನ್ಯಾ ರಾವ್‌ಗೆ ಸಾಹಿಲ್ ಹಲವು ಬಾರಿ ಸಲಹೆ ನೀಡಿದ್ದ' ಎಂದು ಡಿಆರ್‌ಐ ಮೂಲಗಳು ತಿಳಿಸಿವೆ.

ಆನ್‌ಲೈನ್ ಬೆಟ್ಟಿಂಗ್: ಕ್ರಮಕ್ಕೆ ಒತ್ತಾಯ

ಅಶ್ವಿನಿ ವೈಷ್ಣವ್

ನವದೆಹಲಿ (ಪಿಟಿಐ): ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್ ನಿಯಂತ್ರಣಕ್ಕೆ ರಾಜ್ಯಗಳೇ ಕಾನೂನು ರೂಪಿಸಿಕೊಳ್ಳಲಿ ಎಂದು ಲೋಕಸಭೆಯ ಬುಧವಾರದ ಕಲಾಪದಲ್ಲಿ ಕೇಂದ್ರ ಸರ್ಕಾರ ತಿಳಿಸಿದೆ.

ಸರ್ಕಾರದ ನಿಯಂತ್ರಣಗಳನ್ನು ತಪ್ಪಿಸಿಕೊಂಡು ನಾಯಿಕೊಡೆಗಳಂತೆ ವ್ಯಾಪಕವಾಗುತ್ತಿರುವ ಆನ್‌ಲೈನ್ ಬೆಟ್ಟಿಂಗ್ ಮತ್ತು ಜೂಜಿನ ಮೊಬೈಲ್ ಅಪ್ಲಿಕೇಷನ್‌ಗಳನ್ನು ಸಂಪೂರ್ಣವಾಗಿ ತೊಡೆದುಹಾಕಬೇಕು ಎಂಬ ಪ್ರಬಲ ಬೇಡಿಕೆ ವ್ಯಕ್ತವಾದ ಕಾರಣ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಮೇಲಿನಂತೆ ಉತ್ತರಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ವಿಷಯ ಪ್ರಸ್ತಾಪಿಸಿದ ಡಿಎಂಕೆ ಸಂಸದ ದಯಾನಿಧಿ ಮಾರನ್, 'ಆನ್‌ಲೈನ್ ಗೇಮಿಂಗ್ ವಿರುದ್ಧ ಕ್ರಮ ಕೈಗೊಳ್ಳುವ ನೈತಿಕ ಜವಾಬ್ದಾರಿ ನಿರ್ವಹಿಸಲು ಕೇಂದ್ರ ಸರ್ಕಾರಕ್ಕೆ ಸಂಕೋಚವೇಕೆ? ತಮಿಳುನಾಡು ಸರ್ಕಾರವು ಆನ್‌ಲೈನ್ ಗೇಮಿಂಗ್ ಸೈಟ್‌ಗಳನ್ನು ನಿಷೇಧಿಸಿದೆ. ಎಲ್ಲ ಆನ್‌ಲೈನ್ ವೆಬ್‌ಸೈಟ್‌ಗಳನ್ನು ನಿರ್ಬಂಧಿಸಲು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ ಇನ್ನೆಷ್ಟು ಸಮಯ ಬೇಕು' ಎಂದು ಪ್ರಶ್ನಿಸಿದರು.

ಸಚಿವ ವೈಷ್ಣವ್ ಉತ್ತರ: 'ಕೇಂದ್ರ ಸರ್ಕಾರದ ನೈತಿಕ ಅಧಿಕಾರವನ್ನು ಪ್ರಶ್ನಿಸುವ ಅಧಿಕಾರ ಮಾರನ್ ಅವರಿಗೆ ಇಲ್ಲ. ಸಂವಿಧಾನದಲ್ಲಿ ಗೊತ್ತುಮಾಡಿದ ಒಕ್ಕೂಟ ವ್ಯವಸ್ಥೆಯ ರಚನೆಯಂತೆ ದೇಶ ಕಾರ್ಯ ನಿರ್ವಹಿಸುತ್ತದೆ. ದಯಮಾಡಿ, ಒಕ್ಕೂಟ ವ್ಯವಸ್ಥೆಯ ರಚನೆ ಓದಿ. ದೇಶದ ಒಕ್ಕೂಟ ವ್ಯವಸ್ಥೆಯನ್ನು ಗೌರವಿಸಿ, ಸಂವಿಧಾನ ಉಳಿಸಬೇಕು ಎಂದು ಸಂಸದರಿಗೆ ಮನವಿ ಮಾಡುತ್ತೇನೆ. ರಾಜ್ಯಪಟ್ಟಿಗೆ ಬರುವ ವಿಷಯಗಳ ಮೇಲೆ ಕಾನೂನು ರೂಪಿಸುವ ನೈತಿಕತೆ ಮತ್ತು ಕಾನೂನು ಅಧಿಕಾರವನ್ನು ಸಂವಿಧಾನವು ರಾಜ್ಯಗಳಿಗೆ ವಹಿಸಿದೆ' ಎಂದು ಸಚಿವ ವೈಷ್ಣವ್ ತಿರುಗೇಟು ನೀಡಿದರು.

ತೆಲಂಗಾಣದಲ್ಲಿ ಎಸ್‌ಐಟಿ ರಚನೆ

ಹೈದರಾಬಾದ್: ಆನ್‌ಲೈನ್ ಬೆಟ್ಟಿಂಗ್ ಮತ್ತು ರಮ್ಮಿ ಆ್ಯಪ್‌ಗಳ ಬಗ್ಗೆ ತನಿಖೆಗಾಗಿ ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಲು ತೆಲಂಗಾಣ ಸರ್ಕಾರ ಮುಂದಾಗಿದೆ. ಈ ಬಗ್ಗೆ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅವರು ವಿಧಾನ ಸಭೆಯಲ್ಲಿ ಬುಧವಾರ ಮಾಹಿತಿ ನೀಡಿದರು.

ಬೆಟ್ಟಿಂಗ್ ಆ್ಯಪ್ ಪರ ಪ್ರಚಾರ ಮಾಡುವ ಸಾಮಾಜಿಕ ಮಾಧ್ಯಮ ಇನ್‌ಫ್ಲ್ಯುಯೆನ್ಸರ್ ಮತ್ತು ಚಿತ್ರತಾರೆಯರ ವಿರುದ್ಧ ಹೈದರಾಬಾದ್‌ನಲ್ಲಿ ದೂರು ದಾಖಲಾಗಿರುವ ಬೆನ್ನಲ್ಲೇ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

ಬೆಟ್ಟಿಂಗ್ ಅಪ್ಲಿಕೇಷನ್‌ಗಳ ವಿರುದ್ಧ ಕ್ರಮಕ್ಕೆ ಸೈಬರ್ ಅಪರಾಧ ಇಲಾಖೆಯಡಿ ಕಾರ್ಯಪಡೆ ರಚಿಸಬೇಕು. ಇಂಥ ಅಪ್ಲಿಕೇಷನ್‌ಗಳ ನಿಯಂತ್ರಣಕ್ಕೆ ಕರಡು ರೂಪಿಸಬೇಕು

ಮದ್ದಿಲ ಗುರುಮೂರ್ತಿ, ವೈಎಸ್‌ಆರ್ ಕಾಂಗ್ರೆಸ್ ಸಂಸದ

1,410ಕ್ಕೂ ಹೆಚ್ಚು ಗೇಮಿಂಗ್ ವೆಬ್‌ಸೈಟ್‌ಗಳನ್ನು ನಿಷೇಧಿಸಲಾಗಿದೆ. ದೂರು ಆಧರಿಸಿ ಬಿಎನ್‌ಎಸ್ ಸೆಕ್ಷನ್ 112ರ ಅಡಿ ಕ್ರಮ ಕೈಗೊಳ್ಳಲಾಗುವುದು

ಅಶ್ವಿನಿ ವೈಷ್ಣವ್, ಮಾಹಿತಿ ತಂತ್ರಜ್ಞಾನ ಸಚಿವ

'ಮರ ಕಡಿತಲೆಗೆ ದಂಡ ಹತ್ತುಪಟ್ಟು ಹೆಚ್ಚಿಸಿ'

ಬೆಂಗಳೂರು: ಮರಗಳನ್ನು ಅಕ್ರಮವಾಗಿ ಕಡಿದಾಗ ವಿಧಿಸಲಾಗುತ್ತಿರುವ ದಂಡ ಮತ್ತು ಶಿಕ್ಷೆಯ ಪ್ರಮಾಣವನ್ನು ಹತ್ತು ಪಟ್ಟು ಹೆಚ್ಚಿಸಬೇಕು. ಅದಕ್ಕೆ ಅನುವಾಗುವಂತೆ 'ವೃಕ್ಷ ಸಂರಕ್ಷಣಾ ಕಾಯ್ದೆ–1972'ಕ್ಕೆ ತಿದ್ದುಪಡಿ ಮಾಡಬೇಕು ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ದೊಡ್ಡ ಸಂಖ್ಯೆಯಲ್ಲಿ ಮರಗಳನ್ನು ಕಡಿಯುವುದು, ಮಾನವ ಹತ್ಯೆ ಮಾಡಿದಂತೆ ಅಥವಾ ಅದಕ್ಕಿಂತ ಹೇಯ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಅಕ್ರಮವಾಗಿ ಕತ್ತರಿಸಿದ ಪ್ರತಿ ಮರಕ್ಕೆ ₹1 ಲಕ್ಷ ದಂಡ ವಿಧಿಸುವ ವಿಚಾರದಲ್ಲಿ ಕರುಣೆ ತೋರುವ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ. ಹಾಗಾಗಿ ಅಕ್ರಮ ಮರಗಳ ಕಡಿತಲೆಗೆ ವಿಧಿಸುವ ದಂಡದ ಪ್ರಮಾಣ ಹೆಚ್ಚಿಸುವುದು ಅಗತ್ಯ ಎಂದು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅರಣ್ಯ ಪಡೆ ಮುಖ್ಯಸ್ಥರಿಗೆ ಬರೆದಿರುವ ಟಿಪ್ಪಣಿಯಲ್ಲಿ ಸೂಚಿಸಿದ್ದಾರೆ.

ಕುನಾಲ್, ಸುಷ್ಮಾ ವಿರುದ್ಧ ಹಕ್ಕುಚ್ಯುತಿ

ಮುಂಬೈ (ಪಿಟಿಐ): ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಮತ್ತು ಶಿವಸೇನಾ (ಯುಬಿಟಿ) ವಕ್ತಾರೆ ಸುಷ್ಮಾ ಅಂಧಾರೆ ಅವರಿಂದ ಹಕ್ಕುಚ್ಯುತಿ ಆಗಿದೆ ಎಂದು ಮಹಾರಾಷ್ಟ್ರ ವಿಧಾನ ಪರಿಷತ್ತಿನಲ್ಲಿ ಬಿಜೆಪಿಯ ಪ್ರವೀಣ್ ದರೇಕರ್ ಅವರು ನಿಲುವಳಿ ಸೂಚನೆ ಮಂಡಿಸಿದ್ದಾರೆ.

'ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಬಗ್ಗೆ ವೈಯಕ್ತಿಕ ಹಾಗೂ ಅವಹೇಳನಕಾರಿ ಅಂಶಗಳಿರುವ ಹಾಡನ್ನು ಕುನಾಲ್ ಹಾಡಿದ್ದಾರೆ' ಎಂದು ನಿಲುವಳಿ ಸೂಚನೆ ಮಂಡಿಸುವ ಸಂದರ್ಭದಲ್ಲಿ ಪ್ರವೀಣ್ ಹೇಳಿದ್ದಾರೆ.

'ಸುಷ್ಮಾ ಅವರು ಕಾರ್ಯಕ್ರಮವನ್ನು ಬೆಂಬಲಿಸಿ ಆಕ್ಷೇಪಾರ್ಹ ಭಾಷೆ ಬಳಸಿದ್ದಾರೆ, ಇದು ಸದನದ ನಿಂದನೆಗೆ ಸಮ' ಎಂದು ಅವರು ಹೇಳಿದ್ದಾರೆ. ಕುನಾಲ್ ಮತ್ತು ಸುಷ್ಮಾ ಅವರು ತಮ್ಮ ಮಾತುಗಳ ಮೂಲಕ ಶಾಸನ ಸಭೆಗಳನ್ನು ಅಗೌರವದಿಂದ ಕಂಡಿದ್ದಾರೆ ಎಂದು ಪ್ರವೀಣ್ ಆರೋಪಿಸಿದ್ದಾರೆ.

ಶಾಸಕಾಂಗ, ನ್ಯಾಯಾಂಗ ಪೂರಕ: ಧನಕರ್

ಜಗದೀಪ್ ಧನಕರ್

ನವದೆಹಲಿ (ಪಿಟಿಐ): ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗವು ಪರಸ್ಪರರ ವಿರುದ್ಧವಾಗಿರುವ ಅಂಗಗಳಲ್ಲ; ಇವು ತಮ್ಮ ಮಿತಿಗಳೊಳಗೆ ಪರಸ್ಪರ ಪೂರಕವಾಗಿ ಕೆಲಸ ಮಾಡಬೇಕು ಎಂದು ಉಪರಾಷ್ಟ್ರಪತಿ ಹಾಗೂ ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಹೇಳಿದ್ದಾರೆ.

ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ (ಎನ್‌ಜೆಎಸಿ) ಕಾಯ್ದೆಯ ಬಗ್ಗೆ ಉಲ್ಲೇಖಿಸಿ ಧನಕರ್ ಅವರು ರಾಜ್ಯಸಭೆಯಲ್ಲಿ ಸೋಮವಾರ, ಈ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸದೆ ಇದ್ದಿದ್ದರೆ 'ಪರಿಸ್ಥಿತಿ ಬೇರೆಯದೇ ಆಗಿರುತ್ತಿತ್ತು' ಎಂದು ಹೇಳಿದ್ದರು.

ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ನಿವಾಸದಲ್ಲಿ ನೋಟುಗಳ ಕಂತೆಗಳು ಸುಟ್ಟ ಸ್ಥಿತಿಯಲ್ಲಿ ಪತ್ತೆಯಾದ ವರದಿಗಳು ಬಂದ ನಂತರ ರಾಜ್ಯಸಭೆಯಲ್ಲಿ ಎನ್‌ಜೆಎಸಿ ಬಗ್ಗೆ ಪ್ರಸ್ತಾಪ ಆಗಿತ್ತು.

ನೋಟು ಪತ್ತೆ ನಂತರದ ವಿದ್ಯಮಾನಗಳ ಬಗ್ಗೆ ಹಾಗೂ ಮುಂದಿನ ಹಾದಿಯ ಬಗ್ಗೆ ಚರ್ಚಿಸಲು ಧನಕರ್ ಅವರು ವಿವಿಧ ಪಕ್ಷಗಳ ಮುಖಂಡರ ಸಭೆ ಕರೆದಿದ್ದರು. 'ಸಾರ್ವಜನಿಕರ ಮನಸ್ಸಿನಲ್ಲಿ ಆತಂಕ ಸೃಷ್ಟಿಸಿರುವ ಸಂಗತಿಯ ವಿಚಾರವಾಗಿ ನಾವು ಸೋಮವಾರ ಬಹಳ ಫಲಪ್ರದವಾದ ಮಾತುಕತೆ ನಡೆಸಿದೆವು' ಎಂದು ಧನಕರ್ ಮಂಗಳವಾರ ಹೇಳಿದ್ದಾರೆ.

ಸಭೆಯ ಕುರಿತಾಗಿ ಹೆಚ್ಚಿನ ವಿವರಗಳನ್ನು ಅವರು ಹಂಚಿಕೊಂಡಿಲ್ಲ. ಸಭಾನಾಯಕ ಜೆ.ಪಿ. ನಡ್ಡಾ, ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಸಭೆಯಲ್ಲಿ ಭಾಗಿಯಾಗಿದ್ದರು.

ಪೊಲೀಸ್ ತಂಡ ಭೇಟಿ: ನೋಟುಗಳ ಕಂತೆ ದೊರೆತ ಪ್ರಕರಣದ ತನಿಖೆಯ ಭಾಗವಾಗಿ ನವದೆಹಲಿಯ ಡಿಸಿಪಿ ನೇತೃತ್ವದ ಪೊಲೀಸ್ ತಂಡವೊಂದು ನ್ಯಾಯಮೂರ್ತಿ ವರ್ಮಾ ಅವರ ನಿವಾಸಕ್ಕೆ ಬುಧವಾರ ಭೇಟಿ ನೀಡಿದೆ ಎಂದು ಮೂಲಗಳು ತಿಳಿಸಿವೆ.

ನಿವಾಸಕ್ಕೆ ಮಧ್ಯಾಹ್ನ 1.50ರ ಸುಮಾರಿಗೆ ಬಂದ ತಂಡವು, ಎರಡು ತಾಸುಗಳ ನಂತರ ಅಲ್ಲಿಂದ ತೆರಳಿದೆ. ಅಲ್ಲಿಂದ ತಂಡವು ತುಘಲಕ್ ರಸ್ತೆ ಪೊಲೀಸ್ ಠಾಣೆಗೆ ತೆರಳಿತು.

ಅರ್ಜಿ ವಿಚಾರಣೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧ ಎಫ್‌ಐಆರ್ ದಾಖಲಿಸಲು ಪೊಲೀಸರಿಗೆ ಸೂಚನೆ ನೀಡಬೇಕು ಎಂಬ ಕೋರಿಕೆ ಇರುವ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಳ್ಳಲು ಸುಪ್ರೀಂ ಕೋರ್ಟ್ ಬುಧವಾರ ಒಪ್ಪಿದೆ.

ವಕೀಲ ಮ್ಯಾಥ್ಯೂಸ್ ಜೆ. ನೆಡುಂಪರ ಅವರ ನೇತೃತ್ವದಲ್ಲಿ ಅರ್ಜಿ ಸಲ್ಲಿಸಲಾಗಿದೆ.

'ಇದು ನ್ಯಾಯವನ್ನು ಮಾರಾಟ ಮಾಡಿ ಸಂಗ್ರಹಿಸಿದ ಕಪ್ಪುಹಣವನ್ನು ಇರಿಸಿಕೊಳ್ಳುವುದಕ್ಕೆ ಸಂಬಂಧಿಸಿದ ಪ್ರಕರಣ. ನ್ಯಾಯಮೂರ್ತಿ ವರ್ಮ ಅವರ ಮಾತನ್ನು ನಂಬುವುದಾದರೂ, ಅವರು ಎಫ್‌ಐಆರ್ ಏಕೆ ದಾಖಲಿಸಲಿಲ್ಲ ಎಂಬ ಪ್ರಶ್ನೆ ಉಳಿದುಕೊಳ್ಳುತ್ತದೆ. ಈ ಪ್ರಕರಣದಲ್ಲಿ ತಡವಾಗಿಯಾದರೂ ಎಫ್‌ಐಆರ್ ದಾಖಲಿಸುವುದು ಅಗತ್ಯ' ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಯತ್ನಾಳ ಹೊರದಬ್ಬಿದ ಬಿಜೆಪಿ

ಒಂದನೇ ಪುಟದಿಂದ...

ಪಕ್ಷದ ಆಂತರಿಕ ವಿಷಯಗಳ ಬಗ್ಗೆ ಬಹಿರಂಗ ಹೇಳಿಕೆ ನೀಡಿದ ಕಾರಣಕ್ಕೆ ಲಿಂಗಾಯತ ನಾಯಕ ಯತ್ನಾಳ ಅವರಿಗೆ ಪಕ್ಷವು ಕೆಲವೇ ದಿನಗಳ ಅಂತರದಲ್ಲಿ ಎರಡು ಬಾರಿ ಶೋಕಾಸ್ ನೋಟಿಸ್ ನೀಡಿತ್ತು. ಪಕ್ಷದ ಕೇಂದ್ರ ಶಿಸ್ತು ಸಮಿತಿಯು ಫೆಬ್ರುವರಿ 10ರಂದು ನೀಡಿದ್ದ ಶೋಕಾಸ್ ನೋಟಿಸ್‌ಗೆ ಯತ್ನಾಳ ಅವರು ಮರುದಿನವೇ ಉತ್ತರ ನೀಡಿದ್ದರು. ಆ ಬಳಿಕ ಅವರ ಬಣದ ಹೆಚ್ಚಿನ ನಾಯಕರು ಮೌನಕ್ಕೆ ಶರಣಾಗಿದ್ದರು. ಆದರೆ, ಯತ್ನಾಳ ಅವರು ವಿಜಯೇಂದ್ರ ವಿರುದ್ಧ ಟೀಕೆ ಮುಂದುವರಿಸಿದ್ದರು. ಈ ಭಿನ್ನರ ಬಣದ ವಿರುದ್ಧ ಕ್ರಮ ಕೈಗೊಳ್ಳುವಂತೆ ವಿಜಯೇಂದ್ರ ಅವರು ವರಿಷ್ಠರ ಮೊರೆ ಹೋಗಿದ್ದರು. ವರಿಷ್ಠರನ್ನು ಮೂರು–ನಾಲ್ಕು ಭೇಟಿ ಮಾಡಿ ದೂರು ನೀಡಿದ್ದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಅವರು ಬುಧವಾರ ಸಂಜೆ ಭೇಟಿ ಮಾಡಿ ಪುತ್ರ ಬಿ.ಆರ್. ಸುಭಾಷ್ ವಿವಾಹಕ್ಕೆ ಆಮಂತ್ರಣ ನೀಡಿದರು. ಈ ವೇಳೆ, ವಿಜಯೇಂದ್ರ ಜತೆಗಿದ್ದರು. ಅದಾದ ಸ್ವಲ್ಪ ಹೊತ್ತಿನಲ್ಲೇ, ಯತ್ನಾಳ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ ಎಂದು ಕೇಂದ್ರ ಶಿಸ್ತು ಸಮಿತಿಯ ಸದಸ್ಯ ಕಾರ್ಯದರ್ಶಿ ಓಂ ಪಾಠಕ್ ಆದೇಶ ಹೊರಡಿಸಿದರು.

'ಫೆಬ್ರುವರಿ 10ರಂದು ಶೋಕಾಸ್ ನೋಟಿಸ್‌ಗೆ ನೀವು ನೀಡಿರುವ ಪ್ರತಿಕ್ರಿಯೆಯನ್ನು ಶಿಸ್ತು ಸಮಿತಿ ಪರಿಗಣಿಸಿದೆ. ಉತ್ತಮ ನಡವಳಿಕೆ ತೋರುವುದಾಗಿ ಉತ್ತರ ನೀಡಿದ್ದೀರಿ. ಆದರೆ, ನಡವಳಿಕೆ ಬದಲಾಗಿಲ್ಲ. ಪಕ್ಷದ ಶಿಸ್ತನ್ನು ಪದೇ ಪದೇ ಉಲ್ಲಂಘಿಸಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ' ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಒಂದೂವರೆ ವರ್ಷದಿಂದ ಕಾಂಗ್ರೆಸ್ ಜತೆಗೆ ಗುರುತಿಸಿಕೊಂಡಿದ್ದ ಭಿನ್ನಮತೀಯ ಶಾಸಕರಾದ ಎಸ್.ಟಿ.ಸೋಮಶೇಖರ್, ಶಿವರಾಮ ಹೆಬ್ಬಾರ, ಯತ್ನಾಳ ಬಣದ ಶಾಸಕ ಬಿ.ಪಿ.ಹರೀಶ್ ಹಾಗೂ ವಿಜಯೇಂದ್ರ ಬಣದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಎಂ.ಪಿ.ರೇಣುಕಾಚಾರ್ಯ ಅವರಿಗೆ ಕೇಂದ್ರ ಶಿಸ್ತು ಸಮಿತಿಯು ಮಂಗಳವಾರ ಶೋಕಾಸ್ ನೋಟಿಸ್ ನೀಡಿತ್ತು. ಈ ಮೂಲಕ, ರಾಜ್ಯ ಘಟಕದಲ್ಲಿನ ಬಣ ಬಡಿದಾಟ ನಿಯಂತ್ರಣಕ್ಕೆ ವರಿಷ್ಠರು ಮುಂದಾಗಿದ್ದಾರೆ.

ಮೂರನೇ ಬಾರಿ ಉಚ್ಚಾಟನೆ

ಬಿಜೆಪಿಯಿಂದ ಯತ್ನಾಳ ಉಚ್ಚಾಟನೆ ಆಗುತ್ತಿರುವುದು ಇದು ಮೂರನೇ ಬಾರಿ. ಈ ಹಿಂದೆ ಎರಡು ಬಾರಿ ಪಕ್ಷ ವಿರೋಧಿ ಚಟುವಟಿಕೆಗಳ ಆರೋಪದ ಮೇರೆಗೆ ಪಕ್ಷದಿಂದ ಉಚ್ಚಾಟನೆಯಾಗಿ, ಮರಳಿ ಬಿಜೆಪಿಗೆ ಬಂದಿದ್ದರು.

2009ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ಟೀಕಾಪ್ರಹಾರ ನಡೆಸಿದ್ದ ಕಾರಣಕ್ಕೆ ಪ್ರಥಮ ಬಾರಿಗೆ ಪಕ್ಷದಿಂದ ಉಚ್ಚಾಟಿಸಲಾಗಿತ್ತು. ಬಳಿಕ ಅವರು ಜೆಡಿಎಸ್‌ಗೆ ಸೇರ್ಪಡೆಯಾಗಿದ್ದರು. 2013ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದರು. 2014ರಲ್ಲಿ ಪಕ್ಷಕ್ಕೆ ಮರು ಸೇರ್ಪಡೆ ಮಾಡಿಕೊಳ್ಳಲಾಗಿತ್ತು.

2016ರಲ್ಲಿ ವಿಜಯಪುರ–ಬಾಗಲಕೋಟೆ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆಗ ಪಕ್ಷವು ಜಿ.ಎಸ್. ನ್ಯಾಮಗೌಡ ಅವರಿಗೆ ಟಿಕೆಟ್ ನೀಡಿತ್ತು. ಯತ್ನಾಳ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಆಗ ಅವರನ್ನು ಉಚ್ಚಾಟಿಸಲಾಗಿತ್ತು. 2018ರಲ್ಲಿ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಗಿತ್ತು. ಇದೀಗ, ಮೂರನೇ ಬಾರಿ ಉಚ್ಚಾಟನೆಗೊಂಡಿದ್ದಾರೆ.

ವರಿಷ್ಠರೊಂದಿಗೆ ಚರ್ಚೆ: ಬೊಮ್ಮಾಯಿ

ಪಕ್ಷದ ವರಿಷ್ಠರು ತೆಗೆದುಕೊಳ್ಳುವ ನಿರ್ಣಯವನ್ನು ನಾವೆಲ್ಲರೂ ಪಾಲಿಸಬೇಕಾಗುತ್ತದೆ. ಭವಿಷ್ಯದಲ್ಲಿ ಪಕ್ಷಕ್ಕೆ ಯಾವುದೇ ರೀತಿಯ ನಷ್ಟವಾಗದ ರೀತಿಯಲ್ಲಿ ನಾವು ನಡೆದುಕೊಳ್ಳಬೇಕಿದೆ. ಯತ್ನಾಳ ವಿಷಯದ ಬಗ್ಗೆ ವರಿಷ್ಠರ ಜೊತೆ ಚರ್ಚಿಸಿ ಮಾತನಾಡುತ್ತೇನೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಕರ್ನಾಟಕದ ವಿಚಾರದಲ್ಲಿ ವರಿಷ್ಠರು ಒಂದು ವರ್ಷದಿಂದ ಎಲ್ಲರನ್ನು ಕರೆದು ಮಾತನಾಡಿಸಿ ಒಗ್ಗೂಡಿಸುವ ಪ್ರಯತ್ನ ಮಾಡಿದ್ದಾರೆ. ಶಿಸ್ತು ಮುಖ್ಯ ಎಂಬ ಕಾರಣಕ್ಕೆ ಕೆಲವರಿಗೆ ನೋಟಿಸ್ ಕೊಟ್ಟಿದ್ದಾರೆ. ಹಲವರ ವಿರುದ್ಧ ಕ್ರಮ ಕೈಗೊಂಡಿದ್ದಾರೆ' ಎಂದರು.

ಟ್ಯುಲಿಪ್ ಸೊಬಗು

ಶ್ರೀನಗರದಲ್ಲಿರುವ ಏಷ್ಯಾದ ಅತಿದೊಡ್ಡ ಟ್ಯುಲಿಪ್ ಉದ್ಯಾನವು ಸಾರ್ವಜನಿಕರ ವೀಕ್ಷಣೆಗೆ ಬುಧವಾರದಿಂದ ಮುಕ್ತವಾಗಿದ್ದು, ಜನರು ಫೋಟೊ ತೆಗೆಸಿಕೊಂಡರು – ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಸ್ಪೀಕರ್ ತಾಕೀತು, ರಾಹುಲ್ ಟೀಕೆ

ನವದೆಹಲಿ: 'ಸದನದಲ್ಲಿ ಮಾತನಾಡಲು ನನಗೆ ಅವಕಾಶ ನೀಡುತ್ತಿಲ್ಲ. ಲೋಕಸಭೆಯ ಕಲಾಪವನ್ನು ಪ್ರಜಾಸತ್ತಾತ್ಮಕವಲ್ಲದ ರೀತಿ ನಡೆಸಲಾಗುತ್ತಿದೆ' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬುಧವಾರ ಆರೋಪಿಸಿದರು.

'ಈ ಸದನದ ಘನತೆಯನ್ನು ಎತ್ತಿಹಿಡಿಯುವಂತೆ ಕಲಾಪದ ನಿಯಮಗಳನ್ನು ಪಾಲಿಸಿ' ಎಂದು ಸ್ಪೀಕರ್ ಓಂ ಬಿರ್ಲಾ ಅವರು ತಾಕೀತು ಮಾಡಿದ ಹಿಂದೆಯೇ ರಾಹುಲ್ ಈ ಮಾತು ಹೇಳಿದರು.

ಶೂನ್ಯವೇಳೆ ಮುಗಿದ ನಂತರ ಮಾತನಾಡಿದ ಸ್ಪೀಕರ್ ಅವರು, 'ಸದನದ ಗೌರವವನ್ನು ಕಾಪಾಡುವ ರೀತಿಯಲ್ಲಿ ಕೆಲವು ಸದಸ್ಯರ ವರ್ತನೆ ಇಲ್ಲ. ಈ ಬಗ್ಗೆ ಅನೇಕ ನಿದರ್ಶನಗಳು ನನ್ನ ಗಮನಕ್ಕೆ ಬಂದಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಈ ಸದನದಲ್ಲಿ ತಂದೆ–ಮಗಳು, ತಾಯಿ–ಮಗಳು, ಪತಿ–ಪತ್ನಿ ಸದಸ್ಯರಾಗಿ ಇದ್ದಾರೆ. ಸದಸ್ಯರ ವರ್ತನೆ ಸದನದ ಗೌರವವನ್ನು ಎತ್ತಿಹಿಡಿಯುವಂತೆ ಇರಬೇಕು. ಮುಖ್ಯವಾಗಿ ವಿರೋಧ ಪಕ್ಷದ ನಾಯಕರು ನಿಯಮ 349 ಅನ್ನು ಪಾಲಿಸಬೇಕು ಎಂದು ಎಂದು ನಾನು ಬಯಸುತ್ತೇನೆ' ಎಂದು ಸ್ಪೀಕರ್ ಅವರು ನೇರವಾಗಿ ರಾಹುಲ್ ಅವರನ್ನು ಉಲ್ಲೇಖಿಸಿ ಹೇಳಿದರು.

9 ನಕ್ಸಲರು ಶರಣು

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ 6 ಮಹಿಳೆಯರು ಸೇರಿದಂತೆ 9 ಮಂದಿ ನಕ್ಸಲರು ಪೊಲೀಸರಿಗೆ ಬುಧವಾರ ಶರಣಾಗಿದ್ದಾರೆ. ಇವರ ಸುಳಿವು ನೀಡಿದವರಿಗೆ ಒಟ್ಟಾರೆ ₹26 ಲಕ್ಷ ನಗದು ಬಹುಮಾನವನ್ನು ಘೋಷಿಸಲಾಗಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಪೊಳ್ಳು' ಹಾಗೂ 'ಅಮಾನವೀಯ' ನಕ್ಸಲ್ ಸಿದ್ಧಾಂತದಿಂದ ಬೇಸತ್ತು ಹಾಗೂ ನಿಷೇಧಿತ ಸಿಪಿಎಂ ಪಕ್ಷದಲ್ಲಿ ಭಿನ್ನಾಭಿಪ್ರಾಯ ಉಲ್ಬಣಗೊಂಡಿದ್ದರಿಂದ ಶರಣಾಗತಿ ನಿರ್ಧಾರ ಕೈಗೊಂಡಿದ್ದಾಗಿ ನಕ್ಸಲರು ತಿಳಿಸಿದ್ದಾರೆ.

ಬಘೇಲ್ ನಿವಾಸದಲ್ಲಿ ಸಿಬಿಐ ಶೋಧ

ರಾಯಪುರ/ ನವದೆಹಲಿ (ಪಿಟಿಐ): ಮಹಾದೇವ್ ಬೆಟ್ಟಿಂಗ್ ಆ್ಯಪ್‌ನ ₹6000 ಕೋಟಿ ಹಗರಣಕ್ಕೆ ಸಂಬಂಧಿಸಿದಂತೆ, ಛತ್ತೀಸಗಢದ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರ ನಿವಾಸ ಸೇರಿದಂತೆ 60 ಕಡೆಗಳಲ್ಲಿ ಸಿಬಿಐ ಬುಧವಾರ ಶೋಧ ನಡೆಸಿತು ಎಂದು ಅಧಿಕಾರಿಗಳು ತಿಳಿಸಿದರು.

ರಾಯಪುರ ಮತ್ತು ಭಿಲಾಯ್‌ನಲ್ಲಿರುವ ಬಘೇಲ್ ಅವರ ನಿವಾಸಗಳಲ್ಲಿ ತನಿಖಾ ತಂಡ ಶೋಧ ನಡೆಸಿತು. ಹಿರಿಯ ಪೊಲೀಸ್ ಅಧಿಕಾರಿ, ಬಘೇಲ್ ಅವರ ನಿಕಟವರ್ತಿಗಳ ಮನೆಗಳಲ್ಲಿಯೂ ಹುಡುಕಾಟ ನಡೆಸಿತು ಎಂದರು.

ಕಾಂಗ್ರೆಸ್ ಶಾಸಕ ದೇವೇಂದ್ರ ಯಾದವ್, ಐಪಿಎಸ್ ಅಧಿಕಾರಿಗಳಾದ ಆನಂದ್ ಛಾಬ್ರಾ, ಅಭಿಷೇಕ್ ಪಲ್ಲವ ಮತ್ತು ಆರಿಫ್ ಶೇಖ್ ಮತ್ತಿತರರ ಮನೆಗಳಲ್ಲಿಯೂ ಶೋಧ ನಡೆಸಲಾಗಿ.

'ಸತ್ಯವಂತರಿಗಿದು ಕಾಲವಲ್ಲ ದುಷ್ಟರಿಗೆ ಸುಭಿಕ್ಷಕಾಲ'

ಒಂದನೇ ಪುಟದಿಂದ...

ಉಪಕಾರ ಮಾಡಿದರೆ ಅಪಕರಿಸುವ ಕಾಲ. ಸಕಲವು ತಿಳಿದವಗೆ ದುರ್ಭಿಕ್ಷ ಕಾಲ. ಧರ್ಮ ಮಾಡುವಗೆ ನಿರ್ಮೂಲವಾಗುವ ಕಾಲ. ಕರ್ಮಿ ಪಾತಕರಿಗೆ ಬಹು ಸೌಖ್ಯಕಾಲ; ಸತ್ಯವಂತರಿಗಿದು ಕಾಲವಲ್ಲ' ಎಂದು ಯತ್ನಾಳ ಅವರು ಪುರಂದರದಾಸರ ಪದಗಳನ್ನು ಸ್ಮರಿಸಿದ್ದಾರೆ.

'ನನ್ನನ್ನು ಉಚ್ಚಾಟನೆ ಮಾಡಿದ್ದರೂ ಭ್ರಷ್ಟಾಚಾರ, ಕುಟುಂಬ ರಾಜಕಾರಣ ವಿರುದ್ಧ, ಉತ್ತರ ಕರ್ನಾಟಕ ಮತ್ತು ಹಿಂದುತ್ವದ ಪರ ಹೋರಾಟದಿಂದ ವಿಮುಖನಾಗುವುದಿಲ್ಲ. ಹಿಂದಿನ ಹುರುಪು ಮತ್ತು ಅದೇ ದೃಢತೆಯಿಂದ ಜನರ ಸೇವೆಯನ್ನು ಮುಂದುವರಿಸುತ್ತೇನೆ. ನನ್ನ ಹೋರಾಟದ ಜತೆ ನಿಂತ ಎಲ್ಲ ಕಾರ್ಯಕರ್ತರು, ಸ್ನೇಹಿತರು, ಸ್ವಾಮೀಜಿಗಳಿಗೂ ಧನ್ಯವಾದ ಹೇಳುತ್ತೇನೆ' ಎಂದಿದ್ದಾರೆ.

'ಈ ಕ್ರಮ ದುರದೃಷ್ಟಕರ, ದುಃಖಿಸುವೆ'

ಒಂದನೇ ಪುಟದಿಂದ...

'ಪಕ್ಷದ ಬೆಳವಣಿಗೆಯಲ್ಲಿನ ಕಹಿ ಘಟನೆಗಳನ್ನು ಉಲ್ಲೇಖಿಸಿ ಪಕ್ಷದ ವರಿಷ್ಠರಿಗೆ ನಾನು ಎಂದೂ ದೂರುಗಳನ್ನು ಹೇಳಿಕೊಂಡಿಲ್ಲ. ನನ್ನ ತಂದೆ ಯಡಿಯೂರಪ್ಪನವರು ಎಲ್ಲರನ್ನೂ ಸಮಚಿತ್ತ ಭಾವದಿಂದ ನೋಡಿ, ಪಕ್ಷವನ್ನು ಕುಟುಂಬದಂತೆ ಬೆಳೆಸಿದ ಮಾದರಿಯಲ್ಲಿಯೇ ನಡೆಯಬೇಕೆಂಬ ಸಂಕಲ್ಪ ಹೊತ್ತು, ಸಂಘದ ಹಿರಿಯರು ಮತ್ತು ಪಕ್ಷದ ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇನೆ' ಎಂದಿದ್ದಾರೆ.

'ಕೆಲ ದಿನಗಳ ಹಿಂದೆ ನಡೆದ ಕಹಿ ಪ್ರಸಂಗಗಳಿಂದ ಎಂದಿಗೂ ನಾನು ಉದ್ವೇಗಗೊಳ್ಳಲಿಲ್ಲ. ಯಾರೊಂದಿಗೂ ದುಃಖ ತೋಡಿಕೊಂಡಿಲ್ಲ. ಸಮರ್ಪಣೆ–ತ್ಯಾಗ ಪಾಠವನ್ನು ಹೇಳಿಕೊಡುವ ಸಂಸ್ಕಾರವಂತ ಸಂಘಟನೆಯ ವ್ಯವಸ್ಥೆಯಲ್ಲಿ ಬೆಳೆದು ಬಂದ ನಾನು ಸಹನೆ– ತಾಳ್ಮೆಯನ್ನು ಜವಾಬ್ದಾರಿ ನಿರ್ವಹಿಸುವ ನಿಟ್ಟಿನಲ್ಲಿ ಆಧಾರಸ್ತಂಭವೆಂದು ಪರಿಗಣಿಸಿ ಮುನ್ನಡೆದಿದ್ದೇನೆ' ಎಂದಿದ್ದಾರೆ.

'ಭವಿಷ್ಯದಲ್ಲಿಯೂ ನಾನು ನಡೆಯುವ ಹಾದಿಯಲ್ಲಿ ಎಲ್ಲಾದರೂ ಎಡವಿದರೆ, ಅದನ್ನು ತಿದ್ದಿ ತೀಡುವ ಅಧಿಕಾರ ಪಕ್ಷದ ಹಿರಿಯರೆಲ್ಲರಿಗೂ ಇದ್ದೇ ಇದೆ. ಎಲ್ಲರೂ ಸೇರಿ ರಚನಾತ್ಮಕ ಸಲಹೆಗಳನ್ನು ಸ್ವೀಕರಿಸಿ ಪಕ್ಷವನ್ನು ಮುನ್ನಡೆಸೋಣ' ಎಂದು ವಿಜಯೇಂದ್ರ ಹೇಳಿದ್ದಾರೆ.

ಡಾ. ಅಶ್ವತ್ಥನಾರಾಯಣ ಆರೋಪ ಹಿಟ್ ಅಂಡ್ ರನ್: ಕೆ.ಜೆ. ಜಾರ್ಜ್

ಸ್ಮಾರ್ಟ್ ಮೀಟರ್ ಟೆಂಡರ್: ಅಕ್ರಮ ನಡೆದಿಲ್ಲ

ಪ್ರಜಾವಾಣಿ ವಾರ್ತೆ

ಕೆ.ಜೆ. ಜಾರ್ಜ್

ಬೆಂಗಳೂರು: ಸ್ಮಾರ್ಟ್ ಮೀಟರ್ ಖರೀದಿ ಟೆಂಡರ್‌ನಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಒಂದು ವೇಳೆ ಯಾರಾದರೂ ಸೂಕ್ತ ದಾಖಲೆಗಳನ್ನು ಒದಗಿಸಿದರೆ ಟೆಂಡರ್ ರದ್ದುಪಡಿಸಲು ಅವಕಾಶವಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಮಾಡಿರುವ ಆರೋಪ 'ಹಿಟ್ ಅಂಡ್ ರನ್'ನಂತಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಸ್ಮಾರ್ಟ್ ಮೀಟರ್ ಹೊಸ ಸಂಪರ್ಕ ಮತ್ತು ತಾತ್ಕಾಲಿಕ ಸಂಪರ್ಕಗಳಿಗೆ ಮಾತ್ರ ಕಡ್ಡಾಯ ಮಾಡಲಾಗಿದೆ. ಈಗಾಗಲೇ ಇರುವ ಗ್ರಾಹಕರಿಗೆ ಅಳವಡಿಸುತ್ತಿಲ್ಲ. ಇತರ ರಾಜ್ಯಗಳಲ್ಲಿ ಎಲ್ಲ ಗ್ರಾಹಕರಿಗೂ ಕಡ್ಡಾಯ ಮಾಡಲಾಗಿದೆ. ಸ್ಮಾರ್ಟ್ ಮೀಟರ್ ದರ ಕೂಡ ಇತರ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಕಡಿಮೆಯೇ ಇದೆ ಎಂದ ಅವರು, ರಾಜಶ್ರೀ ಕಂಪನಿಯನ್ನು ಎಲ್ಲೂ ಕಪ್ಪು ಪಟ್ಟಿಗೆ ಸೇರಿಸಿಲ್ಲ. ಉತ್ತರಾಂಚಲದಲ್ಲಿ ಎರಡು ವರ್ಷಗಳಿಗೆ ಪ್ರತಿಬಂಧ ವಿಧಿಸಲಾಗಿತ್ತು. ಅದನ್ನು ತೆರವು ಮಾಡಲಾಗಿದೆ. ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲೂ ರಾಜಶ್ರೀಗೆ ಗುತ್ತಿಗೆ ನೀಡಲಾಗಿದೆ ಎಂದು ಜಾರ್ಜ್ ಹೇಳಿದರು.

ಸ್ಮಾರ್ಟ್ ಮೀಟರ್‌ಗಳಿಗೆ ಸಿಂಗಲ್ ಫೇಸ್‌ಗೆ ₹4,998, ತ್ರೀಫೇಸ್‌ಗೆ ₹8,922 ನಿಗದಿ ಮಾಡಲಾಗಿದೆ. ಇದು ಇತರ ರಾಜ್ಯಗಳಿಗಿಂತಲೂ ಕಡಿಮೆ ಬೆಲೆ ಎಂದು ಅವರು ಸಮರ್ಥಿಸಿಕೊಂಡರು.

'ಬಿಜೆಪಿ ಮತ್ತು ಜೆಡಿಎಸ್‌ನವರು ನನ್ನ ವಿರುದ್ಧ ಡಿ.ಕೆ.ರವಿ ಮತ್ತು ಗಣಪತಿ ಆತ್ಮಹತ್ಯೆ ಪ್ರಕರಣಗಳಲ್ಲಿ ಆರೋಪಗಳನ್ನು ಮಾಡಿದರು. ಸಿಬಿಐ ಮತ್ತು ಸಿಐಡಿ ತನಿಖೆಗಳ ಬಳಿಕ ಆರೋಪ ಸುಳ್ಳು ಎಂಬುದು ಸಾಬೀತಾಯಿತು. ಆ ಬಳಿಕ ಅವರು ವಿಷಾದದ ಒಂದು ಮಾತನ್ನೂ ಆಡಿಲ್ಲ. ಈಗ ಮತ್ತೊಂದು ಆರೋಪ ಹೊರಿಸಲು ಮುಂದಾಗಿದ್ದಾರೆ' ಎಂದು ಜಾರ್ಜ್ ಹೇಳಿದರು.

ರಾಜ್ಯದಲ್ಲಿ ಹಲವು ಕಡೆಗಳಲ್ಲಿ ಫೀಡರ್‌ಲೇನ್ ಮತ್ತು ಸಬ್ ಸ್ಟೇಷನ್‌ಗಳಲ್ಲಿ ಓವರ್‌ಲೋಡ್ ಆದ ಪರಿಣಾಮ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಆಗುತ್ತಿದೆ ಎಂದು ಹೇಳಿದ ಅವರು, ಈ ವರ್ಷ 56 ಸಬ್‌ಸ್ಟೇಷನ್‌ಗಳನ್ನು ಸ್ಥಾಪಿಸಲು ಟೆಂಡರ್ ಕರೆಯಲಾಗಿದೆ. ಮುಂದಿನ ವರ್ಷ 100 ಸಬ್ ಸ್ಟೇಷನ್‌ಗಳ ಮೂಲಕ ವಿದ್ಯುತ್ ಪ್ರಸರಣವನ್ನು ಬಲಪಡಿಸುವ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು.

ಲಂಚ: ಎಸಿಪಿ, ಎಎಸ್ಐ ಬಂಧನ

ಆರೋಪಿಗಳನ್ನು ಬಂಧಿಸಲು ಕಂಪನಿಯೊಂದಕ್ಕೆ ₹4 ಲಕ್ಷ ಲಂಚಕ್ಕಾಗಿ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕಂಪನಿಯೊಂದರ ವೆಬ್‌ಸೈಟ್ ಹ್ಯಾಕಿಂಗ್‌ಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಲು ₹4 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟು, ಮುಂಗಡವಾಗಿ ₹2 ಲಕ್ಷ ಪಡೆಯುತ್ತಿದ್ದ ಈಶಾನ್ಯ ವಿಭಾಗದ ಸೆನ್ ಪೊಲೀಸ್ ಠಾಣೆಯ ಎಸಿಪಿ ತನ್ವೀರ್ ಎಸ್.ಆರ್. ಮತ್ತು ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್ಐ) ಕೃಷ್ಣಮೂರ್ತಿ ಅವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ತಡರಾತ್ರಿ ಬಂಧಿಸಿದ್ದಾರೆ.

ಅದ್ವಿ ಗ್ರೂಪ್ ಆಫ್ ಕಂಪನೀಸ್ ಎಂಬ ಉದ್ಯಮ ಸಮೂಹದ ವೆಬ್‌ಸೈಟ್ ಅನ್ನು ಹ್ಯಾಕ್ ಮಾಡಿದ್ದ ದುಷ್ಕರ್ಮಿಗಳು, ಅದರಲ್ಲಿ ತಪ್ಪು ಮಾಹಿತಿ ಪ್ರಕಟಿಸಿದ್ದರು. ಇದರಿಂದ ಕಂಪನಿಗೆ ನಷ್ಟವಾಗುತ್ತಿತ್ತು. ಈ ಸಂಬಂಧ ಕಂಪನಿಯ ಮಾಲೀಕ ಮಧುಸೂದನ್ ಬಿ.ಎಸ್. ಅವರು ಈಶಾನ್ಯ ವಿಭಾಗದ ಸೆನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೊಲೀಸರು ಎಫ್‌ಐಆರ್ ದಾಖಲಿಸಿದ್ದರೂ, ಆರೋಪಿಗಳನ್ನು ಬಂಧಿಸಿರಲಿಲ್ಲ.

ತನ್ವೀರ್

ಆರೋಪಿಗಳನ್ನು ಬಂಧಿಸುವಂತೆ ಮಧುಸೂದನ್ ಅವರು ಮನವಿ ಮಾಡಿದ್ದರು. ಆರೋಪಿಗಳನ್ನು ಬಂಧಿಸಲು ₹4 ಲಕ್ಷ ಲಂಚ ನೀಡುವಂತೆ ಎಸಿಪಿ ಮತ್ತು ಎಎಸ್ಐ ಬೇಡಿಕೆ ಇಟ್ಟಿದ್ದರು. ₹2 ಲಕ್ಷ ಮುಂಗಡ ನೀಡುವಂತೆ ಮತ್ತು ಆರೋಪಿಗಳನ್ನು ಬಂಧಿಸಿದ ಬಳಿಕ ₹2 ಲಕ್ಷ ನೀಡುವಂತೆ ಸೂಚಿಸಿದ್ದರು. ಮಧುಸೂದನ್ ಅವರು ಈ ಕುರಿತು ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ-2ಕ್ಕೆ ದೂರು ಸಲ್ಲಿಸಿದ್ದರು.

ಲಂಚದ ಹಣವನ್ನು ಎಎಸ್ಐ ಬಳಿ ನೀಡುವಂತೆ ಎಸಿಪಿ ತನ್ವೀರ್ ಸೂಚಿಸಿದ್ದರು. ಮಂಗಳವಾರ ರಾತ್ರಿ 8.30ರ ಸುಮಾರಿಗೆ ವಿದ್ಯಾರಣ್ಯ ಪುರದ ಆಟದ ಮೈದಾನದ ಬಳಿ ಬಂದು ಹಣ ತಲುಪಿಸುವಂತೆ ಕೃಷ್ಣಮೂರ್ತಿ ಸೂಚಿಸಿದ್ದರು. ಅದರಂತೆ ಅಲ್ಲಿಗೆ ಹೋದ ದೂರುದಾರರು ಹಣ ತಲುಪಿಸಿದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು ಆರೋಪಿಯನ್ನು ಬಂಧಿಸಿದರು. ನಂತರ ತನ್ವೀರ್ ಅವರನ್ನು ಬಂಧಿಸಲಾಯಿತು.

ಪ್ರಾಥಮಿಕ ಹಂತದ ತನಿಖೆ ಪೂರ್ಣಗೊಳಿಸಿದ ಲೋಕಾಯುಕ್ತ ಪೊಲೀಸರು, ಇಬ್ಬರೂ ಆರೋಪಿಗಳನ್ನು ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನ್ಯಾಯಾಲಯವು ಆರೋಪಿಗಳನ್ನು ಏಪ್ರಿಲ್ 8ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು. ಇಬ್ಬರನ್ನೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಶಕ್ಕೆ ನೀಡಲಾಯಿತು.

ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ-2ರ ಎಸ್‌ಪಿ ಕೆ.ವಂಶಿಕೃಷ್ಣ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಎಚ್.ಜೆ. ತಿಪ್ಪೇಸ್ವಾಮಿ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್‌ಗಳಾದ ವಿಜಯ್ ಕೃಷ್ಣ, ಪ್ರಶಾಂತ್, ಅಂಜನ್‌ಕುಮಾರ್ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ಚಾಲಕನ ಕರೆತಂದು ಮನೆ ಪತ್ತೆ

ತನಿಖಾ ತಂಡಕ್ಕೆ ಎಸಿಪಿ ತನ್ವೀರ್ ಅವರ ಮನೆಯ ವಿಳಾಸ ಪತ್ತೆಮಾಡುವುದು ತಕ್ಷಣಕ್ಕೆ ಸಾಧ್ಯವಾಗಲಿಲ್ಲ. ಕೃಷ್ಣಮೂರ್ತಿ ಕೂಡ ಸುಳಿವು ನೀಡಲಿಲ್ಲ. ಲೋಕಾಯುಕ್ತದ ಇನ್‌ಸ್ಪೆಕ್ಟರ್ ಒಬ್ಬರ ನೇತೃತ್ವದಲ್ಲಿ ತಂಡವೊಂದು ಥಣಿಸಂದ್ರದಲ್ಲಿರುವ ಪೊಲೀಸ್ ಕ್ವಾಟ್ರಸ್ ಬಳಿ ಹೋಗಿ ಸೆನ್ ಎಸಿಪಿ ಕಾರು ಚಾಲಕನನ್ನು ಪತ್ತೆಮಾಡಿ, ಕರೆತಂದಿತು. ಚಾಲಕನನ್ನು ಕರೆದೊಯ್ದು ಮನೆ ಪತ್ತೆಮಾಡಿ ತನ್ವೀರ್ ಅವರನ್ನು ಬಂಧಿಸಲಾಯಿತು ಎಂದು ಮೂಲಗಳು ತಿಳಿಸಿವೆ.

‘ಸಂತ್ರಸ್ತೆಗೆ ಶೀಘ್ರ ಪರಿಹಾರ’

ಪ್ರಜಾವಾಣಿ ವಾರ್ತೆ

ಉಡುಪಿ: ಮಲ್ಪೆ ಬಂದರಿನಲ್ಲಿ ಮೀನು ಕದ್ದ ಆರೋಪದಲ್ಲಿ ಮರಕ್ಕೆ ಕಟ್ಟಿ ಹಲ್ಲೆ ನಡೆಸಿದ ಪ್ರಕರಣದ ಸಂತ್ರಸ್ತೆಗೆ ಶೀಘ್ರ ಪರಿಹಾರದ ಹಣ ನೀಡಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ನಾರಾಯಣ ಸ್ವಾಮಿ ಎಂ. ಅವರು ಹೇಳಿದರು.

ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ ಈ ಸಂತ್ರಸ್ತೆಗೆ ಒಟ್ಟು ₹2 ಲಕ್ಷ ಪರಿಹಾರ ನೀಡಲು ಅವಕಾಶ ಇದ್ದು, ಶೀಘ್ರ ₹50 ಸಾವಿರ ನೀಡುತ್ತೇವೆ. ಆರೋಪಪಟ್ಟಿ ಸಲ್ಲಿಕೆಯಾದ ಬಳಿಕ ₹1ಲಕ್ಷ ನೀಡಲಿದ್ದೇವೆ. ಉಳಿದ ಮೊತ್ತ ಆರೋಪ ಸಾಬೀತಾದ ಬಳಿಕ ಸಿಗಲಿದೆ ಎಂದು ಅವರು ತಿಳಿಸಿದರು.

ಸಂತ್ರಸ್ತ ಮಹಿಳೆಯು ಇಬ್ಬರು ಶಾಲೆಗೆ ಹೋಗುವ ಮಕ್ಕಳೊಂದಿಗೆ ಮಲ್ಪೆ ಬಂದರಿನ ಸಮೀಪ ಸಣ್ಣ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ಅವರ ಗಂಡ ತೀರಿಕೊಂಡಿದ್ದಾರೆ ಎಂದು ವಿವರಿಸಿದರು.

‘ಈಚೆಗೆ ವಾಟ್ಸ್‌ಆ್ಯಪ್‌ನಲ್ಲಿ ಬೆದರಿಕೆ ಸಂದೇಶ ಹರಿದಾಡಿದ್ದ ಕಾರಣ ಮಲ್ಪೆ ಪ್ರದೇಶದಲ್ಲಿ ನೆಲೆಸಿರುವ ಲಂಬಾಣಿ ಕುಟುಂಬಗಳಿಗೆ ಮತ್ತು ಸಂತ್ರಸ್ತ ಮಹಿಳೆಗೆ ಭದ್ರತೆ ಕೊಡಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದಿದ್ದೆ’ ಎಂದೂ ಅವರು ಹೇಳಿದರು.

ಸುಲಿಗೆ: ಮಣಿಪುರದಲ್ಲಿ ಐವರು ಉಗ್ರರ ಬಂಧನ

ಇಂಫಾಲ್ (ಪಿಟಿಐ): ಸರ್ಕಾರಿ ಅಧಿಕಾರಿಗಳನ್ನು ಬೆದರಿಸಿ ಹಣ ವಸೂಲಿ ಮಾಡುತ್ತಿದ್ದ, ಜನರಿಂದ ಸುಲಿಗೆ ಮಾಡುತ್ತಿದ್ದ ಐವರು ಉಗ್ರರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ನಿಷೇಧಿತ ಸಂಘಟನೆಗಳಾದ ಯುನೈಟೆಡ್ ನ್ಯಾಷನಲ್ ಲಿಬರೇಷನ್ ಫ್ರಂಟ್‌ನ ಇಬ್ಬರು, ಕಾಂಗ್ಲೇಪಾಕ್ ಕಮ್ಯುನಿಸ್ಟ್ ಪಾರ್ಟಿಯ ಇಬ್ಬರು ಹಾಗೂ ‘ಎಸ್‌ಒಆರ್‌ಇಪಿಎ’ ಸಂಘಟನೆಯ ಒಬ್ಬ ಉಗ್ರನನ್ನು ಪೊಲೀಸರು ಬಂಧಿಸಿದ್ದಾರೆ.

ಜಾರಕಿಹೊಳಿ–ಎಚ್‌ಡಿಕೆ ಭೇಟಿ ಸಂಚಲನ

ಒಂದನೇ ಪುಟದಿಂದ...

‘ಶಿರಾಡಿ ಸುರಂಗ ಮಾರ್ಗ ಸೇರಿದಂತೆ ಹಲವು ಯೋಜನೆಗಳಿಗೆ ಅನುಮೋದನೆ ಕೊಡಿಸಲು ಸಹಕಾರ ನೀಡಬೇಕು’ ಎಂದು ಜಾರಕಿಹೊಳಿ ಮನವಿ ಮಾಡಿದರು. ‘ಅಭಿವೃದ್ಧಿ ವಿಷಯಗಳಲ್ಲಿ ರಾಜಕೀಯ ಬೆರೆಸುವುದಿಲ್ಲ. ಸಚಿವರ ಮೇಲೆ ಒತ್ತಡ ಹೇರುತ್ತೇನೆ’ ಎಂದು ಕುಮಾರಸ್ವಾಮಿ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ರಾಜ್ಯ ರಾಜಕಾರಣದ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಉಭಯ ನಾಯಕರು ಚರ್ಚೆ ನಡೆಸಿದರು. ಮಧುಬಲೆ ಪ್ರಕರಣದ ಬಗ್ಗೆ ಜಾರಕಿಹೊಳಿ ಪ್ರಸ್ತಾಪಿಸಿ, ‘ಪ್ರಭಾವಿ ನಾಯಕರ ರಾಜಕೀಯ ಜೀವನ ಮುಗಿಸಲು ಈ ಷಡ್ಯಂತ್ರ ನಡೆಸುತ್ತಿರುವುದು ಕಳವಳಕಾರಿ’ ಎಂದರು. ಆಗ ಕುಮಾರಸ್ವಾಮಿ, ‘ಇದೊಂದು ನೀಚ ತಂತ್ರ. ಇತ್ತೀಚಿನ ವರ್ಷಗಳಲ್ಲಿ ಈ ಕುತಂತ್ರ ಜಾಸ್ತಿ ಆಗಿದೆ. ಇದಕ್ಕೆ ಕಡಿವಾಣ ಹಾಕಬೇಕು’ ಎಂದು ಅಭಿಪ್ರಾಯಪಟ್ಟರು ಎಂಬುದಾಗಿ ಮೂಲಗಳು ತಿಳಿಸಿವೆ.

ಕೋವಿಡ್ ಅಕ್ರಮ: ನ್ಯಾ. ಕುನ್ಹಾ ವರದಿ ಪರಿಶೀಲನೆಗೆ ಮತ್ತೊಂದು ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆ ವೇಳೆ ಆರೋಗ್ಯ ಇಲಾಖೆಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿಕುನ್ಹಾ ನೇತೃತ್ವದ ಆಯೋಗದ ವರದಿಯ ಪರಾಮರ್ಶೆ ನಡೆಸುತ್ತಿರುವ ಸಂಪುಟ ಉಪಸಮಿತಿಯು, ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಒಳಗೊಂಡ ತಜ್ಞರ ಮತ್ತೊಂದು ಸಮಿತಿಯನ್ನು ರಚಿಸಲು ತೀರ್ಮಾನಿಸಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಬುಧವಾರ ಸಂಪುಟ ಉಪಸಮಿತಿಯ ಸಭೆ ನಡೆಯಿತು. ವರದಿಯು ಅತ್ಯಂತ ವಿಸ್ತೃತವಾಗಿರುವುದರಿಂದ ಪ್ರತಿ ದಿನವೂ ಈ ವರದಿಯನ್ನು ಅಧ್ಯಯನ ಮಾಡುವುದು ಕಷ್ಟ. ಅದಕ್ಕಾಗಿ ಮತ್ತೊಂದು ಸಮಿತಿ ರಚನೆ ಮಾಡುವ ಅಗತ್ಯವಿದೆ ಎಂಬ ಸಲಹೆ ಸಭೆಯಲ್ಲಿ ವ್ಯಕ್ತವಾಯಿತು. ಅದಕ್ಕೆ ಉಪಸಮಿತಿ ಒಪ್ಪಿಗೆ ನೀಡಿತು ಎಂದು ಮೂಲಗಳು ತಿಳಿಸಿವೆ.

ಹೊಸ ಸಮಿತಿಯಲ್ಲಿ ಕೋವಿಡ್ ಸಂದರ್ಭದಲ್ಲಿ ಕಾರ್ಯನಿರ್ವಹಿಸಿದ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಸೇರಿಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು. ನಿವೃತ್ತರಾಗಿರುವ ಐಎಎಸ್ ಅಧಿಕಾರಿ ವಿ.ಮಂಜುಳಾ, ಐಪಿಎಸ್ ಅಧಿಕಾರಿ ಎನ್.ಎಸ್. ಮೇಘರಿಕ್ ಅವರ ಹೆಸರುಗಳನ್ನು ಪ್ರಸ್ತಾಪಿಸಲಾಯಿತು. ಅಂತಿಮ ತೀರ್ಮಾನವನ್ನು ಮುಖ್ಯಮಂತ್ರಿ ತೆಗೆದುಕೊಳ್ಳಲಿದ್ದಾರೆ ಎಂದು ಮೂಲಗಳು ಹೇಳಿವೆ.

‘ವರದಿಯಲ್ಲಿ ಉಲ್ಲೇಖವಾಗಿರುವಂತೆ ಎಲ್ಲೆಲ್ಲಿ ಲೋಪಗಳಾಗಿವೆಯೋ ಅಲ್ಲಿಗೆ ಉಪಸಮಿತಿ ಸದಸ್ಯರು ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಸಮಿತಿ 2ರಿಂದ 3 ಜಿಲ್ಲೆಗಳಿಗೆ ಭೇಟಿ ನೀಡಲಿದೆ’ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಒತ್ತಡ: ಎಫ್‌ಐಆರ್ ದಾಖಲಿಸದಂತೆ ಮುಖ್ಯಮಂತ್ರಿ ಕಚೇರಿಯೂ ಸೇರಿ ವಿವಿಧ ಕಡೆಗಳಿಂದ ಒತ್ತಡ ಬರುತ್ತಿವೆ. ಕಿದ್ವಾಯಿ ಆಸ್ಪತ್ರೆಯ ಮಾಜಿ ನಿರ್ದೇಶಕರೊಬ್ಬರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಹೋದಾಗ ದೂರು ದಾಖಲಿಸದಂತೆ ಶಾಸಕರೊಬ್ಬರು ಮತ್ತು ಮುಖ್ಯಮಂತ್ರಿಯವರ ಸಲಹೆಗಾರರೊಬ್ಬರಿಂದ ಕರೆ ಬಂದಿತ್ತು ಎಂದು ಅಧಿಕಾರಿಗಳು ಉಪಸಮಿತಿ ಸಭೆಯ ಗಮನಕ್ಕೆ ತಂದರು ಎಂದು ಮೂಲಗಳು ಹೇಳಿವೆ.

National Dairy Development Board

PB No. 40, Anand, Gujarat-388001, Tel: 02692-260 148/149/160 Fax: 02692-260 159
Website: http://www.nddb.coop, Email: purchase@nddb.coop

INVITATION FOR BIDS (IFB) / LOCAL COMPETITIVE BIDDING (LCB)
Bids are invited on behalf of Service Recipients/ NDDB from eligible bidders for the works listed below:

Sl. No.	Description of works / Bid Reference	Estd. Cost (₹) incl. GST/Duration	Event Start / Close Date	Bid submission / opening date & time
A	Design, Supply, Installation, Testing and Commissioning of the following:			
I	HVAC & MEP works for Brucella Diagnostic & Ointment Facility at IVPM, Ranipet, TN **NDDB/HO/Purchase/121/24-25/ET/121 [HVAC-RANIPET]**	750 Lakh 08 months	28.03.25 21.04.25	21.04.25 15:00 hrs. 21.04.25 15:30 hrs.
II	HVAC system for non-industrial buildings at Amul Fed Dairy II, Rajkot, Gujarat **NDDB/HO/Purchase/122/24-25/ET/122 [HVAC-AMULFED-II]**	156 Lakh / 09 Months	27.03.25 17.04.25	17.04.25 15:00 hrs. 17.04.25 15:30 hrs.
III	DG set and ancillary works for ETP (PH-II) at Sabar Dairy, Himmatnagar, Gujarat **NDDB/HO/Purchase/123/24-25/ET/123 [DG-SABAR]**	176 Lakh / 05 Months	26.03.25 16.04.25	16.04.25 15:00 hrs. 16.04.25 15:30 hrs.
IV	20 KLPD Effluent Treatment Plant for BSL-3 & ABSL-3 at CCSNIAH, Baghpat, UP **NDDB/HO/Purchase/124/24-25/ET/124 [ETP-BAGHPAT]**	190 Lakh / 09 Months	27.03.25 17.04.25	17.04.25 15:00 hrs. 17.04.25 15:30 hrs.
V	GI Bull Pens with gates at CEAH, Hessaraghatta, Bangalore **NDDB/HO/Purchase/125/24-25/ET/125 [GI Works-Bangalore]**	95 Lakh / 03 Months	26.03.25 16.04.25	16.04.25 15:00 hrs. 16.04.25 15:30 hrs.
VI	HVAC, Modular Partition & allied works for BSL-3 & clean room for DS Block at IIL, Karkapatla, Telangana **NDDB/HO/Purchase/126/24-25/ET/126 [HVAC-IIL]**	8500 Lakh / 08 Months	28.03.25 21.04.25	21.04.25 15:00 hrs. 21.04.25 15:30 hrs.

For further details pertaining to IFB and for downloading the bid document, please visit these websites: **www.nddb.coop**, and **www.mstcecommerce.com/eprocn** For any clarification please contact **Group Head (Purchase), NDDB, Anand-388001**
NB: Any corrigendum/modification etc. will be posted only on these websites.

ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ ಸರ್ಕಾರಕ್ಕೆ ವಾಪಸ್

ಪ್ರಜಾವಾಣಿ ವಾರ್ತೆ

ಥಾವರಚಂದ್ ಗೆಹಲೋತ್

ಕೆಲವು ಸ್ಪಷ್ಟನೆ ಕೇಳಿರುವ ರಾಜ್ಯಪಾಲ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯನ್ನು ವಿಸ್ತರಿಸಿ ಏಳರವರೆಗೆ ನಗರ ಪಾಲಿಕೆಗಳನ್ನು ವಿಭಜಿಸಲು ಅವಕಾಶ ಕಲ್ಪಿಸುವ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ-2025' ಅನ್ನು ರಾಜ್ಯ ಸರ್ಕಾರಕ್ಕೆ ವಾಪಸ್ ಕಳಿಸಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು, ಕೆಲವು ಸ್ಪಷ್ಟನೆಗಳನ್ನು ನೀಡುವಂತೆ ಸೂಚಿಸಿದ್ದಾರೆ.

ಈ ಮಸೂದೆಯನ್ನು ವಿಧಾನಸಭೆಯಲ್ಲಿ ಮಾರ್ಚ್ 10ರಂದು ಅಂಗೀಕರಿಸಲಾಗಿತ್ತು. ಕೆಲವು ತಿದ್ದುಪಡಿಗಳೊಂದಿಗೆ ವಿಧಾನ ಪರಿಷತ್ ಮಾರ್ಚ್ 12ರಂದು ಅಂಗೀಕಾರ ನೀಡಿತ್ತು. ಮಾರ್ಚ್ 13ರಂದು ತಿದ್ದುಪಡಿಗಳನ್ನು ಒಳಗೊಂಡ ಮಸೂದೆಗೆ ವಿಧಾನಸಭೆ ಮತ್ತೊಮ್ಮೆ ಅಂಗೀಕಾರ ನೀಡಿತ್ತು. ರಾಜ್ಯಪಾಲರ ಅಂಕಿತಕ್ಕಾಗಿ ಮಾರ್ಚ್ 17ರಂದು ರಾಜಭವನಕ್ಕೆ ಕಳುಹಿಸಲಾಗಿತ್ತು.

'ಮಸೂದೆಯು ಸಂವಿಧಾನದ 74ನೇ ತಿದ್ದುಪಡಿಗೆ ವಿರುದ್ಧವಾಗಿದೆ ಮತ್ತು ದೆಹಲಿ ಮಹಾನಗರ ಪಾಲಿಕೆಯ ವಿಭಜನೆ ಸಂದರ್ಭದಲ್ಲಿ ಆದಂತೆ ಸಮಸ್ಯೆಗಳು ಸೃಷ್ಟಿಯಾಗುತ್ತವೆ' ಎಂದು ಬೆಂಗಳೂರು ಟೌನ್ ಹಾಲ್ ಸಂಘಟನೆ ಹಾಗೂ ಬಿಜೆಪಿ ನಾಯಕರ ನಿಯೋಗಗಳು ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದವು. ಮಸೂದೆಯನ್ನು ತಡೆ ಹಿಡಿಯುವಂತೆಯೂ ಒತ್ತಾಯಿಸಿದ್ದವು. ಮನವಿಗಳಲ್ಲಿರುವ ವಿಷಯಗಳಿಗೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡುವಂತೆ ಸೂಚಿಸಿ ರಾಜ್ಯಪಾಲರು ಮಾರ್ಚ್ 25ರಂದು ಮಸೂದೆಯನ್ನು ಹಿಂದಿರುಗಿಸಿದ್ದಾರೆ.

'ಈ ಮಸೂದೆಯು ಸಂವಿಧಾನದ 74ನೇ ತಿದ್ದುಪಡಿಗೆ ವಿರುದ್ಧವಾಗಿದೆ. ಇದು ರಾಜ್ಯ ಚುನಾವಣಾ ಆಯೋಗದ ಅಧಿಕಾರವನ್ನು ಮೊಟಕುಗೊಳಿಸಲಿದೆ. ಮೆಟ್ರೋಪಾಲಿಟನ್ ಯೋಜನಾ ಸಮಿತಿಯನ್ನು ನಗಣ್ಯಗೊಳಿಸಲಿದೆ. ಕಾನೂನಿನ ಮೂಲ ತತ್ವಗಳಿಗೆ ವಿರುದ್ಧವಾಗಿದೆ. ಆಡಳಿತದ ಹೊರೆಯನ್ನು ಹೆಚ್ಚಿಸಲಿದೆ ಮತ್ತು ಹಣಕಾಸು ಅವ್ಯವಹಾರಗಳಿಗೆ ದಾರಿಯಾಗಲಿದೆ. ಸ್ಥಳೀಯ ಆಡಳಿತದಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆಯನ್ನು ತಗ್ಗಿಸಲಿದೆ. ಬೆಂಗಳೂರಿನ ಜನರು ಮತ್ತು ಸಂಸ್ಕೃತಿಗೆ ವಿರುದ್ಧವಾಗಿದೆ. ಗ್ರೇಟರ್ ಬೆಂಗಳೂರು ಒಂದು ವಿಫಲ ಮಾದರಿ' ಎಂದು ಬಿಜೆಪಿ ಹಾಗೂ ಬೆಂಗಳೂರು ಟೌನ್‌ಹಾಲ್ ಸಂಘಟನೆಗಳು ರಾಜ್ಯಪಾಲರಿಗೆ ಸಲ್ಲಿಸಿದ್ದ ಮನವಿಯಲ್ಲಿ ಆಕ್ಷೇಪಿಸಿದ್ದವು.

'ಎರಡೂ ಮನವಿಗಳನ್ನು ನಾನು ಪರಿಶೀಲಿಸಿದ್ದೇನೆ. ಈ ಮಸೂದೆಯು ಕಾನೂನಾತ್ಮಕ ಮತ್ತು ಸಾರ್ವಜನಿಕ ಹಿತಾಸಕ್ತಿಯ ವಿಷಯಗಳನ್ನು ಒಳಗೊಂಡಿದೆ. ಆದ್ದರಿಂದ ಎರಡೂ ಮನವಿ ಪತ್ರಗಳಲ್ಲಿ ಪ್ರಸ್ತಾಪಿಸಿರುವ ಪ್ರಮುಖ ವಿಷಯಗಳ ಕುರಿತು ಸ್ಪಷ್ಟನೆ ಅಗತ್ಯವಿದೆ' ಎಂದು ರಾಜ್ಯಪಾಲರು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಕಾರ್ಯದರ್ಶಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಮನವಿ ಪತ್ರಗಳಲ್ಲಿ ಉಲ್ಲೇಖಿಸಿರುವ ಸಂಗತಿಗಳ ಕುರಿತು ಸ್ಪಷ್ಟನೆಗಳೊಂದಿಗೆ ಮಸೂದೆಯನ್ನು ಪುನಃ ಕಳಿಸುವಂತೆ ಪತ್ರದಲ್ಲಿ ಸೂಚಿಸಿದ್ದಾರೆ.

'ನಗರ ಪಾಲಿಕೆಗಳಿಂದ ನಾಗರಿಕರ ಹತ್ತಿರಕ್ಕೆ ಆಡಳಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿಯನ್ನು ಸಣ್ಣ ಸಣ್ಣ ನಗರ ಪಾಲಿಕೆಗಳನ್ನಾಗಿ ವಿಭಜಿಸುವ ಪ್ರಸ್ತಾವ, ನಾಗರಿಕರಿಗೆ ಆಡಳಿತವನ್ನು ಹತ್ತಿರಕ್ಕೆ ತರುವ ದಿಸೆಯಲ್ಲಿ ಒಳ್ಳೆಯ ಹೆಜ್ಜೆಯಾಗಿದೆ. ಈ ಪುನರ್ ರಚನೆಯಿಂದ ಮೇಯರ್‌ಗಳು, ಆಯುಕ್ತರು, ಕಾರ್ಪೊರೇಟರ್‌ಗಳು ಜನರಿಗೆ ಹೆಚ್ಚು ಲಭ್ಯರಾಗುತ್ತಾರೆ. ಹಾಗೆಯೇ, ಅವರನ್ನು ಹೊಣೆಗಾರರನ್ನಾಗಿ ಮಾಡಬಹುದು. ಅಗತ್ಯ ಸಿಬ್ಬಂದಿ, ಹಣಕಾಸು ಒದಗಿಸಿದರೆ ನಗರ ಪಾಲಿಕೆಗಳು ರಸ್ತೆ ನಿರ್ವಹಣೆ, ತ್ಯಾಜ್ಯ ನಿರ್ವಹಣೆಯಂತಹ ಸ್ಥಳೀಯ ಅಗತ್ಯಗಳನ್ನು ಉತ್ತಮವಾಗಿ ನಿರ್ವಹಣೆ ಮಾಡಬಹುದು' ಎಂದು ನಾಗರಿಕ ಹೋರಾಟಗಾರ ಶ್ರೀನಿವಾಸ ಅಲವಿಲ್ಲಿ ಅಭಿಪ್ರಾಯಪಟ್ಟರು.

'ಆಡಳಿತದಲ್ಲಿ ಕಾರ್ಯಕ್ಷಮತೆ ಕೊರತೆ, ಹೊಣೆಗಾರಿಕೆ ಇಲ್ಲದಿರುವುದು ಮತ್ತು ಸ್ಥಳೀಯವಾಗಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ ಇಲ್ಲದ್ದರಿಂದ, ಬೆಂಗಳೂರಿನಲ್ಲಿ ಸಂಚಾರ ಸಮಸ್ಯೆ, ಪ್ರವಾಹ ಮತ್ತು ಮೂಲಸೌಕರ್ಯದ ಕೊರತೆಯಂತಹ ಸಮಸ್ಯೆಗಳಿವೆ. ವ್ಯವಸ್ಥಿತವಾಗಿ ಸಮಸ್ಯೆಗಳನ್ನು ಪರಿಹರಿಸಲು, ಆಡಳಿತವನ್ನು ವಿಕೇಂದ್ರೀಕರಿಸಿ, ಏಕೀಕೃತ ಆಡಳಿತ ಚೌಕಟ್ಟನ್ನು ರಚಿಸುವ ಉದ್ದೇಶವನ್ನು 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ' (ಜಿಬಿಜಿ) ಹೊಂದಿದೆ' ಎಂದು ಹೇಳಿದರು.

'ವಾರ್ಡ್ ಸಮಿತಿಗಳಿಗೆ ಆದ್ಯತೆ ನೀಡಿರುವುದು ಪ್ರೋತ್ಸಾಹದಾಯಕವಾಗಿದೆ. ವಿಶೇಷವಾಗಿ ಸದಸ್ಯರನ್ನು ಆಯ್ಕೆ ಮಾಡಲು ಲಾಟರಿ ವ್ಯವಸ್ಥೆ ಇರುವುದರಿಂದ, ರಾಜಕೀಯ ಹಸ್ತಕ್ಷೇಪವನ್ನು ಕಡಿಮೆ ಮಾಡುತ್ತದೆ. ಆದರೆ, ಈ ಸಮಿತಿಗಳನ್ನು ಹೆಚ್ಚು ಸಶಕ್ತಗೊಳಿಸುವ ಪ್ರಕ್ರಿಯೆ ಇನ್ನೂ ನಡೆಯುತ್ತಲೇ ಇದೆ' ಎಂದರು.

'ಎಲ್ಲಕ್ಕಿಂತ ಹೆಚ್ಚು ಪರಿವರ್ತನೆ ಎಂದೆನಿಸಿದರೂ ವಿವಾದಾತ್ಮಕ ಅಂಶವೆಂದರೆ, ಎಲ್ಲ ಇಲಾಖೆಗಳನ್ನು ಏಕೀಕೃತಗೊಳಿಸಲು 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) ಸ್ಥಾಪಿಸುವುದು. ಈ ಕೇಂದ್ರೀಕೃತ ವ್ಯವಸ್ಥೆಯಿಂದ ಉತ್ತಮ ಸಮನ್ವಯ ಮತ್ತು ಸಂಪನ್ಮೂಲ ಹಂಚಿಕೆಯ ಭರವಸೆ ನೀಡಿದರೂ, ಮುಖ್ಯಮಂತ್ರಿಯವರ ನೇತೃತ್ವದ ಜಿಬಿಎಯಿಂದ ಅತಿಯಾದ ಕೇಂದ್ರೀಕರಣ ಮತ್ತು ಸಂವಿಧಾನಾತ್ಮಕ ನಿಯಮಗಳ ನಡುವೆ ಸಂಘರ್ಷವನ್ನು ಉಂಟುಮಾಡುತ್ತವೆ. ಜಾಗತಿಕ ನಗರಗಳಲ್ಲಿ ಯಶಸ್ಸು ಸಾಧಿಸಿರುವ ಸಶಕ್ತ ಮಹಾನಗರದ ಮೇಯರ್ ಅನುಪಸ್ಥಿತಿಯಿಂದ 74ನೇ ತಿದ್ದುಪಡಿಯ ಹೊರತಾದ ನಗರ ಆಡಳಿತ ಸೃಷ್ಟಿಯಾಗಲಿದೆ' ಎಂದು ಹೇಳಿದರು.

'ಒಟ್ಟಾರೆ, ಜಿಬಿಜಿ ಮಸೂದೆ ಹಲವು ಪ್ರಮುಖ ವಿಷಯಗಳನ್ನು ಕಾಗದದ ಮೇಲೆ ಪರಿಹರಿಸುವಂತೆ ಕಾಣುತ್ತಿದೆ. ಪರಿಣಾಮಕಾರಿ ಅನುಷ್ಠಾನ, ಜವಾಬ್ದಾರಿಗಳಲ್ಲಿ ಸ್ಪಷ್ಟತೆ, ಅಗತ್ಯ ಅನುದಾನ, ಕಾರ್ಯಾನುಷ್ಠಾನದ ಮೇಲೆ ಇದರ ಯಶಸ್ಸು ಅವಲಂಬಿಸಿದೆ. ಸ್ಥಳೀಯ ಆಡಳಿತದಲ್ಲಿ ನಾಗರಿಕರ ಭಾಗವಹಿಸುವಿಕೆಗೆ ಶಕ್ತಿ ನೀಡುವುದು ನೈಜ ವಿಕೇಂದ್ರೀಕರಣವಾಗಿದೆ' ಎಂದರು.

ಗ್ರೇಟರ್ ಬೆಂಗಳೂರು ಏನೇನಾಗುತ್ತೆ?

ಆರ್ಥಿಕ ಹೊರೆ ಹೆಚ್ಚು

ಬೆಂಗಳೂರನ್ನು ವಿಭಜಿಸಿದರೆ ಎಲ್ಲ ಪಾಲಿಕೆಗಳಿಗೂ ಆಡಳಿತಾತ್ಮಕ ವೆಚ್ಚ ಹೆಚ್ಚಾಗಿ, ಆರ್ಥಿಕ ಹೊರೆಯಾಗುತ್ತದೆ. ಈಗಿರುವ ವಾರ್ಡ್‌ಗಳಲ್ಲಿ ಗಡಿ ಗುರುತಿಸದೆ ಯಾವ ಸಮಸ್ಯೆ ಯಾವ ವಾರ್ಡ್‌ಗೆ ಬರುತ್ತದೆ ಎಂದು ಪಾಲಿಕೆ ಅಧಿಕಾರಿಗಳಿಗೇ ಗೊತ್ತಿಲ್ಲ. ಇನ್ನು ಹಲವು ಪಾಲಿಕೆಗಳನ್ನಾಗಿ ಮಾಡಿದರೆ, ಅಧೋಗತಿಗೆ ತಲುಪಿ, ಕನ್ನಡಿಗರ ಅಸ್ಮಿತೆಗೆ ಧಕ್ಕೆ ಬರುತ್ತದೆ. ಇಷ್ಟು ವರ್ಷವಾದರೂ ಬಿಬಿಎಂಪಿಗೆ ಚುನಾವಣೆ ನಡೆಸಲು ಆಗುತ್ತಿಲ್ಲ. ವಾರ್ಡ್‌ಗಳನ್ನೂ ವಿಭಾಗಿಸಲು ಆಗುತ್ತಿಲ್ಲ. ಇನ್ನು 'ಬೆಂಗಳೂರನ್ನು ಗ್ರೇಟರ್' ಮಾಡಿ ನಂತರ ಚುನಾವಣೆ ಮಾಡುತ್ತೇವೆ ಎನ್ನುತ್ತಿದ್ದಾರೆ. ಅದು ವಾಸ್ತವವಾಗುವ ಸಮಯಕ್ಕೆ ಸಮಸ್ಯೆಗಳು ಆಕಾಶ ಮುಟ್ಟುತ್ತಿರುತ್ತವೆ. ಬೆಂಗಳೂರನ್ನು ದೇವರೇ ಬಂದರು ಕಾಪಾಡಲು ಸಾಧ್ಯವಿಲ್ಲದಂತಾಗುತ್ತದೆ.

ಬಸವರಾಜು ಎಂ. ಎನ್, ರಾಜರಾಜೇಶ್ವರಿ ನಗರ

ಅಧಿಕಾರ ವಿಕೇಂದ್ರೀಕರಣವೇ ಪರಿಹಾರ

'ಗ್ರೇಟರ್ ಬೆಂಗಳೂರು' ಅನ್ನುವ ಹೆಸರೇನು ಆಕರ್ಷಕವಾಗಿದೆ. ಆದರೆ ಸರ್ಕಾರ ಈ ಪ್ರಾಧಿಕಾರ ರಚನೆಯ ಮೂಲಕ ಆಡಳಿತವನ್ನು ತನ್ನ ಹಿಡಿತದಲ್ಲೇ ಇಟ್ಟುಕೊಳ್ಳುವ ಉದ್ದೇಶ ಹೊಂದಿರುವುದು ಸ್ಪಷ್ಟವಾಗುತ್ತದೆ. ಆಡಳಿತಾತ್ಮಕವಾಗಿ ಸ್ಥಳೀಯ ಸಂಸ್ಥೆಗಳು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಲು ಈ ರೀತಿಯ ಪ್ರಾಧಿಕಾರ ರಚನೆಯಿಂದ ಸಾಧ್ಯವಾಗುವುದಿಲ್ಲ. ಅಧಿಕಾರ ವಿಕೇಂದ್ರೀಕರಣವೇ ಇದಕ್ಕೆಲ್ಲ ಸೂಕ್ತ ಪರಿಹಾರ.

ಎಂ.ಜೆ. ಅಭಿಷೇಕ್, ಬಿಟಿಎಂ ಲೇಔಟ್

ಮೊದಲು ಸಮಸ್ಯೆ ಪರಿಹರಿಸಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿವಾಸಿಗಳಿಗೆ ನೆಮ್ಮದಿಯ ಜೀವನ ನಡೆಸಲು ಸಾಧ್ಯವಿಲ್ಲ. ಪಾದಚಾರಿ ರಸ್ತೆಗಳು ಸರಿ ಇಲ್ಲ, ರಸ್ತೆಗಳಲ್ಲಿ ದ್ವಿಚಕ್ರ ವಾಹನದಲ್ಲಿ ಸಂಚರಿಸಲು ಸಾಧ್ಯವಿಲ್ಲ, ಸಾರಿಗೆ ನಿಲ್ದಾಣಗಳಲ್ಲಿ ನಿಲ್ಲಲು ಸಾಧ್ಯವಿಲ್ಲ, ಸಾರ್ವಜನಿಕ ಶೌಚಾಲಯಗಳ ಸ್ಥಿತಿ ದೇವರೆ ಬಲ್ಲ. ನಗರವಾಸಿಗಳ ಕಷ್ಟ ಏನು ಎಂದು ಶಾಸಕರು ಮೊದಲು ಅರಿಯಬೇಕು. ಇರುವ ಸಮಸ್ಯೆಗಳನ್ನು ಪರಿಹರಿಸಿ ನಂತರ 'ಗ್ರೇಟರ್ ಬೆಂಗಳೂರಿನ' ಬಗ್ಗೆ ಯೋಚನೆ ಮಾಡಿ.

ಸಿ.ಕಾಳಯ್ಯ

'ಗ್ರೇಟರ್ ಬೆಂಗಳೂರು' ಸೂಕ್ತ

ನಗರಸಭೆ, ಪುರಸಭೆಗಳನ್ನು ಸೇರಿಸಿ ಬಿಬಿಎಂಪಿ ಮಾಡಿದಾಗ ಬೆಂಗಳೂರಿನ ಆಡಳಿತ ವ್ಯವಸ್ಥೆ ತುಂಬಾ ಹಿರಿದಾಯಿತು. ಅಭಿವೃದ್ಧಿ ಹೊಂದಿದ ಪ್ರದೇಶಗಳ ಜೊತೆಗೆ ಗ್ರಾಮೀಣ ಪ್ರದೇಶದ ಸ್ವರೂಪದಲ್ಲಿದ್ದ ಪ್ರದೇಶಗಳನ್ನು ಸೇರಿಸಿ ಹತ್ತಾರು ವರ್ಷಗಳಾದರೂ, ಮೂಲಸೌಕರ್ಯಗಳನ್ನು ನೀಡಿಲ್ಲ. ಬೃಹತ್ ಆಗಿರುವ ಬೆಂಗಳೂರಿಗೆ ಸೌಕರ್ಯ ಸೌಲಭ್ಯವನ್ನು ಕಲ್ಪಿಸಲು ಸಂಪನ್ಮೂಲಗಳ ಕ್ರೋಡೀಕರಣಕ್ಕೆ ದಾರಿಯೇ ಇಲ್ಲ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಅನುದಾನಗಳಿಗಾಗಿ ಕಾಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಹೆಚ್ಚು ಅಧಿಕಾರ ಉಳ್ಳಂತಹ ಮತ್ತು ಪರಿಣಾಮಕಾರಿಯಾದಂತಹ ಆಡಳಿತ ನಡೆಸಬಲ್ಲಂತಹ 'ಗ್ರೇಟರ್ ಬೆಂಗಳೂರು' ವ್ಯವಸ್ಥೆ ಪರಿಹಾರ ಕಲ್ಪಿಸಬಹುದು.

ಬಿ.ಆರ್. ಸುರೇಶ್, ಗವಿಪುರ

'ಬೆಟರ್ ಬೆಂಗಳೂರು' ಬೇಕು

ನನ್ನಂತ ಸಾಮಾನ್ಯರು ಕೇಳುತ್ತಿರುವುದು 'ಬೆಟರ್ ಬೆಂಗಳೂರು', ಆದರೆ ಈ ರಾಜಕಾರಣಿಗಳು ಮಾಡುತ್ತಿರುವುದು 'ಗ್ರೇಟರ್ ಬೆಂಗಳೂರು'. ನಮಗೆ ಬೇಕಿರುವುದು ಇನ್ನಷ್ಟು ಮರ ಗಿಡಗಳನ್ನು ಬೆಳಸುವ ಮತ್ತು ಇರುವ ಕೆರೆಗಳನ್ನು ಉಳಿಸುವ 'ಬೆಟರ್ ಬೆಂಗಳೂರು'. ಸುಲಭ ಆಡಳಿತ, ಗುಂಡಿ ಮುಕ್ತ ರಸ್ತೆ, ಟ್ರಾಫಿಕ್ ಸಮಸ್ಯೆಗೆ ಪರಿಹಾರ, ಸಮೂಹ ಸಾರಿಗೆಗೆ ಮೇಜರ್ ಸರ್ಜರಿಗಳಾಗಬೇಕು. ಆದರೆ ಆಳುವವರು ನಮ್ಮ ಮಾತನ್ನು ಕಿವಿ ಮೇಲೆ ಹಾಕಿಕೊಂಡಿಲ್ಲ. ಅವರಿಗೆ ಬೇಕಿರುವ ಅಧಿಕಾರಕ್ಕಾಗಿ ಜನಸಾಮಾನ್ಯರಿಗೆ ಮತ್ತೊಂದು ಬರೆ ಹಾಕಲು 'ಗ್ರೇಟರ್ ಬೆಂಗಳೂರು' ತಂದು, ಸಾಕಷ್ಟು ಗೋಜಲು, ಮತ್ತೊಂದು ಸುತ್ತಿನ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆ.

ಶ್ರೀನಿಧಿ ಶ್ರೀಕರ, ಬೆಂಗಳೂರು

'ಗ್ರೇಟರ್ ಬೆಂಗಳೂರು': ನೀವೇನನ್ನುತ್ತೀರಿ?

ರಾಜ್ಯ ಸರ್ಕಾರ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ– 2024' ಮೂಲಕ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ, ಅದರಡಿ ನಗರಪಾಲಿಕೆಗಳನ್ನು ರಚಿಸಲು ಮುಂದಾಗಿದೆ. ಈ ಬಗ್ಗೆ ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು 'ಪ್ರಜಾವಾಣಿ'ಗೆ ಕಳುಹಿಸಬಹುದು. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರದೊಂದಿಗೆ ವಾಟ್ಸ್ ಆ್ಯಪ್‌ಗೆ ಕಳುಹಿಸಿ.

96060 38256

22 ತಿಂಗಳಲ್ಲಿ 119 ಮಸೂದೆ ಅಂಗೀಕಾರ: ಪಾಟೀಲ

ಪ್ರಜಾವಾಣಿ ವಾರ್ತೆ


ಎಚ್.ಕೆ.ಪಾಟೀಲ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಈಗಿನ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರದ 22 ತಿಂಗಳುಗಳಲ್ಲಿ 119 ಮಸೂದೆಗಳನ್ನು ವಿಧಾನಮಂಡಲದಲ್ಲಿ ಅಂಗೀಕರಿಸಿದ್ದು, ಅವುಗಳಲ್ಲಿ 83 ಕಾನೂನುಗಳಾಗಿ ಜಾರಿಗೆ ಬಂದಿವೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ನಮ್ಮ ಸರ್ಕಾರದ ಅವಧಿಯಲ್ಲಿ ಶಾಸನ ರಚನೆಯ ವಿಷಯದಲ್ಲಿ ಅತ್ಯುತ್ತಮ ಸಾಧನೆಯಾಗಿದೆ. ವಿಧಾನಮಂಡಲದ ಎರಡೂ ಸದನಗಳ ಅಂಗೀಕಾರ ಪಡೆದಿದ್ದ 36 ಮಸೂದೆಗಳು ಇನ್ನೂ ರಾಜ್ಯಪಾಲರು ಮತ್ತು ರಾಷ್ಟ್ರಪತಿಯವರ ಅಂಕಿತಕ್ಕೆ ಬಾಕಿ ಇವೆ' ಎಂದರು.

ನಾಲ್ಕು ಮಸೂದೆಗಳು ರಾಜ್ಯಪಾಲರ ಬಳಿ ಬಾಕಿ ಇವೆ. ರಾಜ್ಯಪಾಲರು ಸ್ಪಷ್ಟನೆ ಕೋರಿ ಏಳು ಮಸೂದೆಗಳನ್ನು ವಾಪಸ್ ಕಳುಹಿಸಿದ್ದಾರೆ. ಐದು ಮಸೂದೆಗಳನ್ನು ರಾಷ್ಟ್ರಪತಿಯವರ ಅಂಕಿತಕ್ಕಾಗಿ ರಾಜ್ಯಪಾಲರು ಕಳುಹಿಸಿದ್ದಾರೆ. 20 ಮಸೂದೆಗಳನ್ನು ರಾಜ್ಯಪಾಲರ ಒಪ್ಪಿಗೆಗಾಗಿ ಕಳುಹಿಸಬೇಕಿದೆ ಎಂದು ತಿಳಿಸಿದರು.

ಖನಿಜಗಳ ಮೇಲೆ ತೆರಿಗೆ ವಿಧಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವ ತಿದ್ದುಪಡಿ ಮಸೂದೆ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಮಸೂದೆ ಸೇರಿದಂತೆ ನಾಲ್ಕು ಮಸೂದೆಗಳು ರಾಜ್ಯಪಾಲರ ಬಳಿ ಇವೆ. ಸಿವಿಲ್ ಪ್ರಕ್ರಿಯಾ ಸಂಹಿತೆ, ಅಪರಾಧ ಪ್ರಕ್ರಿಯಾ ಸಂಹಿತೆ, ತಂಬಾಕು ಉತ್ಪನ್ನಗಳ ನಿಷೇಧ, ಶಿಕ್ಷಣ ಹಕ್ಕು ಮಸೂದೆ ಸೇರಿದಂತೆ ಏಳು ಮಸೂದೆಗಳು ರಾಷ್ಟ್ರಪತಿಯವರ ಬಳಿ ಇವೆ ಎಂದು ವಿವರ ನೀಡಿದರು.

'ವೇತನ ಪರಿಷ್ಕರಣೆ: ಚರ್ಚೆ ನಡೆದಿತ್ತು'

'ಶಾಸಕರು ಮತ್ತು ಸಚಿವರ ವೇತನ, ಭತ್ಯೆಗಳ ಪರಿಷ್ಕರಣೆ ಮಸೂದೆ ಮಂಡಿಸುವ ವಿಷಯ ಸಂಪುಟ ಸಭೆಯಲ್ಲಿ ಚರ್ಚೆಯಾಗಿತ್ತು. ಮಸೂದೆ ಮಂಡಿಸುವುದಾಗಿ ಕಲಾಪ ಸಲಹಾ ಸಮಿತಿಯಲ್ಲೂ ತಿಳಿಸಲಾಗಿತ್ತು. ಸಚಿವರು, ಶಾಸಕರ ವೇತನ ರಾಜ್ಯ ಸರ್ಕಾರದ ಉನ್ನತ ಶ್ರೇಣಿಯ ಅಧಿಕಾರಿಗಳ ವೇತನಕ್ಕಿಂತ ಈಗಲೂ ಕಡಿಮೆ ಇದೆ' ಎಂದು ಸಚಿವ ಎಚ್.ಕೆ. ಪಾಟೀಲ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ವಿಧಾನಸಭೆಯಲ್ಲಿ ಕಲಾಪಕ್ಕೆ ಅಡ್ಡಿಪಡಿಸಿದ 18 ಸದಸ್ಯರನ್ನು ಅಮಾನತು ಮಾಡಿರುವ ಕುರಿತು ಹಲವು ಹಿರಿಯರು ನಮ್ಮೊಂದಿಗೆ ಮಾತನಾಡಿದ್ದಾರೆ. ಈ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು' ಎಂದರು.



ದಾಹ.... ಬಿಸಿಲು ಬೇಗೆ ಹೆಚ್ಚಾಗಿರುವುದರಿಂದ ದಾಹ ಇಂಗಿಸಿಕೊಳ್ಳಲು ಪಾರಿವಾಳಗಳು ಹಲಸೂರು ಕೆರೆಗೆ ಸಾಲಾಗಿ ಬರುತ್ತಿರುವುದು ಕಂಡು ಬಂತು. **ಚಿತ್ರ:** ಪ್ರಶಾಂತ್ ಎಚ್.ಜಿ.

ಸಂಕ್ಷಿಪ್ತ ಸುದ್ದಿ

'ಕಲೆ, ಸಂಸ್ಕೃತಿ ನಿರ್ಲಕ್ಷ್ಯ'


ಬೋರಲಿಂಗಯ್ಯ

ಬೆಂಗಳೂರು: 'ಸರ್ಕಾರಗಳು ಕಲೆ ಮತ್ತು ಸಂಸ್ಕೃತಿಯನ್ನು ನಿರ್ಲಕ್ಷ್ಯ ಮಾಡುತ್ತಿದ್ದು, ಈ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನ ಒದಗಿಸುತ್ತಿಲ್ಲ' ಎಂದು ಜಾನಪದ ವಿದ್ವಾಂಸ ಹಿ.ಚಿ. ಬೋರಲಿಂಗಯ್ಯ ಬೇಸರ ವ್ಯಕ್ತಪಡಿಸಿದರು.

ಕಪ್ಪಣ್ಣ ಅಂಗಳದ ವತಿಯಿಂದ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಲಾವಿದೆ ಸ್ನೇಹಾ ಕಪ್ಪಣ್ಣ ಅವರ 'ನೃತ್ಯ ಬೇರು' ಇಂಗ್ಲಿಷ್ ಮತ್ತು ಕನ್ನಡ ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಹತ್ತು ವರ್ಷಗಳ ಹಿಂದೆ ಇದ್ದ ಸಾಂಸ್ಕೃತಿಕ ವಾತಾವರಣ ಈಗ ಇಲ್ಲ. ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಸರ್ಕಾರವು ಕನ್ನಡ ವಿಶ್ವವಿದ್ಯಾಲಯ ಸ್ಥಾಪಿಸಿದೆ. ಆದರೆ, ಅದರ ವಿದ್ಯುತ್ ಬಿಲ್ ಪಾವತಿಸಲೂ ಹಣವಿಲ್ಲ. ಜಾನಪದ ವಿ.ವಿ ಸಾಲದಲ್ಲಿ ಮುಳುಗಿದೆ' ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಐ.ಎಂ.ವಿಠಲಮೂರ್ತಿ, ಮಣಿಮೇಖಲೈ ಮೋಹನ್, ಟಿ. ಸುರೇಶ್, ಶೀಲಾ ಚಂದ್ರಶೇಖರ್, ಶ್ರೀನಿವಾಸ ಜಿ. ಕಪ್ಪಣ್ಣ ಉಪಸ್ಥಿತರಿದ್ದರು.

ಬಿಬಿಎಂಪಿ ಬಜೆಟ್ ಒಂದು ದಿನ ಮುಂದಕ್ಕೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2025–26ನೇ ಸಾಲಿನ ಬಜೆಟ್ ಮಂಡನೆ ಮತ್ತೊಂದು ದಿನ ಮುಂದಕ್ಕೆ ಹೋಗಿದೆ.

'ಮಾರ್ಚ್ 27ರ ಗುರುವಾರ ಬೆಳಿಗ್ಗೆ 11ಕ್ಕೆ ಬಜೆಟ್ ಮಂಡನೆಯಾಗಲಿದೆ' ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದರು. ಬಜೆಟ್ ಅನ್ನು ಮಾರ್ಚ್ 28ರಂದು ಮಂಡಿಸುವುದಾಗಿ ಬುಧವಾರ ತಿಳಿಸಲಾಗಿತ್ತು. ಬುಧವಾರ ರಾತ್ರಿ ಮತ್ತೆ ಬಜೆಟ್ ದಿನವನ್ನು ಮುಂದೂಡಲಾಗಿದ್ದು, ಮಾರ್ಚ್ 29ರ ಶನಿವಾರ ಬೆಳಿಗ್ಗೆ 11ಕ್ಕೆ ಮಂಡನೆ ಆಗುತ್ತದೆ ಎಂದು ತಿಳಿಸಲಾಗಿದೆ.

ನಗರದಲ್ಲಿ ಇಂದು

'ಗಮಕ ಫಾಲ್ಗುಣ' ಸಮಾರಂಭ: ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ಎಂ.ಆರ್. ಸತ್ಯನಾರಾಯಣ, ಅತಿಥಿಗಳು: ಎಚ್.ಕೆ. ಸುಪ್ರಭಾ, ವಿ. ರಾಣಿ ಗೋವಿಂದರಾಜು, ಎಸ್.ಪಿ. ರಾಮಕೃಷ್ಣ, ಆಯೋಜನೆ: ಶ್ರೀ ವಿದ್ಯಾಗಣಪತಿ ಗಮಕ ಶಿಕ್ಷಣಾಲಯ, ಸಿರಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಕುಮಾರವ್ಯಾಸ ಮಂಟಪ, ಸ್ಪಂದನ ಆಸ್ಪತ್ರೆ ಎದುರು, ರಾಜಾಜಿನಗರ 4ನೇ ಬ್ಲಾಕ್, ಬೆಳಿಗ್ಗೆ 10.30

ವಿಶ್ವ ರಂಗಭೂಮಿ ದಿನಾಚರಣೆ: ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ಡಿ. ರಾಜಣ್ಣ, ಮುಖ್ಯ ಅತಿಥಿ: ದಿಲೀಪ್ ಬಿ.ಎಂ., ಗೌರವ ಸಮರ್ಪಣೆ: ಆಂಜನೇಯ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಗೋಲ್ಡನ್ ವ್ಯಾಲಿ ಪಬ್ಲಿಕ್ ಸ್ಕೂಲ್ ಆವರಣ, ಶ್ರೀಚಕ್ರನಗರ, ಬೆಳಿಗ್ಗೆ 11

ವಿಶ್ವ ರಂಗಭೂಮಿ ದಿನಾಚರಣೆ: ಉದ್ಘಾಟನೆ: ಎಸ್. ದೇವದಾಸ್ ಸಾಧು, ಉಪನ್ಯಾಸ: ಸುಷ್ಮಾ ನರೇಂದ್ರ, ಅಧ್ಯಕ್ಷತೆ: ಡಿ. ರವಿನ ರೆಬೆಕ್ಕ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಬಿಷಪ್ ಕಾಟನ್ ಮಹಿಳಾ ಕ್ರಿಶ್ಚಿಯನ್ ಕಾಲೇಜು, ಮಿಷನ್ ರಸ್ತೆ, ಬೆಳಿಗ್ಗೆ 11

ವಿಶ್ವರಂಗಭೂಮಿ ದಿನಾಚರಣೆ ಅಂಗವಾಗಿ 'ರಂಗೋತ್ಸವ': ಅತಿಥಿ: ಬಿ. ಸುರೇಶ್, ನಾಟಕ ಪ್ರದರ್ಶನ: 'ಶೂದ್ರ ತಪಸ್ವಿ', ಆಯೋಜನೆ: ಅದಮ್ಯ ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ: ಚನ್ನಬಸವಪ್ಪ ಸಭಾಂಗಣ, ಕೆ.ಜಿ.ಎಸ್. ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 1.15

ಪದವಿ ಪ್ರದಾನ ಸಮಾರಂಭ: ಅತಿಥಿಗಳು: ಡಾ. ಸುಜಾತಾ ರಾಥೋಡ್, ಪ್ರದೀಪ್ ಕುಮಾರ್ ಸಮದ್, ಆಯೋಜನೆ ಹಾಗೂ ಸ್ಥಳ: ಸೇಂಟ್ ಜಾನ್ಸ್ ಕಾಲೇಜ್ ಆಫ್ ನರ್ಸಿಂಗ್, ಸರ್ಜಾಪುರ, ಮಧ್ಯಾಹ್ನ 3

ವಿಶ್ವ ರಂಗಭೂಮಿ ದಿನಾಚರಣೆ ಪ್ರಯುಕ್ತ 'ಪರಂಪರಾ ರಂಗ ಪುರಸ್ಕಾರ' ಪ್ರದಾನ ಸಮಾರಂಭ: ಚಾಲನೆ: ಬಿ.ಎನ್. ಮಂಜುನಾಥ ರೆಡ್ಡಿ, ಅಧ್ಯಕ್ಷತೆ: ಬೇಲೂರು ರಾಮಮೂರ್ತಿ, ಪ್ರಶಸ್ತಿ ಪುರಸ್ಕೃತರು: ವಿ.ಎನ್. ಅಶ್ವತ್, ಎ.ಎಸ್. ಪ್ರಕಾಶ್, ಕಿರು ನಾಟಕ ಪ್ರದರ್ಶನ, ಗೀತ ಗಾಯನ, ಆಯೋಜನೆ: ಪರಂಪರಾ ಕಲ್ಚರಲ್ ಫೌಂಡೇಷನ್, ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ಎನ್. ಆರ್. ಕಾಲೊನಿ, ಬಸವನಗುಡಿ, ಸಂಜೆ 4

ರಾಜ್ಯ ಮಟ್ಟದ ಬಂಜಾರ ಸಾಹಿತ್ಯ ಹಾಗೂ ಸಾಂಸ್ಕೃತಿಕ ಉತ್ಸವ ಮತ್ತು ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಪ್ರಶಸ್ತಿ ಪ್ರದಾನ: ಡಿ.ಕೆ. ಶಿವಕುಮಾರ್, ಪ್ರಶಸ್ತಿ ವಿಜೇತರ ಕಿರುಹೊತ್ತಿಗೆ ಬಿಡುಗಡೆ: ಶಿವರಾಜ್ ತಂಗಡಗಿ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಮುಖ್ಯ ಅತಿಥಿಗಳು: ಬರಗೂರು ರಾಮಚಂದ್ರಪ್ಪ, ಎಸ್.ಜಿ. ಸಿದ್ಧರಾಮಯ್ಯ, ಆಯೋಜನೆ: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 4.30



ದಾಸರ ಪದಗಳ ಗಾಯನ: ಶ್ರೀ ಶಾರದಾ ಸಂಗೀತ ಶಾಲೆಯ ವಿದ್ಯಾರ್ಥಿಗಳು, ನಿರ್ದೇಶನ: ಶೃತಿ ಅರುಣ್, ಕೀ-ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಸಂಜೆ 7

ಭರತನಾಟ್ಯ ಪ್ರದರ್ಶನ: ಕಲಾ ಸಂಕಲ್ಪ ನೃತ್ಯ ಶಾಲೆಯ ವಿದ್ಯಾರ್ಥಿಗಳು, ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 5

ವಿಶ್ವ ರಂಗಭೂಮಿ ದಿನಾಚರಣೆ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ತ್ರೈಮಾಸಿಕ ಸಂಚಿಕೆ ಬಿಡುಗಡೆ: ಕೆ.ಎಂ. ಗಾಯತ್ರಿ, ಬೀದಿ ನಾಟಕ ಸ್ಪರ್ಧಾತ್ಮಕ ಉತ್ಸವ ಪ್ರಶಸ್ತಿ ಪ್ರದಾನ: ಮಾವಳ್ಳಿ ಶಂಕರ್, ಬಿ. ಸುರೇಶ್ ಅವರ 'ಅಡುಗೆಮನೆಯಲ್ಲೊಂದು ಹುಲಿ', ಕಿರಣ್ ಭಟ್ ಅವರ 'ಹೌಸ್‌ಫುಲ್', ನಾ. ದಾಮೋದರ ಶೆಟ್ಟಿ ಅವರ 'ಚಾರುವಸಂತ', ಮಹಿಪಾಲರೆಡ್ಡಿ ಮುನ್ನೂರ್ ಅವರ 'ರಂಗ ಸುನೇರಿ' ಪುಸ್ತಕ ಬಿಡುಗಡೆ: ವಿಜಯಾ, ಕೃತಿ ಬಗ್ಗೆ ಮಾತು: ಜಿ.ಎನ್. ಮೋಹನ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ನಾಟಕ ಬೆಂಗಳೂರು, ರಂಗ ಸೌರಭ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಆವರಣ, ಜೆ.ಸಿ. ರಸ್ತೆ, ಸಂಜೆ 5

ವಿಶ್ವ ರಂಗಭೂಮಿ ದಿನಾಚರಣೆ: ಮುಖ್ಯ ಅತಿಥಿ: ಛಾಯಾ ಭಾರ್ಗವಿ ಎಚ್.ಎಸ್., ಉಪಸ್ಥಿತಿ: ಟಿ. ನಾರಾಯಣಪ್ಪ, ಕೆ.ಎಸ್. ಗೋಪಾಲಕೃಷ್ಣ, ಅಧ್ಯಕ್ಷತೆ: ಎ.ಜಿ. ನಟರಾಜ್, ಆಯೋಜನೆ ಹಾಗೂ ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ಜಯನಗರ 4ನೇ ಬ್ಲಾಕ್, ಸಂಜೆ 6

'ಕರ್ನಾಟಕ ಇನ್‌ಸ್ಪೈರಿಂಗ್ ವುಮೆನ್' ಪ್ರಶಸ್ತಿ ಪ್ರದಾನ ಸಮಾರಂಭ: ಮುಖ್ಯ ಅತಿಥಿಗಳು: ಯು.ಟಿ. ಖಾದರ್, ಬಸವರಾಜ ಹೊರಟ್ಟಿ, ಎಂ.ಬಿ. ಪಾಟೀಲ, ಶಾಲಿನಿ ರಜನೀಶ್, ದಿನೇಶ್ ಗುಂಡೂರಾವ್, ರಿಜ್ವಾನ್ ಅರ್ಷದ್, ಕೆ. ಗೋವಿಂದರಾಜು, ಮೇಘನಾ ಗಾಂವ್ಕರ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಪ್ರೆಸ್ ಕ್ಲಬ್, ಕಬ್ಬನ್ ಉದ್ಯಾನ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಸ್ವಚ್ಛ ವಾಹಿನಿ' ಚಾಲಕಿಯರಿಗೆ ಪರಿಹಾರ: ಪ್ರಿಯಾಂಕ್ ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಭಾಗದಲ್ಲಿ ನೈರ್ಮಲ್ಯ ಕಾಪಾಡುತ್ತಿರುವ 'ಸ್ವಚ್ಛ ವಾಹಿನಿ' ವಾಹನಗಳ ಚಾಲಕಿಯರ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳುವುದಾಗಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದರು.

ನಗರದಲ್ಲಿರುವ ಸಚಿವರ ನಿವಾಸಕ್ಕೆ ಬಂದಿದ್ದ ಮಹಿಳೆಯರ ಸಮಸ್ಯೆಗಳನ್ನು ಆಲಿಸಿದ ಪ್ರಿಯಾಂಕ್ ಅವರು, 'ಗ್ರಾಮೀಣ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸಲು ಕಸ ಸಂಗ್ರಹ, ನಿರ್ವಹಣೆಯಲ್ಲಿ ಮಹಿಳೆಯರಿಗೇ ಮುಂದಾಳತ್ವ ವಹಿಸಲಾಗಿದೆ. 'ಸ್ವಚ್ಛ ವಾಹಿನಿ' ವಾಹನಗಳಿಗೂ ಅವರನ್ನೇ ಚಾಲಕರನ್ನಾಗಿ ಆಯ್ಕೆ ಮಾಡಲಾಗಿದೆ' ಎಂದರು.

ಚಾಲಕಿಯರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹಾಗೂ ಕಾರ್ಯನಿರ್ವಹಿಸಲು ಉತ್ತಮ ವಾತಾವರಣ ನಿರ್ಮಿಸಿಕೊಡುವ ನಿಟ್ಟಿನಲ್ಲಿ ಒಂದು ವಾರದೊಳಗಾಗಿ ಅಧಿಕಾರಿಗಳ ಸಭೆ ಕರೆದು ಚರ್ಚಿಸುವ ಭರವಸೆ ನೀಡಿದರು.

'ಗ್ರಾಮೀಣ ಮಹಿಳೆಯರು ಔದ್ಯೋಗಿಕವಾಗಿ ತೊಡಗಿಸಿಕೊಳ್ಳಲು ಉತ್ಸಾಹ ತೋರಿಸಿರುವಾಗ ಅವರಿಗೆ ಉತ್ತಮ ವಾತಾವರಣ ನೀಡಿ ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯ. ಅವರ ಸಮಸ್ಯೆಗಳನ್ನು ಆದ್ಯತೆಯ ಮೇಲೆ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಸಚಿವರು ಹೇಳಿದರು.

ರೈಲು ನಿಲ್ದಾಣಗಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈರುತ್ಯ ರೈಲ್ವೆ ಮುಖ್ಯ ವ್ಯವಸ್ಥಾಪಕ ಮುಕುಲ್ ಸರನ್ ಮಥೂರ ಅವರು ಬುಧವಾರ ಬೆಂಗಳೂರಿನ ಪ್ರಮುಖ ರೈಲು ನಿಲ್ದಾಣಗಳಿಗೆ ಭೇಟಿ ನೀಡಿ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ಕೆಎಸ್‌ಆರ್ ಬೆಂಗಳೂರು ರೈಲು ನಿಲ್ದಾಣದ ನವೀಕರಣಕ್ಕೆ ಸಂಬಂಧಿಸಿದ ವಿನ್ಯಾಸಗಳನ್ನು ಪರಿಶೀಲಿಸಿದರು. ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆಯನ್ನು ಪೂರೈಸಲು ಹಾಗೂ ಕಾರ್ಯಾಚರಣೆಯನ್ನು ಸುಗಮಗೊಳಿಸಲು ಕೈಗೊಳ್ಳಬಹುದಾದ ತಂತ್ರಗಳ ಬಗ್ಗೆ ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅಮಿತೇಶ್ ಕುಮಾರ್ ಸಿನ್ಹಾ ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಯಶವಂತಪುರ ರೈಲು ನಿಲ್ದಾಣ, ಎಸ್‌ಎಂವಿಟಿ ಬೆಂಗಳೂರು ನಿಲ್ದಾಣ, ಕಂಟೋನ್ಮೆಂಟ್ ನಿಲ್ದಾಣಗಳಿಗೆ ಭೇಟಿ ನೀಡಿದರು. ಗತಿ ಶಕ್ತಿ ಘಟಕ ನಡೆಸುತ್ತಿರುವ ನಾಲ್ಕು ಹಳಿ ಯೋಜನೆಯ ಪ್ರಗತಿಯನ್ನು ಅವಲೋಕಿಸಿದರು.

ಬಳಿಕ ಕಾಮಗಾರಿ ನಿರ್ವಹಣಾ ಸಂಸ್ಥೆಗಳು, ಕೆ-ರೈಡ್ ಹಾಗೂ ಆರ್‌ಎಲ್‌ಡಿಎ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಬೆಂಗಳೂರಿನ ರೈಲ್ವೆ ಜಾಲದ ಮೂಲಸೌಕರ್ಯ ಮತ್ತು ಸೇವೆ ಸುಧಾರಿಸುವ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದರು

ಮುಖ್ಯ ವ್ಯವಸ್ಥಾಪಕ ಮುಕುಲ್ ಸರನ್ ಮಥೂರ ಅವರು ಎಸ್‌ಎಂವಿಟಿ ಬೆಂಗಳೂರು ನಿಲ್ದಾಣದಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆದರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

JANATHA EDUCATION SOCIETY®
TENDER NOTIFICATION

Sealed item-wise tenders (in duplicate) are invited from PWD/reputed civil contractors for the following works under Janatha Education Society. Contractors must have executed at least one work valued at 50.00 lakhs or more and should submit work completion certificates to obtain tender documents.

Sl No.	Name of Work	Estimated cost Rs. in lakhs	E.M.D Rs.	Cost of Tender Document Rs.
1.	Construction of Fourth floor at Vivekananda College of LAW, Gayathrinagar, Bengaluru - 560021.	27.90	56000/-	3000/-
2.	Annual repair and maintenance of Vivekananda Public School Building at Gudimavu, Kumbalagodu Post, Kengeri, Bengaluru - 560074.	30.00	60000/-	3000/-
3.	Providing Fire Safety Installations to the Buildings at Vivekananda College Premises, Rajajinagar 2nd Stage, Bengaluru - 560055.	14.00	28000/-	2000/-

E.M.D by way of DD payable in favor of Secretary, Janatha Education Society, Bengaluru.

Tender documents will be issued from 28/03/2025 to 03/04/2025 during office hours on all working days. The completed tenders will be accepted up to 2.00 p.m. on 08/04/2025 and will be opened on the same day at 3.00p.m. or on 09/04/2025 at 11 a.m. at:

VIVEKANANDA COLLEGE PREMISES, Dr. RAJKUMAR ROAD
RAJAJINAGAR 2nd STAGE, BENGALURU - 55. Ph.no. – 080-23371952 / 9513953482

The Management reserves the right to accept or reject any or all tenders without assigning any reason.

Sd/- Sri H. C. Balakrishna, Hon. President
Sd/- Sri H. G. Balagopal, Secretary

JOB OPPORTUNITIES

Teachers/ Professors

VISHWA CHETHANA COLLEGE, ANEKAL
#52/1, Kurubarahatti Muthaghatti Road Anekal
We are hiring faculties for the following positions:
DIRECTOR / PRINCIPAL
PROFESSOR
ASSOCIATE / ASSISTANT PROFESSOR
To teach the following discipline:
BBA / BCA / MBA / MCA Courses
Qualification: PG with PhD/NET/SLET preferable
Interested Candidates can send your CV to :
vishwachethana2010@gmail.com

PERSONAL

Change of Name

I, MAYALASKHMI G, wife of late Madhu Nambiar, residing #202 Vandana Grand Apartment, Koramangala 1st block, Bengaluru-560034, Karnataka, have changed my name to Maya Madhu for all official and legal purposes. Concerned authorities and the general public may take note.

I, ASHOK Sarabu, residing at #004, VM Grandeur, Jayanthi Nagar, Horamavu, Bangalore- 560043. have changed my minor son's name from AADITYA KAUSHIK to AADITYA KAUSHIK SARABU vide affidavit dated 26/03/2025 before Notary G.B. Turamari Bangalore

WE, NANDA_KUMAR KIRUBAKARAN and ARCHANA NANDAKUMAR Both are R/a.#Villa-518 Concorde Napa Valley Road.#47 Taralu Village, Kanakapura Main Road,Bangalore South,Bangalore 560082 Declare`that in our son's Passport his Name recorded`as KRISHVAA instead`of KRISHVAA NANDAKUMAR and`his Mother Name recorded as ARCHANA instead of ARCHANA NANDAKUMAR vide`affidavit dated:26.3.2025 before`Notary Chethana.S.V. Bangalore.

I, SANJEEVI SHETTY residing at Hubballi_Dharwad City- 580031 have changed my name as SANJEEVI MALLIKARJUN NAGOJI, vide affidavit dated 25/03/2025 before Notary K.S. Bammappanavar, Bengaluru

Lost

PUBLIC NOTICE DOCUMENTS LOST / MISSING

I, JAGDISH PRAKASH GUPTA, S/o Amar Dev Gupta R/at No.2369, 2nd stage, Rajajinagar Bangalore have lost my original property Sale Deed No.608/1977-78, Vol.3033, Book-2 Dated 28.05.1977 for Site No.69 by NTI Layout, Narasipura Village, Yelhanka, Bengaluru on 10.03.2025. Regarding this I have Lodged FIR bearing Lost Report No.1536277/2025 If found pls contact or Handover to nearest police station.
Contact: J P Gupta
Mobile No. 9880730325

REAL ESTATE SELLING

Sites

Sanjaynagar

FOR SALE SITE/House 56X40 near Sanjaynagar main road; facing south; Genuine Buyers contact owner 9986023257

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds DECCAN HERALD More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply

ರಕ್ಷಕ್ 'ಬುಲೆಟ್' ವಿರುದ್ಧ ದೂರು

ಬೆಂಗಳೂರು: ನಟ ರಕ್ಷಕ್ 'ಬುಲೆಟ್' ಅವರು ಚಾಮುಂಡೇಶ್ವರಿ ದೇವಿಗೆ ಅವಹೇಳನ ಮಾಡಿದ್ದಾರೆ ಎಂದು ಆರೋಪಿಸಿ, ಹಿಂದೂ ಸಂಘಟನೆ ಕಾರ್ಯಕರ್ತ ಬಿ.ಎಸ್.ಮಹೇಶ್ ಅವರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ಬುಧವಾರ ದೂರು ನೀಡಿದ್ದಾರೆ.

'ವಾಹಿನಿಯೊಂದರಲ್ಲಿ ಪ್ರಸಾರ ಆಗುತ್ತಿರುವ ರಿಯಾಲಿಟಿ ಶೋದಲ್ಲಿ ರಕ್ಷಕ್ ಅವರೂ ಪಾಲ್ಗೊಂಡಿದ್ದಾರೆ. ಕಾರ್ಯಕ್ರಮದಲ್ಲಿ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುವ ಹಾಗೆ ನಡೆದುಕೊಂಡಿದ್ದಾರೆ. ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿಗೆ ಅವಮಾನ ಮಾಡಿದ್ದು, ಅವರ ವಿರುದ್ಧ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ. ರಕ್ಷಕ್ ಹೇಳಿಕೆ ಖಂಡಿಸಲಾಗುವುದು' ಎಂದು ಜಯನಗರ ನಿವಾಸಿ ಬಿ.ಎಸ್.ಮಹೇಶ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ನಟ ರಕ್ಷಕ್ 'ಬುಲೆಟ್', ಜೀ ವಾಹಿನಿಯಲ್ಲಿ ಪ್ರಸಾರ ಆಗುತ್ತಿರುವ 'ಭರ್ಜರಿ ಬ್ಯಾಚುಲರ್ಸ್-2' ಕಾರ್ಯಕ್ರಮದ ನಿರ್ದೇಶಕ ಹಾಗೂ ಬರಹಗಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದೂ ಅವರು ದೂರಿನಲ್ಲಿ ಕೋರಿದ್ದಾರೆ.

ಕೈಯಲ್ಲಿ ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿದ ಪ್ರಕರಣ

ಪೊಲೀಸ್ ಕಸ್ಟಡಿಗೆ ರಜತ್, ವಿನಯ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರಕಾಸ್ತ್ರ ಹಿಡಿದು ರೀಲ್ಸ್ ಮಾಡಿ ಬಂಧನಕ್ಕೆ ಒಳಗಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಕಿರುತೆರೆಯ ನಟರಾದ ರಜತ್ ಕಿಶನ್ ಹಾಗೂ ವಿನಯ್ ಗೌಡ ಅವರನ್ನು ಹೆಚ್ಚಿನ ವಿಚಾರಣೆಗಾಗಿ ಬಸವೇಶ್ವರನಗರ ಠಾಣೆಯ ಪೊಲೀಸರು, ಬುಧವಾರ ತಮ್ಮ ಕಸ್ಟಡಿಗೆ ಪಡೆದುಕೊಂಡರು.

ನ್ಯಾಯಾಂಗ ಬಂಧನದಲ್ಲಿದ್ದ ಆರೋಪಿಗಳನ್ನು 24ನೇ ಎಸಿಜೆಎಂ ನ್ಯಾಯಾಲಯಕ್ಕೆ ಬುಧವಾರ ಮಧ್ಯಾಹ್ನ ಪೊಲೀಸರು ಹಾಜರು ಪಡಿಸಿದರು.

ಪ್ರಾಸಿಕ್ಯೂಷನ್ ಪರವಾಗಿ ವಕೀಲ ಹರೀಶ್ ಚಂದ್ರಗೌಡ ಅವರು ವಾದ ಮಂಡನೆ ಮಾಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಿಂದ ಹೆಚ್ಚಿನ ಮಾಹಿತಿ ಕಲೆ ಹಾಕಬೇಕಿದ್ದು, ಆರೋಪಿಗಳನ್ನು ಪೊಲೀಸ್ ಕಸ್ಟಡಿಗೆ ನೀಡುವಂತೆ ಕೋರಿದರು. ಮೂರು ದಿನ ಪೊಲೀಸ್ ಕಸ್ಟಡಿಗೆ ನೀಡಿ ನ್ಯಾಯಾಧೀಶರು ಆದೇಶಿಸಿದರು.



ವಿನಯ್ ಗೌಡ

ರಜತ್ ಕಿಶನ್

'ಮಾರಕಾಸ್ತ್ರ ಹಿಡಿದು, ರೀಲ್ಸ್ ಮಾಡಿ ವಿಡಿಯೊವನ್ನು ಇನ್‌ಸ್ಟಾಗ್ರಾಂನ 'ಬುಜ್ಜಿ' ಹೆಸರಿನ ಖಾತೆಯಲ್ಲಿ ಅಪ್ಲೋಡ್ ಮಾಡಿದ್ದರು. ಅದರ ಮಾಹಿತಿ ತಿಳಿದು ಇಬ್ಬರನ್ನೂ ಠಾಣೆಗೆ ಕರೆಸಿ ವಿಚಾರಣೆ ನಡೆಸಲಾಗಿತ್ತು. ಆಗ ಆರೋಪಿಗಳು ಫೈಬರ್ ಮಚ್ಚು ನೀಡಿದ್ದರು. ಪರಿಶೀಲನೆ ನಡೆಸಿದಾಗ ರೀಲ್ಸ್‌ನಲ್ಲಿ ಬಳಸಿದ ಮಚ್ಚು ಅದಲ್ಲ ಎಂಬುದು ಪತ್ತೆ ಆಯಿತು. ಸಾಕ್ಷ್ಯ ನಾಶ ಪಡಿಸಿದ್ದ ಆರೋಪದ ಮೇರೆಗೆ, ಆರೋಪಿಗಳನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿತ್ತು. ಈಗ ಮತ್ತೆ ಅವರನ್ನು ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ರೀಲ್ಸ್‌ನಲ್ಲಿ ಬಳಸಿದ್ದ ಮಚ್ಚನ್ನು ಎಲ್ಲಿ ವಿಲೇವಾರಿ ಮಾಡಲಾಗಿದೆ ಎಂಬುದರ ಕುರಿತು ಆರೋಪಿಗಳಿಂದ ಮಾಹಿತಿ ಪಡೆಯಲಾಗುವುದು' ಎಂದು ಪೊಲೀಸರು ಹೇಳಿದರು.

ಕಂಪ್ಯೂಟರ್ ಆಪರೇಟರ್ ಕೆಲಸ ಕೊಡಿಸುವುದಾಗಿ ವಂಚನೆ

ಬೆಂಗಳೂರು: ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ ಸಹಾಯಕ ಕಂಪ್ಯೂಟರ್ ಆಪರೇಟರ್ ಕೆಲಸ ಕೊಡಿಸುವುದಾಗಿ ನಂಬಿಸಿ, ಹಲವರಿಂದ ಹಣ ಪಡೆದು ವಂಚಿಸಿದ್ದ ಆರೋಪದ ಅಡಿ ಇಲಾಖೆಯ ನೌಕರ ಸೇರಿ ಇಬ್ಬರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಇಲ್ಲಿನ ತಿಗಳರಪೇಟೆಯ ನಿವಾಸಿ ಆರ್.ಪ್ರಭು ಅವರು ನೀಡಿದ ದೂರಿನ ಮೇರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ನೌಕರ ಶ್ರೀಧರ್ ಹಾಗೂ ಆತನ ಸ್ನೇಹಿತ ರಾಘವೇಂದ್ರ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಐವರಿಂದ ಒಟ್ಟು ₹17 ಲಕ್ಷ ಪಡೆದು ವಂಚಿಸಿದ್ದಾರೆ. ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ದೂರುದಾರ ಪ್ರಭು ಅವರ ಮನೆಯ ಪಕ್ಕದಲ್ಲೇ ಆರೋಪಿ ರಾಘವೇಂದ್ರ ಈ ಹಿಂದೆ ವಾಸವಿದ್ದ. ಕೆಲವು ತಿಂಗಳ ಹಿಂದಷ್ಟೇ ಬಿಳೇಕಳ್ಳಿಯ ಬಾಡಿಗೆ ಮನೆಗೆ ಸ್ಥಳಾಂತರಗೊಂಡಿದ್ದ. ಪ್ರಭು ಅವರ ಪತ್ನಿ ವಿ.ಭವ್ಯಾ ಅವರಿಗೂ ಆರೋಪಿ ಪರಿಚಯವಿದ್ದ. ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀಧರ್ ಹಾಗೂ ಆತನ ಸ್ನೇಹಿತ ರಾಘವೇಂದ್ರ ದೂರುದಾರ ಪ್ರಭು ಅವರ ಮನೆಗೆ ಆಗಾಗ್ಗೆ ಬರುತ್ತಿದ್ದರು. ಆ ಸಂದರ್ಭದಲ್ಲಿ ಭವ್ಯಾ ಅವರಿಗೆ ಕೆಲಸ ಕೊಡಿಸುವುದಾಗಿ ಇಬ್ಬರೂ ಹೇಳಿದ್ದರು. ಇದಕ್ಕೆ ಹಣ ನೀಡುವಂತೆಯೂ ಹೇಳಿದ್ದರು. ಆರೋಪಿಗಳ ಮಾತು ನಂಬಿದ್ದ ದಂಪತಿ, 2024ರ ಫೆಬ್ರುವರಿಯಲ್ಲಿ ಎಂ.ಎಸ್.ಬಿಲ್ಡಿಂಗ್‌ನ 'ಡಿ' ಗ್ರೂಪ್ ನೌಕರರ ಕಟ್ಟಡದ ಬಳಿ ₹3 ಲಕ್ಷ ನೀಡಿದ್ದರು. ಅದಾದ ಮೇಲೆ ₹4.37 ಲಕ್ಷ ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸಹಾಯಕ ಕಂಪ್ಯೂಟರ್ ಆಪರೇಟರ್ ಕೆಲಸ ಕೊಡಿಸುವುದಾಗಿ ಇದೇ ರೀತಿ ಆರೋಪಿಗಳು ನಂಬಿಸಿ, ರಾಜೇಶ್ವರಿ ಎಂಬುವವರಿಂದ ₹1.50 ಲಕ್ಷ, ಅನುಪಮಾ ಅವರಿಂದ ₹4.50 ಲಕ್ಷ, ಮಂಜುನಾಥ್‌ರಿಂದ ₹1.80 ಲಕ್ಷ, ವಿನೋದ್ ಸಾಗರ್ ಅವರಿಂದ ₹1.80 ಲಕ್ಷ ಪಡೆದುಕೊಂಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ನಕಲಿ ಆದೇಶ ಪತ್ರ: ನೇಮಕಾತಿಯ ಆದೇಶ ಪತ್ರವನ್ನು ನೀಡುವಂತೆ ಭವ್ಯಾ ಅವರು ಕೇಳಿದ್ದರು. ಆಗ ಆರೋಪಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ ಸಹಿ ಹಾಕಿದಂತೆಯೇ ಪತ್ರವೊಂದನ್ನು ಸೃಷ್ಟಿಸಿ ನೀಡಿದ್ದರು ಎಂದು ಮೂಲಗಳು ಹೇಳಿವೆ.

ಕತ್ತು ಹಿಸುಕಿ ಪತ್ನಿಯ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೌಟುಂಬಿಕ ಕಾರಣಕ್ಕೆ ಮನೆಯಲ್ಲಿ ನಡೆದ ಗಲಾಟೆಯು ವಿಕೋಪಕ್ಕೆ ಹೋಗಿ ಪತ್ನಿಯ ಕತ್ತು ಹಿಸುಕಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಪತಿಯನ್ನು ಸಂಪಿಗೆಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಹೆಗಡೆನಗರದ ಒಂದನೇ ಮುಖ್ಯರಸ್ತೆಯ ನಿವಾಸಿ ವಲ್ಲರಮತಿ(35) ಕೊಲೆಯಾದವರು. ಕೊಲೆ ಪ್ರಕರಣದ ಸಂಬಂಧ ಚಂದ್ರಶೇಖರ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಅಪರಾಧ ಸುದ್ದಿ



'ವಲ್ಲರಮತಿ ಹಾಗೂ ಚಂದ್ರಶೇಖರ್ ತಮಿಳುನಾಡಿನವರು. 13 ವರ್ಷಗಳ ಹಿಂದೆ ಮದುವೆ ಆಗಿದ್ದರು. ಎರಡು ವರ್ಷಗಳ ಹಿಂದೆ ನಗರಕ್ಕೆ ಬಂದು, ಹೆಗಡೆನಗರದಲ್ಲಿ ನೆಲಸಿದ್ದರು. ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಚಂದ್ರಶೇಖರ್ ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ವಲ್ಲರಮತಿ ಖಾಸಗಿ ಕಂಪನಿಯೊಂದರಲ್ಲಿ ಹಣಕಾಸು ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮಂಗಳವಾರ ಬೆಳಿಗ್ಗೆ ಪರೀಕ್ಷೆ ಬರೆಯಲು ಮಕ್ಕಳು ಶಾಲೆಗೆ ತೆರಳಿದ್ದರು. ವಲ್ಲರಮತಿ ಅವರೂ ಕೆಲಸಕ್ಕೆ ತೆರಳಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಆಗ, ದಂಪತಿ ಮಧ್ಯೆ ಗಲಾಟೆ ನಡೆದಿತ್ತು. ಗಲಾಟೆ ವಿಕೋಪಕ್ಕೆ ಹೋಗಿ ಪತ್ನಿಯ ಕತ್ತು ಹಿಸುಕಿ ಪತಿ ಕೊಲೆ ಮಾಡಿದ್ದಾನೆ. ಕೃತ್ಯ ಎಸಗಿದ ನಂತರ ಪತಿಯೇ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದ್ದ' ಎಂದು ಮೂಲಗಳು ತಿಳಿಸಿವೆ.

ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ರಜೆ ಮೇಲೆ ತೆರಳಿರುವ ಧರ್ಮಸ್ಥಳ ಠಾಣೆ ಪಿಎಸ್‌ಐ

ಮಂಗಳೂರು: ವರದಕ್ಷಿಣೆಗಾಗಿ ಪತ್ನಿಗೆ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಪೊಲೀಸ್ ಠಾಣೆಯ ಪಿಎಸ್‌ಐ ಪಿ.ಕಿಶೋರ್ ರಜೆಯ ಮೇಲೆ ತೆರಳಿದ್ದಾರೆ.

ಬೆಂಗಳೂರಿನ ನಾಗರಬಾವಿ ಟೀಚರ್ಸ್ ಕಾಲೊನಿಯ ಮಾನಸ ನಗರದ ನಿವಾಸಿ ಆರ್.ವರ್ಷಾ ಅವರು ಪತಿ (ಪಿಎಸ್‌ಐ ಪಿ.ಕಿಶೋರ್) ಸೇರಿದಂತೆ ನಾಲ್ವರ ವಿರುದ್ಧ ವರದಕ್ಷಿಣೆಗಾಗಿ ಕಿರುಕುಳ ನೀಡಿದ ಕುರಿತು ಮೇಲೆ ಬೆಂಗಳೂರಿನ ಚಂದ್ರಾಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. 'ವರದಕ್ಷಿಣೆ ತರುವಂತೆ ಪದೇ ಪದೇ ಹಿಂಸೆ ನೀಡಿ, ಕತ್ತು ಹಿಸುಕಿ ಕೊಲೆಗೆ ಯತ್ನಿಸಿದ್ದಾರೆ' ಎಂದು ಅವರು ಆರೋಪಿಸಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದ

ಕಿಶೋರ್, ಅವರ ತಂದೆ ಪುಟ್ಟಚನ್ನಪ್ಪ, ತಾಯಿ ಸರಸ್ವತಮ್ಮ, ಸಹೋದರ ಪಿ.ಚಂದನ್ ವಿರುದ್ಧ ಸೋಮವಾರ ಎಫ್‌ಐಆರ್ ದಾಖಲಾಗಿತ್ತು.

'ಕಿಶೋರ್ ಅವರು ಮಾರ್ಚ್ 24ರಿಂದ ನಾಲ್ಕು ದಿನಗಳವರೆಗೆ ರಜೆಯಲ್ಲಿ ತೆರಳಿದ್ದಾರೆ. ವರದಕ್ಷಿಣೆ ಸಲುವಾಗಿ ಪತ್ನಿಗೆ ಕಿರುಕುಳ ನೀಡಿದ ಕುರಿತು ಅವರ ವಿರುದ್ಧ ಬೆಂಗಳೂರಿನಲ್ಲಿ ಪ್ರಕರಣ ದಾಖಲಾಗಿದೆ ಎಂದು ಗೊತ್ತಾಗಿದೆ. ಅವರು ಕರ್ತವ್ಯಕ್ಕೆ ಮರಳಿದ ಬಳಿಕ ಮುಂದಿನ ಕ್ರಮದ ಬಗ್ಗೆ ನಿರ್ಧರಿಸಲಾಗುತ್ತದೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಎನ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಏಡಿ ಮಾರಾಟ

ಬೆಂಗಳೂರಿನ ಮಾಗಡಿ ಮುಖ್ಯ ರಸ್ತೆಯಲ್ಲಿ ಮಹಿಳೆಯೊಬ್ಬರು ಬುಧವಾರ ಏಡಿಗಳನ್ನು ಮಾರಾಟ ಮಾಡುತ್ತಿದ್ದ ದೃಶ್ಯ ಕಂಡುಬಂತು ಚಿತ್ರ/ಎಂ.ಎಸ್.ಮಂಜುನಾಥ್

ಮಧುಬಲೆ: 'ಸುಪ್ರೀಂ'ನಲ್ಲಿ ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸರ್ಕಾರದ ಹಿರಿಯ ಸಚಿವರು ಹಾಗೂ ನ್ಯಾಯಾಧೀಶರು ಸೇರಿದಂತೆ ಹಲವು ಮಂದಿಯನ್ನು ಹನಿ ಟ್ರ್ಯಾಪ್ (ಮಧುಬಲೆ) ಮಾಡಿರುವ ಪ್ರಕರಣದ ತನಿಖೆಗೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

ಜಾರ್ಖಂಡ್‌ನ ಬಿನಯ್ ಕುಮಾರ್ ಸಿಂಗ್ ಪರವಾಗಿ ವಕೀಲ ಬರುಣ್ ಕುಮಾರ್ ಸಿಂಗ್ ಸಲ್ಲಿಸಿದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್, ಸಂಜಯ್ ಕರೋಲ್ ಮತ್ತು ಸಂದೀಪ್ ಮೆಹ್ತಾ ಅವರ ತ್ರಿಸದಸ್ಯ ಪೀಠವು ವಜಾಗೊಳಿಸಿದೆ.

ಜತೆಗೆ, ಅರ್ಜಿದಾರರನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ. 'ನೀವು ಜಾರ್ಖಂಡ್‌ನವರು. ಕರ್ನಾಟಕದ ವಿದ್ಯಮಾನಕ್ಕೂ ನಿಮಗೂ ಏನು ಸಂಬಂಧ? ನೀವ್ಯಾಕೆ ತಲೆ ಕೆಡಿಸಿಕೊಳ್ಳುತ್ತೀರಿ. ರಾಜಕೀಯದ ನಾನ್ಸೆನ್ಸ್ ವಿಷಯಗಳನ್ನು ವಿಚಾರಣೆ ಮಾಡಲು ನ್ಯಾಯಾಲಯಕ್ಕೆ ಸಮಯ ಇಲ್ಲ. ಇಂತಹ ಪಿಐಎಲ್‌ಗಳನ್ನು ಮತ್ತೊಮ್ಮೆ ಸಲ್ಲಿಸಬೇಡಿ' ಎಂದು ಪೀಠ ಎಚ್ಚರಿಕೆ ನೀಡಿತು.

'ಕರ್ನಾಟಕ ವಿಧಾನಸಭೆಯಲ್ಲೇ ಈ ಬಗ್ಗೆ ಗಂಭೀರ ಆರೋಪ ಮಾಡಲಾಗಿದೆ. ರಾಜ್ಯದ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯೊಬ್ಬರು ನ್ಯಾಯಾಧೀಶರು ಸೇರಿದಂತೆ ಹಲವರನ್ನು ಹನಿ ಟ್ರ್ಯಾಪ್ ಮಾಡಿದ್ದಾರೆ ಎಂಬ ಆರೋಪ ಇದೆ. ಕರ್ನಾಟಕ ಸರ್ಕಾರದ ನಿಯಂತ್ರಣ ಅಥವಾ ಪ್ರಭಾವದಿಂದ ಮುಕ್ತವಾಗಿರುವ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡ ಅಥವಾ ಸಿಬಿಐನಿಂದ ತನಿಖೆ ನಡೆಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಸುಪ್ರೀಂ ಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಸಮಿತಿಯ ಮೂಲಕ ತನಿಖೆಯ ಮೇಲ್ವಿಚಾರಣೆ ನಡೆಸಬೇಕು. ಈ ಪ್ರಕರಣದಿಂದ ನೇರವಾಗಿ ಅಥವಾ ಪರೋಕ್ಷವಾಗಿ ಪ್ರಯೋಜನ ಪಡೆದ ಎಲ್ಲ ಪ್ರಾಧಿಕಾರಗಳು/ವ್ಯಕ್ತಿಗಳ ಪಾತ್ರದ ಬಗ್ಗೆಯೂ ಮೇಲ್ವಿಚಾರಣಾ ಸಮಿತಿಯು ತನಿಖೆ ನಡೆಸಬೇಕು. ತಪ್ಪಿತಸ್ಥರೆಂದು ಕಂಡುಬಂದ ವ್ಯಕ್ತಿಯ ವಿರುದ್ಧ ಮೊಕದ್ದಮೆ ಹೂಡಲು ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಒತ್ತಾಯಿಸಿದ್ದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ 'ಆರೋಹಣ' ಸಂಗೀತ ಮತ್ತು ಸಾಮಾಜಿಕ ಉದ್ದೇಶಕ್ಕಾಗಿ ಧ್ವನಿ ಸಂಸ್ಥೆ ಹಮ್ಮಿಕೊಂಡಿದ್ದ 'ಭಗಿನಿ ಸಾಧನೆಗೆ ಸನ್ಮಾನ' ಕಾರ್ಯಕ್ರಮದಲ್ಲಿ ಉದ್ಯಮಿ ಶ್ರೀವತ್ಸಲ ಕೆ.ಎನ್, ಸೌಂಡ್ ಎಂಜಿನಿಯರ್ ಹೇಮಾ ಸುವರ್ಣ, ರೈತ ಮಹಿಳೆ ಕ್ಯಾಪ್ಸಿಕಂ ಕಮಲಮ್ಮ ಅವರನ್ನು ಸನ್ಮಾನಿಸಲಾಯಿತು. ಎನ್.ಎಂ.ಕೆ.ಆರ್.ವಿ. ಪಿಯು ಕಾಲೇಜಿನ ಪ್ರಾಂಶುಪಾಲರಾದ ಎಸ್.ಎನ್. ಶೀಲಾ ಪ್ರಕಾಶ್, ಚೇತನ ಎಂ.ಆರ್ ಹಾಗೂ ಆರೋಹಣ ಸಂಸ್ಥೆಯ ಸಂಸ್ಥಾಪಕ ಸುಧೀಂದ್ರ ಇದ್ದರು.

ಗಾಣಿಗರ ಟ್ರಸ್ಟ್‌ಗೆ ಬಜೆಟ್‌ನಲ್ಲಿ ಘೋಷಿಸಿದ್ದ ಅನುದಾನ: ರಾಜ್ಯ ಸರ್ಕಾರಕ್ಕೆ ನಿರ್ದೇಶನ

ಬಾಕಿ ಅನುದಾನ ಬಿಡುಗಡೆಗೆ ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವ ಗಾಣಿಗರ ಸಮುದಾಯ ಚಾರಿಟಬಲ್ ಟ್ರಸ್ಟ್‌ಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದ ₹3.5 ಕೋಟಿ ಅನುದಾನದಲ್ಲಿನ ಬಾಕಿ ₹1.5 ಕೋಟಿ ಮೊತ್ತವನ್ನು ತಿಂಗಳೊಳಗೆ ಬಿಡುಗಡೆಗೆ ಮಾಡಬೇಕು. ಇಲ್ಲವಾದಲ್ಲಿ, ಬಿಡುಗಡೆಗೆ ಬಾಕಿ ಇರುವ ದಿನದಿಂದ ಬಿಡುಗಡೆ ಮಾಡುವ ದಿನದವರೆಗೆ ಶೇ 6ರಷ್ಟು ಬಡ್ಡಿ ಪಾವತಿ ಮಾಡಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಈ ಸಂಬಂಧ ಶ್ರೀ ಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ವ್ಯವಸ್ಥಾಪಕ ಟ್ರಸ್ಟಿಯೂ ಆದ ಪೂರ್ಣಾನಂದಪುರಿ ಸ್ವಾಮೀಜಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ವಿ.ಬಿ.ಸಿದ್ದರಾಮಯ್ಯ ಅವರ ವಾದ ಆಲಿಸಿದ ನ್ಯಾಯಪೀಠ, 'ಹಣ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ, ಹಣಕಾಸು ಮತ್ತು ಹಿಂದುಳಿದ ವರ್ಗಗಳ ಇಲಾಖೆ ಸೂಚನೆ ನೀಡಿದ್ದರೂ ಇನ್ನೂ ಬಿಡುಗಡೆ ಮಾಡದಿರುವುದು ಆಘಾತಕಾರಿ ವಿಚಾರ' ಎಂದು ಕಳವಳ ವ್ಯಕ್ತಪಡಿಸಿದೆ.

ಸಹಕಾರ ಸಂಘ: ಕಾಮನ್ ಪೋರ್ಟಲ್ ರೂಪಿಸಿ

'ರಾಜ್ಯ ಸಹಕಾರ ಕಾಯ್ದೆ ಮತ್ತು ಅದರ ಅಡಿಯಲ್ಲಿ ರಚನೆಯಾಗಿರುವ ಸಂಘಗಳು ನಿಯಮಗಳನ್ನು ಸರಿಯಾಗಿ ಪಾಲನೆ ಮಾಡುತ್ತಿವೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸುವ ನಿಟ್ಟಿನಲ್ಲಿ ಕಾಮನ್ ಪೋರ್ಟಲ್ ರೂಪಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ನಾಗರಭಾವಿಯ ಎಂ.ಆರ್.ರುಕ್ಮಾಂಗದ ಸೇರಿದಂತೆ 13 ಜನರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಆದೇಶ ಪಾಲನೆ ಕುರಿತಂತೆ ನಾಲ್ಕು ವಾರಗಳಲ್ಲಿ ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಬೇಕು' ಎಂದು ರಾಜ್ಯ ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ತಾಕೀತು ಮಾಡಿದೆ.



'ಸಹಕಾರ ಸಂಘಗಳು, ಸಹಕಾರ ಕಾಯ್ದೆ ಮತ್ತು ಅದರ ಅಡಿಯಲ್ಲಿ ರಚಿಸಿರುವ ನಿಯಮಗಳನ್ನು ಪಾಲನೆ ಮಾಡುವ ಬಗ್ಗೆ ಪರಿಶೀಲನೆ ನಡೆಸಲು ಸಹಕಾರ ಇಲಾಖೆ ಪ್ರಧಾನ ಕಾರ್ಯದರ್ಶಿ, ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ಸ್ ಮತ್ತು ಇ-ಆಡಳಿತ ಇಲಾಖೆ ಪ್ರಧಾನ ಕಾರ್ಯದರ್ಶಿ ಒಂದುಗೂಡಿ ಕಾಮನ್ ಪೋರ್ಟಲ್ ರೂಪಿಸಲು ಇದು ಸಕಾಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಈ ಪೋರ್ಟಲ್‌ನಲ್ಲಿ ಎಲ್ಲ ಸಹಕಾರಿ ಸಂಘಗಳ ದತ್ತಾಂಶವನ್ನು ಅಪ್‌ಲೋಡ್ ಮಾಡಬೇಕು. ಸಹಕಾರ ಸಂಘಗಳು ಕಾಯ್ದೆ ಮತ್ತು ನಿಯಮಗಳಡಿ ಎಲ್ಲಾ ಅಗತ್ಯ ಮಾಹಿತಿಗಳನ್ನು ಇದು ಒಳಗೊಂಡಿರಬೇಕು. ಪೋರ್ಟಲ್ ಪ್ರವೇಶಿಸುವ ಅವಕಾಶ ಮತ್ತು ಅಧಿಕಾರ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಅವರಿಗೆ ಮಾತ್ರವೇ ಇರಬೇಕು. ಅವರು ಎಲ್ಲಾ ಸಂಘಗಳ ಮೇಲೆ ನಿಗಾ ಇಡಲು ಇದು ಸಹಕಾರಿಯಾಗಲಿದೆ' ಎಂದು ನ್ಯಾಯಪೀಠ ಹೇಳಿದೆ.

ವಿಜಯನಗರದ ವಿಶ್ವಪ್ರಜ್ಞ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್ ಅರ್ಜಿದಾರರನ್ನು ಅನರ್ಹ ಮತದಾರರೆಂದು ಪ್ರಕಟಿಸಿತ್ತು. ಸಂಘದ ಈ ಆದೇಶವನ್ನು ನ್ಯಾಯಪೀಠ ರದ್ದುಗೊಳಿಸಿದ್ದು, 'ಅರ್ಜಿದಾರರು ಈಗಾಗಲೇ ಮತದಾನ ಮಾಡಿರುವ ಕಾರಣ ಪ್ರತಿವಾದಿಗಳು ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಬೇಕು' ಎಂದು ಆದೇಶಿಸಿದೆ.

ಕಾಂಗ್ರೆಸ್ ಕಚೇರಿಗೆ ಪಾಲಿಕೆ ಜಾಗ: ಸರ್ಕಾರಕ್ಕೆ ನೋಟಿಸ್

ಹುಬ್ಬಳ್ಳಿ ಮಹಾನಗರ ಪಾಲಿಕೆಗೆ ಸೇರಿದ ಜಾಗವನ್ನು ಧಾರವಾಡ ಜಿಲ್ಲಾ ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಮಂಜೂರು ಮಾಡಿ ಸಚಿವ ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿರುವ ನಿರ್ಣಯವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಸದಸ್ಯರಾದ ಬೀರಪ್ಪ ಹಾಗೂ ಸಂತೋಷ್ ಎಸ್. ಚವಾಣ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಧ್ಯಾನ್ ಚಿನ್ನಪ್ಪ, 'ಮಂಜೂರು ಮಾಡಲಾಗಿರುವ ಜಾಗವು ರೈಲ್ವೆ ಇಲಾಖೆಗೆ ಸೇರಿದ್ದು ಇದನ್ನು ಬಹಳ ವರ್ಷಗಳ ಹಿಂದೆಯೇ ಪಾಲಿಕೆಗೆ ಹಸ್ತಾಂತರ ಮಾಡಲಾಗಿದೆ. ಸದ್ಯ ಈ ಜಾಗವನ್ನು ಕುಡಿಯುವ ನೀರು ಸಂಗ್ರಹಿಸಲು ಮೀಸಲಿಡಲಾಗಿದೆ. ಈ ಜಮೀನನ್ನು ಮಂಜೂರು ಮಾಡಿರುವುದು, ಕರ್ನಾಟಕ ನಗರಸಭೆ ಮತ್ತು ಪಾಲಿಕೆ ಕಾಯ್ದೆ-1976ರ ಕಲಂ 176ಕ್ಕೆ ವಿರುದ್ಧವಾಗಿದೆ' ಎಂದರು.

ನೈರುತ್ಯ ರೈಲ್ವೆ ಪರ ಸಹಾಯಕ ಸಾಲಿಸಿಟರ್ ಜನರಲ್ ಕೆ.ಅರವಿಂದ್ ಕಾಮತ್, 'ಜಾಗದ ವಸ್ತುಸ್ಥಿತಿ ಕುರಿತಂತೆ ಮಾಹಿತಿ ಪಡೆದುಕೊಳ್ಳಲು ಕಾಲಾವಕಾಶ ಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಅಂತೆಯೇ, ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಮುಂದಿನ ವಿಚಾರಣೆವರೆಗೆ ರಾಜ್ಯ ಸರ್ಕಾರ ಈ ವಿಷಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲಿದೆ' ಎಂದು ಭರವಸೆ ನೀಡಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ನಗರಾಭಿವೃದ್ಧಿ ಇಲಾಖೆ, ನೈರುತ್ಯ ರೈಲ್ವೆ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಧಾರವಾಡ ಜಿಲ್ಲಾ ಘಟಕಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಏಪ್ರಿಲ್ 21ಕ್ಕೆ ಮುಂದೂಡಿತು.

'ಎಎಬಿ ನಿರ್ಣಯ ಅಪರಿಪೂರ್ಣ'

'ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ಮನೆಯಲ್ಲಿ ಕೋಟ್ಯಂತರ ಮೊತ್ತದ ನಗದು ದೊರೆತಿತ್ತು ಎನ್ನಲಾದ ಪ್ರಕರಣದ ಹಿನ್ನೆಲೆಯಲ್ಲಿ ಕರೆಯಲಾಗಿದ್ದ ಬೆಂಗಳೂರು ವಕೀಲರ ಸಂಘದ (ಎಎಬಿ) ಸರ್ವಸದಸ್ಯರ ವಿಶೇಷ ತುರ್ತು ಸಭೆಯ ನಿರ್ಣಯಗಳು ಪರಿಪೂರ್ಣ ವಾಗಿಲ್ಲ' ಎಂದು ಭಾರತೀಯ ವಕೀಲರ ಪರಿಷತ್‌ನ ಸಹ ಅಧ್ಯಕ್ಷ ಸದಾಶಿವ ರೆಡ್ಡಿ ಮತ್ತು ಎಎಬಿ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ್ ಸೇರಿದಂತೆ ಹಲವು ಹಿರಿಯ ವಕೀಲರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಕುರಿತಂತೆ ಹಲವು ವಕೀಲರು ಹಾಗೂ ಸಂಘದ ಪದಾಧಿಕಾರಿಗಳು ಸಹಿ ಮಾಡಿ ಬುಧವಾರ ಬಿಡುಗಡೆ ಮಾಡಿರುವ ನಾಲ್ಕು ಪುಟಗಳ ಹೇಳಿಕೆಯಲ್ಲಿ; 'ಠರಾವಿನ ಅನುಸಾರ ಸಭೆಯಲ್ಲಿ ವ್ಯಕ್ತಪಡಿಸಲಾದ ಅಭಿಪ್ರಾಯ ಮತ್ತು ಒಮ್ಮತದ ನಿರ್ಧಾರಗಳನ್ನು 2025ರ ಮಾರ್ಚ್ 24ರಂದು ಹೊರಡಿಸಲಾಗಿರುವ ನಿರ್ಣಯದಲ್ಲಿ ಕಾಣಿಸಿಲ್ಲ. ಹಾಲಿ ಅಧ್ಯಕ್ಷರು ಕೂಡಲೇ ಬಿಡುಗಡೆ ಮಾಡಿರುವ ಈ ನಿರ್ಣಯಗಳನ್ನು ವಾಪಸು ಪಡೆದು ಪುನರ್ ದಾಖಲಿಸಬೇಕು' ಎಂದು ಒತ್ತಾಯಿಸಲಾಗಿದೆ.

'ಅಂಬೇಡ್ಕರ್ ಪ್ರತಿಮೆ ಶೀಘ್ರ'

ಯಲಹಂಕ: 'ಮಿನಿ ವಿಧಾನಸೌಧದ ಮುಂಭಾಗದಲ್ಲಿ ಸ್ಥಾಪಿಸಿರುವ ಅಂಬೇಡ್ಕರ್ ಪ್ರತಿಮೆಯನ್ನು ಶೀಘ್ರದಲ್ಲೇ ಅನಾವರಣ ಮಾಡಲಾಗುವುದು' ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ಅಟ್ಟೂರು ಬಡಾವಣೆಯಲ್ಲಿ ಆಯೋಜಿಸಿದ್ದ ಯಲಹಂಕ ಕ್ಷೇತ್ರದ ಬಿಜೆಪಿ ಎಸ್.ಸಿ ಮೋರ್ಚಾ ಗ್ರಾಮಾಂತರ ಮಂಡಲದ ನೂತನ ಪದಾಧಿಕಾರಿಗಳ ಪರಿಚಯ ಹಾಗೂ ಪದಗ್ರಹಣ ಸಮಾಗಮ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಅಂಬೇಡ್ಕರ್ ಪ್ರತಿಮೆ ಸಿದ್ಧಪಡಿಸಿ ಎರಡು ವರ್ಷಗಳು ಕಳೆದಿದೆ. ಅನಾವರಣಗೊಳಿಸಲು ಮುಖ್ಯಮಂತ್ರಿ ಹಾಗೂ ಸಮಾಜಕಲ್ಯಾಣ ಸಚಿವರಿಗೆ ಮನವಿ ಮಾಡಲಾಗಿದೆ. ಸದನದಲ್ಲಿಯೂ ಈ ಬಗ್ಗೆ ಪ್ರಸ್ತಾಪಿಸಲಾಗಿದೆ. ಈಗ ಮತ್ತೊಮ್ಮೆ ಮನವಿ ಮಾಡಲಾಗುವುದು. ಅವರು ದಿನಾಂಕ ನೀಡಿದ ಕೂಡಲೇ ಅನಾವರಣ ಮಾಡಲಾಗುವುದು' ಎಂದರು.

ಅಡುಗೆ ಅನಿಲ ಸೋರಿಕೆ ಅವಘಡ ದಂಪತಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಲಕೇಶಿನಗರದ ಡೇವಿಸ್ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್‌ವೊಂದರ ಫ್ಲ್ಯಾಟ್‌ನಲ್ಲಿ ಅಡುಗೆ ಅನಿಲ ಸೋರಿಕೆಯಾಗಿ ಸಂಭವಿಸಿದ ಅಗ್ನಿ ಅವಘಡದಲ್ಲಿ ದಂಪತಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ವಿಶ್ರಾಂ ಅಪಾರ್ಟ್‌ಮೆಂಟ್‌ನ ನಿವಾಸಿಗಳಾದ ಸುಶೀಲಾ(42) ಮತ್ತು ಅವರ ಪತಿ ಸಿದ್ದೇಶ್(45) ಗಾಯಗೊಂಡವರು.

ದಂಪತಿಗೆ ಶೇ 75ರಷ್ಟು ಸುಟ್ಟ ಗಾಯಗಳಾಗಿದ್ದು, ವಿಕ್ಟೋರಿಯಾ ಆಸ್ಪತ್ರೆಯ ಸುಟ್ಟ ಗಾಯಗಳ ವಿಭಾಗದಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿತ್ತು. ನಂತರ ಹೆಚ್ಚಿನಚಿಕಿತ್ಸೆಗೆ ಸೇಂಟ್ ಜಾನ್ಸ್ ಆಸ್ಪತ್ರೆಗೆ ಸೇರಿಸಲಾಗಿದೆ ಎನ್ನಲಾಗಿದೆ.

10 ವರ್ಷದಿಂದ ವಿಶ್ರಾಂ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿದ್ದ ದಂಪತಿ, ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಬುಧವಾರ ಮುಂಜಾನೆ ಸುಶೀಲಾ ಅವರು ಎಚ್ಚರಗೊಂಡು ಅಡುಗೆ ಮನೆಗೆ ತೆರಳಿ ಟೀ ತಯಾರಿಸಲು ಗ್ಯಾಸ್ ಸ್ಟೌ ಹಚ್ಚಲು ಮುಂದಾಗಿದ್ದಾರೆ. ಆಗ ಬೆಂಕಿ ಹೊತ್ತಿಕೊಂಡಿದೆ.

ಫ್ಲ್ಯಾಟ್‌ನಲ್ಲಿ ಬೆಂಕಿ ಉರಿಯುತ್ತಿರುವುದನ್ನು ಗಮನಿಸಿದ ನಿವಾಸಿಗಳು, ಅಗ್ನಿಶಾಮಕ ನಿಯಂತ್ರಣ ಕೊಠಡಿ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಅಗ್ನಿ ಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿ ಗಾಯಗೊಂಡಿದ್ದ ದಂಪತಿಯನ್ನು ಆಸ್ಪತ್ರೆಗೆ ಸೇರಿಸಿದರು.

ಕೋವಿಡ್ ಅಕ್ರಮ: ನ್ಯಾ. ಕುನ್ಹಾ ವರದಿ ಪರಿಶೀಲನೆಗೆ ಮತ್ತೊಂದು ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆ ವೇಳೆ ಆರೋಗ್ಯ ಇಲಾಖೆಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿಕುನ್ಹಾ ನೇತೃತ್ವದ ಆಯೋಗದ ವರದಿಯ ಪರಾಮರ್ಶೆ ನಡೆಸುತ್ತಿರುವ ಸಂಪುಟ ಉಪಸಮಿತಿಯು, ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಒಳಗೊಂಡ ತಜ್ಞರ ಮತ್ತೊಂದು ಸಮಿತಿಯನ್ನು ರಚಿಸಲು ತೀರ್ಮಾನಿಸಿದೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಬುಧವಾರ ಸಂಪುಟ ಉಪಸಮಿತಿಯ ಸಭೆ ನಡೆಯಿತು.

ವರದಿಯು ಅತ್ಯಂತ ವಿಸ್ತೃತವಾಗಿರುವುದರಿಂದ ಪ್ರತಿ ದಿನವೂ ಈ ವರದಿಯನ್ನು ಅಧ್ಯಯನ ಮಾಡುವುದು ಕಷ್ಟ. ಅದಕ್ಕಾಗಿ ಮತ್ತೊಂದು ಸಮಿತಿ ರಚನೆ ಮಾಡುವ ಅಗತ್ಯವಿದೆ ಎಂಬ ಸಲಹೆ ಸಭೆಯಲ್ಲಿ ವ್ಯಕ್ತವಾಯಿತು. ಅದಕ್ಕೆ ಉಪಸಮಿತಿ ಒಪ್ಪಿಗೆ ನೀಡಿತು ಎಂದು ಮೂಲಗಳು ತಿಳಿಸಿವೆ.

ಹೊಸ ಸಮಿತಿಯಲ್ಲಿ ಕೋವಿಡ್ ಸಂದರ್ಭದಲ್ಲಿ ಕಾರ್ಯನಿರ್ವಹಿಸಿದ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಸೇರಿಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು. ನಿವೃತ್ತರಾಗಿರುವ ಐಎಎಸ್ ಅಧಿಕಾರಿ ವಿ.ಮಂಜುಳಾ ಮತ್ತು ಐಪಿಎಸ್ ಅಧಿಕಾರಿ ಎನ್.ಎಸ್. ಮೇಘರಿಕ್ ಅವರ ಹೆಸರುಗಳನ್ನು ಪ್ರಸ್ತಾಪಿಸಲಾಯಿತು. ಈ ಕುರಿತು ಅಂತಿಮ ತೀರ್ಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತೆಗೆದುಕೊಳ್ಳಲಿದ್ದಾರೆ ಎಂದು ಮೂಲಗಳು ಹೇಳಿವೆ.

'ವರದಿಯಲ್ಲಿ ಉಲ್ಲೇಖವಾಗಿರುವಂತೆ ಎಲ್ಲೆಲ್ಲಿ ಲೋಪಗಳಾಗಿವೆಯೋ ಅಲ್ಲಿಗೆ ಉಪಸಮಿತಿ ಸದಸ್ಯರು ಭೇಟಿ ನೀಡಿ ಔಷಧ ಖರೀದಿ ಮತ್ತು ಉಪಕರಣಗಳನ್ನು ಪರಿಶೀಲನೆ ನಡೆಸಲಿದ್ದಾರೆ. ಸಮಿತಿ 2 ರಿಂದ 3 ಜಿಲ್ಲೆಗಳಿಗೆ ಭೇಟಿ ನೀಡಲಿದೆ' ಎಂದು ಡಿ.ಕೆ.ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ಅಧಿಕಾರಿಗಳ ಮೇಲೆ ಒತ್ತಡ: ಕೋವಿಡ್ ಹಗರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸದಂತೆ ಮುಖ್ಯಮಂತ್ರಿ ಕಚೇರಿಯೂ ಸೇರಿ ವಿವಿಧ ಕಡೆಗಳಿಂದ ಒತ್ತಡ ಬರುತ್ತಿವೆ. ಕಿದ್ವಾಯಿ ಆಸ್ಪತ್ರೆಯ ಮಾಜಿ ನಿರ್ದೇಶಕರೊಬ್ಬರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಹೋದಾಗ ದೂರು ದಾಖಲಿಸದಂತೆ ಶಾಸಕರೊಬ್ಬರು ಮತ್ತು ಮುಖ್ಯಮಂತ್ರಿಯವರ ಸಲಹೆಗಾರರೊಬ್ಬರಿಂದ ಕರೆ ಬಂದಿತ್ತು ಎಂದು ಅಧಿಕಾರಿಗಳು ಉಪಸಮಿತಿ ಸಭೆಯ ಗಮನಕ್ಕೆ ತಂದರು ಎಂದು ಮೂಲಗಳು ಹೇಳಿವೆ.

'ಕುನ್ಹಾ ಅವರಿಗೆ ಮರು ತನಿಖೆ ಜವಾಬ್ದಾರಿ'

ಬೆಂಗಳೂರು: 'ಕೋವಿಡ್ ಸಮಯದಲ್ಲಿ ನಡೆದಿದ್ದ ಚಾಮರಾಜನಗರ ಆಕ್ಸಿಜನ್ ದುರಂತದ ಬಗ್ಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎ. ಪಾಟೀಲ್ ಏಕಸದಸ್ಯ ನ್ಯಾಯಾಂಗ ಆಯೋಗ ನೀಡಿದ್ದ ವರದಿಯನ್ನು ತಿರಸ್ಕರಿಸಿ ನ್ಯಾ.ಕುನ್ಹಾ ಅವರಿಗೆ ಮರು ತನಿಖೆಯ ಜವಾಬ್ದಾರಿ ನೀಡಲಾಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸಚಿವ ಸಂಪುಟ ಉಪ ಸಮಿತಿ ಸಭೆ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಚಾಮರಾಜನಗರ ದುರಂತ ನಡೆದ ವೇಳೆ ನಾನು ಹಾಗೂ ಸಿದ್ದರಾಮಯ್ಯ ಅವರು ಸ್ಥಳಕ್ಕೆ ತೆರಳಿ ಮಾಹಿತಿ ಕಲೆ ಹಾಕಿದ್ದೆವು. ಮೃತರ ಕುಟುಂಬ ವರ್ಗದವರನ್ನು ಸಹ ಭೇಟಿ ಮಾಡಲಾಗಿತ್ತು. ಈ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದಾಗ ಅವರು ಯಾರ್‍ಯಾರ ತಪ್ಪಿದೆ ಎಂದು ಹೇಳಿದ್ದರು' ಎಂದರು.

'ಸುಮಾರು 29 ಜನ ಅಧಿಕಾರಿಗಳು ಸಮಿತಿ ನೀಡಿರುವ ನೋಟಿಸ್‌ಗೆ ಉತ್ತರ ನೀಡಿಲ್ಲ. ಅವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದು. ಕುನ್ಹಾ ಅವರು ವರದಿಯಲ್ಲಿ ಅನೇಕ ರಾಜಕಾರಣಿಗಳ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಇದರ ಬಗ್ಗೆ ನಮಗೂ ಅರಿವಿದೆ. ಸೂಕ್ತಕಾಲದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಹೇಳಿದರು.

ಯತ್ನಾಳ ಉಚ್ಚಾಟನೆ ಹಿಂಪಡೆಯಲು ಮಠಾಧೀಶರ ಆಗ್ರಹ

ಧಾರವಾಡ: 'ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಬಿಜೆಪಿಯಿಂದ ಉಚ್ಚಾಟಿಸುವ ನಿರ್ಣಯ ಹಿಂಪಡೆಯಬೇಕು. ಇಲ್ಲದಿದ್ದರೆ, ಬಿಜೆಪಿಯಲ್ಲಿನ ಲಿಂಗಾಯತ ಪಂಚಮಸಾಲಿ ಸಮುದಾಯದವರು ಎಲ್ಲರೂ ಪಕ್ಷಕ್ಕೆ ರಾಜೀನಾಮೆ ನೀಡುವಂತೆ ಕರೆ ನೀಡಲಾಗುವುದು' ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

'ಪಕ್ಷದಲ್ಲಿ ಕುಟುಂಬ ರಾಜಕಾರಣ ಮತ್ತು ಭ್ರಷ್ಟಾಚಾರ ಮಾಡವಂತಹ ವ್ಯಕ್ತಿಯ ವಿರುದ್ಧ ಮಾತನಾಡುವುದು ತಪ್ಪೇ? ಬಿ.ಎಸ್.ಯಡಿಯೂರಪ್ಪ ಅವರು ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಕೊಟ್ಟ ಮಾತಿನಂತೆ ಮೀಸಲಾತಿ ಕಲ್ಪಿಸಲಿಲ್ಲ ಎಂದು ಸಮುದಾಯದವರು ಅಸಮಾಧಾನಗೊಂಡಿದ್ದರು. ಯತ್ನಾಳ ಅವರು ನಾಯಕನಾಗಿ ಬೆಳೆಯುವುದನ್ನು ಸಹಿಸದ ಯಡಿಯೂರಪ್ಪ ಅವರ ಮಾತನ್ನು ಕೇಳಿ ಉಚ್ಚಾಟಿಲಾಗಿದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಯತ್ನಾಳ ಅವರನ್ನು ಉಚ್ಚಾಟಿಸಿರುವುದು ಬಿಜೆಪಿಗೆ ಹಿನ್ನಡೆ ಆಗಲಿದೆ. ಅವರು ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ಪಕ್ಷದ ಹೊರಗಿದ್ದು ಹೋರಾಟ ಮಾಡುವ ಶಕ್ತಿ ಅವರಿಗಿದೆ. ಪಂಚಮ ಸಾಲಿ ಸಮುದಾಯ ಅವರ ಜತೆಗಿದೆ. ಅವರು ಧೃತಿಗಡಬೇಕಿಲ್ಲ. ಅವರು ತೆಗೆದುಕೊಳ್ಳುವ ತೀರ್ಮಾನವನ್ನು ಬೆಂಬಲಿಸುತ್ತೇವೆ' ಎಂದರು.

ಸಭೆ ಇಂದು: ಮಾರ್ಚ್ 27ರಂದು ಮಧ್ಯಾಹ್ನ 1 ಗಂಟೆಗೆ ಬೆಳಗಾವಿಯ ಗಾಂಧೀ ಗಾಂಧಿ ಭವನದಲ್ಲಿ ಸಮುದಾಯದಪದಾಧಿಕಾರಿಗಳು ತುರ್ತು ಸಭೆ ನಡೆಸಿ, ಹೋರಾಟದ ಕುರಿತು ನಿರ್ಧರಿಸಲಾಗುವುದು ಎಂದರು.

ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆ

'ವೈದ್ಯಕೀಯ ಕ್ಷೇತ್ರ: ಕನ್ನಡ ಬಳಕೆ ಇಳಿಮುಖ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ ಕ್ಷೇತ್ರದಲ್ಲಿ ಕನ್ನಡ ಭಾಷಾ ಬಳಕೆ ಇಳಿಮುಖವಾಗುತ್ತಿದ್ದು, ವಿವಿಧ ಭಾಷೆಗಳಲ್ಲಿರುವ ಪ್ರಮುಖ ವೈದ್ಯಕೀಯ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಮೂಲಕ ಈ ಕ್ಷೇತ್ರದಲ್ಲಿ ಕನ್ನಡ ಉಳಿಸಿ ಬೆಳೆಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆ ಸಭೆಯನ್ನು ಬುಧವಾರ ನಡೆಸಿದ ಅವರು, 'ವೈದ್ಯಕೀಯ ಕ್ಷೇತ್ರದಲ್ಲಿ ಕನ್ನಡ ಜ್ಞಾನವನ್ನು ಹೆಚ್ಚಿಸಬೇಕಿದೆ. ವಿಶೇಷವಾಗಿ ಕ್ಯಾನ್ಸರ್ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿಶ್ವದ ಪ್ರಮುಖ ಪುಸ್ತಕಗಳನ್ನು ಅನುವಾದಿಸುವ ಕಾರ್ಯವನ್ನು ಸಂಸ್ಥೆ ಕೈಗೊಂಡಲ್ಲಿ,

ಸಭೆಯಲ್ಲಿ ಪುರುಷೋತ್ತಮ ಬಿಳಿಮಲೆ ಮಾತನಾಡಿದರು. ಸಂತೋಷ ಹಾನಗಲ್ಲ, ವಿ.ಪಿ.ನಿರಂಜನಾರಾಧ್ಯ, ಸಿ.ಎ.ಕಿಶೋರ್ ಉಪಸ್ಥಿತರಿದ್ದರು

ಅದಕ್ಕೆ ಪ್ರಾಧಿಕಾರ ಬೆಂಬಲ ಸೂಚಿಸಲಿದೆ.ವೈದ್ಯರು ತಾವು ಬರೆಯುವ ಔಷಧ ಚೀಟಿಗಳಲ್ಲಿ ಕನಿಷ್ಠ ರೋಗಿಯ ಹೆಸರನ್ನು ಕನ್ನಡದಲ್ಲಿ ಬರೆದರೆ, ಅಲ್ಲಿಂದಲೇ ಕನ್ನಡ ಸೇವೆ ಪ್ರಾರಂಭ ವಾಗುತ್ತದೆ' ಎಂದರು.

'ಕಿದ್ವಾಯಿ ಸಂಸ್ಥೆಯಲ್ಲಿ ದಾಖಲಾಗುವ ಹಾಗೂ ಸುದೀರ್ಘ ಅವಧಿಗೆ ಚಿಕಿತ್ಸೆ ಪಡೆಯುವ ಕ್ಯಾನ್ಸರ್ ಪೀಡಿತ ಮಕ್ಕಳು ಶಾಲಾ ಚಟುವಟಿಕೆಗಳಿಂದ ದೂರ ಉಳಿಯುವ ಕಾರಣ, ಇಂತಹ ಮಕ್ಕಳ ಸಂವಹನ ಶಕ್ತಿಯನ್ನು ವೃದ್ಧಿಸಲು ಕಲಿಕೆಯ ಅಗತ್ಯತೆಯಿದೆ. ಈ ಬಗ್ಗೆ ಶಿಕ್ಷಣ ಇಲಾಖೆಯೊಂದಿಗೆ ಚರ್ಚೆ ನಡೆಸಿ, ಆಸ್ಪತ್ರೆಯ ಆವರಣದಲ್ಲಿ ಉತ್ತಮ ಗುಣಮಟ್ಟದ ವಿಶೇಷ ಪಠ್ಯಕ್ರಮವುಳ್ಳ ಶಾಲೆ ತೆರೆಯಲು ಸೂಚನೆ ನೀಡಲಾಗುವುದು' ಎಂದು ಹೇಳಿದರು.

ಸಂಸ್ಥೆಯ ಆವರಣದಲ್ಲಿರುವ ನಾಮಫಲಕಗಳಲ್ಲಿ ಕನ್ನಡ ಭಾಷೆಗೆ ಶೇ 60ರಷ್ಟು ಪ್ರಾತಿನಿಧ್ಯ ನೀಡಬೇಕೆಂದು ಸೂಚಿಸಿದ ಅವರು, 'ಸಂಸ್ಥೆಯ ಕಟ್ಟಡ ಸಂಕೀರ್ಣಗಳು, ರಸ್ತೆಗಳಿಗೆ ನಾಡಿನ ಖ್ಯಾತ ವೈದ್ಯರು, ಸಾಹಿತಿಗಳ ಹೆಸರುಗಳನ್ನು ಇಡಬೇಕು. ಇತ್ತೀಚೆಗಷ್ಟೇ ಕ್ಯಾನ್ಸರ್ ತಜ್ಞೆ ಡಾ.ವಿಜಯಲಕ್ಷ್ಮೀ ದೇಶಮಾನೆ ಅವರು 'ಪದ್ಮಶ್ರೀ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ. ಸಂಸ್ಥೆಯ ಯಾವುದಾದರೂ ಪ್ರಮುಖ ಸಂಕೀರ್ಣಕ್ಕೆ ಅವರ ಹೆಸರನ್ನು ಇಡಬಹುದಾಗಿದೆ' ಎಂದು ಸಲಹೆ ನೀಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ವಿ.ಪಿ.ನಿರಂಜನಾರಾಧ್ಯ, ಸಿ.ಎ.ಕಿಶೋರ್, ಕಾರ್ಯದರ್ಶಿ ಸಂತೋಷ ಹಾನಗಲ್ಲ, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಟಿ.ಎಸ್. ಫಣಿಕುಮಾರ್, ಕಿದ್ವಾಯಿ ಸಂಸ್ಥೆಯ ನಿರ್ದೇಶಕ ಡಾ. ನವೀನ್ ಟಿ. ಹಾಗೂ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರಚಲಿತ ವಿದ್ಯಮಾನಗಳು

‘ಜರ್ಮನ್‌ವಾಚ್ ವರದಿ’

- ಕಳೆದ ಮೂರು ದಶಕಗಳಲ್ಲಿ ಭಾರತ ಹವಾಮಾನ ವೈಪರೀತ್ಯದಿಂದ ತೀವ್ರ ಪರಿಣಾಮಗಳನ್ನು ಎದುರಿಸಿದೆ ಎಂದು ‘ಜರ್ಮನ್‌ವಾಚ್‌ನ ವರದಿ’ ಉಲ್ಲೇಖಿಸಿದೆ.
- ವರದಿಯ ಪ್ರಕಾರ, 1993 ಮತ್ತು 2022ರ ನಡುವೆ ಭಾರತವು ಹವಾಮಾನ ವೈಪರೀತ್ಯದಿಂದಾಗಿ ಜಾಗತಿಕವಾಗಿ ಆರನೇ ಅತಿ ಹೆಚ್ಚು ಪರಿಣಾಮ ಅನುಭವಿಸಿದ ದೇಶವಾಗಿದೆ. ವರದಿಯನ್ವಯ ಈ ಅವಧಿಯಲ್ಲಿ ಭಾರತದಲ್ಲಿ 80,000 ಸಾವುಗಳು ಮತ್ತು ಸುಮಾರು 180 ಬಿಲಿಯನ್ ಡಾಲರ್ ಆರ್ಥಿಕ ನಷ್ಟಗಳು ಉಂಟಾಗಿವೆ.



- 1993 ರಿಂದ 2022 ರವರೆಗೆ ಭಾರತವು 400ಕ್ಕೂ ಹೆಚ್ಚು ಹವಾಮಾನ ವೈಪರೀತ್ಯ ಅನುಭವಿಸಿದೆ. ಇವುಗಳಲ್ಲಿ ವಿನಾಶಕಾರಿ ಪ್ರವಾಹ, ಚಂಡಮಾರುತ ಮತ್ತು ಶಾಖದ ಅಲೆಗಳು ಸೇರಿವೆ.
- ಗಮನಾರ್ಹ ಘಟನೆಗಳಲ್ಲಿ 1998ರಲ್ಲಿ ಗುಜರಾತ್ ಚಂಡಮಾರುತ ಮತ್ತು 1999ರಲ್ಲಿ ಒಡಿಶಾ ಚಂಡಮಾರುತ ಸೇರಿವೆ. ಭಾರತದಲ್ಲಿ ಬಿರುಗಾಳಿಗಳು ಶೇ 56ರಷ್ಟು ಆರ್ಥಿಕ ನಷ್ಟಕ್ಕೆ ಕಾರಣವಾಗಿದ್ದರೆ, ಪ್ರವಾಹಗಳು ಶೇ 32ರಷ್ಟು ನಷ್ಟಕ್ಕೆ ಕಾರಣವಾಗಿವೆ.
- ಹವಾಮಾನ ವೈಪರೀತ್ಯದಿಂದ 2070ರ ವೇಳೆಗೆ ಭಾರತ ಶೇ 24.7ರಷ್ಟು ಸಂಭಾವ್ಯ GDP ನಷ್ಟವನ್ನು ಎದುರಿಸಬಹುದು ಎಂದು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಅಂದಾಜಿಸಿದೆ.
- 1993 ರಿಂದ 2022ರವರೆಗೆ ಜಾಗತಿಕವಾಗಿ, 9,400ಕ್ಕೂ ಹೆಚ್ಚು ಹವಾಮಾನ ವೈಪರೀತ್ಯಗಳು ಸುಮಾರು 7,65,000 ಸಾವುಗಳಿಗೆ ಕಾರಣವಾಗಿವೆ ಮತ್ತು ಸುಮಾರು 4.2 ಟ್ರಿಲಿಯನ್ ಡಾಲರ್‌ಗಳಷ್ಟು ನೇರ ನಷ್ಟವನ್ನುಂಟು ಮಾಡಿವೆ ಎಂದು ವರದಿ ಹೇಳಿದೆ.
- ಡೊಮಿನಿಕಾ, ಚೀನಾ ಮತ್ತು ಹೊಂಡುರಾಸ್ ದೇಶಗಳು ಸೇರಿದಂತೆ ಜಾಗತಿಕ ದಕ್ಷಿಣದ ರಾಷ್ಟ್ರಗಳ ಮೇಲೆ ಹವಾಮಾನ ವೈಪರೀತ್ಯಗಳು ಹೆಚ್ಚಿನ ಪರಿಣಾಮ ಬೀರಿವೆ ಎಂದು ವರದಿ ಬಹಿರಂಗಪಡಿಸಿದೆ.
- ಹವಾಮಾನ ವೈಪರೀತ್ಯಗಳನ್ನು ಸಶಸ್ತ್ರ ಸಂಘರ್ಷದ ನಂತರದ ಎರಡನೇ ಅತೀ ದೊಡ್ಡ ಜಾಗತಿಕ ಅಪಾಯಗಳು ಎಂದು ‘ವಿಶ್ವ ಆರ್ಥಿಕ ವೇದಿಕೆ’ ವರ್ಗೀಕರಿಸಿದೆ.
- ಹೆಚ್ಚಿನ ಪ್ರಮಾಣದಲ್ಲಿ ಹಸಿರುಮನೆ ಇಂಧನಗಳನ್ನು ಹೊರಸೂಸುವ ದೇಶಗಳು ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸಲು ದುರ್ಬಲ ರಾಷ್ಟ್ರಗಳಿಗೆ ಬೆಂಬಲವನ್ನು ಹೆಚ್ಚಿಸಬೇಕು ಎಂದು ವರದಿ ಸೂಚಿಸಿದೆ.

ಭಾರತದಲ್ಲಿ ಮರಣದಂಡನೆ

- ಇತ್ತೀಚೆಗೆ ಎರಡು ಕೊಲೆ ಪ್ರಕರಣಗಳಲ್ಲಿ ವ್ಯತಿರಿಕ್ತ ಫಲಿತಾಂಶಗಳನ್ನು ಕಂಡ ನಂತರ ಭಾರತೀಯ ನ್ಯಾಯಾಂಗದ ಮರಣದಂಡನೆ ಅರ್ಜಿಯು ಪರಿಶೀಲನೆಗೆ ಒಳಪಟ್ಟಿದೆ.
- ಜನವರಿ 22, 2025ರಂದು, ವೈದ್ಯಕೀಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ಮತ್ತು ಕೊಲೆ ಮಾಡಿದ್ದಕ್ಕಾಗಿ ಸ್ವಯಂಸೇವಕನೊಬ್ಬ ಜೀವಾವಧಿ ಶಿಕ್ಷೆ ಪಡೆದರೆ, ಮಹಿಳೆ ತನ್ನ ಸಂಗಾತಿಗೆ ವಿಷಪ್ರಾಶನ ಮಾಡಿದ್ದಕ್ಕಾಗಿ ಆಕೆಗೆ ಮರಣದಂಡನೆ ವಿಧಿಸಲಾಯಿತು. ಈ ಪ್ರಕರಣಗಳು ಚರ್ಚೆಗೆ ಕಾರಣವಾಗಿವೆ.
- ‘ಅಪರೂಪದಲ್ಲಿ ಅಪರೂಪ’ ಎಂಬ ಸಿದ್ಧಾಂತವು ಮೊದಲ ಬಾರಿ 1980ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಿಂದ ಹೊರಹೊಮ್ಮಿತು. ಮರಣದಂಡನೆಯನ್ನು ‘ಅಸಾಧಾರಣ’ ಅಥವಾ ‘ಅಪರೂಪದಲ್ಲಿ ಅಪರೂಪ’ ಸಂದರ್ಭಗಳಲ್ಲಿ ಮಾತ್ರ ವಿಧಿಸಬೇಕೆಂದು ಅದು ಷರತ್ತು ವಿಧಿಸುತ್ತದೆ.
- ಆದಾಗ್ಯೂ, ‘ಅಪರೂಪದಲ್ಲಿ ಅಪರೂಪ’ ಪದ ಅಸ್ಪಷ್ಟವಾಗಿ ವ್ಯಾಖ್ಯಾನಿಸಲ್ಪಟ್ಟಿದೆ, ಇದು ನ್ಯಾಯಾಧೀಶರಿಂದ ವೈವಿಧ್ಯಮಯ ವ್ಯಾಖ್ಯಾನಗಳಿಗೆ ಕಾರಣವಾಗುತ್ತದೆ.

ಸುಪ್ರೀಂಕೋರ್ಟ್‌ನ ಪ್ರಮುಖ ಪ್ರಕರಣಗಳು

- ಜಗಮೋಹನ್ ಸಿಂಗ್ v/s ಸ್ಟೇಟ್ ಆಫ್ ಯುಪಿ (1972) ಪ್ರಕರಣದಲ್ಲಿ, ಸುಪ್ರೀಂ ಕೋರ್ಟ್ ಮರಣದಂಡನೆ ಶಿಕ್ಷೆಯ ಸಾಂವಿಧಾನಿಕ ಪ್ರಸ್ತುತತೆಯನ್ನು ಎತ್ತಿಹಿಡಿಯಿತು.
- ನ್ಯಾಯಾಧೀಶರಿಗೆ ಸ್ಪಷ್ಟ ಮಾರ್ಗಸೂಚಿಗಳ ಅನುಪಸ್ಥಿತಿಯನ್ನು ನ್ಯಾಯಾಲಯ ಗುರುತಿಸಿತು, ಇದು ನ್ಯಾಯ ಮತ್ತು ಸಮಾನತೆಯ ಬಗ್ಗೆ ಕಳವಳವನ್ನು ಹುಟ್ಟುಹಾಕಿತು.
- ಬಚನ್ ಸಿಂಗ್ v/s ಪಂಜಾಬ್ ರಾಜ್ಯ (1980) ಪ್ರಕರಣದಲ್ಲಿ, ನ್ಯಾಯಾಲಯವು ‘ಅಪರೂಪದಲ್ಲಿ ಅಪರೂಪದ’ ತತ್ವವನ್ನು ಸ್ಥಾಪಿಸಿತು. ಆದರೆ, ಅದರ ಕಟ್ಟಳೆಗಳನ್ನು ಸ್ಪಷ್ಟಪಡಿಸಲಿಲ್ಲ.
- ಈ ಸಿದ್ಧಾಂತದ ಚೌಕಟ್ಟನ್ನು ನಂತರದ ಮಚ್ಚಿ ಸಿಂಗ್ v/s ಪಂಜಾಬ್ ರಾಜ್ಯ (1983) ಪ್ರಕರಣದಲ್ಲಿ ವಿವರಿಸಲಾಗಿದೆ. ಈ ಪ್ರಕರಣದಲ್ಲಿ ನ್ಯಾಯಾಲಯ ಮರಣದಂಡನೆಯನ್ನು ಸಮರ್ಥಿಸುವ ಐದು ವರ್ಗಗಳನ್ನು ಗುರುತಿಸಿತು, ಅವುಗಳಲ್ಲಿ ಕೊಲೆಯ ವಿಧಾನ, ಉದ್ದೇಶ, ಸಾಮಾಜಿಕವಾಗಿ ಅಸಹ್ಯಕರ ಸ್ವರೂಪ, ಅಪರಾಧದ ಪ್ರಮಾಣ ಮತ್ತು ಬಲಿಪಶುವಿನ ದುರ್ಬಲತೆ ಸೇರಿವೆ.
- ಮಿಥು v/s ಪಂಜಾಬ್ ರಾಜ್ಯ (1983) ಪ್ರಕರಣದಲ್ಲಿ, ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಕೈದಿಗಳಿಗೆ ಕಡ್ಡಾಯ ಮರಣದಂಡನೆ ನಿಬಂಧನೆಯನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತು, ಇದು ಸಾಂವಿಧಾನಿಕ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಪ್ರತಿಪಾದಿಸಿತು. ಈ ನಿರ್ಧಾರವು ಮರಣದಂಡನೆ ಪ್ರಕರಣಗಳಲ್ಲಿ ನ್ಯಾಯಾಂಗ ವಿವೇಚನೆಯ ಅಗತ್ಯವನ್ನು ಬಲಪಡಿಸಿತು.
- 2022ರಲ್ಲಿ, ಮರಣದಂಡನೆ ಪ್ರಕರಣಗಳಲ್ಲಿ ಸಂದರ್ಭಗಳನ್ನು ತಗ್ಗಿಸಲು ಅರ್ಥಪೂರ್ಣ ವಿಚಾರಣೆಯನ್ನು ಖಚಿತಪಡಿಸಿಕೊಳ್ಳುವ ಕುರಿತು ಸುಪ್ರೀಂ ಕೋರ್ಟ್ ಚರ್ಚೆಗಳನ್ನು ಪ್ರಾರಂಭಿಸಿತು. ಅಪರಾಧವು ‘ಅಪರೂಪದಲ್ಲಿ ಅಪರೂಪ’ ಎಂದು ಅರ್ಹತೆ ಪಡೆಯುತ್ತದೆಯೇ ಎಂದು ನಿರ್ಣಯಿಸುವ ಕಾರ್ಯವಿಧಾನಗಳನ್ನು ಪ್ರಮಾಣೀಕರಿಸುವ ಗುರಿಯನ್ನು ಈ ಕ್ರಮ ಹೊಂದಿದೆ.
- ಭಾರತದಲ್ಲಿ ಮರಣದಂಡನೆ ಇನ್ನೂ ವಿವಾದಾತ್ಮಕ ವಿಷಯವಾಗಿದೆ. ಇತ್ತೀಚಿನ ತೀರ್ಪುಗಳು ನ್ಯಾಯಾಂಗ ನಿರ್ಧಾರಗಳಲ್ಲಿನ ಅಸಮಾನತೆ ವಿವರಿಸುತ್ತವೆ. ‘ಅಪರೂಪದಲ್ಲಿ ಅಪರೂಪ’ ಎಂಬುದಕ್ಕೆ ಸಾರ್ವತ್ರಿಕವಾಗಿ ಅಂಗೀಕರಿಸಲ್ಪಟ್ಟ ವ್ಯಾಖ್ಯಾನದ ಕೊರತೆ ನ್ಯಾಯಾಧೀಶರಿಗೆ ಸ್ವಾತಂತ್ರ್ಯ ನೀಡುತ್ತದೆ, ಇದು ಅಸಮಂಜಸ ಫಲಿತಾಂಶಗಳಿಗೆ ಕಾರಣವಾಗುತ್ತದೆ. ಈ ಅಸಂಗತತೆ ಮರಣದಂಡನೆ ಪ್ರಕರಣಗಳಲ್ಲಿ ನ್ಯಾಯದ ನ್ಯಾಯ ಮತ್ತು ಅನ್ವಯದ ಬಗ್ಗೆ ಪ್ರಶ್ನೆ ಹುಟ್ಟು ಹಾಕುತ್ತದೆ.

ತಾತ್ಕಾಲಿಕ ನ್ಯಾಯಾಧೀಶರ ನೇಮಿಸಲು ಸುಪ್ರೀಂ ಸೂಚನೆ

- ಭಾರತದ ವಿವಿಧ ಹೈಕೋರ್ಟ್‌ಗಳಲ್ಲಿ ಬಾಕಿ ಉಳಿದಿರುವ ಕ್ರಿಮಿನಲ್ ಪ್ರಕರಣಗಳನ್ನು ವಿಲೇವಾರಿಗೊಳಿಸಲು ನಿವೃತ್ತ ನ್ಯಾಯಮೂರ್ತಿಗಳನ್ನು ತಾತ್ಕಾಲಿಕವಾಗಿ ನೇಮಿಸಲು ಸುಪ್ರೀಂ ಕೋರ್ಟ್ ಸೂಚಿಸಿದೆ.
- ಭಾರತದ ಸಂವಿಧಾನದ 224A ವಿಧಿಯನ್ವಯ ಸುಪ್ರೀಂ ಕೋರ್ಟ್ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಈ ಸೂಚನೆ ನೀಡಿದೆ.
- ಸಂವಿಧಾನದ 224A ವಿಧಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹಾಗೂ ನಿವೃತ್ತ ನ್ಯಾಯಮೂರ್ತಿಗಳನ್ನು ತಾತ್ಕಾಲಿಕವಾಗಿ ಸೇವೆಗೆ ನೇಮಿಸುವ ಅವಕಾಶ ನೀಡುತ್ತದೆ. ಇದಕ್ಕೆ ನಿವೃತ್ತ ನ್ಯಾಯಮೂರ್ತಿಗಳು ಮತ್ತು ಭಾರತದ ರಾಷ್ಟ್ರಪತಿಗಳ ಒಪ್ಪಿಗೆ ಪಡೆಯಬೇಕಾಗುತ್ತದೆ.
- 224A ವಿಧಿಯಡಿ ನೇಮಕಗೊಂಡ ನ್ಯಾಯಮೂರ್ತಿಗಳು ರಾಷ್ಟ್ರಪತಿ ನಿರ್ಧರಿಸಿದಂತೆ ಭತ್ಯೆಗಳನ್ನು ಪಡೆಯುತ್ತಾರೆ ಆದರೆ, ಅವರನ್ನು ಸಾಮಾನ್ಯ ನ್ಯಾಯಾಧೀಶರು ಎಂದು ವರ್ಗೀಕರಿಸಲಾಗುವುದಿಲ್ಲ.
- ತಾತ್ಕಾಲಿಕ ನ್ಯಾಯಮೂರ್ತಿಗಳ ನೇಮಕಾತಿಯನ್ನು ಪ್ರಾರಂಭಿಸಲು ಸುಪ್ರೀಂ ಕೋರ್ಟ್ ನಿರ್ದಿಷ್ಟ ಷರತ್ತುಗಳನ್ನು ವಿಧಿಸಿದೆ. ಕನಿಷ್ಠ ಶೇ 20ರಷ್ಟು ಖಾಲಿ ಹುದ್ದೆಗಳಿರಬೇಕು ಮತ್ತು ಶೇ 10ಕ್ಕಿಂತ ಹೆಚ್ಚು ಪ್ರಕರಣಗಳು ಐದು ವರ್ಷಗಳಿಗೂ ಹೆಚ್ಚು ಅವಧಿಯಿಂದ ಬಾಕಿ ಉಳಿದಿರಬೇಕೆಂಬ ನಿಯಮಗಳನ್ನು ಸುಪ್ರೀಂ ನಿಗದಿಪಡಿಸಿದೆ.
- ಈಗಾಗಲೇ 224A ವಿಧಿಯನ್ವಯ 1972ರಲ್ಲಿ ನ್ಯಾಯಮೂರ್ತಿ ಸೂರಜ್ ಭನ್, 1982ರಲ್ಲಿ ನ್ಯಾಯಮೂರ್ತಿ ಪಿ. ವೇಣುಗೋಪಾಲ್ ಮತ್ತು 2007 ರಲ್ಲಿ ನ್ಯಾಯಮೂರ್ತಿ ಒ.ಪಿ.ಶ್ರೀವಾಸ್ತವ ಅವರನ್ನು ನಿವೃತ್ತಿ ನಂತರ ಪುನರ್ ನೇಮಕ ಮಾಡಿದ ಉದಾಹರಣೆಗಳಿವೆ.
- 224A ವಿಧಿಯನ್ವಯ ನೇಮಕಗೊಂಡ ನ್ಯಾಯಮೂರ್ತಿಗಳು ಸಾಮಾನ್ಯವಾಗಿ 2ರಿಂದ 3 ವರ್ಷಗಳ ಕಾಲ ಸೇವೆ ಸಲ್ಲಿಸಬೇಕು, ಪ್ರತಿ ಹೈಕೋರ್ಟ್ ಇಬ್ಬರಿಂದ ಐವರು ತಾತ್ಕಾಲಿಕ ನ್ಯಾಯಮೂರ್ತಿಗಳನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ಹೊಂದಿದೆ.
- ಪ್ರಸ್ತುತ ದೇಶದ ವಿವಿಧ ಹೈಕೋರ್ಟ್‌ಗಳಲ್ಲಿ ಪ್ರಸ್ತುತ ಸುಮಾರು ಶೇ 40 ರಷ್ಟು ನ್ಯಾಯಮೂರ್ತಿಗಳ ಹುದ್ದೆಗಳು ಭರ್ತಿಯಾಗಿಲ್ಲ. ಈ ಹಿನ್ನೆಲೆಯಲ್ಲಿ ನಿವೃತ್ತ ನ್ಯಾಯಮೂರ್ತಿಗಳ ತಾತ್ಕಾಲಿಕ ನೇಮಕವನ್ನು ಸುಪ್ರೀಂಕೋರ್ಟ್ ಪ್ರತಿಪಾದಿಸಿವೆ.

ಸೆಮಿಕಂಡಕ್ಟರ್ ಉತ್ಪಾದನೆ ಹೆಚ್ಚಳಕ್ಕೆ ಕ್ರಮಗಳು

- ಕೇಂದ್ರ ಸರ್ಕಾರ ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಾನಿಕ್ಸ್ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಲು ಭಾರತೀಯ ಸೆಮಿಕಂಡಕ್ಟರ್ ಯೋಜನೆ (ISM: India Semiconductor Mission) ಸೇರಿ ಹಲವು ಯೋಜನೆ ಹಾಗೂ ನೀತಿಗಳನ್ನು ಜಾರಿಗೊಳಿಸಿದೆ.
- ಈ ಕ್ಷೇತ್ರದಲ್ಲಿ ಹೂಡಿಕೆಗಳನ್ನು ಆಕರ್ಷಿಸುವುದು ಮತ್ತು ಹೆಚ್ಚಿನ ಉದ್ಯೋಗ ಸೃಷ್ಟಿಸುವ ಗುರಿ ಹೊಂದಿರುವ ಸರ್ಕಾರ ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಾನಿಕ್ ಸರಕುಗಳ ಉತ್ಪಾದನೆಯ ‘ಜಾಗತಿಕ ಹಬ್’ ಆಗಿ ಭಾರತವನ್ನು ರೂಪಿಸಲು ನಿರ್ಣಾಯಕ ಕ್ರಮ ವಹಿಸಿದೆ.
- ಡಿಸೆಂಬರ್ 2021ರಲ್ಲಿ ಪ್ರಾರಂಭವಾದ ‘ಸೆಮಿಕಾನ್ ಇಂಡಿಯಾ’ ಕಾರ್ಯಕ್ರಮ 5 ಸೆಮಿಕಂಡಕ್ಟರ್ ಯೋಜನೆ ಅನುಮೋದಿಸಿದೆ ಮತ್ತು 16 ಸೆಮಿಕಂಡಕ್ಟರ್ ವಿನ್ಯಾಸ ಕಂಪನಿಗಳನ್ನು ಬೆಂಬಲಿಸಿದೆ.
- ಈ ಉಪಕ್ರಮ ₹1.52 ಲಕ್ಷ ಕೋಟಿ ಹೂಡಿಕೆಗಳನ್ನು ಆಕರ್ಷಿಸುವ ಮತ್ತು ಸುಮಾರು 25,000 ನೇರ ಉದ್ಯೋಗಗಳನ್ನು ಮತ್ತು 60,000 ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ.
- ಎಲೆಕ್ಟ್ರಾನಿಕ್ಸ್ PLI ಯೋಜನೆಯಡಿ, ಭಾರತ ₹6.14 ಲಕ್ಷ ಕೋಟಿ ಮೌಲ್ಯದ ಉತ್ಪಾದನೆ ಮತ್ತು ₹3.12 ಲಕ್ಷ ಕೋಟಿ ರಫ್ತು ಸಾಧಿಸಿದೆ.
- ಇದು ಎಲೆಕ್ಟ್ರಾನಿಕ್ಸ್ ವಲಯದಲ್ಲಿ 128,000 ಕ್ಕೂ ಹೆಚ್ಚು ನೇರ ಉದ್ಯೋಗಗಳ ಸೃಷ್ಟಿಗೆ ಕಾರಣವಾಗಿದೆ, ಇದು ಜಾಗತಿಕ ಉತ್ಪಾದನಾ ಶಕ್ತಿ ಕೇಂದ್ರವಾಗಿ ಭಾರತದ ಸ್ಥಾನವನ್ನು ಬಲಪಡಿಸಿದೆ.
- PLI ಯೋಜನೆಯು ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪಾದನಾ ವಲಯಗಳಲ್ಲಿನ ಕಂಪನಿಗಳಿಗೆ ಸ್ಪರ್ಧಾತ್ಮಕ ಪ್ರೋತ್ಸಾಹವನ್ನು ಒದಗಿಸುವ ಗುರಿಯನ್ನು ಹೊಂದಿದೆ.
- ‘ಸೆಮಿಕಂಡಕ್ಟರ್ ಕಾರ್ಯಕ್ರಮ’ ಸೆಮಿಕಂಡಕ್ಟರ್ ಮತ್ತು ಡಿಸ್ಪ್ಲೇ ಫ್ಯಾಬ್ರಿಕೇಶನ್ ಘಟಕಗಳನ್ನು ಸ್ಥಾಪಿಸಲು ಶೇ 50ರವರೆಗೆ ಆರ್ಥಿಕ ಬೆಂಬಲವನ್ನು ನೀಡುವ ಗುರಿಯನ್ನು ಹೊಂದಿದೆ.
- ಈ ಯೋಜನೆಯಡಿ ಸೆಮಿಕಂಡಕ್ಟರ್ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪಾದನಾ ವಲಯಗಳಿಗೆ ಮೂಲಸೌಕರ್ಯಗಳನ್ನು ಹೊಂದಿರುವ ಹೈಟೆಕ್ ಕ್ಲಸ್ಟರ್‌ಗಳನ್ನು ರಚಿಸಲು ಕೇಂದ್ರ ರಾಜ್ಯಗಳೊಂದಿಗೆ ಸಹಕರಿಸುತ್ತದೆ.
- ಹೆಚ್ಚುವರಿಯಾಗಿ, ಸಂಯುಕ್ತ ಅರೆವಾಹಕ ಘಟಕಗಳ ಬಂಡವಾಳ ವೆಚ್ಚಕ್ಕಾಗಿ ಶೇ 30ರಷ್ಟು ಹಣಕಾಸಿನ ಬೆಂಬಲವನ್ನೂ ಒದಗಿಸುತ್ತಿದೆ.
- ಸೆಮಿಕಂಡಕ್ಟರ್ ವಿನ್ಯಾಸ ಲಿಂಕ್ಡ್ ಇನ್ಸೆಂಟಿವ್ (DLI) ಯೋಜನೆಯು ಸೆಮಿಕಂಡಕ್ಟರ್ ವಿನ್ಯಾಸ ಕಂಪನಿಗಳಿಗೆ ಅರ್ಹ ವೆಚ್ಚಗಳ ಮೇಲೆ ಶೇ 50ರವರೆಗೆ ಪ್ರೋತ್ಸಾಹ ಧನವನ್ನು ಒದಗಿಸುತ್ತಿದೆ.
- ಇಂಟಿಗ್ರೇಟೆಡ್ ಸರ್ಕ್ಯೂಟ್‌ಗಳು (IC ಗಳು), ಚಿಪ್‌ಸೆಟ್‌ಗಳು ಮತ್ತು ಸಿಸ್ಟಮ್ ಆನ್ ಚಿಪ್ಸ್ (SoC ಗಳು) ಉತ್ಪಾದನೆಗೂ ಆರ್ಥಿಕ ಬೆಂಬಲವನ್ನು ಒದಗಿಸಲಾಗುತ್ತಿದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಪತಂಜಲಿಯನ್ನು ಯೋಗ ತತ್ತ್ವಶಾಸ್ತ್ರದ ಸ್ಥಾಪಕರೆಂದು ಕರೆಯುತ್ತಾರೆ
ಬಿ. ಪತಂಜಲಿ ಋಷಿಯು ಯೋಗ ಸೂತ್ರ ಎಂಬ ಗ್ರಂಥವನ್ನು ಬರೆದಿದ್ದಾರೆ
ಸರಿ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಡಿ

2. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಪ್ರಾಚೀನ ವೈದ್ಯಕೀಯ ಪದ್ಧತಿಗಳ ಆಳವಾದ ಜ್ಞಾನ ಪುನರುಜ್ಜೀವನಗೊಳಿಸುವ ದೃಷ್ಟಿಯಿಂದ 1995ರಲ್ಲಿ ಭಾರತೀಯ ಔಷಧ ಮತ್ತು ಹೋಮಿಯೋಪಥಿ ಇಲಾಖೆ ರಚಿಸಲಾಯಿತು
ಬಿ. ಭಾರತ ಸರ್ಕಾರ 2020ರಲ್ಲಿ ಆಯುಷ್ ಸಚಿವಾಲಯವನ್ನು ರಚಿಸಿದೆ
ಸರಿ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪುಡಿ. ಎರಡೂ ಸರಿ
ಉತ್ತರ: ಎ

3. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಔಷಧೀಯ ಸಸ್ಯಗಳ ವಲಯವನ್ನು ಉತ್ತೇಜಿಸಲು, ಭಾರತ ಸರ್ಕಾರ 24 ನವೆಂಬರ್ 2000 ರಂದು ರಾಷ್ಟ್ರೀಯ ಔಷಧೀಯ ಸಸ್ಯಗಳ ಮಂಡಳಿ ಸ್ಥಾಪಿಸಿದೆ
ಬಿ. ಪ್ರಸ್ತುತ ರಾಷ್ಟ್ರೀಯ ಔಷಧೀಯ ಸಸ್ಯಗಳ ಮಂಡಳಿಯು ಆಯುಷ್ (ಆಯುರ್ವೇದ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ, ಯುನಾನಿ, ಸಿದ್ಧ ಮತ್ತು ಹೋಮಿಯೋಪಥಿ) ಸಚಿವಾಲಯದಲ್ಲಿದೆ
ಸರಿ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಡಿ

4. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಜೂನ್ 19ರ, ವಿಶ್ವ ಸಿಕಲ್ ಸೆಲ್ ಜಾಗೃತಿ ದಿನವನ್ನು ಅಧಿಕೃತವಾಗಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಅಂಗೀಕರಿಸಿದೆ
ಬಿ. 2024 ರ ವಿಶ್ವ ಸಿಕಲ್ ಸೆಲ್ ದಿನದ ಥೀಮ್, ‘Hope Through Progress: Adancing Global Sickle Cell Care & Treatment’
ಸರಿ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಡಿ

5. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಜೂನ್ 20 ರಂದು ಪ್ರಪಂಚದಾದ್ಯಂತ ನಿರಾಶ್ರಿತರು ಎದುರಿಸುತ್ತಿರುವ ಹೋರಾಟಗಳ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ನಿರಾಶ್ರಿತರ ದಿನವನ್ನು ಆಚರಿಸಲಾಗುತ್ತದೆ
ಬಿ. 2024ರ ವಿಶ್ವ ನಿರಾಶ್ರಿತರ ದಿನದ ಥೀಮ್, ‘For a World Where Refugees Are Welcomed’
ಸರಿ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪುಡಿ. ಎರಡೂ ಸರಿ
ಉತ್ತರ: ಡಿ

6. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ಭಾರತೀಯ ನೇವಲ್ ಹೈಡ್ರೋಗ್ರಾಫಿಕ್ ಇಲಾಖೆಯು ಭಾರತದಲ್ಲಿ ಹೈಡ್ರೋಗ್ರಾಫಿಕ್ ಸಮೀಕ್ಷೆಗಳು ಅಥವಾ ಹೈಡ್ರೋಗ್ರಾಫಿಕ್ ಚಾರ್ಟ್ ಅಥವಾ ನಾಟಿಕಲ್ ಚಾರ್ಟ್(Nautical Charting. ಗಳನ್ನು ಪ್ರಕಟಿಸುವ ನೋಡಲ್ ಏಜೆನ್ಸಿಯಾಗಿದೆ.
ಬಿ. ಕೇರಳದಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೈಡ್ರೋಗ್ರಫಿ ಸಂಸ್ಥೆಯು ಭಾರತದಲ್ಲಿ ಹೈಡ್ರೋಗ್ರಫಿಯಲ್ಲಿ ತರಬೇತಿ ನೀಡುವ ಕೇಂದ್ರವಾಗಿದೆ.
ಸರಿ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಎ

7. ಕೆಳಗಿನ ಯಾವ ಕಾರಣಗಳಿಂದ ಜರ್ಮನಿಯಲ್ಲಿ ನಾಜಿ ಸರ್ಕಾರ ಅಧಿಕಾರಕ್ಕೆ ಬರುವಂತಾಯಿತು?
1. ವರ್ಸೈಲ್ಸ್ ಒಪ್ಪಂದದಲ್ಲಿ ಜರ್ಮನಿಯ ಮೇಲೆ ವಿಧಿಸಿದ ನಿರ್ಬಂಧಗಳು
2. 1930 ರ ಆರ್ಥಿಕ ಮುಗ್ಗಟ್ಟು
3. ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ನಿರಂಕುಶ ನಾಯಕತ್ವಗಳು ಅಧಿಕಾರದ ಗದ್ದುಗೆ ಏರಿದವು
ಸರಿ ಉತ್ತರ ಗುರುತಿಸಿ
ಎ. 1, 2 ಮತ್ತು 3 ಬಿ. 1 ಮತ್ತು 2
ಸಿ. 1 ಮತ್ತು 3 ಡಿ. 2 ಮತ್ತು 3
ಉತ್ತರ: ಎ

8. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಸುದ್ದಿಯಲ್ಲಿದ್ದ ‘Auschwitz’ ಪ್ರದೇಶ ಕೆಳಗಿನ ಯಾವ ರಾಷ್ಟ್ರದಲ್ಲಿ ಕಂಡುಬರುತ್ತದೆ?
ಎ. ಜರ್ಮನಿ ಬಿ. ಹಂಗರಿ
ಸಿ. ಪೋಲೆಂಡ್ ಡಿ. ಇಟಲಿ
ಉತ್ತರ: ಸಿ

9. ಈ ಹೇಳಿಕೆಗಳನ್ನು ಪರಿಗಣಿಸಿ.
ಎ. ವಿಶ್ವ ಪ್ಲಾಸ್ಟಿಕ್ ಬ್ಯಾಗ್ ಮುಕ್ತ ದಿನವನ್ನು ಪ್ರತಿ ವರ್ಷ ಜುಲೈ 3 ರಂದು ಆಚರಿಸಲಾಗುತ್ತದೆ
ಬಿ. ಪ್ಲಾಸ್ಟಿಕ್ ಚೀಲಗಳ ಹಾನಿಕಾರಕ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು ಉದ್ದೇಶವಾಗಿದೆ
ಸರಿಯಾದ ಉತ್ತರ ಆರಿಸಿ
ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ
ಸಿ. ಎರಡೂ ತಪ್ಪು ಡಿ. ಎರಡೂ ಸರಿ
ಉತ್ತರ: ಡಿ

ಸಿಇಟಿ- ನೀಟ್ ಪರೀಕ್ಷೆ ದಿಕ್ಸೂಚಿ

CET BIOLOGY

22) *(……..Contd)*

Expl:- Agaricus is a type of fungi belonging to class- Basidiomycetes. The reserve food material is glycogen or oil droplets in fungi. Spirogyra is an algae belonging to the Group-Chlorophyta (green algae). The chloroplasts of Spirogyra have 2-20 thylakoid lamellae which are usually associated with pyrenoids. Each pyrenoid has a central protein called ‘pyreno crystal’ and a surrounding starch sheath.

They serve the purpose of storing starch. Sargassum belongs to the group Pheophyta (brown algae). The accumulation product of photosynthesis in this is D-mannitol and the reserve food material is Laminarin.

And Polysiphonia belongs to the group- Rhodophyta (red algae) which has the reserve food material in the form of floridean starch (much more similar to the glycogen).

23. Identify the desirable charecteristics for a plasmid used in rDNA technology from the following
(a) Ability to multiply and express outside the host in a bioreactor.
(b) A highly active promoter.
(C) A site at which replication can be initiated.
(D) One or more identifiable marker genes.
(E) One or more unique restriction sites.
(a) A, C and E (b) B, C, and E
(c) A, C, D and E (d) B, C, D, and E
Ans: d

Expl:- a lasmid is a small DNA molecule that is a physically separate form and can replicate independently of chromosomal DNA within a cell. All the statements given in the options are appropriate excepting the one that is has ability to multiply and express outside the host in a bioreactor because plasmid always multiply inside the host using cell machinery.

24. Which compounds were used by Miller in his experiment for obtaining amino acids and other organic substances?
(a) Carbon dioxide, water vapour and methane
(b) Methane, ammonia, water vapour and hydrogen cyanide
(c) Ammonia, methane, hydrogen and water vapour
(d) Ammonia. methane and carbon dioxide.
Ans:C

Expl:- miller in his experiment used methane, ammonia, hydrogen and water vapour in the ratio 2: 1: 2. Electric discharge was then allowed to be created in a closed flask containing these compounds at 800^0C.

The conditions were set similar to those in the primitive atmosphere in the laboratory. After a week he observed the presence of substances like amino acids and other organic substances such as sugar, pigments, nitrogen bases, fats, etc.

25. Read the following statements
Statement I : All vertebrates develop a row of vestigial gill slits during embryonic stage.
Statement II : Embryos always pass through the adult stages of other animals.

Which of the following options is correct with reference to these statements.?
(A) Statement I is correct, Statement II is incorrect.
(B) Statement I is incorrect, Statement II is correct.
(C) Both Statements I and II are correct.
(D) Both Statements I and II are incorrect.
Ans. A

26. Which of the following is true for eutrophicated water body?
(a) High mineral content
(b) High oxygen content
(c) Rich species diversity
(d) Low organic content
Ans:a

Expl:- Eutrophication is the natural aging of lake by the biological enrichment of its water. The acceleration of aging process starts due to heavy discharge of pollutants from the industry and home. The prime contaminants are nutrients such as nitrates and phosphates which acts as plant nutrient and over stimulate the growth of algae known as algal bloom

27. IUDs which are used by females
(a) Act as spermicidal jellies
(b) Block the entry of sperms into vagina
(c) Are implanted under the skin and they release progestogen and estrogen
(d) Release copper ions in the uterus that increase phagocytosis of sperms.
Ans:d

Expl:- IUDs are T-shaped intrauterine devices containing either copper or progesterone which are inserted by doctors into the uterus through vagina. They are a form of long reversible contraceptive methods.

They prevent contraception by increasing the phagocytosis of sperms within the uterus thus, making it unsuitable for implantation. They also suppress sperm motility and fertilizing ability, e.g., Cu-T, Cu 7, LNG-20, Mirene, etc.

NEET CHEMISTRY

1) Arrange the following elements in increasing order of electronegativity: N, O, F, C, Si

Choose the correct answer from the options given below:
(a) Si < C < N < O < F
(b) Si < C < O < N < F
(c) O < F < N < C < Si
(d) F < O < N < C < Si
Ans:- (a)

Expln:- Electronegativity increases across the period on moving left to right. It decreases on moving down the group. The correct option is
Si < C < N < O < F

2) Iodoform can be prepared from all, except
(a) butan-2-one (b) acetophenone
(c) propan-2-ol (d) propan-1-ol
Ans: (D) propan-1-ol

Iodoform reaction requires a $H_3C-\underset{\underset{O}{\|}}{C}-$ group, which is not present in propan-1-ol even after oxidation.

3) The complex ion having minimum magnitude of Δ_0 (CFSE) is
(a) $[Co(NH_3)_6]^{3+}$ (b) $[Cr(H_2O)_6]^{3+}$
(c) $[Cr(CN)_6]^{3-}$ (d) $[Co(Cl)_6]^{3-}$
Ans: (D) $[Co(Cl)_6]^{3-}$
Co^{3+} - d^6 low spin $\Delta_0 = 4\times(-0.4) + 2(+0.6) = -0.4\,\Delta_0$
Cr^{3+} - d^3 low spin $\Delta_0 = 4 \times (-0.4) = -1.6\,\Delta_0$.

4) Select the correct statements from the following:
A) Atoms of all elements are composed of two fundamental particles.
B) The mass of the electron is 9.10939×10^{-31} kg.
C) All the isotopes of a given element show same chemical properties.
D) Protons and electrons are collectively known as nucleons.
E. Dalton’s atomic theory, regarded the atom as an ultimate particle of matter.

Choose the correct answer from the options given below:
a) B, C and E only b) A, B and C only
c) C, D and E only d) A and E only

Ans:- (a) An Atom has three fundamental particles- electron, proton and neutron.
The mass of the electron is 9.10939×10^{-31} kg. Neutrons and protons, both are collectively known as nucleons.
All the isotopes of a given element show same chemical properties.
Dalton’s atomic theory, regarded atom as an ultimate particle of matter.

5) The IUPAC name of



a) 4-Hydroxy-2-pentanone
b) 2-Hydroxy-4-pentanone
c) 2-Oxo-4-pentanol d) 4-Keto-2-pentanol
Ans:- a;

6) The compound that will undergo S_N1 reaction with the fastest rate is

a)



b)



c)



d)



Ans:- d

Expln:- Reactivity towards S_N1 depends upon stability of carbocation. Order of stability is



Hence



is most reactive

7) The statement that is NOT correct is
a) Compressibility factor measures the deviation of real gas from ideal behavior
b) van der Waals constant ‘a’ measures extent of intermolecular attractive forces for real gases
c) Critical temperature is the lowest temperature at which liquefaction of a gas first occurs
d) Boyle point depends on the nature of real gas.

Ans:-(c) Critical temperature is the temperature above which a gas cannot be liquefied irrespective of the pressure applied.

8) One dm^3 solution containing 10^{-5} moles each of Cl^- ions and CrO_4^{-2} ions is treated with 10^{-4} mole of silver nitrate. Which one of the following observations is made?

$$[K_{SP}\ Ag_2CrO_4 = 4 \times 10^{-12}]$$
$$[K_{SP}\ AgCl = 1 \times 10^{-10}]$$

(Contd.....)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, (ವಿದ್ಯುತ್) ಪೂರ್ವ ವಲಯ,
16ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಕಟ್ಟಡ, ಮೇಯೋಹಾಲ್,
ಮಹಾತ್ಮಗಾಂಧಿ ರಸ್ತೆ, ಬೆಂಗಳೂರು–560 001

ಸಂಖ್ಯೆ:ಕಾಪಾಅ/ವಿದ್ಯುತ್/ಪೂರ್ವ/ಟೆಂಡರ್/11/2024–25 ದಿನಾಂಕ: 26.03.2025

ಟೆಂಡರ್ ಪ್ರಕಟಣೆ ಹಿಂಪಡೆಯುವಿಕೆ

ವಿಷಯ: ಟೆಂಡರ್ ಪ್ರಕಟಣೆ ಹಿಂಪಡೆಯುವಿಕೆ

ಉಲ್ಲೇಖ: 1. ಈ ಕಚೇರಿ ಟೆಂಡರ್ ಪ್ರಕಟಣೆ: ಕಾಪಾಅ/ವಿದ್ಯುತ್/ಪೂರ್ವ/ಟೆಂಡರ್/11/2024–25, ದಿನಾಂಕ: 05.02.2025

2. ಟೆಂಡರ್ ತಿದ್ದುಪಡಿ ಸಂ.: ಕಾಪಾಅ/ವಿದ್ಯುತ್/ಪೂರ್ವ/ಟೆಂಡರ್/11/2024–25, ದಿನಾಂಕ: 13.02.2025

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕಚೇರಿಯಿಂದ ಉಲ್ಲೇಖ (1)ರ ಟೆಂಡರ್ ಪ್ರಕಟಣೆ ಸಂಖ್ಯೆಯಂತೆ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ತಾಂತ್ರಿಕ ಕಾರಣಗಳಿಂದಾಗಿ ಸದರಿ ಟೆಂಡರನ್ನು ಹಿಂಪಡೆಯಲಾಗಿದೆ

ಕ್ರ ಸಂ.	ಕಾಮಗಾರಿಗಳ ಹೆಸರು
1.	ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯಲ್ಲಿ ಬ್ರ್ಯಾಂಡ್ ಬೆಂಗಳೂರು – ವೈಬ್ರಂಟ್ ಬೆಂಗಳೂರು ಯೋಜನೆಯಡಿಯಲ್ಲಿ ಬೆಂಗಳೂರಿನಲ್ಲಿರುವ ಪಾರಂಪರಿಕ ಕಟ್ಟಡಗಳಿಗೆ Ornamental and Architectural Facade Lighting ಒದಗಿಸುವುದು. ಟೆಂಡರಿಗಿಟ್ಟ ಮೊತ್ತ: ₹.804.75 ಲಕ್ಷಗಳು
2.	ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯಲ್ಲಿ ಬ್ರ್ಯಾಂಡ್ ಬೆಂಗಳೂರು – ವೈಬ್ರಂಟ್ ಬೆಂಗಳೂರು ಯೋಜನೆಯಡಿಯಲ್ಲಿ ಬೆಂಗಳೂರಿನಲ್ಲಿರುವ ಸರ್ಕಾರಿ ಪ್ರಮುಖ /ಬಹುಮಹಡಿ ಕಟ್ಟಡಗಳಿಗೆ Ornamental and Architectural Facade Lighting ಒದಗಿಸುವುದು. ಟೆಂಡರಿಗಿಟ್ಟ ಮೊತ್ತ: ₹.804.75 ಲಕ್ಷಗಳು

ಸಹಿ/– ಕಾರ್ಯಪಾಲಕ ಅಭಿಯಂತರರು
ವಿದ್ಯುತ್ ವಿಭಾಗ, ಪೂರ್ವ ವಲಯ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ)

KSIIDC

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

'ಖನಿಜ ಭವನ', 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1
ದೂ: 080–22258131–33, ಇ–ಮೇಲ್: ipd2@ksiidc.com
ವೆಬ್‌ಸೈಟ್: http://ksiidc.karnataka.gov.in

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು, ಕರ್ನಾಟಕ ಇದಕ್ಕೆ ಹೊಂದಿಕೊಂಡಂತೆ ಇರುವ ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ ಒಳಗೆ ನಿವೇಶನಗಳಿಗೆ ಬೆಲೆ ಗೊತ್ತುಪಡಿಸುವಿಕೆಗಾಗಿ ಸಲಹೆಗಾರರ ಆಯ್ಕೆ.

ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ (https://kppp.karnataka.gov.in) ಮೂಲಕ

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ) ಕಂಪನಿಯು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (ಕೆಐಎ), ಬೆಂಗಳೂರು, ಕರ್ನಾಟಕ, ಭಾರತ ಇದಕ್ಕೆ ಹೊಂದಿಕೊಂಡಂತೆ ಉತ್ತರದ ಸರಹದ್ದಿನ ಉದ್ದಕ್ಕೂ ಇರುವ ಅಂದಾಜು 407 ಎಕರೆಗಳ ಜಮೀನಿನ ಸ್ವಾಧೀನಾನುಭವ ಹೊಂದಿರುವುದು. ಯೋಜನಾ ನಿವೇಶನವು ಆಯಕಟ್ಟಿನ ಸ್ಥಳದಲ್ಲಿರುವುದನ್ನು ಪರಿಗಣಿಸಿ, ಸದರಿ ಯೋಜನಾ ನಿವೇಶನದಲ್ಲಿ **'ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್' ("ಬಿಎಸ್‌ಬಿಪಿ")** ಎಂಬ ಹೆಸರಿನಲ್ಲಿ **'ಸಿಗ್ನೇಚರ್ ಪ್ರಾಜೆಕ್ಟ್'** ಅಭಿವೃದ್ಧಿಪಡಿಸಲು ಕೆಎಸ್ಐಐಡಿಸಿ ಅಪೇಕ್ಷಿಸಿದೆ. ಈ ಯೋಜನೆ ಅಭಿವೃದ್ಧಿಪಡಿಸುವುದರಿಂದ ಸಾಮಾನ್ಯವಾಗಿ ಕರ್ನಾಟಕದ ಮತ್ತು ನಿರ್ದಿಷ್ಟವಾಗಿ ಬೆಂಗಳೂರಿನ ಜಾಗತಿಕ ಸ್ಥಾನಮಾನ ಮತ್ತು ಮನ್ನಣೆ ಹೆಚ್ಚಳವಾಗುವುದು. ಈ ಸಂಬಂಧ, ಉದ್ದೇಶಿತ 'ಸಿಗ್ನೇಚರ್ ಪ್ರಾಜೆಕ್ಟ್' ಹಸಿರು ಉಪಕ್ರಮಗಳನ್ನು ಒಳಗೊಂಡ ಸ್ವಯಂ–ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆಯಾಗಿರುವುದು. **ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್‌ನ ಒಳಗಿರುವ ನಿವೇಶನಗಳಿಗೆ ಬೆಲೆ ಗೊತ್ತುಪಡಿಸುವಿಕೆಗಾಗಿ** ಸಲಹೆಗಾರರ ಆಯ್ಕೆಗಾಗಿ **ಕೆಎಸ್ಐಐಡಿಸಿ** ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರುಗಳನ್ನು (ದ್ವಿ ಲಕೋಟೆ ಪದ್ಧತಿಯಲ್ಲಿ) ಆಹ್ವಾನಿಸಿದೆ.

ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಇಲ್ಲಿಂದ ಪಡೆದುಕೊಳ್ಳಬಹುದು.

ಪ್ರಮುಖ ದಿನಾಂಕಗಳು: ಟೆಂಡರ್ ದಸ್ತಾವೇಜುಗಳನ್ನು **ದಿನಾಂಕ: 27.03.2025ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್‌ಪೂರ್ವ ಸಭೆ **ದಿನಾಂಕ: 04.04.2025.** ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ಕಡೆಯ **ದಿನಾಂಕ: 29.04.2025.** ಹೆಚ್ಚಿನ ವಿವರಗಳನ್ನು ಮೇಲಿನ ಕಚೇರಿಯಿಂದ ಕಚೇರಿ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳಬಹುದು ಅಥವಾ ವೆಬ್‌ಸೈಟ್ **(https://kppp.karnataka.gov.in)** ಇಲ್ಲಿಂದ ಪಡೆದುಕೊಳ್ಳಬಹುದು. ಟೆಂಡರ್‌ಗೆ ಸಂಬಂಧಿಸಿದಂತೆ ಮುಂದಿನ ಯಾವುದೇ ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು. ಸಂಪರ್ಕಿಸಿ: ಎಜಿಎಂ (ಐಪಿಡಿ–II), (ಓ) 080–22258131/132/133, ಇ–ಮೇಲ್: ipd2@ksiidc.com

ಸಹಿ/– ಪ್ರಧಾನ ವ್ಯವಸ್ಥಾಪಕರು,
ಕೆಎಸ್ಐಐಡಿಸಿ ಮತ್ತು ಟೆಂಡರ್ ಆಹ್ವಾನಿಸುವ ಅಧಿಕಾರಿ)

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ

ಕ್ರಸಂ: ಪಿಬಿ/5054 ರಾಹೆ/ಜಿಮುರ/ಅಧಿಸೂಚನೆ: 2024–25/3070 ದಿನಾಂಕ: 20.03.2025

ಇ–ಟೆಂಡರ್ ಅಧಿಸೂಚನೆ IFT-KW-3 ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. **ಒಟ್ಟು 3 ಕಾಮಗಾರಿಗಳು**

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: **29–03–2025 (16.00 ಗಂಟೆಗೆ)** (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **01–04–2025 (16.00 ಗಂಟೆವರೆಗೆ)** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **02–04–2025 (16.30 ಗಂಟೆವರೆಗೆ)** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **03–04–2025 (16.00 ಗಂಟೆವರೆಗೆ)**

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ,
ಲೋಕೋಪಯೋಗಿ ಇಲಾಖೆ ವಿಭಾಗ, ಶಿರಸಿ (ಉತ್ತರ ಕನ್ನಡ ಜಿಲ್ಲೆ)

DIPR/ADK/KSMCA/1023/24-25 dt.25.03.2025

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿ(ನಿ), ಮುಏನೀ ವಿಭಾಗ ನಂ.2, ಬಬಲೇಶ್ವರ. ತಾ:ಬಬಲೇಶ್ವರ, ಜಿ:ವಿಜಯಪುರ.

ಇ–ಮೇಲ್:eemli2babaleshwar@gmail.com

ಸಂ:ಕೃಭಾಜನಿ[ನಿ]/ಎಂ.ಎಲ್.ಐ/ವಿ.ಸಂ.2/ಯೋ.ಶಾ–1/ಸರ್ವಿಸ್/2024–25/**1492** ದಿನಾಂಕ:25.03.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ–3ನೇ ಕರೆ (ಕೆ.ಪಿ.ಪಿ. ಪೋರ್ಟಲ್ ಮುಖಾಂತರ)

ಉಲ್ಲೇಖ:ಈ ಕಛೇರಿ ಟೆಂಡರ್ ಪ್ರಕಟಣೆ ಸಂ.834 ದಿನಾಂಕ:26.11.2024

ಮೇಲಿನ ಉಲ್ಲೇಖದಲ್ಲಿ ಟೆಂಡರ್ ಕರೆಯಲಾದ ಕಾಮಗಾರಿ "Providing Manpower Services [ಇಂ.ಸಂ.SE0079/Call-3] ಗೆ ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಕೆ.ಪಿ.ಪಿ–ಟೆಂಡರನಲ್ಲಿ 3 ನೇ ಕರೆ ಅಹ್ವಾನಿಸಲಾಗಿದೆ. ಕೆಟಿಪಿಪಿ ನಿಯಮಗಳನ್ವಯ ದ್ವೀ–ಲಕೋಟಿಯಲ್ಲಿ ಸೂಚಿಸಿರುವ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು.

1.ಇ–ಟೆಂಡರ ದಾಖಲಾತಿಗಳನ್ನು ಸಲ್ಲಿಸುವ ಕೊನೆಯ **ದಿ:05.04.2025** ಸಾ:4.30 ಘಂ.ವರೆಗೆ. 2. ಇ–ಟೆಂಡರ್ ತೆರೆಯುವ **ದಿ:07.04.2025** ರ ಬೆಳಗ್ಗೆ 11.00 ಘಂ.

ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in, ಮುಖಾಂತರ ಅಥವಾ ಕೆಳಗಿನ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಮುಏನೀ ವಿಭಾಗ ಸಂ.2, ಬಬಲೇಶ್ವರ.

ವಾಸಾಸಂಇ/ವಿಜಯಪುರ/791/ಕೆಎಸ್ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಪುಲಿಕೇಶಿನಗರ ವಿಭಾಗ, ಬೃಬೆಂಮಪಾ ಕಚೇರಿ ಕಟ್ಟಡ, ರಾಬರ್ಟ್‌ಸನ್ ರಸ್ತೆ ಫ್ರೇಜರ್ ಟೌನ್, ಬೆಂಗಳೂರು.

ಸಂಖ್ಯೆ:ಕಾಪಾಅ/ಪುನ/ಟೆಂಡರ್/16/2024-25 ದಿನಾಂಕ: 26-03-2025

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ದ್ವಿ ಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) : 2ನೇ ಕರೆ

ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in**

ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ವಿಭಾಗ, ಬೃಬೆಂಮಪಾ ಇವರು ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ರೈಲ್ವೆ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಇತರೆ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1)	ವಾರ್ಡ್ ನಂ.72ರ (ಹಳೆಯ ವಾರ್ಡ್ ನಂ.47) ಡಿ. ಜೆ. ಹಳ್ಳಿಯಲ್ಲಿರುವ ಕಾಳಿಯಮ್ಮ ದೇವಸ್ಥಾನದಿಂದ ರಾಮಸ್ವಾಮಿ ಗಲ್ಲಿಯವರೆಗೆ (ಬ್ಲಾಕ್ ನಂ.45), ತಂಗಮಲೈನಗರ (ಬ್ಲಾಕ್ ನಂ.28), ದೊಡ್ಡಣ್ಣನಗರ (ಬ್ಲಾಕ್ ನಂ.24) ಮತ್ತು ಮುನಿಮಾರಪ್ಪ ಬ್ಲಾಕ್ (ಬ್ಲಾಕ್ ನಂ.32) ಒಳಚರಂಡಿ ಮತ್ತು ಸಿಸಿ ರಸ್ತೆಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. ಟೆಂಡರ್‌ನ ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ).: 500.00. ಇಎಂಡಿ ಮೊತ್ತ (ರೂ.ಗಳಲ್ಲಿ): 7,50,000/–.

ಟೆಂಡರ್ ಕಾರ್ಯಸೂಚಿ: 1) ಟೆಂಡರ್ ದಾಖಲೆಯನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ **ದಿನಾಂಕ: 28–03–2025ರ ಸಂಜೆ 4:00 ಗಂಟೆಯಿಂದ** ಡೌನ್‌ಲೋಡ್ ಮಾಡಬಹುದು. 2) ಪೂರ್ವ ಬಿಡ್ ಸಭೆಯನ್ನು **ದಿನಾಂಕ: 09–04–2025ರ ಸಂಜೆ 4:00 ಗಂಟೆಗೆ ಮೇಲ್ಕಂಡ ಕಚೇರಿಯಲ್ಲಿ ನಡೆಸಲಾಗುವುದು.** 3) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ **ದಿನಾಂಕ ಮತ್ತು ವೇಳೆ: 28–04–2025ರ ಸಂಜೆ 4:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **29–04–2025ರ ಸಂಜೆ 4:30 ಗಂಟೆಗೆ** ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ವಿಭಾಗ, ಬೃಬೆಂಮಪಾ.

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು

No:SABVMCRI/E-TENDER/LINEN/35/2024-25, Date:26.03.2025

ಟೆಂಡರ್ ಅಧಿಸೂಚನೆ

ವಿಷಯ: ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ ಗೆ ಅಗತ್ಯವಿರುವ ಲಿನಿನ್ ಮತ್ತು ಬೆಡ್ಡಿಂಗ್ ಐಟಂಗಳನ್ನು ಸರಬರಾಜು ಮಾಡಲು ಕೆಟಿಪಿಪಿ ನಿಯಮದಂತೆ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ

1. ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ: **26.03.2025** ರಿಂದ. 2. ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಅಂತಿಮ ದಿನಾಂಕ: **03.04.2025** ರ ಸಂಜೆ **05.30** ಗಂಟೆ. 3. ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: **09.04.2025** ರ ಸಂಜೆ **05.30** ಗಂಟೆ. 4. ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ : **11.04.2025** ರ ಬೆಳಗ್ಗೆ 10.30 ಗಂಟೆ.

ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್/ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸ ಬಹುದಾಗಿದೆ.

ಸಹಿ/– ನಿರ್ದೇಶಕರು ಹಾಗೂ ಡೀನ್
ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ, ಬೆಂಗಳೂರು

DIPR/CP/5931/Zen/2024-25

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,

ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293

ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2024–25/2848 ದಿ:25.03.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ("KPPP" ಪೋರ್ಟಲ್ ಕೆ.ಡಬ್ಲೂ–3 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ 01 ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜನೀಯರವರಿಂದ ಮರು ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ **ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 80.68 ಲಕ್ಷಗಳಿರುತ್ತದೆ.** ಟೆಂಡರ್‌ನ್ನು **ದಿನಾಂಕ: 25.03.2025 ರಿಂದ ದಿನಾಂಕ: 02.04.2025 ರ ಸಂಜೆ 5.30 ಗಂಟೆಯವರಗೆ** ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **04.04.2025 ರ ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು **ದಿನಾಂಕ: 07.04.2025 ರ ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು **"KPPP"** ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆಯಬಹುದು.

ಸಹಿ/ ಕಾರ್ಯನಿರ್ವಾಹಕ ಇಂಜನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/1069/ಕೆಎಸ್ಎಂಸಿಎ/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಪುಲಿಕೇಶಿನಗರ ವಿಭಾಗ,
ಬೃಬೆಂಮಪಾಲಿಕೆ ಕಚೇರಿ ಕಟ್ಟಡ, ರಾಬರ್ಟ್‌ಸನ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು

ಸಂಖ್ಯೆ:ಕಾಪಾಅ/ಪುಲಿಕೇಶಿನಗರ/ಟೆಂಡರ್/15/2024–25 ದಿನಾಂಕ: 26.03.2025

ತಿದ್ದುಪಡಿ–2

ಉಲ್ಲೇಖ: 1. ಟೆಂಡರ್ ಪ್ರಕಟಣೆ ಸಂ. ಕಾಪಾಅ(ಪುನ)/ಇ–ಟೆಂಡರ್/15/2024–25, ದಿನಾಂಕ: 14.03.2025

ಈ ಮೂಲಕ ಉದ್ದೇಶಿತ ಗುತ್ತಿಗೆದಾರರ ಗಮನಕ್ಕೆ ತರುವುದೇನೆಂದರೆ ಉಲ್ಲೇಖ (1) ರಡಿಯಲ್ಲಿನ ಟೆಂಡರ್ ಪ್ರಕಟಣೆಯನ್ನು ತಾಂತ್ರಿಕ ಕಾರಣಗಳಿಂದಾಗಿ ಮುಂದೂಡಲಾಗಿದ್ದು ಮಾರ್ಪಾಡಾದ ದಿನಾಂಕಗಳು ಈ ಕೆಳಕಂಡಂತಿವೆ.

(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **21.03.2025**ರ ಸಂಜೆ **4:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **04.04.2025**ರ ಮಧ್ಯಾಹ್ನ **3:00** ಗಂಟೆಗೆ ನಡೆಸಲಾಗುವುದು. (3) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **19.04.2025**ರ ಸಂಜೆ **4:00** ಗಂಟೆಯವರೆಗೆ. (4) ಟೆಂಡರ್‌ಗಳನ್ನು ದಿನಾಂಕ **21.04.2025**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪುಲಿಕೇಶಿನಗರ ವಿಭಾಗ

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ನಂ. 16 ಡಿ, 5ನೇ ಮಹಡಿ, ದೇವರಾಜ ಅರಸು ಭವನ, ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052.

ಸಂಖ್ಯೆ: ಕಉಅನಿನಿ/ಸಿ.ಆರ್–61/2024–25 ದಿನಾಂಕ: 26/03/2025

ಇ–ಟೆಂಡರ್ ಮರು ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ನಿಯಮಿತವು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಹೊರಸಂಪನ್ಮೂಲ ಏಜೆನ್ಸಿಯಿಂದ ಮಾನವ ಸೇವೆಯನ್ನು ಒದಗಿಸಲು ಇ–ಟೆಂಡರ್ ಆಹ್ವಾನಿಸಿದೆ.

ವಿವರಗಳಿಗೆ https://kppp.karnataka.gov.in ವೆಬ್‌ಸೈಟ್ ವಿಳಾಸವನ್ನು ನೋಡಬಹುದಾಗಿದೆ.

KPP PORTAL TENDER NUMBER: KUDCL/2024-25/SE0001/CALL-2

ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 05/04/2025, 17.30 ಗಂಟೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 07/04/2025, 11.00 ಗಂಟೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 09/04/2025, 11.00 ಗಂಟೆ. ಹೆಚ್ಚಿನ ವಿವರಗಳಿಗೆ ಕೆಳಕಂಡ ದೂರವಾಣಿ ಸಂಖ್ಯೆಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಸಂಖ್ಯೆ: 080–22252555.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕಉಅನಿನಿ

ವಾ.ಸಾ.ಸಂ.ಇ/ವಾಪ್ರ/5929/ಆಕಾರ್/2024–25

TUNGABHADRA BOARD: TB DAM

e-Procurement Long Term Tender Notice
IFB No.129/2024-25 Dt.26.03.2025

Tender for the work of "**Removing of stoplog elements and providing new spillway gate No.19 of TB Dam**" is re-invited in respect of HW & HLC Division, TB Dam through `e-Procurement'.

Bid Document downloading Start Date & Time:	27.03.2025 at 11:00 AM
Bid Document downloading End Date & Time :	11.04.2025 at 3:00 PM
Bid Submission End Date & Time :	11.04.2025 at 5:30 PM
Date of opening of PQ Stage:	11.04.2025 at 6:00 PM
Date of opening of Commercial Stage :	16.04.2025 at 11:00 AM

Further details can be seen @ **https://tender.apeprocurement.gov.in**

✆ 08394 - 259114
Fax 08394 - 259167

Sd/- Superintending Engineer
I.B, TB Board, TB Dam

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ (ವಿದ್ಯುತ್), ಪಶ್ಚಿಮ ವಲಯ,
ನಂ.98, 1ನೇ ಮಹಡಿ, 8ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.

ಸಂಖ್ಯೆ: ಕಾಅ/ವಿದ್ಯುತ್/ಪಶ್ಚಿಮ/ಟೆಂಡರ್/12/2024–25 ದಿನಾಂಕ: 26–03–2025

ಟೆಂಡರ್ ಹಿಂತೆಗೆದುಕೊಳ್ಳುವಿಕೆ ಅಧಿಸೂಚನೆ

ವಿಷಯ: ಟೆಂಡರ್ ಅಧಿಸೂಚನೆ ಹಿಂತೆಗೆದುಕೊಳ್ಳುವಿಕೆ ಬಗ್ಗೆ.

ಉಲ್ಲೇಖ: 1) ಟೆಂಡರ್ ಅಧಿಸೂಚನೆ ಸಂಖ್ಯೆ: ಕಾಅ/ವಿದ್ಯುತ್/ಪಶ್ಚಿಮ/ಟೆಂಡರ್/12/2024–25, ದಿನಾಂಕ: 05–02–2025.

2) ಟೆಂಡರ್ ತಿದ್ದುಪಡಿ ಸಂಖ್ಯೆ: ಕಾಅ/ವಿದ್ಯುತ್/ಪಶ್ಚಿಮ/ಪಿಆರ್/985/2024–25, ದಿನಾಂಕ: 13–02–2025.

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ತಿಳಿಸಿರುವಂತೆ ಮೇಲ್ಕಂಡ ಕಛೇರಿಯಿಂದ ಕಾಮಗಾರಿಗಳಿಗಾಗಿ ಟೆಂಡರ್ ಅಧಿಸೂಚನೆಯನ್ನು ಆಹ್ವಾನಿಸಲಾಗಿತ್ತು, ಆದರೆ **ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್‌ನ್ನು ಹಿಂತೆಗೆದುಕೊಳ್ಳಲಾಗಿದೆ.** ಸಹಿ/–

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಪಶ್ಚಿಮ ವಲಯ, ಬಿಬಿಎಂಪಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಸರ್ವಜ್ಞನಗರ ವಿಭಾಗ,
7ನೇ ಮಹಡಿ, ಪಿ.ಯು. ಕಟ್ಟಡ, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01.

ಸಂಖ್ಯೆ:ಕಾಪಾಅ(ಸನ)/ಟೆಂಡರ್/ಕೆಪಿಪಿಪಿ/21/2024–25 ದಿನಾಂಕ: 24.03.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಬಿ)

(ದ್ವಿಲಕೋಟೆ ಪದ್ಧತಿ) (ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಸರ್ವಜ್ಞನಗರ ವಿಭಾಗ), ಪೂರ್ವ ವಲಯ, ಇವರು, ಬೃ.ಬೆಂ.ಮ.ಪಾ/ಕೆ.ಪಿ.ಡಬ್ಲ್ಯೂಡಿ/ಸಿ.ಪಿ.ಡಬ್ಲ್ಯೂಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ4)**

ಕ್ರ ಸಂ.	ಕಾಮಗಾರಿಗಳ ಹೆಸರು
1.	ವಾರ್ಡ್ ಸಂಖ್ಯೆ–76/24 ಹೆಣ್ಣೂರಿನ ಮರಾಠಿ ಬಡಾವಣೆ 4ನೇ ಬ್ಲಾಕ್ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳನ್ನು ಮಾಡುವುದು. ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.200.00 ಲಕ್ಷಗಳು ಇಎಂಡಿ: ರೂ. 3,00,000/– (1.00 ಲಕ್ಷ ಇ–ಪಾವತಿ ಮೂಲಕ ಉಳಿದ ರೂ.2,00,000/– ಬಿಜಿ/ಎಫ್‌ಡಿಆರ್ ಗಳನ್ನು ತಾಂತ್ರಿಕ ಬಿಡ್ ತೆರೆಯುವ ಮುಂಚೆ ಸಲ್ಲಿಸತಕ್ಕದ್ದು)
2.	ವಾರ್ಡ್ ಸಂಖ್ಯೆ–76/24 ಹೆಣ್ಣೂರಿನ 1ನೇ ಹಂತ, 5ನೇ ಬ್ಲಾಕ್, 3ನೇ ಮುಖ್ಯ, 1ನೇ ಅಡ್ಡರಸ್ತೆ ಫಾರೆಸ್ಟ್ ರಸ್ತೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳನ್ನು ಮಾಡುವುದು. ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.200.00 ಲಕ್ಷಗಳು ಇಎಂಡಿ: ರೂ. 3,00,000/– (1.00 ಲಕ್ಷ ಇ–ಪಾವತಿ ಮೂಲಕ ಉಳಿದ ರೂ.2,00,000/– ಬಿಜಿ/ಎಫ್‌ಡಿಆರ್ ಗಳನ್ನು ತಾಂತ್ರಿಕ ಬಿಡ್ ತೆರೆಯುವ ಮುಂಚೆ ಸಲ್ಲಿಸತಕ್ಕದ್ದು)
3.	ವಾರ್ಡ್ ಸಂಖ್ಯೆ–76/24 ಹೆಣ್ಣೂರಿನ ಹೆಚ್‌ಬಿಆರ್ ಬಡಾವಣೆ 3ನೇ ಬ್ಲಾಕ್ ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್ ಕಟ್ಟಡ ಹತ್ತಿರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳನ್ನು ಮಾಡುವುದು. ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.200.00 ಲಕ್ಷಗಳು ಇಎಂಡಿ: ರೂ. 3,00,000/– (1.00 ಲಕ್ಷ ಇ–ಪಾವತಿ ಮೂಲಕ ಉಳಿದ ರೂ.2,00,000/– ಬಿಜಿ/ಎಫ್‌ಡಿಆರ್ ಗಳನ್ನು ತಾಂತ್ರಿಕ ಬಿಡ್ ತೆರೆಯುವ ಮುಂಚೆ ಸಲ್ಲಿಸತಕ್ಕದ್ದು)
4.	ವಾರ್ಡ್ ಸಂಖ್ಯೆ–76/24 ಹೆಣ್ಣೂರಿನ 5ನೇ ಬ್ಲಾಕ್, 38ನೇ ಅಡ್ಡರಸ್ತೆ ಮತ್ತು 7ನೇ ಅಡ್ಡರಸ್ತೆ ಪ್ರಕೃತಿ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳನ್ನು ಮಾಡುವುದು. ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.200.00 ಲಕ್ಷಗಳು ಇಎಂಡಿ: ರೂ. 3,00,000/– (1.00 ಲಕ್ಷ ಇ–ಪಾವತಿ ಮೂಲಕ ಉಳಿದ ರೂ.2,00,000/– ಬಿಜಿ/ಎಫ್‌ಡಿಆರ್ ಗಳನ್ನು ತಾಂತ್ರಿಕ ಬಿಡ್ ತೆರೆಯುವ ಮುಂಚೆ ಸಲ್ಲಿಸತಕ್ಕದ್ದು)
5.	ವಾರ್ಡ್ ಸಂಖ್ಯೆ–76/24 ಹೆಣ್ಣೂರಿನ ನಂಜಪ್ಪ ಕಾಲೋನಿ, ಉಮರ್ ನಗರ ಮತ್ತು ಮೆಹಬೂಬ್ ನಗರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ರಸ್ತೆಗಳು ಮತ್ತು ಚರಂಡಿಗಳಿಗೆ ಸುಧಾರಣೆಗಳನ್ನು ಮಾಡುವುದು. ಕಾಮಗಾರಿಗಿಟ್ಟ ಅಂದಾಜು ಮೊತ್ತ ₹.200.00 ಲಕ್ಷಗಳು ಇಎಂಡಿ: ರೂ. 3,00,000/– (1.00 ಲಕ್ಷ ಇ–ಪಾವತಿ ಮೂಲಕ ಉಳಿದ ರೂ.2,00,000/– ಬಿಜಿ/ಎಫ್‌ಡಿಆರ್ ಗಳನ್ನು ತಾಂತ್ರಿಕ ಬಿಡ್ ತೆರೆಯುವ ಮುಂಚೆ ಸಲ್ಲಿಸತಕ್ಕದ್ದು)

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **25.03.2025**ರ ಸಂಜೆ **4:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **04.04.2025**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **05.04.2025**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (4) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **28.03.2025**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಸರ್ವಜ್ಞನಗರ ವಿಭಾಗ

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

9ನೇ ಮಹಡಿ, ಇ ಮತ್ತು ಎಫ್ ಬ್ಲಾಕ್, ಕಾವೇರಿ ಭವನ, ಬೆಂಗಳೂರು–560009,
ದೂರವಾಣಿ: 080–23118888 ವೆಬ್‌ಸೈಟ್: https://ashraya.karnataka.gov.in

Tender Notification No: RGHCL 01 TECH (GEN) 07 2024 Date: 26.03.2025

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ)

ಹರಾಜಿನ ವೇಳಾಪಟ್ಟಿ: 1. ಇ–ಹರಾಜು ಪ್ರಕಟಣೆ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 09.04.2025

2. ಇ–ಹರಾಜು ಪ್ರಕಟಣೆಯಲ್ಲಿ ಭಾಗವಹಿಸಲು ಆಸಕ್ತಿ ಪ್ರಕಟಿಸಲು ಕೊನೆಯ ದಿನಾಂಕ: 11.04.2025

3. ನೇರ ಇ–ಹರಾಜು ದಿನಾಂಕ: 15.04.2025

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ ಅರ್ಹ ಸಾರ್ವಜನಿಕರಿಂದ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ 16 ಯೋಜನಾ ಸ್ಥಳದ ವಸತಿ ಸಂಕೀರ್ಣಗಳಲ್ಲಿ ಅಂಗಡಿ ಮಳಿಗೆಗಳನ್ನು ನಿರ್ಮಿಸಿದ್ದು, ಅವುಗಳ ಹಂಚಿಕೆ ಬಗ್ಗೆ ಇ–ಹರಾಜು ಟೆಂಡರ್ ಮುಖಾಂತರ ಮಾಸಿಕ ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಟೆಂಡರ್ ಅಹ್ವಾನಿಸಲಾಗಿದೆ. **(Indent No. RGHCL/2024-25/Auction5).**

ಇ–ಹರಾಜಿನ ಮತ್ತು ಪ್ರತಿ ಯೋಜನಾ ಸ್ಥಳದ ಅಂಗಡಿಯ ವಿಸ್ತೀರ್ಣ ಮುಂಗಡ ಹಣ ಇತ್ಯಾದಿ ಮಾಹಿತಿ **https://kppp.karnataka.gov.in** ನಲ್ಲಿ ಲಭ್ಯವಿರುತ್ತದೆ.

ಸಹಿ/– ಮುಖ್ಯ ಅಭಿಯಂತರರು (ಪ್ರ)
ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ, ಬೆಂಗಳೂರು

DIPR/CP/SPAN/5918/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗೆ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಿದೆ.

ಕ್ರ ಸಂ	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
	ಮುಖ್ಯ ಅಭಿಯಂತರರ ಕಚೇರಿ (ತ್ಯಾನೀನಿ–ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.				
1.	(ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವ್ಯಾಲಿ	ಬೆಂಜಮಂ/ಕಾನಿಅ(ತ್ಯಾನೀನಿ–ಎಸ್‌ಟಿಪಿ) ಕೆ&ಟಿ/ಸಅ/778/2024–25 ದಿನಾಂಕ: 13.03.2025	₹ 15,57,504/- / ₹ 38,938/-	04.04.2025ರ ಸಂಜೆ 4:00 ಗಂಟೆಯವರೆಗೆ	05.04.2025ರ ಸಂಜೆ 4:05 ಗಂಟೆಗೆ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎಸ್‌ಟಿಪಿ) ಕೆ&ಟಿ ವ್ಯಾಲಿ				
	ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.				
2.	ಪೂರ್ವ–2	ಬೆಂಜಮಂ/2024–25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್2220	₹ 10,60,000/- / ₹ 26,500/-	03.04.2025ರ ಸಂಜೆ 4:00 ಗಂಟೆಯವರೆಗೆ	04.04.2025ರ ಸಂಜೆ 4:00 ಗಂಟೆಗೆ
3.	ಪೂರ್ವ–2	ಬೆಂಜಮಂ/2024–25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್2223	₹ 15,38,000/- / ₹ 38,450/-	03.04.2025ರ ಸಂಜೆ 4:00 ಗಂಟೆಯವರೆಗೆ	04.04.2025ರ ಸಂಜೆ 4:00 ಗಂಟೆಗೆ
4.	ಪೂರ್ವ–2	ಬೆಂಜಮಂ/2024–25/ಡಬ್ಲ್ಯೂಎಸ್/ವರ್ಕ್_ಇಂಡೆಂಟ್2224	₹ 25,03,000/- / ₹ 50,100/-	03.04.2025ರ ಸಂಜೆ 4:00 ಗಂಟೆಯವರೆಗೆ	04.04.2025ರ ಸಂಜೆ 4:00 ಗಂಟೆಗೆ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ–2)				
	ಮುಖ್ಯ ಅಭಿಯಂತರರ ಕಚೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.				
5.	ಉತ್ತರ–1	ಬೆಂಜಮಂ/ಕಾನಿಅ(ಉತ್ತರ–1)/ತಾಂಅ/4422/2024–25 ದಿನಾಂಕ: 24.03.2025	₹ 6,11,158/- / ₹ 15,500/-	02.04.2025ರ ಮಧ್ಯಾಹ್ನ 3:00 ಗಂಟೆಯವರೆಗೆ	03.04.2025ರ ಸಂಜೆ 4:00 ಗಂಟೆಯ ನಂತರ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ–1)				
	ಮುಖ್ಯ ಅಭಿಯಂತರರ ಕಚೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009.				
6.	ಪಶ್ಚಿಮ–1	ಬೆಂಜಮಂ/ಕಾನಿಅ(ಪಶ್ಚಿಮ–1)/ಪಿಬಿ/5958/2024–25 ದಿನಾಂಕ: 26.03.2025 (2ನೇ ಕರೆ)	₹ 5,89,434/- / ₹ 14,800/-	04.04.2025ರ ಸಂಜೆ 4:00 ಗಂಟೆಯವರೆಗೆ	05.04.2025ರ ಸಂಜೆ 4:30 ಗಂಟೆಯ ನಂತರ
	ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ–1)				

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲೆ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಡಿ.ಐ.ಪಿ.ಆರ್/ಎಸ್ಐ/5906/2024–25

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–57/3256/2024–25 ದಿನಾಂಕ: 25.03.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ ತಣ್ಣೀರುಬಾವಿ ಕೈಗಾರಿಕಾ ಪ್ರದೇಶದ ಖಾಲಿ ಜಾಗದ ಸುತ್ತಲೂ ಮುಳ್ಳುತಂತಿ ಬೇಲಿಯನ್ನು ಮತ್ತು ಸಂಪರ್ಕ ರಸ್ತೆಯನ್ನು ಕಲ್ಪಿಸುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 08.04.2025 ಸಂಜೆ 4.30 ಗಂಟೆಯವರೆಗೆ

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/5905/Zen/2024-25

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

MESCOM

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಾರ್ಪೊರೇಟ್ ಕಚೇರಿ, "ಮೆಸ್ಕಾಂ ಭವನ", ಬಿಜೈ, ಮಂಗಳೂರು–575004
ದೂರವಾಣಿ: 0824–2885796 CIN: U40109 KA 2002 SGC 030425

ಸಂಖ್ಯೆ: ಮಂ.ವಿ.ಸ.ಕಂ./ಅ.ಇಂ(ಯೋ)/ ಕಾನಿಇಂ(ಎ.ಪಿ.ಆರ್)/2024–25/3251 ದಿನಾಂಕ: 26.03.2025

ಟೆಂಡರ್ ಪ್ರಕಟಣೆ

ಮೆಸ್ಕಾಂನ ಮಂಗಳೂರು ವೃತ್ತ ವ್ಯಾಪ್ತಿಯಲ್ಲಿ ಈ ಕೆಳಕಂಡ ಭೂಗತ ಕೇಬಲ್ ಅಳವಡಿಕೆ ಕಾಮಗಾರಿಗಳನ್ನು ದರ ಒಪ್ಪಂದದಡಿ ಪೂರ್ಣ ಗುತ್ತಿಗೆ ಆಧಾರದಲ್ಲಿ ಕೈಗೆತ್ತಿಕೊಳ್ಳಲು ಟೆಂಡರ್‌ಗಳನ್ನು ಆಹ್ವಾನಿಸುತ್ತಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಬಿಡ್ ವಿಚಾರಣಾ ಸಂಖ್ಯೆ
1	ಮಂಗಳೂರು ವಿಭಾಗ, ಉಳ್ಳಾಲ ಉಪವಿಭಾಗದ ಉಳ್ಳಾಲ ನಗರಸಭೆ ವ್ಯಾಪ್ತಿಯಲ್ಲಿನ ಹಾಲಿ ಓವರ್‌ಹೆಡ್ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಭೂಗತ ಕೇಬಲ್ ವ್ಯವಸ್ಥೆಯೊಂದಿಗೆ ಪರಿವರ್ತಿಸುವ ಕಾಮಗಾರಿ (ಭಾಗ–1)	MESCOM/2024-25/UC/WORK_INDENT273
2	ಮಂಗಳೂರು ವಿಭಾಗ, ಉಳ್ಳಾಲ ಉಪವಿಭಾಗದ ಉಳ್ಳಾಲ ನಗರಸಭೆ ವ್ಯಾಪ್ತಿಯಲ್ಲಿನ ಹಾಲಿ ಓವರ್‌ಹೆಡ್ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಭೂಗತ ಕೇಬಲ್ ವ್ಯವಸ್ಥೆಯೊಂದಿಗೆ ಪರಿವರ್ತಿಸುವ ಕಾಮಗಾರಿ (ಭಾಗ–2)	MESCOM/2024-25/UC/WORK_INDENT276
3	ಮಂಗಳೂರು ವಿಭಾಗದ ಮಣ್ಣಗುಡ್ಡ ಉಪವಿಭಾಗ ವ್ಯಾಪ್ತಿಯಲ್ಲಿನ ಹಾಲಿ ಓವರ್‌ಹೆಡ್ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಭೂಗತ ಕೇಬಲ್ ವ್ಯವಸ್ಥೆಯೊಂದಿಗೆ ಪರಿವರ್ತಿಸುವ ಕಾಮಗಾರಿ	MESCOM/2024-25/UC/WORK_INDENT274
4	ಕಾವೂರು ವಿಭಾಗದ ಕಾವೂರು ಉಪವಿಭಾಗ ವ್ಯಾಪ್ತಿಯಲ್ಲಿನ ಹಾಲಿ ಓವರ್‌ಹೆಡ್ ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಭೂಗತ ಕೇಬಲ್ ವ್ಯವಸ್ಥೆಯೊಂದಿಗೆ ಪರಿವರ್ತಿಸುವ ಕಾಮಗಾರಿ	MESCOM/2024-25/UC/WORK_INDENT275

ಆಸಕ್ತಿಯುಳ್ಳ ಅರ್ಹ ಬಿಡ್ದುದಾರರು ವೆಬ್‌ಸೈಟ್ **https://kppp.karnataka.gov.in** ಗೆ ದಿನಾಂಕ **29.03.2025** ಅಥವಾ ನಂತರ ಲಾಗ್‌ಆನ್ ಮಾಡಬಹುದು.

ಸಹಿ/– ಅಧೀಕ್ಷಕ ಇಂಜನಿಯರ್ (ವಿ), (ಯೋಜನೆಗಳು)

DIPR/ADM/KSMCA/1684/ 24-25 dt: 26.03.2025

ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ 1912ಕ್ಕೆ ಕರೆ ಮಾಡಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ.49, 4 ಮತ್ತು 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001. ದೂರವಾಣಿ: 080–40931272 ವೆಬ್‌ಸೈಟ್: www.kiadb.in
ಇ–ಮೇಲ್: cdoce1@kiadb.in or jdtp@kiadb.in

ಸಂ.ಐಎಡಿಬಿ/ಜೆಡಿಟಿಪಿ/ಇಐಎ/ಇಟಿಎನ್‌ಡಿ–ಇಸಿ–23/554/2024–25 ದಿನಾಂಕ:26–03–2025

ಪರಸರ ವಿಮೋಚನಾ ಪತ್ರ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪಡೆಯಲು ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಪರಿಸರ ಸಮಾಲೋಚಕರಿಂದ ಸಲಹಾ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಅಹ್ವಾನಿಸಿದೆ. ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ಇದರ ಮಾನ್ಯತೆ ಪಡೆದ ಪಟ್ಟಿಯಲ್ಲಿ 7(c) ವರ್ಗದಲ್ಲಿ ಸಲಹೆಗಾರರಾಗಿ ಹೆಸರು ಸೇರ್ಪಡೆಯಾಗಿರುವ ಸಂಸ್ಥೆಗಳು NABL Accredited Consultant/ NABET consultancy MoU with NABL Accredited Consultant ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಕ್ರ. ಸಂ.	ಕೆಲಸದ ಹೆಸರು	ಇ.ಎಂ.ಡಿ (ರೂ. ಲಕ್ಷಗಳು)
1	ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಬಿಕ್ಕನಹಳ್ಳಿ ಗ್ರಾಮದಲ್ಲಿ ಅಭಿವೃದ್ಧಿಪಡಿಸುತ್ತಿರುವ ಸರ್ಜಾಪುರ ಕೈಗಾರಿಕಾ ಪ್ರದೇಶದ 4ನೇ ಹಂತ ಒಟ್ಟು 45.49ಎ ವಿಸ್ತೀರ್ಣಕ್ಕೆ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ (MoEF&CC) ಪರಿಸರ ವಿಮೋಚನಾ (EC) ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನೆ ಅನುಮತಿ ಪತ್ರ (CFE) ಪಡೆಯಲು ಹಾಗೂ 3 ವರ್ಷಗಳ ಅವಧಿಯವರೆಗೆ ಪರಿಸರ ವಿಮೋಚನಾ ಪತ್ರ ಮತ್ತು ಸ್ಥಾಪನೆ ಅನುಮತಿ ಪತ್ರಗಳಲ್ಲಿ ವಿಧಿಸುವ ನಿಬಂಧನೆಗಳಿಗೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಲು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಇತ್ಯಾದಿಯನ್ನು ಸಿದ್ಧಪಡಿಸಲು.	2.00

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ದಿನಾಂಕಗಳು ಕೆಳಕಂಡಂತಿರುವುದು:

- ಬಿಡ್ ಪೂರ್ವ ವಿಚಾರಣೆಗಳನ್ನು ಸ್ವೀಕರಿಸುವ ಕಡೆಯ ದಿನಾಂಕ: **04–04–2025 ರಂದು ಸಂಜೆ 4.00 ಘಂಟೆಯವರೆಗೆ.**
- ಬಿಡ್ ಪೂರ್ವ ಸಭೆ ನಡೆಯುವ ದಿನಾಂಕ: **05–04–2025 ರಂದು ಬೆಳಿಗ್ಗೆ 11.30 ಘಂಟೆಗೆ.**
- ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: **15–04–2025 ರಂದು ಸಂಜೆ 3.00 ಘಂಟೆಯವರೆಗೆ.**
- ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **16–04–2025 ರಂದು ಸಂಜೆ 3.30 ಘಂಟೆ ನಂತರ.**

ಸಹಿ/–
ಮುಖ್ಯ ಅಭಿಯಂತರರು–1
ಕೆ.ಐ.ಎ.ಡಿ.ಬಿ, ಬೆಂಗಳೂರು

ವಾಸಾಸಂಇ/ವಾ.ಪ್ರ/5935/ಎಂಎಎ/2024–25

ಸುಭಾಷಿತ

ಈ ಬದುಕು ಸರಳವಾಗಿದೆ. ಆದರೆ ನಾವು ಹಟ ಹಿಡಿದು ಅದನ್ನು ಜಟಿಲಗೊಳಿಸುತ್ತೇವೆ.

–ಕನ್‌ಫ್ಯೂಷಿಯಸ್

ಕುನಾಲ್ ಕಾಮ್ರಾ ಪ್ರಕರಣ ಹಾಸ್ಯಕ್ಕೆ ದಾಂದಲೆ ಉತ್ತರವೇ?

ಹಾಸ್ಯವನ್ನು ಹಾಸ್ಯವಾಗಿ ಸ್ವೀಕರಿಸಲು ತನ್ನಿಂದ ಆಗುತ್ತಿಲ್ಲ ಎಂಬುದನ್ನು ನಮ್ಮ ಸಮಾಜವು ಮತ್ತೆ ಮತ್ತೆ ತೋರಿಸಿಕೊಡುತ್ತಿದೆ. ಹಾಸ್ಯದ ವಿರುದ್ಧ ನಡೆದಿರುವ ಅಭಿಯಾನದಲ್ಲಿ ರಾಜಕಾರಣಿಗಳು ಮುಂಚೂಣಿಯಲ್ಲಿ ಇರುವಂತೆ ಕಾಣುತ್ತಿದೆ. ಹಾಸ್ಯ ಮಾಡಿದಾಗ ಬಹಳ ಸುಲಭವಾಗಿ ಕೋಪಕ್ಕೆ ಗುರಿಯಾಗುವ ಗುಂಪಿನವರು ತಮ್ಮ ಸಿಟ್ಟು ತೋರಿಸಿಕೊಳ್ಳಲು ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಅವರನ್ನು ಮತ್ತೆ ಮತ್ತೆ ಗುರಿಮಾಡಿಕೊಳ್ಳುತ್ತಿದ್ದಾರೆ. ಈ ಬಾರಿ ಕುನಾಲ್ ಅವರು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಏಕನಾಥ ಶಿಂದೆ ಅವರನ್ನು ಉದ್ದೇಶಿಸಿ ಮುಂಬೈನಲ್ಲಿ ಆಡಿದ ಮಾತೊಂದು ವಿವಾದ ಸೃಷ್ಟಿಸಿದೆ. ಶಿಂದೆ ಅವರನ್ನು ಗುರಿಯಾಗಿಸಿಕೊಂಡು ಕುನಾಲ್ ಅವರು ಕಾರ್ಯಕ್ರಮವೊಂದರಲ್ಲಿ ಮಾತಿನಿಂದ ತಿವಿದಿರುವುದು ಶಿವಸೇನಾ ಕಾರ್ಯಕರ್ತರನ್ನು ಕೆರಳಿಸಿದೆ. ಅವರು ಕಾರ್ಯಕ್ರಮ ನಡೆದ 'ಹ್ಯಾಬಿಟ್ಯಾಟ್ ಸ್ಟುಡಿಯೊ'ದಲ್ಲಿ ದಾಂದಲೆ ಸೃಷ್ಟಿಸಿದ್ದಾರೆ, ಆ ಸ್ಟುಡಿಯೊ ಇರುವ ಹೋಟೆಲ್‌ನ ಮೇಲೆಯೂ ತಮ್ಮ ಕೋಪವನ್ನು ಹರಿಬಿಟ್ಟಿದ್ದಾರೆ. ಸ್ಟುಡಿಯೊದ ಒಂದು ಭಾಗದಲ್ಲಿ ಅಕ್ರಮವಾಗಿ ಶೆಡ್‌ಗಳನ್ನು ನಿರ್ಮಿಸಲಾಗಿತ್ತು ಎಂದು ಹೇಳಿ ಬೃಹನ್ ಮುಂಬೈ ಮಹಾನಗರ ಪಾಲಿಕೆಯು ಅವುಗಳನ್ನು ತೆರವು ಮಾಡಿದೆ. ಶಿಂದೆ ಅವರ ವಿರುದ್ಧ ಅವಹೇಳನಕಾರಿ ಮಾತು ಆಡಿದ ಆರೋಪ ಹೊರಿಸಿ ಕುನಾಲ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಕುನಾಲ್ ಅವರು ಕ್ಷಮೆ ಯಾಚಿಸಬೇಕು ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಒತ್ತಾಯಿಸಿದ್ದಾರೆ. ಒಂದು ಹೆಜ್ಜೆ ಮುಂದೆ ಹೋಗಿರುವ ಶಿವಸೇನಾ ನಾಯಕರೊಬ್ಬರು ಕುನಾಲ್ ಅವರನ್ನು ಪಕ್ಷದ ಕಾರ್ಯಕರ್ತರು ದೇಶದ ಎಲ್ಲೆಡೆ ಅಟ್ಟಿಸಿಕೊಂಡು ಹೋಗುತ್ತಾರೆ, ಅವರು ದೇಶ ಬಿಟ್ಟು ಓಡಿ ಹೋಗುವಂತೆ ಮಾಡಲಾಗುತ್ತದೆ ಎಂಬ ಎಚ್ಚರಿಕೆ ನೀಡಿದ್ದಾರೆ.



ಅಧಿಕಾರಸ್ಥರ ಮುಖಕ್ಕೆ ಹಿಡಿಯುವಂತೆ ಸತ್ಯವನ್ನು ಹಾಸ್ಯದ ಮೂಲಕ ಹೇಳುವ ವ್ಯಕ್ತಿಗಳು ಸಮಾಜಕ್ಕೆ ಬೇಕು

ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ರಾಜಕಾರಣಿಗಳಲ್ಲಿ ಇರುವ ತಪ್ಪು ಗ್ರಹಿಕೆಯನ್ನು ಫಡಣವೀಸ್ ಅವರ ಮಾತು ತೋರಿಸುತ್ತಿದೆ. 'ಸ್ವಾತಂತ್ರ್ಯ ಎಂಬುದು ನಿಯಂತ್ರಣವಿಲ್ಲದ ವರ್ತನೆಯಾಗಬಾರದು... ರಾಜ್ಯದ ಜನರು ಗೌರವಿಸುವ ಉಪಮುಖ್ಯಮಂತ್ರಿಯನ್ನು, ರಾಜ್ಯದ ಹಿರಿಯ ನಾಯಕರನ್ನು ಅಗೌರವದಿಂದ ಕಾಣಲು, ಇಂತಹ ಕೀಳು ಮಟ್ಟದ ಹಾಸ್ಯ ಮಾಡಲು ಯಾರಿಗೂ ಹಕ್ಕಿಲ್ಲ' ಎಂದು ಫಡಣವೀಸ್ ಹೇಳಿದ್ದಾರೆ. ಜನರು ತಮ್ಮನ್ನು ಗೌರವಿಸಬೇಕು, ತಮ್ಮನ್ನು ಹೊಗಳಬೇಕು ಎಂದು ಬಯಸುವ ಮೂಲಕ ರಾಜಕಾರಣಿಗಳು ಅಗೌರವ ಸಂಪಾದಿಸಬಲ್ಲರು, ಅಷ್ಟೇ. ಹಾಸ್ಯವೊಂದು ಕೆಳಮಟ್ಟದ್ದೋ ಮೇಲ್ಮಟ್ಟದ್ದೋ ಎಂಬುದನ್ನು ತೀರ್ಮಾನಿಸಬೇಕಿರುವುದು ಮುಖ್ಯಮಂತ್ರಿಯ ಕೆಲಸ ಅಲ್ಲ. 'ಕೆಳಮಟ್ಟದ ಹಾಸ್ಯ'ಕ್ಕೂ ಅದರದೇ ಆದ ಸ್ಥಾನ ಇದೆ, ಅಂತಹ ಹಾಸ್ಯವನ್ನು ಅದರದೇ ಆದ ವೇದಿಕೆಯಲ್ಲಿ ಮಾಡಬಹುದು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಬೇಕಿರುವ ಮುಖ್ಯಮಂತ್ರಿಯು ಅಭಿವ್ಯಕ್ತಿಯ ಹಕ್ಕನ್ನು ಚಲಾಯಿಸಿದ್ದಕ್ಕಾಗಿ ಪ್ರಜೆಯೊಬ್ಬರು ಕ್ಷಮೆ ಕೇಳಬೇಕು ಎಂದು ಆಗ್ರಹಿಸುತ್ತಿರುವುದು ಆಶ್ಚರ್ಯ ಮೂಡಿಸುವಂಥದ್ದು. ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ, ಆದರೆ ಅದಕ್ಕೆ ಮಿತಿ ಇದೆ ಎಂದು ಶಿಂದೆ ಹೇಳಿದ್ದಾರೆ. ಆದರೆ ಟೀಕೆಗೆ, ಹಾಸ್ಯಕ್ಕೆ ಗುರಿಯಾಗಿರುವ ವ್ಯಕ್ತಿಯೇ 'ಮಿತಿ'ಯನ್ನು ನಿರ್ಧರಿಸಲು ಆಗದು.

ಹಾಸ್ಯದ ಮಾತುಗಳನ್ನು ಆಡಿದ ವ್ಯಕ್ತಿಯ ಬೆನ್ನಟ್ಟಿ ಹೋಗುವುದು, ಆತನನ್ನು ಕಿರುಕುಳಕ್ಕೆ ಗುರಿಪಡಿಸುವುದು ಗಂಭೀರವಾದ ವಿಚಾರ. ಟೀಕೆ ಮತ್ತು ಹಾಸ್ಯವನ್ನು ಶಿವಸೇನಾ ಪಕ್ಷವು ಸಹಿಸಿದ ನಿದರ್ಶನಗಳು ಹಿಂದೆಯೂ ಬಹಳ ಕಡಿಮೆಯೇ. ಹಾಸ್ಯವನ್ನು ಹಿಂಸೆಯ ಮೂಲಕ ಎದುರಿಸಿದ ಇತಿಹಾಸ ಕೂಡ ಈ ಪಕ್ಷಕ್ಕೆ ಇದೆ. ಶಿವಸೇನಾ ಪಕ್ಷವನ್ನು ಸ್ಥಾಪಿಸಿದ ವ್ಯಕ್ತಿ ವೃತ್ತಿಪರ ವ್ಯಂಗ್ಯಚಿತ್ರಕಾರ ಆಗಿದ್ದವರು. ಹೀಗಿದ್ದರೂ ವ್ಯಂಗ್ಯ ಮತ್ತು ವಿಡಂಬನೆಯನ್ನು ಎದುರಿಸಲು ಈ ಪಕ್ಷವು ದೈಹಿಕ ದಾಳಿ, ಬೆದರಿಕೆ, ದಾಂದಲೆಯಂತಹ ಅಸ್ತ್ರಗಳನ್ನು ಬಳಕೆ ಮಾಡುತ್ತಿದೆ. ಅಸಹನೆಯ ವಾತಾವರಣವೊಂದು ದೇಶದಲ್ಲಿ ಬಲ ಹೆಚ್ಚಿಸಿಕೊಳ್ಳುತ್ತಿದೆ. ರಾಜಕಾರಣಿಗಳು ತಮ್ಮನ್ನು ತಾವು ನೈತಿಕವಾಗಿ ಬಹಳ ಉನ್ನತ ವ್ಯಕ್ತಿಗಳೆಂದು ಭಾವಿಸುತ್ತಿದ್ದಾರೆ. ಹಾಸ್ಯವೆಂಬುದು ಸಮಾಜವು ತನಗೆ ತಾನೇ ಹಿಡಿದುಕೊಳ್ಳುವ ಕನ್ನಡಿ. ಅದನ್ನು ಸಹಿಸಲು ಆಗದೇ ಇರುವುದು ಸರ್ವಾಧಿಕಾರದ, ಅನಾರೋಗ್ಯಕರವಾದ ಸಮಾಜದ ಲಕ್ಷಣ. ಆಡಿದ ಮಾತುಗಳಿಗೆ ಕ್ಷಮೆ ಕೇಳುವುದಿಲ್ಲ ಎನ್ನುವ ಮೂಲಕ ಕುನಾಲ್ ಅವರು ಒಳ್ಳೆಯ ಕೆಲಸ ಮಾಡಿದ್ದಾರೆ. ಅಧಿಕಾರಸ್ಥರ ಮುಖಕ್ಕೆ ಹಿಡಿಯುವಂತೆ ಸತ್ಯವನ್ನು ಹಾಸ್ಯದ ಮೂಲಕ ಹೇಳುವ ವ್ಯಕ್ತಿಗಳು ಸಮಾಜಕ್ಕೆ ಬೇಕು.

ದಿನದ ಟ್ವೀಟ್

ಗ್ರಾಹಕ ಸೇವೆ ರಾಜ್ಯಭಾಷೆಯಲ್ಲಿ ಇರಲಿ

ಕರ್ನಾಟಕದಲ್ಲಿ ಎಲ್ಲಾ ಗ್ರಾಹಕ ಸೇವೆಗಳನ್ನು ಕನ್ನಡದಲ್ಲಿ ಕಡ್ಡಾಯವಾಗಿ ಕೊಡತಕ್ಕದ್ದು ಎಂಬ ಕಾನೂನು ಇಂದಿನ ತುರ್ತು ಅಗತ್ಯ. ಎಲ್ಲಾ ಗ್ರಾಹಕ ಸೇವೆಗಳನ್ನು ಕನ್ನಡದಲ್ಲಿ ಪಡೆಯುವುದು ಕನ್ನಡಿಗರ ಹಕ್ಕು, ಅದು ಸಿಗುವಂತೆ ಮಾಡುವುದು ಸರ್ಕಾರದ ಹೊಣೆ. ಇದು ತೀರಾ ಸಾಮಾನ್ಯ ಸಂಗತಿ.

ಪ್ರಶಾಂತ

ಕಿಡಿನುಡಿ

ಕೆಎಸ್‌ಆರ್‌ಟಿಸಿ (ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ), ಟಿಎನ್‌ಆರ್‌ಟಿಸಿ (ತಮಿಳುನಾಡು ರಾಜ್ಯ ಸಾರಿಗೆ ನಿಗಮ) ಬಸ್‌ಗಳಲ್ಲಿ ಪ್ರಯಾಣಿಸಿದ್ದೇನೆ. ಚಾಲಕರು ಮತ್ತು ಚಾಲನೆಯ ವಿಷಯದಲ್ಲಿ ಎಪಿಎಸ್‌ಆರ್‌ಟಿಸಿ (ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮ) ಬಸ್‌ಗಳ ಹತ್ತಿರಕ್ಕೆ ಬರಲು ಸಹ ಯಾರಿಗೂ ಸಾಧ್ಯವಿಲ್ಲ. ವೇಗದ ಚಾಲನೆ ಮತ್ತು ಹೈಟೆಕ್ ಬಸ್‌ಗಳಿಗೆ ಸಂಬಂಧಿಸಿದಂತೆ ಅಲ್ಲ, ಸುರಕ್ಷೆ ಮತ್ತು ನೆಮ್ಮದಿಗೆ ಸಂಬಂಧಿಸಿದಂತೆ ಇದನ್ನು ಹೇಳುತ್ತಿದ್ದೇನೆ. ತಮಿಳುನಾಡು ಮತ್ತು ಕರ್ನಾಟಕದಲ್ಲಿ ಚಾಲಕರು ಹಾಗೂ ನಿರ್ವಾಹಕರು ಅಹಂಕಾರ, ಬೆದರಿಸುವ ರೀತಿಯಲ್ಲಿ ವರ್ತಿಸುವುದನ್ನು ಹಲವು ಬಾರಿ ಕಂಡಿದ್ದೇನೆ.

ಚಂದ್ರ, ಸಾಫ್ಟ್‌ವೇರ್ ಎಂಜಿನಿಯರ್

25 ವರ್ಷಗಳ ಹಿಂದೆ

ಸೋಮವಾರ, 27-3-2000

• ಆಲಮಟ್ಟಿ: ಕರಸೇವೆ ವಿಫಲ 600 ಮಂದಿ ಬಂಧನ

ವಿಜಾಪುರ, ಮಾರ್ಚ್ 26– ಆಲಮಟ್ಟಿ ಅಣೆಕಟ್ಟೆ ಎತ್ತರ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರದ ನಿಲುವನ್ನು ಪ್ರತಿಭಟಿಸಿ ಇಲ್ಲಿಗೆ ಸಮೀಪದ ಆಲಮಟ್ಟಿಯಲ್ಲಿ ಇಂದು ಮಧ್ಯಾಹ್ನ ನಿಷೇಧಿತ ಪ್ರದೇಶಕ್ಕೆ ನುಗ್ಗಲು ಯತ್ನಿಸಿದ 600ಕ್ಕೂ ಹೆಚ್ಚು ಕರ ಸೇವಕರನ್ನು ಪೊಲೀಸರು ಬಂಧಿಸಿದ್ದಾರೆ.

ಯರನಾಳದ ಸಂಗನಬಸವ ಸ್ವಾಮೀಜಿ ನೇತೃತ್ವದಲ್ಲಿ ಕರಸೇವೆಗೆ ನಡೆದ ಯತ್ನ ಶಾಂತ ರೀತಿಯಲ್ಲಿ ನಡೆಯಿತು. ಕಳೆದ ಕೆಲವು ದಿನಗಳಿಂದ ಆಲಮಟ್ಟಿಯಲ್ಲಿ ಕರಸೇವೆ ಮಾಡುವುದಾಗಿ ಘೋಷಿಸುತ್ತಾ ಬಂದಿದ್ದ ಸಮಿತಿ ಕರಸೇವೆ ಕೈಗೊಳ್ಳುವ ಯತ್ನದಲ್ಲಿ ವಿಫಲವಾಯಿತು. ಯೋಜಿತ ಕಾರ್ಯಕ್ರಮ ಎಂಬ ರೀತಿಯಲ್ಲಿ ಚಳವಳಿಕಾರರು ಅಣೆಕಟ್ಟೆ ಪ್ರದೇಶದತ್ತ ಪ್ರವೇಶಿಸಿದಾಗ ಪೊಲೀಸರಿಂದ ಬಂಧನಕ್ಕೆ ಒಳಗಾದರು.

• ಮಿತವ್ಯಯ: ಸಚಿವಾಲಯಗಳಿಗೆ ಪ್ರಧಾನಿ ಪತ್ರ

ದುಬೈ, ಮಾರ್ಚ್ 26 (ಯುಎನ್‌ಐ)– ಮಿತವ್ಯಯ ಕ್ರಮಗಳನ್ನು ಅನುಸರಿಸಬೇಕು ಎಂದು ಹೇಳಿ ಪ್ರಧಾನಿಯವರು ಎಲ್ಲಾ ಸಚಿವಾಲಯಗಳಿಗೂ ಪತ್ರ ಬರೆದಿದ್ದಾರೆ. ಈ ಮೂಲಕ ಸರ್ಕಾರಿ ವೆಚ್ಚ ತಗ್ಗಿಸುವ ಗಂಭೀರ ಪ್ರಯತ್ನ ಆರಂಭವಾಗಿದೆ.

ಹಣಕಾಸು ಖಾತೆ ರಾಜ್ಯ ಸಚಿವ (ಕಂದಾಯ) ವಿ.ಧನಂಜಯ ಕುಮಾರ್ ಅವರು ನಿನ್ನೆ ರಾತ್ರಿ ಇಲ್ಲಿ ಸಭೆಯೊಂದರಲ್ಲಿ ಈ ವಿಷಯ ತಿಳಿಸಿದರು.

ಸಚಿವರು ಮತ್ತು ಹಿರಿಯ ಅಧಿಕಾರಿಗಳು ತಮ್ಮ ವಿದೇಶಿ ಪ್ರವಾಸಗಳನ್ನು ಕಡಿತಗೊಳಿಸಬೇಕು ಮತ್ತು ತಮ್ಮ ಮನರಂಜನಾ ವೆಚ್ಚಗಳನ್ನು ತಗ್ಗಿಸಬೇಕು ಎಂದು ಪ್ರಧಾನಿಯವರು ತಮ್ಮ ಪತ್ರದಲ್ಲಿ ಕೇಳಿಕೊಂಡಿದ್ದಾರೆ ಎಂದು ಧನಂಜಯ ಕುಮಾರ್ ಹೇಳಿದರು.

50 ವರ್ಷಗಳ ಹಿಂದೆ

ಗುರುವಾರ, 27-3-1975

• ಮುಂದುವರಿಯಲಿ

ಬೆಂಗಳೂರು, ಮಾರ್ಚ್ 26– 75 ಪೈಸೆ ಕನಿಷ್ಠ ದರವನ್ನು ತಿರಸ್ಕರಿಸಲು ಆಟೊರಿಕ್ಷಾ ಚಾಲಕರು ನಿರ್ಧರಿಸಿದ್ದಾರೆ. ಚಾಲಕರ ಸಂಘ ಈ ಬಗ್ಗೆ ಸರ್ಕಾರದೊಡನೆ ಮಾತುಕತೆ ನಡೆಸುವವರೆಗೆ 90 ಪೈಸೆ ಕನಿಷ್ಠ ದರವನ್ನೇ ಚಾಲಕರು ಕೇಳಲಿದ್ದಾರೆ.

90 ಪೈಸೆ ಕನಿಷ್ಠ ದರವನ್ನು ಮುಂದುವರಿಸಿ ನಂತರದ ಕಿಲೊಮೀಟರ್‌ಗೆ 45 ಪೈಸೆ ಬದಲು 40 ಪೈಸೆ ಗೊತ್ತು ಮಾಡಿದರೂ ಡ್ರೈವರ್‌ಗಳು ಒಪ್ಪಲು ಸಿದ್ಧ.

ಸರ್ಕಾರದ 75 ಪೈಸೆ ಕನಿಷ್ಠ ದರ ಕುರಿತ ಆಜ್ಞೆ ಏಪ್ರಿಲ್ ಒಂದರಿಂದ ಜಾರಿಗೆ ಬರಲಿದೆ. ಅಂದು ಆಟೊರಿಕ್ಷಾ ಚಾಲಕರು ಮುಷ್ಕರ ಹೂಡುವ ಆಲೋಚನೆ ಮಾಡಿದ್ದಾರೆ.

• ಬೆಳಗಾವಿ– ಪಣಜಿ ನೇರ ಡಯಲಿಂಗ್

ಬೆಳಗಾವಿ, ಮಾರ್ಚ್ 26– ಬೆಳಗಾವಿ– ಪಣಜಿ ನಡುವೆ ನೇರ ಡಯಲಿಂಗ್ ವ್ಯವಸ್ಥೆ ಇಂದು ಪ್ರಾರಂಭವಾಯಿತು. ಸಂಸತ್ ಸದಸ್ಯ ಎ.ಕೆ.ಕೊಟ್ರಶೆಟ್ಟಿ ಅವರು ನೂತನ ವ್ಯವಸ್ಥೆಯನ್ನು ಉದ್ಘಾಟಿಸಿ ಗೋವೆಯ ಕಾನೂನು ಸಚಿವ ಪ್ರಸಾದ್‌ಸಿಂಗ್ ರಾಣೆ ಅವರೊಂದಿಗೆ ಸಂಭಾಷಣೆ ನಡೆಸಿದರು.

ಬೆಳಗಾವಿ ವಾಣಿಜ್ಯ ಸಂಘದ ಅಧ್ಯಕ್ಷ ಬಿ.ಎಂ.ಗೋಗಟೆ ಅವರು ಅಧ್ಯಕ್ಷತೆ ವಹಿಸಿದ್ದರು. ಟೆಲಿಫೋನ್ಸ್ ಎಂಜಿನಿಯರ್ ಬಿ.ಎನ್.ಉಪಾಧ್ಯಾಯ ಅವರು ಸ್ವಾಗತಿಸಿ, ಶೀಘ್ರದಲ್ಲಿಯೇ ಬೆಳಗಾವಿ– ಮುಂಬೈ ನಡುವೆ ನೇರ ಡಯಲಿಂಗ್ ವ್ಯವಸ್ಥೆ ಏರ್ಪಡಿಸುವುದಾಗಿ ಹೇಳಿದರು.

ತಿರುಚುವಿಕೆಯನ್ನು ಸರಿಪಡಿಸಿ ಪರಂಪರೆಯನ್ನು ಮರಳಿ ಪಡೆದುಕೊಳ್ಳಬೇಕಿದೆ

ನಮಗೆ ಈಗ ಬೇಕಿರುವ ಲೋಹಿಯಾ

ವಿಶ್ಲೇಷಣೆ

ಯೋಗೇಂದ್ರ ಯಾದವ್

ರಾಮ ಮನೋಹರ ಲೋಹಿಯಾ ಅವರ 115ನೇ ಜನ್ಮದಿನವಾದ ಮಾರ್ಚ್ 23ರಂದು ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು 'ದಾರ್ಶನಿಕ ನಾಯಕ, ದಿಟ್ಟ ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಾಮಾಜಿಕ ನ್ಯಾಯದ ಹರಿಕಾರ' ಎಂದು ಬಣ್ಣಿಸಿದ್ದಾರೆ. ಸಮಾಜವಾದಿ ಪಕ್ಷ, ರಾಷ್ಟ್ರೀಯ ಜನತಾ ದಳದಂತಹ ಲೋಹಿಯಾವಾದಿ ಪಕ್ಷಗಳನ್ನು ಬಿಟ್ಟರೆ ಇತರ ಪಕ್ಷಗಳು ಲೋಹಿಯಾ ಅವರ ರಾಜಕೀಯ ಮತ್ತು ಸೈದ್ಧಾಂತಿಕ ಪರಂಪರೆಯನ್ನು ತಮ್ಮದಾಗಿಸಿಕೊಳ್ಳುವ ಪ್ರಯತ್ನ ನಡೆಸಿಲ್ಲ. ಅವರ ಪರಂಪರೆಯು ಅವರು ಮಾಡಿದ ರಾಜಕೀಯ ಚಟುವಟಿಕೆಗಳ ನೆನಪುಗಳಲ್ಲಿ ಮಾತ್ರ ಹುದುಗಿಹೋಗಿದೆ. ಲೋಹಿಯಾ ಅವರ ಅತ್ಯಂತ ಪ್ರಮುಖ ಚಿಂತನೆಗಳಾದ ಸಮಾಜವಾದಿ ಸಿದ್ಧಾಂತದ ಮರುರೂಪಿಸುವಿಕೆ ಮತ್ತು ಅದರೊಂದಿಗಿನ ರಾಜಕೀಯ ಹಾಗೂ ನೀತಿ ವಿಚಾರಗಳು ಕೆಲವೇ ಕೆಲವು ಲೋಹಿಯಾವಾದಿಗಳಿಗಷ್ಟೇ ತಿಳಿದಿವೆ. ಇದು 'ಇಂಡಿಯಾ' ಮೈತ್ರಿಕೂಟಕ್ಕೆ ಮಾತ್ರವಲ್ಲ ಭಾರತಕ್ಕೆ ಕೂಡ ಆಗಿರುವ ದೊಡ್ಡ ನಷ್ಟ.

ಮೋದಿ ಮತ್ತು ಬಿಜೆಪಿಯ ಇತರ ನಾಯಕರು ಲೋಹಿಯಾ ಅವರನ್ನು ಉಲ್ಲೇಖಿಸಿರುವುದು ಇದು ಮೊದಲೇನೂ ಅಲ್ಲ. ಅವರ ನಿಲುವುಗಳು ಮತ್ತು ಪ್ರಸಿದ್ಧ ಹೇಳಿಕೆಗಳನ್ನು ಬಿಜೆಪಿಯ ನಾಯಕರು ತಿರುಚಿ ತಮಗೆ ಬೇಕಾದಂತೆ ಬಳಸಿಕೊಂಡಿದ್ದಾರೆ. ಲೋಹಿಯಾ ಅವರ ರಾಜಕೀಯ ನಿಲುವುಗಳಿಗೆ ತದ್ವಿರುದ್ಧವಾದ ರೀತಿಯಲ್ಲಿ ಇವು ಬಳಕೆ ಆಗಿವೆ. ಲೋಹಿಯಾ ಅವರು ಜವಾಹರಲಾಲ್ ನೆಹರೂ ಮೇಲೆ ನಡೆಸಿದ್ದ ವಾಗ್ದಾಳಿಯು ಬಿಜೆಪಿಯವರಿಗೆ ಆಪ್ಯಾಯಮಾನ. ಅವರ 'ಕಾಂಗ್ರೆಸ್ ವಿರೋಧ'ವನ್ನು ಕಾಂಗ್ರೆಸ್ ಪಕ್ಷಕ್ಕೆ ಬಡಿಯುವ ದೊಣ್ಣೆಯಂತೆ ಬಳಸಿಕೊಳ್ಳಲಾಗಿದೆ. ಬಿಜೆಪಿಯೊಂದಿಗಿನ ಮೈತ್ರಿಯನ್ನು ಸಮರ್ಥಿಸಿಕೊಳ್ಳಲು ಕೆಲವು ಮಾಜಿ ಸಮಾಜವಾದಿಗಳೂ ಇದನ್ನು ಬಳಸಿಕೊಂಡಿದ್ದಾರೆ. 'ಇಂಗ್ಲಿಷ್ ಅನ್ನು ಓಡಿಸಿ' ಎಂಬ ಅವರ ಘೋಷಣೆಯನ್ನು ಹಿಂದಿ ಹೇರಿಕೆಗೆ ಸಮರ್ಥನೆಯಾಗಿ ಬಳಸಿಕೊಳ್ಳಲಾಗುತ್ತಿದೆ. ಹಿಂದುಳಿದ ವರ್ಗಗಳ ಪರವಾಗಿ ಅವರು ಹೊಂದಿದ್ದ ಬಲವಾದ ಒಲವನ್ನು ಪ್ರಬಲ ಒಬಿಸಿ ನಾಯಕರು ಅಧಿಕಾರ ಕಬಳಿಕೆಯ ಸಮರ್ಥನೆಯಾಗಿ ಬಳಸಿಕೊಂಡಿದ್ದಾರೆ.

ಈ ಎಲ್ಲ ತಿರುಚುವಿಕೆಗಳನ್ನು ಸರಿಪಡಿಸುವ ಮೂಲಕ ಲೋಹಿಯಾ ಪರಂಪರೆಯನ್ನು ಮರಳಿ ಪಡೆದುಕೊಳ್ಳಬೇಕು. 'ಕಾಂಗ್ರೆಸ್ ವಿರೋಧ' ಎಂಬುದು ಒಂದು ರಾಜಕೀಯ ಸಿದ್ಧಾಂತ ಅಲ್ಲ. ಅದು ವ್ಯವಸ್ಥೆ ವಿರೋಧಿ ರಾಜಕಾರಣದ ಒಂದು ಅಲ್ಪಾವಧಿ ತಂತ್ರ ಮಾತ್ರ. ಲೋಹಿಯಾ ಅವರು ತಮ್ಮ ರಾಜಕೀಯವನ್ನು ಆರಂಭಿಸಿದ್ದು ಕಾಂಗ್ರೆಸ್ ಮೂಲಕವೇ. ಸ್ವಾತಂತ್ರ್ಯ ಸಿಕ್ಕ ಬಳಿಕ ಸಮಾಜವಾದಿಗಳು ಕಾಂಗ್ರೆಸ್ ತೊರೆದುದನ್ನೂ ಅವರು ವಿರೋಧಿಸಿದ್ದರು. 1960ರ ದಶಕದಲ್ಲಿ ಅವರು ಕಾಂಗ್ರೆಸ್ ಅನ್ನು ವಿರೋಧಿಸಲು ಆರಂಭಿಸಿದರು. ಅದು ಕಾಂಗ್ರೆಸ್‌ನ ಅತಿಯಾದ ಪ್ರಾಬಲ್ಯದ ಕಾಲವಾಗಿತ್ತು. ಲೋಹಿಯಾ ಈಗ ಇದ್ದಿದ್ದರೆ 'ಬಿಜೆಪಿ ವಿರೋಧಿವಾದ'ವನ್ನು ಆರಂಭಿಸುತ್ತಿದ್ದರು ಎಂಬುದರಲ್ಲಿ ಅನುಮಾನವೇನೂ ಇಲ್ಲ. ಈಗಿನ ರಾಜಕೀಯ ಸನ್ನಿವೇಶದಲ್ಲಿ ವಿರೋಧ ಪಕ್ಷಗಳ ಒಗ್ಗಟ್ಟನ್ನು ಪ್ರತಿಪಾದಿಸುತ್ತಿದ್ದರು. ಹಾಗೆಯೇ ಲೋಹಿಯಾ ಅವರು ಇಂಗ್ಲಿಷ್ ವಿರೋಧಿಯೂ ಆಗಿರಲಿಲ್ಲ. ಆ ಭಾಷೆಯನ್ನು ಬಹಳ ಲಾಲಿತ್ಯಪೂರ್ಣವಾಗಿ, ಅಧಿಕಾರಯುತವಾಗಿ ಅವರು ಬಳಸುತ್ತಿದ್ದರು. ಅವರ ವಿರೋಧಕ್ಕೆ ಕಾರಣ ಇಂಗ್ಲಿಷ್‌ನ ಯಾಜಮಾನ್ಯ. ಇಂಗ್ಲಿಷ್ ವಿದೇಶಿ ಭಾಷೆ ಎಂಬ ಕಾರಣಕ್ಕೆ ಅವರು ವಿರೋಧಿಸಲಿಲ್ಲ. ಬದಲಿಗೆ ಅದು ಊಳಿಗಮಾನ್ಯ ಮತ್ತು ವರ್ಗ ಅಸಮಾನತೆಯನ್ನು ಪ್ರತಿನಿಧಿಸುತ್ತದೆ ಎಂಬ ಕಾರಣಕ್ಕೆ ವಿರೋಧಿಸಿದರು. ಹಿಂದಿ ಶ್ರೇಷ್ಠ ಎಂಬುದರ ಪ್ರತಿಪಾದಕರಂತೂ ಅವರು ಖಂಡಿತಾ ಆಗಿರಲಿಲ್ಲ. ಅವರು ಭಾರತದ ಎಲ್ಲ ಭಾಷೆಗಳ ಪರವಾಗಿದ್ದರು. ವಿವಿಧ ಭಾಷೆಗಳ ಹಲವು ಲೇಖಕರಿಗೆ ಅವರು ಸ್ಫೂರ್ತಿಯಾದುದರಲ್ಲಿ ಅಚ್ಚರಿಯೇನೂ ಇಲ್ಲ. ಅವರಿಂದ ಸ್ಫೂರ್ತಿ ಪಡೆದವರಲ್ಲಿ ಹಿಂದಿಯ ಫಣೀಶ್ವರನಾಥ ರೇಣು, ರಘುವೀರ್ ಸಹಾಯ್, ಸರ್ವೇಶ್ವರ ದಯಾಲ್ ಸಕ್ಸೇನಾ, ವಿಜಯದೇವ್ ನಾರಾಯಣ್ ಸಾಹಿ, ಅಸ್ಸಾಮಿನ ಬೀರೇಂದ್ರ ಕುಮಾರ್ ಭಟ್ಟಾಚಾರ್ಯ, ಕನ್ನಡದ ಯು.ಆರ್. ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಪಿ. ಲಂಕೇಶ್, ಸಿದ್ಧಲಿಂಗಯ್ಯ ಸೇರಿದ್ದಾರೆ. ಭಾರತೀಯ ಭಾಷೆಗಳ ಪರವಾಗಿದ್ದ ಅವರು ಹಿಂದಿ ಹೇರಿಕೆಯನ್ನು ಖಂಡಿತವಾಗಿ ವಿರೋಧಿಸುತ್ತಿದ್ದರು.

ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿ ಲೋಹಿಯಾ ಅವರ ನೀತಿಯು ಒಬಿಸಿ ಕೇಂದ್ರೀಕೃತವಾದುದು ಆಗಿರಲಿಲ್ಲ. ಲೋಹಿಯಾ ಅವರ ಸಮಾಜವಾದಿ ಪಕ್ಷವು ಹಿಂದಿ ಭಾಷಿಕ ಪ್ರದೇಶಗಳಲ್ಲಿ ಅದರಲ್ಲೂ ವಿಶೇಷವಾಗಿ ಬಿಹಾರ ಮತ್ತು ಉತ್ತರಪ್ರದೇಶದಲ್ಲಿ ಒಬಿಸಿಗಳು ರಾಜಕೀಯಕ್ಕೆ ಬರಲು ವೇದಿಕೆಯಾಯಿತು. ಅವಕಾಶಗಳ ಹಂಚಿಕೆಯ ಸಮಗ್ರ ನೀತಿಯನ್ನು ಅವರು ಪ್ರತಿಪಾದಿಸುತ್ತಿದ್ದರು. ಹಿಂದುಳಿದ ವರ್ಗಗಳಿಗೆ ಶೇಕಡ 60ರಷ್ಟು ಮೀಸಲು ಬೇಕು ಎನ್ನುತ್ತಿದ್ದರು. ಅವರು ಹೇಳುತ್ತಿದ್ದ ಒಬಿಸಿಯಲ್ಲಿ ದಲಿತರು, ಒಬಿಸಿ ಮತ್ತು ಮಹಿಳೆಯರು ಒಳಗೊಳ್ಳುತ್ತಾರೆ. ಆರು ಮುಖ್ಯ ಅನ್ಯಾಯಗಳಲ್ಲಿ ಲಿಂಗತಾರತಮ್ಯವೂ ಒಂದು ಎನ್ನುತ್ತಿದ್ದರು. ಎಲ್ಲ ಜಾತಿ– ವರ್ಗಗಳಲ್ಲಿಯೂ ಮಹಿಳೆಯನ್ನು ಶೂದ್ರರಿಗೆ ಸಮಾನವಾಗಿ ಕಾಣುತ್ತಿದ್ದರು. ಹಾಗಾಗಿಯೇ ಅವರಿಗೆ ಮೀಸಲಾತಿ ಬೇಕಿದೆ ಎಂದು ಪ್ರತಿಪಾದಿಸುತ್ತಿದ್ದರು. ಒಬಿಸಿಯಲ್ಲಿರುವ ಅತ್ಯಂತ ಹಿಂದುಳಿದವರಿಗೆ ಮತ್ತು ಪರಿಶಿಷ್ಟ ಜಾತಿಯಲ್ಲಿರುವ ಮಹಾದಲಿತರಿಗೆ ವಿಶೇಷ ಅವಕಾಶ ನೀಡಿಕೆಯನ್ನು ಲೋಹಿಯಾ ಬೆಂಬಲಿಸುತ್ತಿದ್ದರು. ಲೋಹಿಯಾ ಅವರ ಸಾಮಾಜಿಕ ನ್ಯಾಯವು ಜಾತಿ, ವರ್ಗ ಮತ್ತು ಲಿಂಗತ್ವ ಎಲ್ಲವನ್ನೂ ಒಳಗೊಂಡದ್ದಾಗಿತ್ತು. ಇದರ ಆಧಾರದಲ್ಲಿ ಪಿರಮಿಡ್‌ನ ತಳದಲ್ಲಿರುವ ಸಾಮಾಜಿಕ ವರ್ಗವನ್ನು ಒಗ್ಗೂಡಿಸಬೇಕು. ಬಿಜೆಪಿಯ ಯಾಜಮಾನ್ಯದ ಈ ಸಂದರ್ಭದಲ್ಲಿ ಅದರ ಅಗತ್ಯವೂ ಇದೆ.

ಈಗಿನ ಜಾತ್ಯತೀತ ರಾಜಕಾರಣದ ಮುಖ್ಯ ಸವಾಲು ಏನೆಂದರೆ, ನಮ್ಮ ನಾಗರಿಕ ಪರಂಪರೆ ಮತ್ತು ರಾಷ್ಟ್ರವಾದವು ಸಾಂಸ್ಕೃತಿಕ ಬೇರುಗಳನ್ನು ಹೊಂದಿಲ್ಲ ಎಂಬುದಾಗಿದೆ. ಲೋಹಿಯಾ ಅವರು ಬಳಸಿದ್ದ ಸಾಂಸ್ಕೃತಿಕತೆಯು ಈ ಕೊರತೆಯನ್ನು ತುಂಬಬಹುದು. ಅವರು ಬಳಸುತ್ತಿದ್ದ ದ್ರೌಪದಿಯ ರೂಪಕವು ಚತುರ, ಚಾಣಾಕ್ಷ, ದಿಟ್ಟ ಮತ್ತು ಸ್ವತಂತ್ರ ಚಿಂತನೆಯ ಭಾರತದ ಮಾದರಿ ಮಹಿಳೆಯನ್ನು ಪ್ರತಿನಿಧಿಸುತ್ತದೆ. ದುರ್ಬಲ ಮತ್ತು ವಿಧೇಯ ಸತಿ ಸಾವಿತ್ರಿಯನ್ನು ಅವರು ರೂಪಕವಾಗಿ ಬಳಸಲಿಲ್ಲ. ರಾಮನು ಅವರಿಗೆ ದಕ್ಷಿಣ ಮತ್ತು ಉತ್ತರದ ನಡುವಣ ಒಗ್ಗಟ್ಟು ಹಾಗೂ ಕೃಷ್ಣನು ಪೂರ್ವ ಮತ್ತು ಪಶ್ಚಿಮದ ನಡುವಣ ಒಗ್ಗಟ್ಟಿನ ಸಂಕೇತವಾಗಿದ್ದರು. ನದಿಗಳನ್ನು ಕೂಡ ಅವರು ಮೌಲ್ಯಗಳ ವಾಹಕಗಳಾಗಿ ಕಂಡಿದ್ದರು. ಗಂಗಾ ಮತ್ತು ಸರಯೂ ನದಿಗಳು ಕರ್ತವ್ಯವನ್ನು, ಯಮುನಾ ಮತ್ತು ಅವುಗಳ ಉಪನದಿಗಳು ರಸವನ್ನು ಪ್ರತಿನಿಧಿಸುತ್ತವೆ ಎಂದು ಹೇಳಿದ್ದರು. ಲೋಹಿಯಾ ಅವರಿಂದ ಸ್ಫೂರ್ತಿ ಪಡೆದೇ ಎಂ.ಎಫ್. ಹುಸೇನ್ ಅವರು ರಾಮಾಯಣ ಮತ್ತು ಮಹಾಭಾರತ ಚಿತ್ರ ಸರಣಿಗಳನ್ನು ಮಾಡಿದ್ದರು.

ವಸಿಷ್ಠ ಮತ್ತು ವಾಲ್ಮೀಕಿಯ ಮೂಲಕ ಹಿಂದೂ ಕೋಮುವಾದವನ್ನು ಅವರು ವಿಶ್ಲೇಷಣೆಗೆ ಒಳಪಡಿಸಿದ್ದರು. ವಸಿಷ್ಠ ಮೇಲ್ಜಾತಿಯ ಸಂಕುಚಿತ ಹಿಂದೂಗಳ ಪ್ರತಿನಿಧಿ. ಈತ ಭಯಸ್ಥ, ಇತರರ ಕುರಿತು ಸದಾ ಸಂದೇಹ, ತನ್ನ ಕೆಳಗಿನವರನ್ನು ತುಳಿಯುವ ಬುದ್ಧಿ ಇರುವವನು. ವಾಲ್ಮೀಕಿಯು ಹಿಂದೂ ಧರ್ಮದೊಳಗೇ ಇರುವ ಉದಾರವಾದಿ ಪರಂಪರೆಯನ್ನು ಪ್ರತಿನಿಧಿಸುವವನು. ಹಿಂದೂ– ಮುಸ್ಲಿಂ ಅಥವಾ ಇತರ ಅಲ್ಪಸಂಖ್ಯಾತರ ನಡುವಣ ಸಂಘರ್ಷದ ಮೂಲದಲ್ಲಿ ಇರುವುದು ಹಿಂದೂ ಧರ್ಮದ ಎರಡು ಧಾರೆಗಳು. ಉದಾರವಾದಿ ಧಾರೆ ಪ್ರಬಲವಾಗಿದ್ದಾಗಲೆಲ್ಲ ಭಾರತ ಮೇಲಕ್ಕೆ ಏರಿದೆ. ಸಂಕುಚಿತ ಹಿಂದೂ ಧರ್ಮ ಮೇಲುಗೈ ಪಡೆದಾಗ ಒಂದು ರಾಷ್ಟ್ರ ಮತ್ತು ನಾಗರಿಕತೆಯಾಗಿ ಭಾರತವು ಕುಸಿತ ಕಂಡಿದೆ.

ರಾಜಕೀಯ ಚಿಂತಕನೊಬ್ಬನ ಪ್ರಸ್ತುತತೆಯು ಸಮಕಾಲೀನ ರಾಜಕಾರಣದಲ್ಲಿ ಆತನ ಉಪಯುಕ್ತತೆಗೆ ಸೀಮಿತವಲ್ಲ. ಎಲ್ಲಕ್ಕಿಂತ ಮುಖ್ಯವಾಗಿ, ಭಾರತದ ಆಧುನಿಕತೆಗೆ ಲೋಹಿಯಾ ಕೊಟ್ಟ ಸೈದ್ಧಾಂತಿಕ ನೆಲಗಟ್ಟು ಅವರು ಬಿಟ್ಟುಹೋದ ಪರಂಪರೆಯಾಗಿದೆ. ಮಾರ್ಕ್ಸ್‌ವಾದ ಮತ್ತು ಪಶ್ಚಿಮದ ಸಮಾಜವಾದ ಸೇರಿದಂತೆ ಪಾಶ್ಚಾತ್ಯ ಸಿದ್ಧಾಂತಗಳನ್ನು ಅವರು ಕಟುವಿಮರ್ಶೆಗೆ ಒಳಪಡಿಸಿದ್ದರು. ಅದೇ ಹೊತ್ತಿಗೆ ಅವರು ಹೆಚ್ಚು ರಮ್ಯವಾಗಿ ಕಾಣಿಸುತ್ತಿದ್ದ ದೇಶೀಯತೆ ಮತ್ತು ನಮ್ಮ ಭೂತಕಾಲವೇ ಶ್ರೇಷ್ಠ ಎಂಬ ಮಿಥ್ಯೆಯಿಂದ ದೂರವೇ ಉಳಿದರು. ಸಮಾಜವಾದ ಮತ್ತು ಆರ್ಥಿಕ ಸಮಾನತೆಯನ್ನು ಬಲವಾಗಿ ಪ್ರತಿಪಾದಿಸಿದ್ದ ಅವರು ರಾಜಕೀಯ, ಸಾಂಸ್ಕೃತಿಕ ನಿರ್ವಸಾಹತೀಕರಣಕ್ಕೆ ನೆಲಗಟ್ಟು ಒದಗಿಸಿದರು. ಹೊಸ ರೀತಿಯ ಸುಧಾರಣಾವಾದದ ನೀಲನಕ್ಷೆಯನ್ನು ರೂಪಿಸಿದ್ದರು. ಲೋಹಿಯಾ ಅವರ ವಾದವನ್ನು ಒಪ್ಪಬಹುದು ಇಲ್ಲ ಬಿಡಬಹುದು. ಅವರ ಹಲವು ತತ್ವಗಳು ಕಾಲದ ಹೊಡೆತಕ್ಕೆ ಸಿಕ್ಕಿವೆ ಅಥವಾ ಕೆಲವನ್ನು ಇಂದು ಮರುಪರಿಶೀಲನೆಗೆ ಒಡ್ಡಬೇಕಾಗಬಹುದು. ಆದರೆ, ಲೋಹಿಯಾ ಅವರ ರಾಜಕೀಯ ಚಿಂತನೆಯು ಈಗ ನಮ್ಮ ಗಣರಾಜ್ಯವನ್ನು ರಕ್ಷಿಸಲು ಅಗತ್ಯವಾಗಿ ಬೇಕಾದ ಸೈದ್ಧಾಂತಿಕ ಸಂಪನ್ಮೂಲವನ್ನು ಒದಗಿಸಿದೆ.

ಚುರುಮುರಿ

ಹಾಯ್, ಹಲೋ ಗ್ರಾಕ್!

• ಗುರು ಪಿ.ಎಸ್.

'**ಹಾಯ್** ಗ್ರಾಕ್, ಹೆಂಡತಿಯನ್ನು ಕಂಟ್ರೋಲ್ ಮಾಡುವುದು ಹೇಗೆ?' ಗ್ರಾಕ್ ಆ್ಯಪ್ ಓಪನ್ ಮಾಡಿ ಮೊಬೈಲ್‌ನಲ್ಲಿ ಟೈಪ್ ಮಾಡಿದೆ.

'ಲಭ್ಯವಿರುವ ಮಾಹಿತಿ ಆಧರಿಸಿ ಹೇಳುವುದಾದರೆ, ಈವರೆಗೆ ಯಾರೂ ಅಂತಹ ಪ್ರಯತ್ನವನ್ನೇ ಮಾಡಿಲ್ಲ ಎಂಬುದು ಕಂಡುಬರುತ್ತಿದೆ' ಗ್ರಾಕ್ ಉತ್ತರ ಓದಿ ಪೆಚ್ಚಾದೆ.

'ಏನ್ರೀ, ಬೆಳಿಗ್ಗೆಯೇ ಮೊಬೈಲ್ ಫೋನ್ ಹಿಡ್ಕೊಂಡು ಸಂಶೋಧನೆ ಮಾಡ್ತಿದ್ದೀರಿ' ಬಂದಳು ಹೆಂಡತಿ.

'ಏನಿಲ್ಲ, ಏನಿಲ್ಲ. ಇದು ಗ್ರಾಕ್ ಅಂತ. ನೀನು ಯಾವುದರ ಬಗ್ಗೆಯಾದರೂ ಇಲ್ಲಿ ಕೇಳಬಹುದು, ಕ್ಷಣಾರ್ಧದಲ್ಲಿ ಮಾಹಿತಿ ಕೊಡುತ್ತೆ' ಕಣ್ಣರಳಿಸಿದೆ.

'ಹೌದಾ! ಸೀರೆ, ಮೇಕಪ್ ಕಿಟ್ ಬಗ್ಗೆಯೂ ಹೇಳುತ್ತಾ?' ಕುತೂಹಲದಿಂದ ಕೇಳಿದಳು.

'ಬರೀ ಇದೇ ಆಯ್ತು, ದೊಡ್ಡ ವಿಷಯ ಏನಾದರೂ ಕೇಳು'.

'ನೀವೇ ಕೇಳ್ಕೊಳ್ಳಿ' ಮುಖ ತಿರುಗಿಸಿದಳು.

ನಾನು ಶುರು ಮಾಡಿದೆ, 'ಗ್ರಾಕ್, ಈ ದೇಶದಲ್ಲಿ ಕಾಮಿಡಿ ಮಾಡೋದು ತಪ್ಪಾ?'

'ನಮ್ಮ ದೇಶದಲ್ಲಿ ಹಾಸ್ಯ ತಪ್ಪಲ್ಲ. ಆದರೆ ಯಾವ ಪಾರ್ಟಿ ಅಧಿಕಾರದಲ್ಲಿದ್ದಾಗ ಯಾರ ಬಗ್ಗೆ ಕಾಮಿಡಿ ಮಾಡಬೇಕು, ಯಾರ ಬಗ್ಗೆ ಮಾಡಬಾರದು ಎಂದು ತಿಳಿದುಕೊಂಡಿರಬೇಕು. ಅಧಿಕಾರದಲ್ಲಿ ಇದ್ದವರ ಬಗ್ಗೆ ಕಾಮಿಡಿ ಮಾಡಿದರೆ ಗಲಾಟೆಗಳಾಗುವ ಸಂಭವಗಳುಂಟು'.

'ರೀಲ್ಸ್ ಮಾಡಿದರೆ ಅರೆಸ್ಟ್ ಮಾಡ್ತಾರಾ?'

'ಬರೀ ರೀಲ್ಸ್ ಮಾಡಿದರೆ ಬಂಧಿಸಲ್ಲ. ಮಚ್ಚು ಹಿಡ್ಕೊಂಡು ಹುಚ್ಚುಚ್ಚಾಗಿ ರೀಲ್ಸ್ ಮಾಡಿದರೆ ಅರೆಸ್ಟ್ ಮಾಡ್ತಾರೆ'.

ಪತ್ನಿ ಅತ್ತ ತಿರುಗಿದಾಗ ಸದ್ದಿಲ್ಲದೆ ಟೈಪ್ ಮಾಡುತ್ತಿದ್ದೆ, 'ಈವರೆಗೂ ನನ್ನನ್ನ ಯಾರೂ ಯಾಕೆ ಹನಿಟ್ರ್ಯಾಪ್ ಮಾಡಿಲ್ಲ?'

ತಕ್ಷಣ ನೋಡಿ ಕಿಸಕ್ಕನೆ ನಕ್ಕ ಹೆಂಡತಿ, 'ನೀವೇನ್ ದೊಡ್ಡ ಸೆಲಬ್ರಿಟಿ ಅಥವಾ ಪೊಲಿಟಿಷಿಯನ್ ಅಂದ್ಕೊಂಡ್ರಾ, ನಿಮ್ ಮುಖ ನೋಡ್ಕೊಳ್ಳಿ' ತಿವಿದಳು.

'ಅಯ್ಯೋ ನೋಡಿಬಿಟ್ಯಾ, ಸುಮ್ನಿರು ಬೇರೆ ರೀತಿ ಪ್ರಶ್ನೆ ಕೇಳ್ತೀನಿ... ಗ್ರಾಕ್, ಹನಿಟ್ರ್ಯಾಪ್ ಅಂದರೇನು?'

ಗ್ರಾಕ್ ಉತ್ತರಿಸಿತು, 'ಹಾಯ್', ಹಲೋ'.

ಸಂಗತ

'ಭಸ್ಮಾಸುರ' ಬೆಟ್ಟಿಂಗ್ ಜಾಲ

ಈ ಮೋಹಕ ಮಾಯಾಜಾಲದ ಪ್ರಪಾತಕ್ಕೆ ಎಲ್ಲ ವಯೋಮಾನದವರೂ ಬೀಳುತ್ತಿದ್ದಾರೆ

• ದೀಪಾ ಹಿರೇಗುತ್ತಿ

ಬೆಟ್ಟಿಂಗ್‌ನಿಂದ ತಮ್ಮ ಊರಿನಲ್ಲಿ ಆಗುತ್ತಿರುವ ಸಮಸ್ಯೆಯ ಬಗ್ಗೆ ಕೋಲಾರ ಜಿಲ್ಲೆಯ ಮುಳಬಾಗಿಲಿನ ಶಾಸಕರು ಮೊನ್ನೆ ಸದನದಲ್ಲಿ ಮಾತನಾಡಿದರು. ಪ್ರತಿ ಐಪಿಎಲ್ ಸೀಸನ್ ಪ್ರಾರಂಭವಾದ ಕೂಡಲೇ ಮೂವತ್ತರಿಂದ ನಲವತ್ತು ಮಂದಿ ತರುಣರು ಊರು ಬಿಟ್ಟುಹೋಗುತ್ತಿದ್ದಾರೆ ಎಂಬ ಮಾತು ಎಚ್ಚರಿಕೆಯ ಗಂಟೆಯಂತಿತ್ತು. ಏಕೆಂದರೆ, ಈ ಪರಿಸ್ಥಿತಿ ಮುಳಬಾಗಿಲಿನದ್ದು ಮಾತ್ರವಲ್ಲ ನಮ್ಮ ರಾಜ್ಯದ ಸಾರ್ವತ್ರಿಕ ಸಮಸ್ಯೆಯಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಂತೂ ತಂದೆತಾಯಿ, ಹೆಂಡತಿ ಮತ್ತು ಮಕ್ಕಳು ಅಳುತ್ತಾ, ಹೀಗೆ ಕಾಣೆಯಾದ ತಮ್ಮವರನ್ನು ಹುಡುಕಿಕೊಡಿ ಎಂದು ಗೋಗರೆಯುವುದು ದಿನವೂ ಕಣ್ಣಿಗೆ ಬೀಳುತ್ತಲೇ ಇರುತ್ತದೆ. ಇನ್ನು ಈ ಬೆಟ್ಟಿಂಗ್‌ನಿಂದ ಸಾಲ ಸೋಲ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಯುವಕರ ಸಂಖ್ಯೆಯೇನೂ ಕಡಿಮೆಯಿಲ್ಲ. ಆದರೆ ಸದನದಲ್ಲಿ ಈ ಕುರಿತು ದೀರ್ಘ ಚರ್ಚೆಗಳಾಗಲಿಲ್ಲ. ಇದಕ್ಕೊಂದು ಅಂತ್ಯ ಹಾಡಬೇಕೆಂಬ ತುರ್ತು ಅಲ್ಲಿ ಉಂಟಾಗಲೇ ಇಲ್ಲ!

2023ರಲ್ಲಿ ಚಿತ್ರದುರ್ಗದ ಇಪ್ಪತ್ತೂರು ವರ್ಷದ ರಂಜಿತಾ ಸಾಲಗಾರರ ಕಿರುಕುಳ ತಾಳಲಾಗದೆ ತನ್ನ ಎರಡು ವರ್ಷದ ಮಗುವನ್ನು ಬಿಟ್ಟು ಆತ್ಮಹತ್ಯೆ ಮಾಡಿಕೊಂಡಳು. ಕಾರಣ, ನೀರಾವರಿ ವಿಭಾಗದಲ್ಲಿ ಕಿರಿಯ ಎಂಜಿನಿಯರ್ ಆಗಿದ್ದ ಅವಳ ಪತಿ ದರ್ಶನ್ ಐಪಿಎಲ್ ಬೆಟ್ಟಿಂಗ್‌ಗಾಗಿ ಒಂದು ಕೋಟಿ ರೂಪಾಯಿಗೂ ಹೆಚ್ಚು ಸಾಲ ಮಾಡಿಕೊಂಡಿದ್ದ. ಹೋದ ವರ್ಷ ತೀರ್ಥಹಳ್ಳಿಯಲ್ಲಿ ಬ್ಯಾಂಕ್ ಉದ್ಯೋಗಿಯೊಬ್ಬರು ಬ್ಯಾಂಕಿಗೆ ಸೇರಿದ ಕೋಟ್ಯಂತರ ಹಣ ಕದ್ದು ಸಿಕ್ಕಿಹಾಕಿಕೊಂಡು ಜೈಲು ಪಾಲಾಗಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಮೈಸೂರಿನಲ್ಲಿ ಸಿಕ್ಕಸಿಕ್ಕವರ ಹತ್ತಿರ ಸಾಲ ಮಾಡಿದ್ದ ಅಣ್ಣ, ತಮ್ಮ ಹಾಗೂ ತಮ್ಮನ ಹೆಂಡತಿ ಇತ್ತೀಚೆಗೆ ಆತ್ಮಹತ್ಯೆಗೆ ಶರಣಾದರು. 2024ರ ಡಿಸೆಂಬರ್‌ನಲ್ಲಿ ಬೀದರಿನಲ್ಲಿ ಯುವಕನೊಬ್ಬ ಇಂತಹುದೇ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡ.

ಸುಲಭವಾಗಿ ಹಣ ಮಾಡುವ ಹಪಹಪಿಯಂತೆ ಆನ್‌ಲೈನ್ ಬೆಟ್ಟಿಂಗ್ ಕೂಡ ಹೆಚ್ಚುತ್ತಿದೆ. ಇದೊಂದು ಮೋಹಕವಾದ ಮಾಯಾಜಾಲ. ಮೋಹಿನಿಯಂತೆ ಆಕರ್ಷಿಸಿತೆಂದು ಹೋದರೆ, ಒಳಗೆ ಭಸ್ಮಾಸುರ ಬದುಕನ್ನೇ ಸುಟ್ಟುಹಾಕಲು ಕಾಯುತ್ತಿರುತ್ತಾನೆ. ನಗರ, ಮಹಾನಗರ, ಪಟ್ಟಣ, ಹಳ್ಳಿ ಎಂಬ ಭೇದವಿಲ್ಲದಂತೆ ಈ ಬೆಟ್ಟಿಂಗ್ ಜಾಲ ಆವರಿಸಿದೆ. ಸಾಲ, ಕಳ್ಳತನ, ಮೋಸದಂತಹ ಅವ್ಯವಹಾರಗಳು ಇಲ್ಲಿ ನಡೆಯುತ್ತವೆ. ಮಾಡುತ್ತಿರುವ ಉದ್ಯೋಗದಿಂದ ವಿಮುಖರಾಗಿ ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಈ ಜೂಜಾಟದ ಮಾಯೆ ಎಲ್ಲ ವಯೋಮಾನದ ಎಲ್ಲ ವರ್ಗದವರನ್ನೂ ಆಕರ್ಷಿಸುತ್ತದೆ. ಆದರೆ ಇದರಿಂದ ತಮ್ಮ ಬದುಕನ್ನೇ ನಾಶ ಮಾಡಿಕೊಳ್ಳುತ್ತಿರುವವರಲ್ಲಿ ಹೆಚ್ಚಿನವರು ಬಡವರು, ಮಧ್ಯಮವರ್ಗದವರು. ವಿದ್ಯಾರ್ಥಿಗಳು, ನಿರುದ್ಯೋಗಿಗಳು ಬಹು ಸುಲಭವಾಗಿ ತಮ್ಮ ಬದುಕನ್ನು ಈ ಜೂಜಿನ ಕೈಗಿತ್ತುಬಿಡುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ಯುವಕರೇ ಇದ್ದರೂ ಈ ಜಾಲದಲ್ಲಿ ಸಿಲುಕಿರುವವರಲ್ಲಿ ಮಧ್ಯವಯಸ್ಕರೂ ಇದ್ದಾರೆ, ಪುಟ್ಟ ಬಾಲಕರೂ ಸೇರಿದ್ದಾರೆ.

ಇದೇ ಜನವರಿಯಲ್ಲಿ ಏಳನೇ ತರಗತಿಯ ಹುಡುಗನೊಬ್ಬ ಪಾರಿವಾಳದ ಬೆಟ್ಟಿಂಗ್‌ನಲ್ಲಿ ಸಾಲ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಂಡ ಸುದ್ದಿ ದಿಗಿಲು ಮೂಡಿಸಿತ್ತು. ಈ ಕೂಪ ಎಷ್ಟು ಆಳವಾದುದೆಂದರೆ, ಎಷ್ಟು ಹಣ ಹೋಯಿತೆನ್ನುವ ಪರಿವೆಯೇ ಇಲ್ಲದೆ ಸಾಲ ಮಾಡುತ್ತಲೇ ಇರುತ್ತಾರೆ. ಸಾಲ ಕೊಡದಿದ್ದರೆ ವಾಮ ಮಾರ್ಗದಲ್ಲಿ ಹಣ ಪಡೆದು ಇದಕ್ಕೆ ಹಾಕುತ್ತಾರೆ. ಬೆಂಗಳೂರಿನ ಅಶೋಕನಗರದ ಉದ್ಯೋಗಿಯೊಬ್ಬ ತಾನು ಕೆಲಸ ಮಾಡುತ್ತಿದ್ದ ಕಂಪನಿಗೆ ಏಳು ಕೋಟಿ ವಂಚನೆ ಮಾಡಿ ಆ ಹಣವನ್ನು ಬೆಟ್ಟಿಂಗ್‌ನಲ್ಲಿ ತೊಡಗಿಸಿದ್ದ ಎಂದರೆ ಸಮಸ್ಯೆ ಎಷ್ಟು ಗಂಭೀರವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಜತೆಗೆ ಪೊಲೀಸ್ ಠಾಣೆಗೆ ತಿರುಗಾಟ, ಅವಮಾನದಂತಹ ಸಂಕಷ್ಟಗಳನ್ನು ಕುಟುಂಬದವರಿಗೆ ತಂದೊಡ್ಡುವ ಈ ಮೂರ್ಖರಿಗೆ ಬುದ್ಧಿ ಹೇಳುವವರಾರು? ಬೆಳೆದುನಿಂತ ಮಗ ಊರು ಬಿಟ್ಟರೆ, ಆತ್ಮಹತ್ಯೆ ಮಾಡಿಕೊಂಡರೆ ವೃದ್ಧ ತಂದೆತಾಯಿ ಬದುಕುವ ಆಸರೆ ಕಳೆದುಕೊಂಡು ಅವಮಾನವನ್ನು ಎದುರಿಸುತ್ತಾ ಬದುಕಬೇಕಾಗುತ್ತದೆ.

ಹಾಗಾದರೆ ಬೆಟ್ಟಿಂಗ್ ಅನ್ನು ನಿಷೇಧಿಸಬಹುದಲ್ಲವೇ ಎಂಬ ಪ್ರಶ್ನೆ ಬಂದರೆ, ಕರ್ನಾಟಕದಲ್ಲಿ ಜೂಜು ನಿಷಿದ್ಧವೇ. 2000ದ ಐ.ಟಿ. ಕಾಯ್ದೆ ಪ್ರಕಾರ, ಆನ್‌ಲೈನ್ ಜೂಜಿಗೆ ಒಂದು ಲಕ್ಷ ರೂಪಾಯಿ ದಂಡ ಮತ್ತು ಐದು ವರ್ಷ ಜೈಲು ಶಿಕ್ಷೆಯೂ ಇದೆ. ಆದರೆ ಈ ಬೆಟ್ಟಿಂಗ್ ಆ್ಯಪ್‌ಗಳ ಜನಕರು ರಂಗೋಲಿ ಅಡಿ ತೂರುವಷ್ಟು ಕುತಂತ್ರಿಗಳು. ಬೆಟ್ಟಿಂಗ್ ಅನ್ನು ಕೌಶಲಾಧಾರಿತವಾದ ಒಂದು ಆಟ ಎಂದು ಅವರು ಸಮರ್ಥಿಸಿಕೊಳ್ಳುತ್ತಾರೆ. ಹಾಗಾಗಿ, ಈ ಆ್ಯಪ್‌ಗಳು ಕಾನೂನುಬದ್ಧವೇ ಆಗಿರುವುದೊಂದು ವ್ಯಂಗ್ಯ. ಹೀಗಾಗಿ, ಇದಕ್ಕೆ ಸಂಬಂಧಿಸಿದ ಜಾಹೀರಾತುಗಳು ಎಗ್ಗಿಲ್ಲದೆ ನಮ್ಮ ಮೊಬೈಲ್ ಫೋನ್‌ಗಳಲ್ಲಿ, ಟಿ.ವಿ ಪರದೆಯ ಮೇಲೆ ಕಾಣಿಸಿಕೊಳ್ಳುತ್ತಲೇ ಇರುತ್ತವೆ. ಕ್ರಿಕೆಟ್ ಮತ್ತು ಸಿನಿಮಾ ರಂಗದ ತಮ್ಮ ಆರಾಧ್ಯ ದೈವಗಳು ಅವುಗಳಿಗೆ ರೂಪದರ್ಶಿಗಳಾಗಿ ಕಾಣಿಸಿಕೊಳ್ಳುವುದನ್ನು ನೋಡುವವರಿಗೆ ತಾವು ಹೋಗುತ್ತಿರುವ ದಾರಿ ಅಂತಹ ಅಪಾಯಕಾರಿಯೇನೂ ಆಗಿರಲಾರದು ಎಂಬ ಧೈರ್ಯ ಮೂಡುತ್ತದೆ. ವಾಸ್ತವದಲ್ಲಿ ತಾವು ಬೀಳುತ್ತಿರುವುದು ತಳವಿಲ್ಲದ ಬಾವಿಯಲ್ಲಿ ಎಂಬುದು ಅರಿವಾದಾಗ ಕಾಲ ಮಿಂಚಿರುತ್ತದೆ. ಹಾಗಾಗಿ, ಈ ಆ್ಯಪ್‌ಗಳನ್ನೇ ನಿಷೇಧಿಸಬೇಕಷ್ಟೆ.

ಇತಿಹಾಸ, ಪುರಾಣಗಳು ಜೂಜು ತಂದೊಡ್ಡುವ ದುರಂತಗಳ ಬಗ್ಗೆ ಹೇಳಿವೆ. ಕನಿಷ್ಠ ವರ್ತಮಾನದಿಂದಾದರೂ ಪಾಠ ಕಲಿಯದಿದ್ದರೆ ಮುಂಬರುವ ದಿನಗಳು ಕರಾಳವಾಗಲಿವೆ.

ವಾಚಕರ ವಾಣಿ

ಈಗ ತಿಳಿಯಿತೇ ರಾಜಕಾರಣದ ಆಳ-ಅಗಲ?!

'ರಾಜಕಾರಣವೆಂದರೆ ಕೊಚ್ಚೆಯಲ್ಲಿ ಬಿದ್ದ ಅನುಭವ. ರಾಜಕಾರಣವೇ ಬೇಡ ಅನ್ನಿಸುತ್ತಿದೆ' ಎಂದು ಮೈಸೂರಿನ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಶಾಸಕ ಕೆ.ಹರೀಶ್ ಗೌಡ ಹೇಳಿಕೊಂಡಿದ್ದಾರೆ (ಕಿಡಿನುಡಿ, ಪ್ರ.ವಾ., ಮಾರ್ಚ್ 25). ಅಲ್ಲ ಸ್ವಾಮಿ, ನೀವು ಇದೇ ಪ್ರಥಮ ಬಾರಿಗೆ ಶಾಸಕರಾಗಿದ್ದೀರಿ, ನೀವು ಶಾಸಕರಾಗಿ ಇನ್ನೂ ಎರಡು ವರ್ಷಗಳೂ ಪೂರ್ಣಗೊಂಡಿಲ್ಲ. ಆಗಲೇ ನಿಮಗೆ ರಾಜಕಾರಣ ಬೇಡ ಅನ್ನಿಸುತ್ತಿದೆಯೇ? ಈಗ ತಿಳಿಯಿತೇ ನಿಮಗೆ ರಾಜಕಾರಣದ ಆಳ-ಅಗಲ?! ಆದರೆ ಬಹಳಷ್ಟು ರಾಜಕೀಯ ಪುಢಾರಿಗಳು, ತಾವು ಜೀವನದಲ್ಲಿ ಒಮ್ಮೆಯಾದರೂ ಶಾಸಕರಾದರೆ ತಮ್ಮ ಜನ್ಮ ಸಾರ್ಥಕ ಎಂದುಕೊಂಡಿದ್ದಾರೆ. ಕೆಲವರು 20- 30 ವರ್ಷಗಳಿಂದಲೂ ಶಾಸಕರಾಗಿದ್ದಾರೆ. ಅವರು ಹೇಗೆ ಈ ಕ್ಷೇತ್ರಕ್ಕೆ ಹೊಂದಿಕೊಂಡಿರಬಹುದು? ಅದಕ್ಕೇ ಹೇಳುವುದಿರಬಹುದು 'ರಾಜಕೀಯ ಕ್ಷೇತ್ರ ಎನ್ನುವುದು ಮನುಷ್ಯನ ಕಡೆಯ ಆಯ್ಕೆ' ಎಂದು!

ಬೂಕನಕೆರೆ ವಿಜೇಂದ್ರ, ಮೈಸೂರು

ಯೋಜನೆ ಫಲಪ್ರದವಾಗಲು ಸಂಘಟನೆ ಮುಖ್ಯ

ರಾಜ್ಯದ ಆಹಾರ ಪಾರ್ಕ್‌ಗಳ ಕಾರ್ಯವೈಖರಿಗೆ ಸಂಬಂಧಿಸಿದ ಲೇಖನ (ಒಳನೋಟ, ಪ್ರ.ವಾ., ಮಾರ್ಚ್ 23) ರೈತರ ಕಣ್ಣು ತೆರೆಸುವಂತಿದೆ. ರಾಜ್ಯದಲ್ಲಿರುವ ನಾಲ್ಕು ಆಹಾರ ಪಾರ್ಕ್‌ಗಳ ಪೈಕಿ ಮಾಲೂರಿನದು ಬಹಳಷ್ಟು ಸುಸಜ್ಜಿತವಾಗಿದ್ದರೂ ಅದರ ಸರಿಯಾದ ಬಳಕೆ ಆಗಿಲ್ಲದಿರುವುದು ವಿಷಾದಕರ. ಹೀಗೆಯೇ ವಿಶೇಷ ಆರ್ಥಿಕ ವಲಯಗಳು 2005ರ ನಂತರ ಸ್ಥಾಪಿಸಲ್ಪಟ್ಟವು. ಕರ್ನಾಟಕದಲ್ಲಿ ಅನುಮೋದನೆ ಪಡೆದ 63ರ ಪೈಕಿ 31 ಮಾತ್ರ ಕಾರ್ಯ ನಿರ್ವಹಿಸಿದವು. ಫಿಸ್ಕಲ್ ಪಾಲಿಸಿ ಇನ್‌ಸ್ಟಿಟ್ಯೂಟ್ 2020ರಲ್ಲಿ ಸಿದ್ಧಪಡಿಸಿದ ವರದಿಯ ಪ್ರಕಾರ, 'ಹೆಚ್ಚಿನವು ಕಾಗದದ ಮೇಲೇ ಉಳಿದವು'. ಆರು ವಿಶೇಷ ಕೃಷಿ ಉತ್ಪಾದನಾ ವಲಯಗಳು 2018ರಲ್ಲಿ ಘೋಷಿತವಾದವು. ಈಗ ಅವು ಉಪಯುಕ್ತ ಸ್ಥಿತಿಗೆ ಬಂದಿವೆಯೇ ಎಂದು ಕರ್ನಾಟಕ ಸರ್ಕಾರ ತಿಳಿಸಬೇಕು.

ನೂರಾರು ಎಕರೆ ಪ್ರದೇಶವನ್ನು ವಶಕ್ಕೆ ಪಡೆಯಲಾಗುತ್ತದೆ. ಆದರೆ ಹಲವು ವರ್ಷಗಳ ನಂತರವೂ ಉದ್ಯಮಗಳು ಕಾರ್ಯಾರಂಭ ಮಾಡಿರುವುದಿಲ್ಲ. ಜಾಗ ಪಡೆದವರು ಮರುಗುತ್ತಿಗೆ (ಸಬ್‌ಲೀಸ್) ನೀಡುವುದು, ಆಮೇಲೂ ಏನೂ ಆಗದಿರುವುದು- ಕೊನೆಗೆ ರೈತನಿಗೆ ಏನು ಉಪಯೋಗ? ವಿಶೇಷ ಎಂಬ ಗುಣವಾಚಕ ಸೇರಿಸಿದ ಮಾತ್ರಕ್ಕೆ ಯೋಜನೆಗಳು ಫಲಪ್ರದ ಆಗಿಬಿಡುವುದಿಲ್ಲ. ಕೃಷಿ, ಆಹಾರ ಸಂಬಂಧಿತ ಯೋಜನೆಗಳು ಯಶಸ್ವಿಯಾಗಲು ರೈತರ ಉತ್ಪಾದನಾ ಸಂಸ್ಥೆಗಳ ಸಂಘಟನೆಯೂ ಮುಖ್ಯ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಪ್ಲಾಸ್ಟಿಕ್ ಬಾಟಲಿ ನಿಷೇಧಕ್ಕೆ ಬೇಕು ಪೂರಕ ಕ್ರಮ

ನೀರಿನ ಖಾಲಿ ಬಾಟಲಿಯ ಮರು ಖರೀದಿಗೆ ನಿಯಮ ರೂಪಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿರುವುದು ಶ್ಲಾಘನೀಯ. ಮುಂದೆ ಈ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ, ಪ್ಲಾಸ್ಟಿಕ್‌ನಿಂದ ಪರಿಸರ ಹಾಳಾಗುತ್ತಿರುವುದನ್ನು ಸ್ವಲ್ಪಮಟ್ಟಿಗಾದರೂ ತಡೆಯಬಹುದು. ಮೊನ್ನೆ ಒಂದು ಮದುವೆಯಲ್ಲಿ ಎರಡು ಟ್ರ್ಯಾಕ್ಟರ್ ತುಂಬಾ ಪ್ಲಾಸ್ಟಿಕ್ ತ್ಯಾಜ್ಯ ತುಂಬಿಸಿದ್ದುದನ್ನು ನೋಡಿ ತಲೆ ತಿರುಗಿತು. ಈ ಪ್ರಪಂಚದಲ್ಲಿ ಇರುವ ಇತರ ಜೀವಿಗಳು ಪರಿಸರ ನಾಶ ಮಾಡದೇ ಬದುಕುತ್ತಿವೆ. ಆದರೆ ಈ ಮನುಷ್ಯ ಎಷ್ಟೊಂದು ಹಾಳು ಮಾಡುತ್ತಿದ್ದಾನಲ್ಲಾ ಎನ್ನಿಸಿತು.

ಆಂಧ್ರಪ್ರದೇಶದ ತಿರುಮಲ ಬೆಟ್ಟದಲ್ಲಿ ಪ್ಲಾಸ್ಟಿಕ್ ನೀರಿನ ಬಾಟಲಿಯನ್ನು ನಿಷೇಧಿಸಲಾಗಿದೆ. ಅಲ್ಲಿನ ಅಂಗಡಿಗಳಲ್ಲಿ ಗಾಜಿನ ಬಾಟಲಿಯಲ್ಲಿ ನೀರು ಮಾರಾಟ ಮಾಡುತ್ತಿದ್ದು, ಬಾಟಲಿ ವಾಪಸು ಕೊಟ್ಟರೆ ಅರ್ಧ ಹಣ ಹಿಂದಿರುಗಿಸುತ್ತಾರೆ. ನಮ್ಮ ಕೊಡಚಾದ್ರಿ ಬೆಟ್ಟದ ಪ್ರವೇಶ ದ್ವಾರದಲ್ಲಿ, ಪ್ಲಾಸ್ಟಿಕ್ ಬಾಟಲಿ ಇದ್ದವರಿಂದ ಹಣ ಪಡೆದು ಅವರನ್ನು ಒಳಗೆ ಬಿಡುತ್ತಾರೆ. ವಾಪಸ್ ಬಂದು ಅದನ್ನು ತೋರಿಸಿದರೆ ಹಣ ವಾಪಸ್ ಕೊಡುತ್ತಾರೆ. ಎನ್.ಆರ್.ಪುರ ಪಕ್ಕದ ದಾನಿವಾಸ ದುರ್ಗಾಂಬಾ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೀರಿನ ಪ್ಲಾಸ್ಟಿಕ್ ಬಾಟಲಿಗೆ ನಿಷೇಧವಿದೆ. ಹೀಗೆ ನೀರಿನ ಪ್ಲಾಸ್ಟಿಕ್ ಬಾಟಲಿ ನಿಷೇಧ ಮಾಡುವ ಬಗ್ಗೆ ಚಿಂತನೆ ಮಾಡಿ, ಎಲ್ಲರೂ ಸಹಕರಿಸಿದರೆ ಈ ಕಾರ್ಯ ಅಸಾಧ್ಯವೇನೂ ಅಲ್ಲ.

ವಿ.ತಿಪ್ಪೇಸ್ವಾಮಿ, ಹಿರಿಯೂರು

ಸೌರತ್ಯಾಜ್ಯ: ನಡೆಯಲಿ ತ್ವರಿತ ವಿಲೇವಾರಿ

ಪರಿಸರಸ್ನೇಹಿ ಸುಸ್ಥಿರ ಇಂಧನಮೂಲವಾಗಿ ಸೌರವಿದ್ಯುತ್ತಿಗೆ ಆದ್ಯತೆ ದೊರಕಿರುವುದು ಸಹಜ. ಈ ದಿಸೆಯಲ್ಲಿ ರಾಜ್ಯ ಸರ್ಕಾರವು ಕೃಷಿ ನೀರಾವರಿಗಾಗಿ ಜಾರಿಗೆ ತಂದಿರುವ 'ಕರ್ನಾಟಕ ಸೂರ್ಯ ರೈತ ಯೋಜನೆ' ಹಾಗೂ ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ಪ್ರಧಾನ ಮಂತ್ರಿ ಗೃಹ ಸೌರವಿದ್ಯುತ್ ಯೋಜನೆ' ಸ್ವಾಗತಾರ್ಹ. ಇವು ವ್ಯಾಪಕವಾಗಿ ಅನುಷ್ಠಾನವಾಗುತ್ತಿರುವ ಈ ಕಾಲಘಟ್ಟದಲ್ಲಿ, ಹೆಚ್ಚುತ್ತಿರುವ ಸೌರತ್ಯಾಜ್ಯದ ಸೂಕ್ತ ಹಾಗೂ ತ್ವರಿತ ವಿಲೇವಾರಿಗೂ ಗರಿಷ್ಠ ಗಮನ ನೀಡಬೇಕಾಗಿದೆ. ಹಿಂದಿನ ಎರಡು ದಶಕಗಳಿಂದ ರಾಜ್ಯದಾದ್ಯಂತ ಸೌರವಿದ್ಯುತ್ ಘಟಕಗಳು ವ್ಯಾಪಕವಾಗಿ ಬಳಕೆಯಾಗುತ್ತಿವೆ. ವಿವಿಧ ಸರ್ಕಾರಿ ಹಾಗೂ ಖಾಸಗಿ ಪ್ರಾಯೋಜಕತ್ವ ಯೋಜನೆಗಳ ಮೂಲಕ ಮನೆಬಳಕೆ ವಿದ್ಯುತ್ ಹಾಗೂ ರಸ್ತೆದೀಪ ಘಟಕಗಳು ಸ್ಥಾಪನೆಗೊಂಡಿವೆ. ಮಲೆನಾಡಿನ ಅರಣ್ಯ ಪ್ರದೇಶದಲ್ಲಿನ ಹಲವು ಹಳ್ಳಿಗಳು, ವನವಾಸಿ ಹಾಡಿಗಳು, ಪರಿಸರಸ್ನೇಹಿ ಪ್ರವಾಸತಾಣಗಳು ಸಹ ಸೌರವಿದ್ಯುತ್ ಸೌಲಭ್ಯ ಪಡೆದಿವೆ. ಆದರೆ, ಅಲ್ಲಲ್ಲ ಹಾಳಾದ ಸೌರಫಲಕ ಹಾಗೂ ಬ್ಯಾಟರಿಗಳನ್ನು ಸೂಕ್ತವಾಗಿ ವಿಲೇವಾರಿ ಮಾಡುವ ಕಾರ್ಯ ಮಾತ್ರ ಆಗುತ್ತಿಲ್ಲ. ಇದರಿಂದಾಗಿ, ಸೌರಕೋಶಗಳಲ್ಲಿರುವ ಸೀಸ, ಕ್ಯಾಡ್ಮಿಯಂ, ಸಿಲೇನಿಯಂ, ಆರ್ಸೆನಿಕ್‌ನಂತಹ ವಿಷಕಾರಕ ಅಂಶಗಳು ಮಣ್ಣು ಹಾಗೂ ಜಲಮೂಲವನ್ನು ಸೇರಿ ಜನ– ಜಾನುವಾರು, ವನ್ಯಜೀವಿಗಳ ಸುರಕ್ಷತೆಗೆ ಭಂಗ ತರುತ್ತಿವೆ.

ಸೌರತ್ಯಾಜ್ಯವನ್ನು ನಿಯಂತ್ರಿಸಬೇಕಾದದ್ದು ಕೇಂದ್ರ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು. ಇದಕ್ಕೆಂದೇ ಕೇಂದ್ರ ಪರಿಸರ ಇಲಾಖೆಯು 'ಇ- ತ್ಯಾಜ್ಯ ನಿರ್ವಹಣಾ ನಿಯಮ' (2022)' ರೂಪಿಸಿದೆ. ಅದರ ಅನ್ವಯ, ಸೌರತ್ಯಾಜ್ಯ ಸಂಗ್ರಹ, ದಾಸ್ತಾನು, ವರ್ಗೀಕರಣ, ವಿಲೇವಾರಿ, ಸೂಕ್ತ ಸಂಸ್ಕರಣೆ ಎಲ್ಲವನ್ನೂ ಈ ಉಪಕರಣಗಳ ತಯಾರಕರು ಹಾಗೂ ಮಾರಾಟಗಾರರು ನಿರ್ವಹಿಸಬೇಕು. ಆದರೆ, ಈ ನಿಯಮಗಳು ಅನುಷ್ಠಾನವಾಗದೆ, ಸಾರ್ವಜನಿಕ ಆರೋಗ್ಯ ಹಾಗೂ ಪರಿಸರ ಸುರಕ್ಷತೆಗೆ ಅಪಾಯ ಬಂದೊದಗಿದೆ. ಈ ಕಾರಣದಿಂದ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸೌರತ್ಯಾಜ್ಯವನ್ನು ತ್ವರಿತವಾಗಿ ವಿಲೇವಾರಿ ಮಾಡುವ ಸೂಕ್ತ ಕಾರ್ಯತಂತ್ರಗಳನ್ನು ಶೀಘ್ರವಾಗಿ ಅನುಷ್ಠಾನಗೊಳಿಸಬೇಕಿದೆ.

ಕೇಶವ ಎಚ್.ಕೊರ್ಸೆ, ಶಿರಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಂತೃಪ್ತ ಜೀವನ ಭಾರತ ಹಿಂದೆ

ಫಿನ್ಲೆಂಡ್‌ಗೆ ಮೊದಲ ರ್‍ಯಾಂಕ್, ಅಫ್ಗಾನಿಸ್ತಾನಕ್ಕೆ ಕೊನೆಯ ಸ್ಥಾನ

ಭಾರತೀಯರು ಜೀವನದಲ್ಲಿ ಹೆಚ್ಚು ಸಂತೃಪ್ತರಾಗಿಲ್ಲ ಎಂದು ಜಾಗತಿಕ ಸಂತೃಪ್ತಿ ವರದಿ ಹೇಳಿದೆ. ಭಾರತ 118ನೇ ರ್‍ಯಾಂಕ್ ಗಳಿಸಿದೆ. ಯುರೋಪ್, ಪಶ್ಚಿಮ ರಾಷ್ಟ್ರಗಳು ಅಷ್ಟೇ ಏಕೆ ನೆರೆಯ ಪಾಕಿಸ್ತಾನ, ನೇಪಾಳ, ಚೀನಾ ರಾಷ್ಟ್ರಗಳು ಕೂಡ ಭಾರತಕ್ಕಿಂತ ಹೆಚ್ಚಿನ ರ್‍ಯಾಂಕ್ ಪಡೆದಿವೆ. ವಿವಿಧ ಮಾನದಂಡಗಳ ಆಧಾರದಲ್ಲಿ ನೀಡಲಾಗುತ್ತಿರುವ ಈ ರ್‍ಯಾಂಕಿಂಗ್ ಜಗತ್ತಿನ ಜನರ ಯೋಗಕ್ಷೇಮದ ಮೇಲೆ ಬೆಳಕು ಚೆಲ್ಲಿದೆ

ಪ್ರಜಾವಾಣಿ ವಾರ್ತೆ

'ಸಂತೃಪ್ತಿ ಎನ್ನುವುದು ಎಲ್ಲಿಯೋ ಸಿಗುವ ಸಿದ್ಧ ಸರಕಲ್ಲ, ನಾವು ಮಾಡುವ ಕ್ರಿಯೆಗಳಿಂದಲೇ ದಕ್ಕುವಂಥದ್ದು'

–ಟಿಬೆಟಿಯನ್ನರ ಧರ್ಮಗುರು ದಲೈಲಾಮ ಅವರು ಸಂತೃಪ್ತಿಯನ್ನು (happiness) ಹೀಗೆ ವಿಶ್ಲೇಷಿಸಿದ್ದಾರೆ.

ಸಂತೃಪ್ತಿ ಎನ್ನುವುದು ಮನುಷ್ಯನ ಜೀವನ, ಯೋಗಕ್ಷೇಮದ ಕನ್ನಡಿ. ಜೀವನ ಸಂತೃಪ್ತಿಯಿಂದ ಕೂಡಿರುವುದಕ್ಕೆ ಹಲವು ಅಂಶಗಳು ಕಾರಣವಾಗುತ್ತವೆ. ಒಂದು ದೇಶ ಅಥವಾ ಪ್ರದೇಶದ ಸಾಮಾಜಿಕ ಸ್ಥಿತಿಗತಿ, ಅಲ್ಲಿ ಜಾರಿಯಲ್ಲಿರುವ ಪರಿಣಾಮಕಾರಿ ಆಡಳಿತ ವ್ಯವಸ್ಥೆ, ಸಮಾಜದೊಂದಿಗೆ ಜನರ ಒಡನಾಟ, ಆದಾಯ, ಆರೋಗ್ಯಯುತ ಜೀವನ, ಸಮಾಜದ ಸಹಕಾರ, ಜನರಲ್ಲಿರುವ ಹಿತಚಿಂತನೆ ಗುಣ... ಹೀಗೆ ಪಟ್ಟಿ ಸಾಗುತ್ತದೆ. ಈ ಅಂಶಗಳು ಅತ್ಯುತ್ತಮವಾಗಿದ್ದರೆ ದೇಶ, ಅಲ್ಲಿನ ಜನರ ಜೀವನ ಸಂತೃಪ್ತಿಯಿಂದ ಕೂಡಿರುತ್ತದೆ ಎಂದು ಹೇಳುತ್ತದೆ ಈ ವರ್ಷದ ಜಾಗತಿಕ ಸಂತೃಪ್ತಿ ವರದಿ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವೆಲ್‌ಬೀಯಿಂಗ್ ರಿಸರ್ಚ್ ಸೆಂಟರ್, ಗಾಲಪ್ ಮತ್ತು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಪರಿಹಾರಗಳ ಜಾಲದ ಸಹಯೋಗದಲ್ಲಿ ಈ ವರದಿಯನ್ನು ಸಿದ್ಧಪಡಿಸಿದ್ದು, ಕಳೆದ ವಾರವಷ್ಟೇ ಬಿಡುಗಡೆ ಮಾಡಲಾಗಿದೆ. ವರದಿಯು ಜಗತ್ತಿನ 147 ರಾಷ್ಟ್ರಗಳ ಜನರ ಯೋಗಕ್ಷೇಮದ ಬಗ್ಗೆ ವರದಿ ಬೆಳಕು ಚೆಲ್ಲಿದೆ. ಪ್ರಮುಖ ಆರು ಸೇರಿದಂತೆ ವಿವಿಧ ಮಾನದಂಡಗಳ ಆಧಾರದಲ್ಲಿ ಈ ರಾಷ್ಟ್ರಗಳ ಜನರ ಸಂತೃಪ್ತಿಯ ಬದುಕನ್ನು ವರದಿಯು ಅಳೆದಿದ್ದು, ಫಿನ್ಲೆಂಡ್ ಮೊದಲ ರ್‍ಯಾಂಕ್ ಪಡೆದಿದೆ. ಡೆನ್ಮಾರ್ಕ್ ಎರಡನೇ, ಐಸ್‌ಲ್ಯಾಂಡ್ ಮೂರನೇ ರ್‍ಯಾಂಕ್ ಪಡೆದಿದೆ.

ಭಾರತಕ್ಕೆ 118ನೇ ರ್‍ಯಾಂಕ್ ಸಿಕ್ಕಿದೆ. ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಚೀನಾ, ನೇಪಾಳ, ಭಾರತಕ್ಕಿಂತ ಮೇಲಿನ ರ್‍ಯಾಂಕ್ ಗಳಿಸಿವೆ. ಪಾಕಿಸ್ತಾನ 109ನೇ ಸ್ಥಾನದಲ್ಲಿದ್ದರೆ, ಚೀನಾ 68ನೇ ಮತ್ತು ನೇಪಾಳ 92ನೇ ರ್‍ಯಾಂಕ್ ಪಡೆದಿವೆ. ಯುದ್ಧಪೀಡಿತ ಉಕ್ರೇನ್, ಪ್ಯಾಲೆಸ್ಟೀನ್, ಹಿಂಸಾಚಾರಪೀಡಿತ ಪಶ್ಚಿಮ ಏಷ್ಯಾ ರಾಷ್ಟ್ರಗಳು, ತೀವ್ರ ಬಡತನ ಹೊಂದಿರುವ ಆಫ್ರಿಕಾ ಖಂಡದ ಹಲವು ರಾಷ್ಟ್ರಗಳು ಭಾರತಕ್ಕಿಂತಲೂ ಉತ್ತಮ ಸ್ಥಾನಗಳಿಸಿವೆ.

ಕಾಳಜಿ, ಹಂಚಿಕೊಳ್ಳುವಿಕೆ



ಪ್ರತಿ ವರ್ಷದ ಜಾಗತಿಕ ಸಂತೃಪ್ತಿ ವರದಿಯು ಸಾಮಾಜಿಕ ಬೆಂಬಲ, ತಲಾವಾರು ಜಿಡಿಪಿ, ಆರೋಗ್ಯಯುತ ಜೀವನದ ನಿರೀಕ್ಷೆ, ಜೀವನದಲ್ಲಿ ಆಯ್ಕೆಯ ಸ್ವಾತಂತ್ರ್ಯ, ಔದಾರ್ಯ ಮತ್ತು ಭ್ರಷ್ಟಾಚಾರ ಗ್ರಹಿಕೆಗಳು ಎಂಬ ಆರು ಮಾನದಂಡಗಳನ್ನು ಆಧರಿಸಿರುತ್ತದೆ. ಇವುಗಳ ಆಧಾರದಲ್ಲಿ ಜನರ ಜೀವನದ ಮೌಲ್ಯಮಾಪನ ಮಾಡಿ ಒಟ್ಟು 10 ಅಂಕಗಳಲ್ಲಿ ಪ್ರತಿ ರಾಷ್ಟ್ರಕ್ಕೆ ಅಂಕಗಳನ್ನು ನೀಡಲಾಗುತ್ತದೆ.

ಈ ಬಾರಿಯ ವರದಿಯು 'ಕಾಳಜಿ ತೋರುವುದು ಮತ್ತು ಹಂಚಿಕೊಳ್ಳುವುದು' ಎಂಬ ಧ್ಯೇಯ ವಾಕ್ಯದ ಅಡಿಯಲ್ಲಿ ಸಂತೃಪ್ತಿ ಬದುಕಿನ ಮೇಲೆ ಈ ಎರಡು ಅಂಶಗಳು ಬೀರುವ ಪ್ರಭಾವವನ್ನು ವಿಶ್ಲೇಷಿಸಿದೆ. ದಯಾಪರತೆ/ಹಿತಚಿಂತನೆಯನ್ನು ಆಧಾರವಾಗಿಟ್ಟುಕೊಂಡು ರಾಷ್ಟ್ರಗಳಿಗೆ ಮತ್ತೊಂದು ರ್‍ಯಾಂಕ್ ನೀಡಲಾಗಿದೆ. ಅಪರಿಚಿತರು ಸೇರಿದಂತೆ ಬೇರೆಯವರಿಗೆ ಸಹಾಯ ಮಾಡುವುದು, ದಾನ ನೀಡುವುದರಿಂದ ಜನರಿಗೆ ಸಂತೃಪ್ತಿ ಸಿಗುತ್ತದೆ. ಸಮಾಜದ ಜನರಲ್ಲಿ ದಯಾಪರತೆ ಜಾಸ್ತಿ ಇದ್ದರೆ, ಸಂತೃಪ್ತಿ ಕಡಿಮೆ ಇರುವವರಿಗೆ ಅನುಕೂಲವಾಗುತ್ತದೆ ಎಂದೂ ವರದಿ ಹೇಳಿದೆ.

ಹಿತಚಿಂತನೆ ಆಧಾರದಲ್ಲಿ ಸಂತೃಪ್ತಿ ರ್‍ಯಾಂಕಿಂಗ್ ನೀಡುವಾಗ ಕಳೆದು ಹೋದ ಪರ್ಸ್ ಅನ್ನು ವಾಪಸ್ ನೀಡುವುದನ್ನೂ ಒಂದು ಮಾನದಂಡವಾಗಿ ಪರಿಗಣಿಸಲಾಗಿದೆ. ತಾವು ಕಳೆದು ಕೊಂಡ ಪರ್ಸ್ ಅನ್ನು ಬೇರೆಯವರು ತಂದು ಕೊಡುವುದು ಜನರಲ್ಲಿ ಸಂತೃಪ್ತಿ ತರುತ್ತದೆ ಎಂದು ಅದು ವಿವರಿಸಿದೆ.

ಕಡಿಮೆ ರ್‍ಯಾಂಕ್ ಬಂದಿದ್ದೇಕೆ?

ಭಾರತವು ಕಡಿಮೆ ರ್‍ಯಾಂಕ್ ಗಳಿಸಲು ಏನು ಕಾರಣ ಎಂಬ ಬಗ್ಗೆ ವರದಿಯಲ್ಲಿ ವಿವರಣೆ ಇಲ್ಲ. ಆದರೆ, ರಾಷ್ಟ್ರವಾರು ಅಂಕಗಳನ್ನು ಅವಲೋಕಿಸಿದಾಗ ದೇಶವು ಸಾಮಾಜಿಕ ಬೆಂಬಲ, ತಲಾವಾರು ಜಿಡಿಪಿ, ಔದಾರ್ಯ, ಭ್ರಷ್ಟಾಚಾರ ಗ್ರಹಿಕೆ ಮಾನದಂಡಗಳಲ್ಲಿ ಕಡಿಮೆ ರ್‍ಯಾಂಕಿಂಗ್ ಗಳಿಸಿದೆ. ಜೀವನದಲ್ಲಿ ಆಯ್ಕೆಯ ಸ್ವಾತಂತ್ರ್ಯದ ಮಾನದಂಡದಲ್ಲಿ ಮಾತ್ರ ಉತ್ತಮ ರ್‍ಯಾಂಕಿಂಗ್ ಹೊಂದಿದೆ. ದೇಶದಲ್ಲಿರುವ ಆರ್ಥಿಕ ಒತ್ತಡ, ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ, ಜನರ ನಡುವಿನ ಆರ್ಥಿಕ ಅಸಮಾನತೆ, ಸಾಮಾಜಿಕ ಸ್ಥಿತಿಗತಿಗಳು ಕಡಿಮೆ ರ್‍ಯಾಂಕಿಂಗ್ ಬರಲು ಕಾರಣವಾಗಿರಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.

ಭಾರತಕ್ಕೆ ಸಿಕ್ಕ ಅಂಕಗಳೆಷ್ಟು ?

ಜನರ ಬದುಕಿನ ಮೌಲ್ಯಮಾಪನವನ್ನು ಮಾಡುವಾಗ ಪ್ರಮುಖವಾಗಿ ಆರು ಮಾನದಂಡಗಳನ್ನು ಪರಿಗಣಿಸಲಾಗಿದೆ. ಪ್ರತಿ ಮಾನದಂಡದಲ್ಲೂ ಪ್ರತಿ ರಾಷ್ಟ್ರಕ್ಕೆ ರ್‍ಯಾಂಕ್ ನೀಡಲಾಗಿದೆ. ಈ ಮಾನದಂಡಗಳಲ್ಲಿ ಬಂದ ರ್‍ಯಾಂಕ್, ಅಂಕಗಳನ್ನು ಪರಿಗಣಿಸಿ ಸಂತೃಪ್ತಿ ರ್‍ಯಾಂಕ್ ನೀಡಲಾಗಿದೆ.

ಮಾನದಂಡ	ರ್‍ಯಾಂಕ್	ಮೌಲ್ಯ
ಸಾಮಾಜಿಕ ಬೆಂಬಲ	128	60.7%
ತಲಾವಾರು ಜಿಡಿಪಿ	93	₹8.31 ಲಕ್ಷ (9,703 ಡಾಲರ್)
ಆಯ್ಕೆಯ ಸ್ವಾತಂತ್ರ್ಯ	23	90.8%
ಔದಾರ್ಯ	51	35.5%
ಭ್ರಷ್ಟಾಚಾರದ ಗ್ರಹಿಕೆ	56	73%
ಆರೋಗ್ಯಯುತ ಜೀವನ ನಿರೀಕ್ಷೆ	-	-

ಸ್ಥಾನಮಾನ ಕೊಂಚ ಚೇತರಿಕೆ

ಭಾರತದ ಸ್ಥಾನಮಾನದಲ್ಲಿ ಏಳು ವರ್ಷಗಳಿಂದ ಚೇತರಿಕೆ ಕಂಡು ಬರುತ್ತಿದೆ. 2012ರಲ್ಲಿ ಭಾರತಕ್ಕೆ 94ನೇ ಸ್ಥಾನ ಬಂದಿದ್ದು, ಈವರೆಗಿನ ಅತ್ಯುನ್ನತ ರ್‍ಯಾಂಕ್. ಆ ವರ್ಷ ದೇಶ 4.975 ಅಂಕ ಗಳಿಸಿತ್ತು. 2019ರಲ್ಲಿ 144ನೇ ರ್‍ಯಾಂಕ್ ಗಳಿಸಿದ್ದು, ಈವರೆಗಿನ ಕನಿಷ್ಠ ಸ್ಥಾನ. ಆ ವರ್ಷ ದೇಶ ಗಳಿಸಿದ್ದ ಅಂಕ 3.573.



ಯಾವ ರಾಷ್ಟ್ರಕ್ಕೆ ಎಷ್ಟನೇ ರ್‍ಯಾಂಕ್?

● ಅಂಕಗಳು ● ರ್‍ಯಾಂಕ್ (ಆವರಣದಲ್ಲಿರುವುದು 2023ರ ರ್‍ಯಾಂಕ್)



ಸಂಪತ್ತು ತೃಪ್ತಿ ತರದು

ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಎಂಬ ಹಣೆಪಟ್ಟಿ ಕಟ್ಟಿಕೊಂಡಿರುವ ಜಗತ್ತಿನ ಬಹುತೇಕ ಸಿರಿವಂತ ರಾಷ್ಟ್ರಗಳು ಮೊದಲ ಹತ್ತು ದೇಶಗಳ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ. ವಿಶ್ವದ 'ದೊಡ್ಡಣ್ಣ' ಎಂದು ಗುರುತಿಸಿಕೊಳ್ಳುವ ಅಮೆರಿಕ 24ನೇ ಸ್ಥಾನದಲ್ಲಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ (23), ಅದರ ಸ್ಥಾನ ಕುಸಿದಿದೆ. ಇದು ಅಮೆರಿಕದ ಈವರೆಗಿನ ಕನಿಷ್ಠ ರ್‍ಯಾಂಕಿಂಗ್. ಇಸ್ರೇಲ್ ಎಂಟನೇ ಸ್ಥಾನದಲ್ಲಿದೆ. ಆಸ್ಟ್ರೇಲಿಯಾ 11, ಕೆನಡಾ 18, ಬ್ರಿಟನ್ 23, ಫ್ರಾನ್ಸ್ 33, ಜರ್ಮನಿ 22, ರಷ್ಯಾ 66ನೇ ರ್‍ಯಾಂಕ್ ಗಳಿಸಿವೆ.

ಹಂಚಿ ತಿನ್ನುವುದರಲ್ಲೂ ಖುಷಿ

ಕುಟುಂಬದವರೆಲ್ಲರೂ ಜೊತೆಯಾಗಿ ಊಟ ಮಾಡುವುದು, ಬೇರೆಯವರೊಂದಿಗೆ ಆಹಾರವನ್ನು ಹಂಚಿಕೊಳ್ಳುವುದು ಕೂಡ ಖುಷಿಗೆ ಕಾರಣವಾಗುತ್ತದೆ. ಅಮೆರಿಕದಲ್ಲಿ ಇತ್ತೀಚಿನ ವರ್ಷಗಳಲ್ಲಿ ಜನರು ಏಕಾಂಗಿಯಾಗಿ ಊಟ ಮಾಡುವ ಪ್ರವೃತ್ತಿ ಹೆಚ್ಚುತ್ತಿದ್ದು, ರ್‍ಯಾಂಕಿಂಗ್‌ನಲ್ಲಿ ಕುಸಿತ ಕಾಣುವುದಕ್ಕೆ ಇದೂ ಒಂದು ಕಾರಣ ಎಂದು ವರದಿ ಬೆಟ್ಟು ಮಾಡಿದೆ. ಊಟ ಹಂಚಿಕೆ ಮಾನದಂಡದಲ್ಲಿ ಭಾರತವು 132ನೇ ರ್‍ಯಾಂಕ್ ಗಳಿಸಿದ್ದು, ವಾರದಲ್ಲಿ ಸರಾಸರಿ ನಾಲ್ಕು ಊಟವನ್ನು ಹಂಚಲಾಗುತ್ತದೆ ಎಂದು ಹೇಳಿದೆ. ವರದಿಯ ಪ್ರಕಾರ, ಗಂಡ– ಹೆಂಡತಿ ಮಕ್ಕಳು ಒಟ್ಟಾಗಿ ಒಂದೇ ಮನೆಯಲ್ಲಿ ವಾಸಿಸುವುದು, ಸಾಮಾಜಿಕ ಸಂಪರ್ಕ, ಜನರೊಂದಿಗೆ ಒಡನಾಟವೂ ಜನರ ಖುಷಿಯನ್ನು ಹೆಚ್ಚಿಸುತ್ತದೆ.

ಫಿನ್ಲೆಂಡ್ ಮೊದಲೇಕೆ?

ಯುರೋಪಿನ ಪುಟ್ಟ ರಾಷ್ಟ್ರ ಫಿನ್ಲೆಂಡ್ ಸತತ ಎಂಟು ವರ್ಷಗಳಿಂದ ಮೊದಲ ರ್‍ಯಾಂಕ್ ಗಳಿಸುತ್ತಿದೆ. ಫಿನ್ಲೆಂಡ್‌ನಲ್ಲಿ ಗುಣಮಟ್ಟದ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಬೆಂಬಲ ವ್ಯವಸ್ಥೆಗಳಿವೆ. ಸರ್ಕಾರಿ ಆಡಳಿತ ವ್ಯವಸ್ಥೆ ಸದೃಢವಾಗಿದ್ದು, ಜನರಿಗೆ ಅತ್ಯುತ್ತಮ ಸೇವೆಗಳು ಲಭ್ಯವಾಗುತ್ತಿವೆ. ಭ್ರಷ್ಟಾಚಾರ ಕಡಿಮೆ ಇದೆ. ಆರ್ಥಿಕ, ಸಾಮಾಜಿಕ ಅಸಮಾನತೆ ಕಡಿಮೆ ಇರುವುದರಿಂದ ಖಾಸಗಿ ದಾನ–ಧರ್ಮದ ಅವಶ್ಯಕತೆ ಇಲ್ಲ ಎಂದು ವರದಿ ಹೇಳಿದೆ.

ಸಿನಿ ಬಿಟ್ಸ್

ಒಟಿಟಿಯಲ್ಲಿ 'ತಾಯಿ ಕಸೂರ್ ಗಾಂಧಿ'

ಬರಗೂರು ರಾಮಚಂದ್ರಪ್ಪ ನಿರ್ದೇಶಿಸಿರುವ 'ತಾಯಿ ಕಸ್ತೂರ್ ಗಾಂಧಿ' ಚಿತ್ರ ಮಾ.28 ರಿಂದ ಅಮೆಜಾನ್ ಪ್ರೈಮ್‌ನಲ್ಲಿ ವೀಕ್ಷಕರಿಗೆ ಲಭ್ಯವಾಗಲಿದೆ.

ಕಸ್ತೂರ್ ಬಾ ಅವರನ್ನೇ ಕೇಂದ್ರವಾಗಿಟ್ಟುಕೊಂಡು ಸಿದ್ಧಗೊಂಡ ಈ ಚಿತ್ರವು ಹಲವು ಚಿತ್ರೋತ್ಸವಗಳಿಗೆ ಆಯ್ಕೆಗೊಂಡಿತ್ತು. ಬರಗೂರರ ಕಾದಂಬರಿಯನ್ನು ಆಧರಿಸಿದ ಚಿತ್ರವಿದು. 'ಕಸ್ತೂರ್ ಬಾ ಅವರ ಬದುಕಿನ ಕೆಲವು ಪ್ರಮುಖ ಘಟನೆಗಳನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ. ತಾಯಿ, ಪತ್ನಿ ಮತ್ತು ಹೋರಾಟಗಾರ್ತಿಯಾಗಿ ಅವರು ಬದುಕನ್ನು ನಿಭಾಯಿಸಿದ ರೀತಿ ಎಲ್ಲರಿಗೂ ಸ್ಫೂರ್ತಿಯಾಗಿದೆ' ಎಂದಿದ್ದಾರೆ ಬರಗೂರು. ಕಸ್ತೂರ್ ಬಾ ಪಾತ್ರದಲ್ಲಿ ಹರಿಪ್ರಿಯ ಮತ್ತು ಗಾಂಧಿಯಾಗಿ ಕಿಶೋರ್ ನಟಿಸಿದ್ದಾರೆ. ಶ್ರೀನಾಥ್ ಅಂಬೇಡ್ಕರ್ ಪಾತ್ರದಲ್ಲಿದ್ದಾರೆ. ಮಾಸ್ಟರ್ ಆಕಾಂಕ್ಷ್ ಬರಗೂರು, ಸುಂದರರಾಜು, ಪ್ರಮೀಳಾ ಜೋಷಾಯ್, ಮುಂತಾದವರು ತಾರಾಗಣದಲ್ಲಿದ್ದಾರೆ.

ಜನಮಿತ್ರ ಮೂವೀಸ್ ನಿರ್ಮಾಣವಿದೆ. ಶಮಿತಾ ಮಲ್ನಾಡ್ ಸಂಗೀತ, ನಾಗರಾಜ ಆದವಾನಿ ಛಾಯಾಚಿತ್ರಗ್ರಹಣ, ಸುರೇಶ್ ಅರಸು ಸಂಕಲನವಿದೆ. ❖

ನೈಜ ಘಟನೆಯ ಪ್ರೀತಿಯ ಹುಚ್ಚ

1990ರ ದಶಕದಲ್ಲಿ ಹಾಸನದಲ್ಲಿ ನಡೆದ ನೈಜ ಘಟನೆಯೊಂದನ್ನು ಕಥೆಯಾಗಿಸಿಕೊಂಡಿರುವ 'ಪ್ರೀತಿಯ ಹುಚ್ಚ' ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ವಿ.ಕುಮಾರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

'ಮದುವೆಯಾದ ಮೊದಲ ರಾತ್ರಿಯೇ ದುಷ್ಟರ ಜಾಲಕ್ಕೆ ಸಿಕ್ಕಿ ಮುಂಬೈನ ಕಾಮಾಟಿಪುರಕ್ಕೆ ಮಾರಾಟವಾಗುವ ಅಮಾಯಕ ಯುವತಿಯೊಬ್ಬಳ ಕಥೆಯಿದು. ಆಕೆಯ ಜೀವನ ಮುಂದೆ ಯಾವೆಲ್ಲ ತಿರುವು ಪಡೆದುಕೊಂಡಿತು, ಪ್ರೀತಿಸಿ ಮದುವೆಯಾದ ಪತ್ನಿಯನ್ನು ಕಳೆದುಕೊಂಡ ನಾಯಕ ಯಾವ ಸ್ಥಿತಿ ತಲುಪುತ್ತಾನೆ ಎಂಬುದೇ ಚಿತ್ರಕಥೆ. ಏಪ್ರಿಲ್ ಎರಡನೆ ವಾರ ಚಿತ್ರ ತೆರೆಗೆ ಬರಲಿದೆ' ಎನ್ನುತ್ತಾರೆ ನಿರ್ದೇಶಕರು.

ವಿ.ಕುಮಾರ್, ಬಿ.ಜಿ.ನಂದಕುಮಾರ್ ಬಂಡವಾಳ ಹೂಡಿದ್ದಾರೆ. ಕನ್ನಡ, ತೆಲುಗು ಸೇರಿದಂತೆ ಐದು ಭಾಷೆಗಳಲ್ಲಿ ಚಿತ್ರ ನಿರ್ಮಾಣಗೊಂಡಿದೆ. ವಿಜಯ್ ನಾಯಕನಾಗಿ ನಟಿಸಿದ್ದು, ಕುಂಕುಮ್ ನಾಯಕಿ. ಜೆ.ಎನ್.ರಂಗರಾಜನ್ ಸಂಗೀತ, ಸುನಿಲ್ ಕೆ.ಆರ್.ಎಸ್. ಛಾಯಾಚಿತ್ರಗ್ರಹಣ, ಪ್ರವೀಣ್ ವಿಷ್ಣು ಸಂಕಲನವಿದೆ. ಬೆಂಗಳೂರು, ಮಂಡ್ಯ, ಚಿಕ್ಕಮಗಳೂರು, ಹಾಸನ, ಶ್ರವಣಬೆಳಗೊಳ ಹಾಗೂ ಮುಂಬೈನಲ್ಲಿ ಚಿತ್ರೀಕರಣಗೊಂಡಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ರನ್‌ವೇ ಬಿಟ್ಟು ಬೇರೆಡೆ ಚಲಿಸಿದ ವಿಮಾನವೊಂದರ ವಿಡಿಯೊ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೊಳ್ಳಲಾಗುತ್ತಿದೆ. ಇದು ಉತ್ತರ ಪ್ರದೇಶದ ಬರೇಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದ ಘಟನೆ ಎಂದೂ ಕೆಎಲ್‌ಎಂ ಏರ್‌ಲೈನ್ಸ್‌ಗೆ ಸೇರಿದ ವಿಮಾನವು ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿತು ಎಂದೂ ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಬರೇಲಿಯಲ್ಲಿ ಇರುವುದು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಅಲ್ಲ; ಅದು ವಾಯುನೆಲೆ. ನಿರ್ದಿಷ್ಟ ಪದಗಳ ಮೂಲಕ ಹುಡುಕಿದಾಗ, ಬರೇಲಿಯಲ್ಲಿ ಅಂತಹ ಯಾವುದೇ ಘಟನೆ ನಡೆದಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿಲ್ಲ. ವಿಡಿಯೊದ ಕೀಫ್ರೇಮ್‌ಗಳನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, 2024ರ ಡಿ.19ರಂದು ಇಂಥದ್ದೇ ವಿಡಿಯೊ ಅನ್ನು ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಲಾಗಿತ್ತು. ನಾರ್ವೆಯ ಓಸ್ಲೋ ವಿಮಾನ ನಿಲ್ದಾಣದಲ್ಲಿ ನಡೆದ ಘಟನೆ ಎಂದೂ ಅದರಲ್ಲಿ ಯಾರಿಗೂ ಪ್ರಾಣಾಪಾಯ ಉಂಟಾಗಲಿಲ್ಲ ಎಂದೂ ಟಿಪ್ಪಣಿಯಲ್ಲಿ ಉಲ್ಲೇಖಿಸಲಾಗಿತ್ತು. ವಿದೇಶದ ಹಳೆಯ ವಿಡಿಯೊವನ್ನು ಉತ್ತರ ಪ್ರದೇಶದಲ್ಲಿ ನಡೆದದ್ದು ಎಂದು ಹಂಚಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ಸಂಪತ್ತಿಗೆ ಬೇಕು ದಾನ ಎಂಬ ಕೋಡಿ

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

161

ಸಮುದ್ರದ ನೀರು ಆವಿಯಾಗಿ ಮೋಡವಾಗುತ್ತದೆ. ಆಗ ಸಮುದ್ರ ಸೂರ್ಯನಿಗೆ ಹೇಳುತ್ತದೆ, 'ಇದು ನಿನಗೆ ನನ್ನ ನೈವೇದ್ಯ' ಅಂತ. ಮೋಡ ಹಾಗೆಯೇ ಇರಲ್ಲ. ಮಳೆಯಾಗಿ ಸುರಿಯುತ್ತದೆ. ಮಳೆ ಆಕಾಶದಲ್ಲೇ ಇಲ್ಲ. ಅದು ಭೂಮಿಗೆ ಬಿದ್ದಿದೆ. ಭೂಮಿ ಕೂಡಾ ನೀರನ್ನು ತಾನೇ ಇಟ್ಟುಕೊಂಡಿಲ್ಲ. ಮರಗಳಿಗೆ ಕೊಟ್ಟಿದೆ. ಮರ ತಾನು ಇಟ್ಟುಕೊಂಡಿಲ್ಲ. ಹಣ್ಣಾಗಿ ಮತ್ತೆ ಭೂಮಿಗೇ ಕೊಟ್ಟಿದೆ. ನಿಸರ್ಗ ಕೊಟ್ಟು ಸಂತೋಷ ಪಟ್ಟಿದೆ. ಇಟ್ಟುಕೊಂಡು ಸಂತೋಷ ಪಟ್ಟಿಲ್ಲ.

ಸಂಪತ್ತಿಗೆ ಮೂರು ರೂಪಗಳಿವೆ. ನಮ್ಮ ದೇಶದ ದಾರ್ಶನಿಕರು ಸಂಪತ್ತನ್ನು ಹೇಗೆ ಬಳಸಬೇಕು ಎಂದು ಚಿಂತನೆ ಮಾಡಿದ್ದಾರೆ. ನಾವು ಗಳಿಸಿದ ಸಂಪತ್ತನ್ನು ನಾವೇ ಅನುಭವಿಸಬೇಕು. ಇದು ಮೊದಲನೆಯದ್ದು. ನೀನು ದುಡಿದ ಸಂಪತ್ತಿನ ಮೇಲೆ ನಿನಗೆ ಸಂಪೂರ್ಣ ಹಕ್ಕು ಇದೆ. ನೀನು ಉಣ್ಣು, ತಿನ್ನು, ಮಜಾ ಮಾಡು. ಏನೂ ತಪ್ಪಿಲ್ಲ. ನೀವು ದುಡಿದ ಸಂಪತ್ತನ್ನು ಆರಾಮಾಗಿ ಅನುಭವಿಸು. ನಾವು ಹಾಗೆ ಮಾಡುವುದಿಲ್ಲ. ಒಳ್ಳೆಯ ಆಕಳು ಕಟ್ಟುತ್ತೇವೆ. ಹಾಲನ್ನು ಹೋಟೆಲ್‌ಗೆ ಕೊಟ್ಟು ಮಕ್ಕಳಿಗೆ ನೀರು ಹಾಲು ಕೊಡುತ್ತೇವೆ. ನಾವು ಬೆಳೆದ ಒಳ್ಳೆಯ ಹಣ್ಣುಗಳನ್ನು ರಫ್ತು ಮಾಡುತ್ತೇವೆ. ಕೊಳೆತ ಸಾಧಾರಣ ಹಣ್ಣುಗಳನ್ನು ಮನೆಗೆ ತರ್ತೇವೆ. ವಾರೆನ್ ಬಫೆಟ್ ಎಂಬಾತ ಹೇಳುವುದೇನು ಎಂದರೆ, 'ಮನುಷ್ಯನೇ, ನೀನು ಶ್ರೀಮಂತ ಆಗಬೇಕು ಎಂದರೆ ಸಂಗ್ರಹ ಮಾಡಬೇಡ. ಕೂಡಿಡಬೇಡ, ಹೂಡಿಕೆ ಮಾಡು' ಎನ್ನುತ್ತಾನೆ. ನಾವು ಹಾಗಲ್ಲ. ಎಲ್ಲಿ ಸಾಧ್ಯವೋ ಅಲ್ಲಲ್ಲಿ ಸಂಗ್ರಹಿಸಿ ಇಡುತ್ತೇವೆ. ಆರೋಗ್ಯ, ಆನಂದ ಮತ್ತು ಅಧ್ಯಾತ್ಮ ಯಾರಲ್ಲಿ ಇರುತ್ತದೋ ಅವರು ಸಂತೋಷವಾಗಿ ಇರುತ್ತಾರೆ. ಸಂತೃಪ್ತಿಯಾಗಿಯೂ ಇರುತ್ತಾರೆ. ಇವುಗಳನ್ನು ಎಂದೂ ಕಳೆದುಕೊಳ್ಳಬಾರದು.

ಎರಡನೆಯದ್ದು ಏನೆಂದರೆ ಹಂಚಿಕೊಂಡು ಉಣ್ಣು. ಹಣ ಇದ್ದಾಗ ಹಂಚಿಕೊಂಡು ಉಣ್ಣು, ನೆಣ (ಶಕ್ತಿ) ಇದ್ದಾಗ ಸೇವೆ ಮಾಡು. ಹಣ, ನೆಣ ಮತ್ತು ಗುಣ ಕಾಯಂ ಇರೋದಿಲ್ಲ. ಇದ್ದಾಗ ಮಾಡಿಕೊಳ್ಳಬೇಕು. ಗಾಳಿ ಬಂದಾಗಲೇ ತೂರಿಕೊಳ್ಳಬೇಕು. ಕರ್ಣ ಒಮ್ಮೆ ಕ್ಷೌರ ಮಾಡಿಕೊಳ್ಳುತ್ತಾ ಇರುವಾಗ ಯಾರೋ ಒಬ್ಬ ಬಂದು ಸಹಾಯ ಕೇಳಿದನಂತೆ. ಆತ ತಕ್ಷಣವೇ ಪಕ್ಕದಲ್ಲಿಯೇ ಇದ್ದ ಬಂಗಾರದ ಬಟ್ಟಲನ್ನು ಕೊಟ್ಟು ಕಳಿಸಿದನಂತೆ. ಆಗ ಪಕ್ಕದಲ್ಲಿ ಇದ್ದವನು 'ಏನ್ ಸ್ವಾಮಿ ನೀವು ಎಡಗೈಲಿ ದಾನ ಕೊಟ್ಟಿರಲ್ಲ, ತಪ್ಪಲ್ಲವಾ' ಎಂದು ಕೇಳಿದನಂತೆ. ಅದಕ್ಕೆ ಕರ್ಣ 'ಎಡಗೈಯಲ್ಲಿ ಇದ್ದಿದ್ದು ಬಲಗೈಗೆ ಬರುವುದರೊಳಗೆ ನನ್ನ ಮನಸ್ಸು ಬದಲಾಗಬಹುದು ಎಂದು ಎಡಗೈಲೇ ಕೊಟ್ಟೆ' ಎಂದನಂತೆ. ಕೊಟ್ಟು ಸಂತೋಷ ಪಡಬೇಕು. ಕೊಡುವುದಿಲ್ಲ ಎಂದರೆ ನಡೆಯೋದಿಲ್ಲ ಈ ಜಗತ್ತಿನಲ್ಲಿ. ಕೊಟ್ಟು ಹೋಗಬೇಕು ಇಲ್ಲಾ ಬಿಟ್ಟು ಹೋಗಬೇಕು. ಇಲ್ಲವಾದರೆ ಕೆಟ್ಟು ಹೋಗುತ್ತದೆ. ನೀವು ಇದನ್ನು ಪ್ರಾಕ್ಟೀಸ್ ಮಾಡಿ ಬೇಕಾದರೆ. ನೀವು ಗಾಳಿ ಒಳಗೆ ತೆಗೆದುಕೊಳ್ಳಿ. ಹೊರಗೆ ಕೊಡೋದಿಲ್ಲ ಎಂದು ಒಳಗೇ ಇಟ್ಟುಕೊಳ್ಳಲು ಆಗಲ್ಲ. ಹೊರಗೆ ಬಿಡಲೇ ಬೇಕು. ತುಂಬಿದ ಕೆರೆ ತುಂಬಿದ ಹಾಗೆಯೇ ಇರಬೇಕು ಎಂದರೆ ಒಂದು ಕೋಡಿ ಇರಲೇ ಬೇಕು. ಹಾಗೆಯೇ ನಮ್ಮ ಸಂಪತ್ತಿನ ಕೆರೆಗೆ ದಾನ ಎಂಬ ಕೋಡಿ ಇರಬೇಕು. ಕೋಡಿ ಬಿಡದೇ ಇದ್ದರೆ ಕೆರೆ ಒಡೆದು ಹೋಗುತ್ತದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮಾರ್ಚ್ 27, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣತ್ರಯೋದಶಿ ಗಂ.23-04 ನಕ್ಷತ್ರ: ಶತಭಿಷ ಗಂ. 24-34 ಯೋಗ: ಸಾಧ್ಯ ಗಂ. 09-25 ಕರಣ: ಗರ ಗಂ. 12-28, ಮೀನ ಮಾಸದ 13 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 3.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-33 **ಸೂರ್ಯಾಸ್ತ :** 06-38

ಮುಸ್ಲಿಂ ದಿನಾಂಕ : 26 ರಂಜಾನ್

ದಿನ ವಿಶೇಷ : ಮಧುಕೃಷ್ಣ ತ್ರಯೋದಶಿ, ಅದೃಷ್ಟ ಸಂಖ್ಯೆ : 11, 10

ಮೇಷ: ಸಂಸ್ಥೆಯು ಇಟ್ಟಿರುವ ನಂಬಿಕೆಗಳನ್ನು ಹುಸಿ ಮಾಡಬೇಡಿ. ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ಬಗ್ಗೆ ಗಮನ ನೀಡಿ. ಮಾತುಗಳು ಎದುರಿನವರಿಗೆ ಅರ್ಥವಾಗುವ ತರಹದಲ್ಲಿರಲಿ.

ವೃಷಭ: ಆಧುನಿಕ ಆಲೋಚನೆಗಳ ಜತೆಯಲ್ಲಿ ಪಾರಂಪರಿಕ ವಿಷಯಗಳನ್ನು ಅಳವಡಿಸಿಕೊಳ್ಳಿ. ಸಾಂಸಾರಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಸೃಷ್ಟಿಯಾಗದಂತೆ ಎಚ್ಚರವಹಿಸಿ. ಆರೋಗ್ಯ ಉತ್ತಮಗೊಳ್ಳಲಿದೆ.

ಮಿಥುನ: ಹೊಸ ಯೋಜನೆಗೆ ಹೊಸ ರೂಪ ನೀಡಲು ಅವಕಾಶಗಳು ಸಿಗಲಿವೆ. ನಶಿಸಿ ಹೋಗಿದ್ದ ಪ್ರೇರಣೆ ಮರಳುವುದು. ಮಕ್ಕಳ ಭವಿಷ್ಯದ ಬಗ್ಗೆ ಯೋಜನೆಗಳನ್ನು ರೂಪಿಸಲು ಸಕಾಲ.

ಕರ್ಕಾಟಕ: ಅಚಾನಕ್ಕಾಗಿ ಅಧಿಕವಾಗಿ ಲಭ್ಯವಾಗುವ ಸಮಯವನ್ನು ಕೆಲಸಕ್ಕಾಗಿ ಸದುಪಯೋಗಿಸಿಕೊಳ್ಳಿ. ಎಲೆಕ್ಟ್ರಾನಿಕ್ ಮತ್ತು ಹಾರ್ಡ್‌ವೇರ್ ವಸ್ತುಗಳಿಂದ ಅಧಿಕ ಲಾಭ. ಲಬ್ಧ ಸಂಪತ್ತಿನಲ್ಲಿ ಸಂತೋಷ ಹೊಂದಿ.

ಸಿಂಹ: ಬಹಳ ಶಾಂತ ರೀತಿಯಿಂದ ವರ್ತಿಸುವುದು ಅನಿವಾರ್ಯ. ಅದರಿಂದಾಗಿ ಮನೆಯಲ್ಲಿ ಸಂತಸದ ವಾತವರಣ ಸೃಷ್ಟಿಯಾಗಲಿದೆ. ಪ್ರಗತಿಪರ ಸಂಘಟನೆಗಳಿಂದ ಕೆಲಸಕ್ಕೆ ಬೆಂಬಲ ದೊರೆಯಲಿದೆ.

ಕನ್ಯಾ: ಆಪದ್ಧನವನ್ನು ಬಳಸಬೇಕಾದ ಪರಿಸ್ಥಿತಿ ಬರುವುದು. ಹಲವು ದಿನಗಳಿಂದ ದೇಹದಲ್ಲಾದ ಬದಲಾವಣೆಯನ್ನು ಗಮನಿಸಿದ ನೀವು ಅದರ ಕಾರಣ ತಿಳಿಯಲು ವೈದ್ಯರನ್ನು ಸಂಪರ್ಕ ಮಾಡುವಿರಿ.

ತುಲಾ: ಉಚಿತ ಆರೋಗ್ಯ ತಪಾಸಣಾ ಶಿಬಿರ ಸೇವೆಗಳಿಂದ ಶಸ್ತ್ರ ಚಿಕಿತ್ಸೆಗಳು ಲಾಭದಾಯಕ ಖರ್ಚಿನಲ್ಲಿ ಆಗುವುದು. ಶೈಕ್ಷಣಿಕ ರಂಗದ ಉನ್ನತ ಅಧಿಕಾರಿಗಳಿಗೆ ವರ್ಗಾವಣೆಯಾಗುವ ಸಾಧ್ಯತೆಗಳಿವೆ.

ವೃಶ್ಚಿಕ: ಗಮನ ಹೆಚ್ಚು ಕಡಿಮೆ ಆದಲ್ಲಿ ನೀವು ಬಯಸುತ್ತಿರುವ ಬಡ್ತಿ ಪಡೆಯುವಲ್ಲಿ ವಿಫಲರಾಗುವಿರಿ. ಮಹಾಗಣಪತಿಯನ್ನು ಆರಾಧಿಸುವುದರಿಂದ ಶೀಘ್ರ ಶುಭಫಲ ಪ್ರಾಪ್ತಿಯಾಗುತ್ತದೆ.

ಧನು: ಕುಟುಂಬದಲ್ಲಿ ಸದ್ಯದ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವುದೇ ಉತ್ತಮ ಎಂಬ ಭಾವನೆ ಸರಿಯಾಗಿದೆ. ಸಲಹೆಗಳಿಗಾಗಿ ಜನರು ಸಂದರ್ಶಿಸುವಂತಾಗಲಿದೆ. ಸಾಮಾಜಿಕ ಜೀವನದಲ್ಲಿ ಕಾರ್ಯಪ್ರವೃತ್ತರಾಗಿರಿ.

ಮಕರ: ಸಣ್ಣ ವಯಸ್ಸಿನವರಾಗಿದ್ದರೂ ವಿಷಮ ಪರಿಸ್ಥಿತಿ ಇರುವುದರಿಂದ ಅಧಿಕ ಜವಾಬ್ದಾರಿ ಹೊರಬೇಕಾಗುತ್ತದೆ. ಲೇವಾದೇವಿ ವ್ಯವಹಾರ ಮಾಡುವವರು ನಷ್ಟ ಅನುಭವಿಸುವಂತಾಗಬಹುದು.

ಕುಂಭ: ವಿವಿಧ ವಿಷಯಗಳ ಚಿಂತೆಯು ಕಾಡುವುದರಿಂದ ಮನಸ್ಸನ್ನು ಜಾಗೃತವಾಗಿಟ್ಟುಕೊಳ್ಳುವುದು ಕಷ್ಟ. ಸ್ನೇಹಿತರೊಬ್ಬರ ನೆರವಿಗೆ ನಿಲ್ಲಬೇಕಾಗಬಹುದು.

ಮೀನ: ಅಧಿಕಾರಿಗಳೊಂದಿಗೆ ಹೊಂದಿಕೊಳ್ಳುವ ಗುಣ ಹಾಗೂ ನಿಮ್ಮ ಬುದ್ಧಿವಂತಿಕೆಯ ಸಾಮರ್ಥ್ಯ ಏಳಿಗೆಯಲ್ಲಿ ಮುಖ್ಯ ಪಾತ್ರವಹಿಸುವುದು. ಕಾನೂನಿಗೆ ಸಂಬಂಧಪಟ್ಟಂಥ ಕೆಲಸಗಳಲ್ಲಿ ಜಯ ಸಿಗುವುದು.

ಪದಬಂಧ 5994

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಋತುಗಳ ರಾಜನ ತಿಂಗಳು (5)
4.ತರ್ಕ ಮಾಡುತ್ತಿರುವ ವ್ಯಾಪಾರಿ (3)
5.ಮಾವನಿದುರು ನಿಂತಿರುವ ಹೆಂಗಸು (3)
6.ನೂಲು ತೆಗೆಯುವ ಸಾಧನ (3)
8.ಗೌರವಕ್ಕೆ ಪಾತ್ರನಾದವನು ತಿರುಗಿ ನಿಂತಿದ್ದಾನೆ (4)
10.ಹಾಲು ಮೊಸರು ಮಾರುವವನು (4)
12.ಬವಣೆಪಟ್ಟು ತಂದಿರುವ ಧಾನ್ಯ! (3)
15.ಮುಖ ಇಲ್ಲಿ ಕಾಣುತ್ತಿದೆ (3)
16.ಬೇಸಾಯವನ್ನು ಹೀಗೂ ಹೇಳುವರು (3)
17.ಈತ ವಿವೇಕಶಾಲಿ (5)

ಮೇಲಿಂದ ಕೆಳಕ್ಕೆ

2.ಇದು ತರಲೆಯ ಶೀರ್ಷಿಕೆ (5)
3.ಮಾಸದ ಕೊನೆಗೆ ಸೇರುವಿಕೆ (3)
4.ಈಕೆ ಹೆಂಗಸು (3)
7.ಕನ್ನ ಹಾಕಿ ಕದ್ದೊಯ್ದ ದರ್ಪಣ (3)
9.ಮೌನಕ್ಕೊಂದು ಪರ್ಯಾಯ ಪದ (3)
11.ವಾರದೊಳಗೆ ಬಂದಿರುವ ಹಕ್ಕುದಾರ (5)
13.ತಿರುಗಿದಾಗ ಬಂದಿರುವ ತೊಂದರೆ (3)
14.ವನದಿಂದ ಮಾಡಿಕೊಂಡಿರುವ ಅರಿಕೆ (3)

5993ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಡಿವಾಳ 3.ಸಂಧಿವಾತ
4.ಮಥಪ್ರ 5.ಗೆಹ
7.ದಾನವ 11.ರಸಿಕ
12.ರಸ 14.ರದನ
15.ಅವಗುಣ 16.ಗುಣಗಾನ

ಮೇಲಿಂದ ಕೆಳಕ್ಕೆ:
1.ಮಲ್ಲಿಗೆ 2.ಳಮರಿಪ
3.ಸಂಪ್ರದಾನ 6.ಹಲಾಲುಕೋರ
8.ವರ್ಣಸಂಕರ
9.ಪ್ರಕರಣ 10.ನಸುನಗು
13.ಸದನ

ಸುಡೊಕು 6379

	5		7		2		8	
						3		4
	7	8	3		9		1	
1							2	3
	2							
8		7			1		5	9
2		3	9		6	5		8
	4	6		8			9	7
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6378 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಷೇರುಪೇಟೆ ವಹಿವಾಟು ▼728



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,668
ಇಂದಿನ ಅಂತ್ಯ	23,486
▼	181
ದಿನದ ಕನಿಷ್ಠ	23,451

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹460
12 ಕ್ಕೆ	₹63
ಮೈಸೂರು	
100ಕ್ಕೆ	₹460

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹300-560
ದ್ವಿತಳಿ (ಬಿ.ವಿ)	₹311-733

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1390 (1390)
ಸೋಯಾ (ರಿಫೈನ್ಡ್)	₹1275 (1275)
ಸೂರ್ಯಕಾಂತಿ (ರಿಫೈನ್ಡ್)	₹1390 (1390)
ಪಾಮೋಲಿನ್	₹1345 (1340)

ಬ್ಯಾಂಕಿಂಗ್ ಮಸೂದೆಗೆ ಒಪ್ಪಿಗೆ ನಾಲ್ವರು ನಾಮಿನಿಗೆ ಅವಕಾಶ

ನವದೆಹಲಿ (ಪಿಟಿಐ): ಬ್ಯಾಂಕ್‌ಗಳ ಆಡಳಿತ ಸುಧಾರಣೆ ಹಾಗೂ ಠೇವಣಿದಾರರ ಹಿತರಕ್ಷಣೆಗೆ ಸಂಬಂಧಿಸಿದಂತೆ ಮಂಡಿಸಿದ್ದ ಬ್ಯಾಂಕಿಂಗ್ ಕಾನೂನು (ತಿದ್ದುಪಡಿ) ಮಸೂದೆ 2024ಕ್ಕೆ ರಾಜ್ಯಸಭೆಯು, ಬುಧವಾರ ಧ್ವನಿಮತದ ಮೂಲಕ ಒಪ್ಪಿಗೆ ನೀಡಿದೆ.

ಹಳೆಯ ಕಾಯ್ದೆಯಡಿ ಬ್ಯಾಂಕ್ ಖಾತೆಗೆ ಒಬ್ಬರ ನಾಮಿನಿಗೆ ಅವಕಾಶವಿದೆ. ಇನ್ನು ಮುಂದೆ ಏಕಕಾಲದಲ್ಲಿ ಠೇವಣಿದಾರರು ನಾಲ್ವರನ್ನು ನಾಮಿನಿಯಾಗಿ ಸೇರ್ಪಡೆಗೊಳಿಸಲು ಈ ಮಸೂದೆಯು ಅವಕಾಶ ಕಲ್ಪಿಸಿದೆ. ಕಳೆದ ವರ್ಷದ ಡಿಸೆಂಬರ್‌ನಲ್ಲಿ ಲೋಕಸಭೆಯು ಈ ಮಸೂದೆಗೆ ಅನುಮೋದನೆ ನೀಡಿತ್ತು.

ಹಳೆಯ ಕಾಯ್ದೆಯಡಿ ಕಂಪನಿಗಳ ನಿರ್ದೇಶಕರ ಆಸ್ತಿ ಮೌಲ್ಯದ ಮಿತಿಯನ್ನು ನಿಗದಿಪಡಿಸಲಾಗಿದೆ. ಮಸೂದೆಯಲ್ಲಿ ಈ ಮಿತಿ ಹೆಚ್ಚಳದ ಜೊತೆಗೆ ‘ಸಬ್‌ಸ್ಟಾನ್ಷಿಯಲ್ ಇಂಟರೆಸ್ಟ್’ ಬಗ್ಗೆ ಮರುವ್ಯಾಖ್ಯಾನ ಮಾಡಲಾಗಿದೆ.

ಕಂಪನಿಯ ನಿರ್ದೇಶಕರು ₹5 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಆಸ್ತಿ ಹೊಂದಿದ್ದರೆ ಅದನ್ನು ‘ಸಬ್‌ಸ್ಟಾನ್ಷಿಯಲ್ ಇಂಟರೆಸ್ಟ್’ ಎಂದು ನಿರ್ಧರಿಸಲಾಗುತ್ತದೆ. ಅಂತಹವರಿಗೆ ಸಾಲ ನೀಡಲು ಆಡಳಿತ ಮಂಡಳಿಯ ಅನುಮೋದನೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿತ್ತು. ಮಸೂದೆಯಲ್ಲಿ ನಿರ್ದೇಶಕರ ಆಸ್ತಿಯ ಮಿತಿಯನ್ನು ₹2 ಕೋಟಿಗೆ ಹೆಚ್ಚಿಸಲಾಗಿದೆ. ಇಷ್ಟು ಮೊತ್ತದ ಷೇರುಗಳ ಒಡೆತನ ಅಥವಾ ಮಾಲೀಕತ್ವವನ್ನು ಹೊಂದಬಹುದಾಗಿದೆ.

ಜಾರಿ ನಿರ್ದೇಶನಾಲಯವು ಬ್ಯಾಂಕ್ ವಂಚನೆಗೆ ಸಂಬಂಧಿಸಿದ 112 ಪ್ರಕರಣಗಳ ತನಿಖೆ ನಡೆಸುತ್ತಿದೆ. ಉದ್ದೇಶಪೂರ್ವಕ ಸುಸ್ತಿದಾರರ ವಿರುದ್ಧ ಕ್ರಮಕೈಗೊಳ್ಳಲು ಸರ್ಕಾರ ಬದ್ಧವಿದೆ

ನಿರ್ಮಲಾ ಸೀತಾರಾಮನ್
ಕೇಂದ್ರ ಹಣಕಾಸು ಸಚಿವೆ

ಕಚ್ಚಾ ತೈಲ ಬೆಲೆ ಏರಿಕೆ • ಸೆನ್ಸೆಕ್ಸ್ 728 ಅಂಶ ಇಳಿಕೆ

ಗೂಳಿ ಓಟಕ್ಕೆ ಕರಡಿ ತಡೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಬುಧವಾರ ಕರಡಿ ಕುಣಿತ ಜೋರಾಗಿದ್ದರಿಂದ ಗೂಳಿ ಓಟಕ್ಕೆ ತಡೆ ಬಿದ್ದಿದೆ. ಇದರಿಂದ ಸೂಚ್ಯಂಕಗಳು ಶೇ 1ರಷ್ಟು ಇಳಿಕೆ ಕಂಡಿವೆ.

ಸತತ ಏಳು ವಹಿವಾಟುಗಳಲ್ಲಿ ದೇಶೀಯ ಷೇರುಪೇಟೆಯು ಏರಿಕೆ ದಾಖಲಿಸಿತ್ತು. ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಐ.ಟಿ ಮತ್ತು ಬ್ಯಾಂಕಿಂಗ್ ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಗೂಳಿ ಮುಗ್ಗರಿಸಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 728 ಅಂಶ ಏರಿಕೆ ಕಂಡು, 77,288 ಅಂಶಗಳಲ್ಲಿ ಸ್ಥಿರಗೊಂಡಿದೆ. ವಹಿವಾಟಿನ ಒಂದು ಹಂತದಲ್ಲಿ 822 ಅಂಶ ಇಳಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 181 ಅಂಶ ಇಳಿಕೆ ಕಂಡು, 23,486 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿದೆ.

ಸತತ ಏಳು ವಹಿವಾಟುಗಳಲ್ಲಿ ಸೆನ್ಸೆಕ್ಸ್ 4,188 ಅಂಶ (ಶೇ 5.67) ಹಾಗೂ ನಿಫ್ಟಿ 1,271 ಅಂಶ (ಶೇ 5.67) ಹೆಚ್ಚಳ ಕಂಡಿತ್ತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಎನ್‌ಟಿಪಿಸಿ, ಟೆಕ್ ಮಹೀಂದ್ರ, ಜೊಮಾಟೊ, ಎಕ್ಸಿಸ್ ಬ್ಯಾಂಕ್, ಬಜಾಜ್ ಫೈನಾನ್ಸ್, ಇನ್ಫೊಸಿಸ್, ಮಾರುತಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೋಟಕ್ ಮಹೀಂದ್ರ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಎಚ್‌ಯುಎಲ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳು ಕುಸಿದಿವೆ.

ಇಂಡಸ್ ಇಂಡ್ ಬ್ಯಾಂಕ್, ಎಚ್‌ಸಿಎಲ್ ಟೆಕ್, ಮಹೀಂದ್ರ ಆ್ಯಂಡ್ ಮಹೀಂದ್ರ ಮತ್ತು ಪವರ್ ಗ್ರಿಡ್ ಷೇರಿನ ಮೌಲ್ಯ ಇಳಿಕೆಯಾಗಿದೆ.

ಸೋಲ್, ಟೋಕಿಯೊ, ಹಾಂಗ್‌ಕಾಂಗ್ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದಿದ್ದರೆ, ಶಾಂಘೈ ಷೇರುಪೇಟೆಯು ಇಳಿಕೆಯಾಗಿದೆ.

‘ಇತ್ತೀಚಿನ ವಹಿವಾಟುಗಳಲ್ಲಿ ಷೇರುಪೇಟೆಯು ಏರಿಕೆ ಕಂಡಿತ್ತು. ಹೂಡಿಕೆದಾರರು ಲಾಭ ಗಳಿಕೆಗೆ ಮುಂದಾಗಿದ್ದರಿಂದ ಇಳಿಕೆಯಾಗಿದೆ. ಅಲ್ಲದೆ, ಮುಂದಿನ ವಾರ ಅಮೆರಿಕವು ಭಾರತದ ಸರಕುಗಳ ಮೇಲೆ ಪ್ರತಿ ಸುಂಕ ಜಾರಿಗೊಳಿಸುವುದಾಗಿ ಘೋಷಿಸಿದೆ. ಇದರಿಂದ ಫಾರ್ಮಾ, ಐ.ಟಿ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿವೆ’ ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹5,371 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.58ರಷ್ಟು ಹೆಚ್ಚಳವಾಗಿದೆ. ಪ್ರತಿ ಬ್ಯಾರೆಲ್‌ಗೆ 73.44 ಡಾಲರ್ ಆಗಿದೆ.

ಮತ್ತೆ ಏರಿದ ಚಿನ್ನ, ಬೆಳ್ಳಿ ಧಾರಣೆ

ನವದೆಹಲಿ (ಪಿಟಿಐ): ಸತತ ನಾಲ್ಕು ದಿನಗಳಿಂದ ಇಳಿಕೆಯ ಪಥದಲ್ಲಿ ಸಾಗಿದ್ದ ಚಿನ್ನ ಮತ್ತು ಬೆಳ್ಳಿ ಧಾರಣೆಯು, ಬುಧವಾರದ ವಹಿವಾಟಿನಲ್ಲಿ ಮತ್ತೆ ಏರಿಕೆಯ ಹಳಿಗೆ ಮರಳಿದೆ.

10 ಗ್ರಾಂ ಚಿನ್ನದ ದರ (ಶೇ 99.9 ಪರಿಶುದ್ಧತೆ) ₹235 ಏರಿಕೆಯಾಗಿದ್ದು, ₹90,685 ಆಗಿದೆ. ಆಭರಣ ಚಿನ್ನದ ಬೆಲೆಯು ಇಷ್ಟೇ ಪ್ರಮಾಣದಲ್ಲಿ ಹೆಚ್ಚಳ ಕಂಡಿದ್ದು, ₹90,235 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಳ್ಳಿ ಬೆಲೆಯು ಪ್ರತಿ ಕೆ.ಜಿಗೆ ₹1,500 ಹೆಚ್ಚಳವಾಗಿದ್ದು, ₹1,01,500 ಆಗಿದೆ.

ಚಿಲ್ಲರೆ ಮಾರಾಟಗಾರರು ಖರೀದಿಗೆ ಮುಂದಾಗಿದ್ದರಿಂದ ಚಿನಿವಾರ ಪೇಟೆಯಲ್ಲಿ ಬೆಲೆ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

‘ಏಪ್ರಿಲ್ 2ರಿಂದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಸರಕುಗಳ ಮೇಲೆ ಪ್ರತಿ ಸುಂಕ ಹೇರುವುದಾಗಿ ಘೋಷಿಸಿದ್ದಾರೆ. ಇದರಿಂದ ಮಾರುಕಟ್ಟೆಯಲ್ಲಿ ಅನಿಶ್ಚಿತ ಸ್ಥಿತಿ ತಲೆದೋರಿದೆ. ಹಾಗಾಗಿ, ಚಿನ್ನದ ಬೆಲೆ ಏರಿಕೆಯಾಗಿದೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹18800-18800
ದಾವಣಗೆರೆ	₹12700-12700
ಮಧುಗಿರಿ	₹10000-14000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹201
ಆರ್‌ಎಸ್‌ಎಸ್-5	₹195
ಗುಡ್ ಲಾಟ್	₹187

ಅಡಿಕೆ ಧಾರಣೆ (₹ಗಳಲ್ಲಿ)

ಕಾರ್ಕಳ	
ಹೊಸತು	25000-42000
ಹಳತು	30000-46500
ಶಿವಮೊಗ್ಗ	
ಗೊರಬಲು	16700-30000
ರಾಶಿ	48700-52500
ಕುಮಟ	
ಬೆಟ್ಟೆ	28699-32509
ಕೋಕ	4809-18000
ಹೊಸಚಾಲಿ	33099-34099
ಶಿರಸಿ	
ಬೆಟ್ಟೆ	27699-40699
ಬಿಳಿಗೋಟು	16119-34099
ಚಾಲಿ	32898-39891
ಕೆಂಪುಗೋಟು	11699-23899
ರಾಶಿ	40018-46911
ಯಲ್ಲಾಪುರ	
ಅಪಿ	60789-60789
ಬಿಳಿಗೋಟು	14999-23318
ಚಾಲಿ	31000-39399
ಕೋಕ	5299-8999
ರಾಶಿ	42209-50339
ತಟ್ಟಿಬೆಟ್ಟೆ	32909-36475

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗೇಶ್ ಬಾಬು, ಬೆಂಗಳೂರು.

- **ಪ್ರಶ್ನೆ: ನಾನು ಐ.ಟಿ ಕಂಪನಿ ಉದ್ಯೋಗಿ. ನನ್ನ ತಾಯಿ ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿದ್ದಾರೆ. ಅವರ ಕಾಯಿಲೆಗೆ ಸುಮಾರು ₹2 ಲಕ್ಷ ವೆಚ್ಚ ಮಾಡಿದ್ದೇವೆ. ಈ ವೆಚ್ಚಕ್ಕೆ ಆದಾಯ ತೆರಿಗೆ ಕಾಯ್ದೆ ಅಡಿ ವಿನಾಯಿತಿ ಇದೆಯೇ?**

ಉತ್ತರ: ನಿಮ್ಮ ತಾಯಿಗೆ ತೀವ್ರತರದ ಪಾರ್ಕಿನ್ಸನ್ ಆಗಿದ್ದರೆ ಹಾಗೂ ಅದರ ಪರಿಣಾಮ ಶೇ 40ಕ್ಕಿಂತ ಹೆಚ್ಚು ನ್ಯೂನತೆ ಹೊಂದಿದ್ದರೆ ಆದಾಯ ತೆರಿಗೆ ಕಾಯ್ದೆ ಸೆಕ್ಷನ್ 80ಡಿಡಿಬಿ ಅಡಿ 60 ವರ್ಷ ಮೀರಿದ ವ್ಯಕ್ತಿಗಳ ಹೆಸರಲ್ಲಿ ₹1 ಲಕ್ಷದ ತೆರಿಗೆ ವಿನಾಯಿತಿ ಇದೆ. ಇದಕ್ಕೆ ಅಗತ್ಯ ಬಿಲ್ ಇಟ್ಟುಕೊಳ್ಳಿ. ರೋಗಿಯ ವಯಸ್ಸು 60ಕ್ಕಿಂತ ಕೆಳಗಿದ್ದರೆ ಈ ಮಿತಿ ₹40 ಸಾವಿರ ಆಗಿರುತ್ತದೆ. ಹಳೆಯ ತೆರಿಗೆ ಪದ್ಧತಿ ಅನುಸರಿಸು ವುದಿದ್ದರೆ ಮಾತ್ರ ಈ ತೆರಿಗೆ ವಿನಾಯಿತಿ ಸಿಗಲಿದೆ. ನೀವು ಇದಕ್ಕೆ ಪೂರಕವಾದ ವೈದ್ಯಕೀಯ ದಾಖಲೆಯನ್ನು ‘ಫಾರಂ 10-ಐ’ನಲ್ಲಿ ವೈದ್ಯರಿಂದ ಸಹಿ ಮಾಡಿಸಿ ಪಡೆದಿರಬೇಕು.

ಶಿವರಂಜನ್, ಹುಬ್ಬಳ್ಳಿ.

- **ಪ್ರಶ್ನೆ: ನಾನು ಕೆಲವು ವರ್ಷಗಳಿಂದ ಹಣಕಾಸು ವಿಚಾರವಾಗಿ ವಿವಿಧ ಬ್ಯುಸಿನೆಸ್ ಪತ್ರಿಕೆಗಳನ್ನು ಓದುತ್ತಿದ್ದೇನೆ. ನಾನು ವಿದ್ಯಾರ್ಥಿಯಾಗಿದ್ದು, ಮುಂದೆ ವ್ಯಾಪಾರ ಮಾಡಬೇಕು ಎಂದುಕೊಂಡಿದ್ದೇನೆ. ಆದರೆ, ನನ್ನ ಬಳಿ ಯಾವುದೇ ಬಂಡವಾಳ ತೊಡಗಿಸಲು ಹಣವಿಲ್ಲ. ಮಿತ್ರರಲ್ಲಿ ಹಣ ಕೇಳುವ ಹಂತದಲ್ಲಿ ನಾನಿಲ್ಲ. ನನ್ನ ಓದಿಗಾಗಿ ನನ್ನ ತಂದೆ ಪ್ರತಿ ತಿಂಗಳು ಕೊಡುವ ಹಣದಲ್ಲಿ ಅಲ್ಪಸ್ವಲ್ಪ ಉಳಿತಾಯ ಮಾಡುವುದು ಬಿಟ್ಟರೆ ಬೇರೆ ಯಾವ ಉಳಿತಾಯ ಅಥವಾ ಮೂಲ ಸಂಪಾದನೆ ನನ್ನಲ್ಲಿಲ್ಲ. ಇಂತಹ ಸಂದರ್ಭದಲ್ಲಿ ನಾನು ನನ್ನ ಗುರಿಯನ್ನು ಹೇಗೆ ಸಾಧಿಸಬಹುದು. ಹೆಚ್ಚು ವೃತ್ತಿಪರನಾಗುವುದು ಹೇಗೆ? ನನ್ನ ಬಳಿ ಇರುವ ಅಲ್ಪಸ್ವಲ್ಪ ಹಣವನ್ನು ಪ್ರಸ್ತುತ ಹೂಡಿಕೆ ಮಾಡಿದರೆ ಕಡಿಮೆ ಅವಧಿಯಲ್ಲಿ ಅದು ದ್ವಿಗುಣಗೊಳ್ಳಬಹುದು. ಈ ಹಣವನ್ನು ನನ್ನ ವ್ಯವಹಾರಕ್ಕೆ ಬಂಡವಾಳವಾಗಿ ಉಪಯೋಗಿಸಬಹುದು ಎಂಬುದು ನನ್ನ ಅಭಿಪ್ರಾಯ. ನಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿ ಅಷ್ಟಾಗಿ ಸುಧಾರಿಸಿಲ್ಲ. ಇಂತಹ ಸ್ಥಿತಿಯಲ್ಲಿ ನಾನು ಅವರಲ್ಲಿ ಆರ್ಥಿಕ ನೆರವಿಗೆ ಕೋರಿಕೆ ಇಡುವುದು ಸರಿಯಲ್ಲ. ಈ ಸಮಸ್ಯೆಯನ್ನು ಹೇಗೆ ನಿಭಾಯಿಸಬಹುದು.**

ಉತ್ತರ: ನೀವು ನಿಮ್ಮ ವ್ಯವಹಾರಕ್ಕೆ ಸಂಬಂಧಿಸಿದಂತೆ ಬಂಡವಾಳ ತೊಡಗಿಸಲು ಹಣ ದ್ವಿಗುಣಗೊಳಿಸುವ ಮಾರ್ಗೋಪಾಯ ಕಂಡುಕೊಳ್ಳುವ ತರಾತುರಿಯಲ್ಲಿ ಇದ್ದಂತಿದೆ. ಅದು ನಿಮ್ಮ ಪ್ರಸ್ತುತ ಪರಿಸ್ಥಿತಿಯ ಅನಿವಾರ್ಯ ಕೂಡ ಆಗಿರಬಹುದು.

ನೀವು ವಿದ್ಯಾರ್ಥಿಯಾಗಿದ್ದು, ಮುಂದೆ ವ್ಯಾಪಾರ ವ್ಯವಹಾರ ಕ್ಷೇತ್ರದಲ್ಲಿ ಮುನ್ನಡೆಯುವ ಆಕಾಂಕ್ಷೆ ಹೊಂದಿದ್ದೀರಿ. ಈ ಉದ್ದೇಶ ಪ್ರಶಂಸನೀಯವಾದುದು. ಆದರೆ, ನಿಮಗೆ ಪ್ರಸಕ್ತ ಸನ್ನಿವೇಶದಲ್ಲಿ ಅನಿವಾರ್ಯವಾಗಿ ಬೇಕಾದುದು ವೃತ್ತಿ ಹಾಗೂ ಶಿಕ್ಷಣದ ಬಗೆಗಿನ ಸರಿಯಾದ ಮಾರ್ಗದರ್ಶನ. ನೀವು ನಿಮ್ಮ ಆಸಕ್ತಿಯ ಕ್ಷೇತ್ರವನ್ನು ಈಗಾಗಲೇ ನಿರ್ಧರಿಸಿರುವುದರಿಂದ ಮೊದಲು ಅದಕ್ಕೆ ಪೂರಕವಾದ ಉತ್ತಮ ಶಿಕ್ಷಣ ಪಡೆಯಬೇಕಿದೆ. ಆ ಬಗ್ಗೆ ನಿಮ್ಮ ಧ್ಯೇಯ, ಶ್ರಮ, ಸಮಯ ಎಲ್ಲವನ್ನೂ ನೀಡುವುದು ಅನಿವಾರ್ಯ.

ಜೊತೆಗೆ, ವ್ಯವಹಾರ ಕ್ಷೇತ್ರದಲ್ಲಿ ಮುಂದುವರಿಯಲು ಆಯಾ ವ್ಯಾಪಾರ ಕ್ಷೇತ್ರದ ಬಗ್ಗೆ ಸಾಕಷ್ಟು ಜ್ಞಾನ ಮತ್ತು ಪರಿಸ್ಥಿತಿಗೆ ಪೂರಕವಾಗಿ ಅನುಭವ ಪಡೆಯುವುದು ಅತಿಮುಖ್ಯ. ಅಲ್ಲದೆ, ವ್ಯವಹಾರ ಕ್ಷೇತ್ರದಲ್ಲಿದ್ದವರು ಎದುರಾಗುವ ಪರಿಸ್ಥಿತಿಯನ್ನು ಹೇಗೆ ನಿರ್ವಹಿಸುತ್ತಾರೆ ಎನ್ನುವುದರ ಮೇಲೂ ಗೆಲುವು ಅವಲಂಬಿತವಾಗಿದೆ.

ವ್ಯವಹಾರ ಎಂದಾಕ್ಷಣ ಎಲ್ಲವೂ ಸುಲಲಿತ ಎನ್ನಲಾಗದು. ಹೀಗಾಗಿ, ಇಲ್ಲಿ ವೈಯಕ್ತಿಕ ಹಿಮ್ಮತ್ತು, ಸಮಯ ಪ್ರಜ್ಞೆ, ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ, ಮುಂಚೂಣಿ ವಿವೇಚನಾ ಶಕ್ತಿ, ಬಂಡವಾಳ ಕ್ರೋಡೀಕರಿಸುವ ಸಾಮರ್ಥ್ಯ ಎಲ್ಲವೂ ಮುಖ್ಯ ಪಾತ್ರ ನಿರ್ವಹಿಸುತ್ತದೆ. ಮೊದಲು ನಿಮ್ಮಲ್ಲಿ ಈ ಅನಿವಾರ್ಯ ಸಾಮರ್ಥ್ಯಗಳನ್ನು ಪರಿಸ್ಥಿತಿಗೆ ತಕ್ಕಂತೆ ಹೆಚ್ಚಿಸುವತ್ತ ಗಮನ ನೀಡಿ. ಇದಕ್ಕಾಗಿ ಮೊದಲ ಹಂತದಲ್ಲಿ ನಿಮ್ಮ ಆಸಕ್ತಿಯ ಕ್ಷೇತ್ರಕ್ಕೆ ಅನುಗುಣವಾಗಿ ಶಿಕ್ಷಣ ಪಡೆಯಿರಿ. ಇದು ನಿಮ್ಮನ್ನು ಎಲ್ಲರಿಗಿಂತ ವಿಶಿಷ್ಟ ಹಾಗೂ ಹೆಚ್ಚು ಅನಿವಾರ್ಯ ವ್ಯಕ್ತಿಯನ್ನಾಗಿಸುತ್ತದೆ. ವೃತ್ತಿ ಶಿಕ್ಷಣ ತಜ್ಞರಿಂದಲೂ ಹೆಚ್ಚಿನ ಮಾರ್ಗದರ್ಶನ ಪಡೆದುಕೊಳ್ಳಿ.

ಹಣಕಾಸಿನ ಕೊರತೆ ಇದ್ದರೆ ಬ್ಯಾಂಕ್‌ಗಳಿಂದ ಶೈಕ್ಷಣಿಕ ಸಾಲ ಪಡೆದು ಶಿಕ್ಷಣ ಮುಂದುವರಿಸಿ. ಹಣ ಗಳಿಕೆಯ ಮಾರ್ಗ ಕಂಡುಕೊಳ್ಳುವ ಮೊದಲು ನೀವು ಜ್ಞಾನ ಸಂಪಾದನೆಯ ಮಾರ್ಗವನ್ನು ಗಟ್ಟಿ ಮಾಡಿಕೊಳ್ಳಿ. ಇದರ ಬಲ ನಿಮಗೆ ಸ್ವನಿರ್ಧಾರ ಕೈಗೊಳ್ಳಲು ಧೈರ್ಯ, ವಿಶ್ವಾಸ ನೀಡುತ್ತದೆ. ವ್ಯವಹಾರದಲ್ಲಿ ಲಾಭ, ನಷ್ಟ ಸಹಜ. ಆದರೆ, ನಾವು ಗಳಿಸುವ ಶಿಕ್ಷಣ ಯಾವತ್ತೂ ನಮ್ಮನ್ನು ನಮ್ಮ ಗುರಿಯತ್ತ ತಲುಪಲು ನೆರವಾಗುತ್ತದೆ. ಅದುವೇ ನಮ್ಮ ಎಲ್ಲ ವ್ಯವಹಾರಗಳಿಗೆ ಮೂಲ ಬಂಡವಾಳ ಎಂಬುದು ಸಾರ್ವಕಾಲಿಕ ಸತ್ಯ. ಮುಂದೆ ಅದೇ ಹಣ ಗಳಿಸುವ ಬಗೆಯನ್ನೂ ಸಂದರ್ಭಕ್ಕೆ ತಕ್ಕಂತೆ ತೋರಲು ನೆರವಾಗುತ್ತದೆ.

ಶಿಕ್ಷಣದ ತರುವಾಯ ಉತ್ತಮ ಕಂಪನಿಯಲ್ಲಿ ಕೆಲಸ ಮಾಡಿ ಅನುಭವ ಗಳಿಸಿ. ಇದು ನಿಮಲ್ಲಿ ಹೆಚ್ಚಿನ ವಿಶ್ವಾಸ ಹಾಗೂ ಪರಿಸ್ಥಿತಿಯೊಡನೆ ವ್ಯವಹರಿಸುವ ಧೈರ್ಯ ನೀಡುತ್ತದೆ. ನೀವು ನಿರೀಕ್ಷಿಸಿದಂತೆ ಒಮ್ಮಿಂದೊಮ್ಮೆಗೆ ಹಣ ದ್ವಿಗುಣಗೊಳಿಸುವ ಯಾವುದೇ ಸುಲಭದ ವಿಧಾನಗಳಿಲ್ಲ. ಹಂತ ಹಂತದ ಅನುಭವ ಎಲ್ಲದಕ್ಕಿಂತ ಮುಖ್ಯ. ಆತಂಕ ಬೇಡ. ಗೆಲುವು ನಿಮ್ಮದಾಗಿರಲಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಸಂಕ್ಷಿಪ್ತ ಸುದ್ದಿ

ಗೋಧಿ ದಾಸ್ತಾನು ನಮೂದು ಕಡ್ಡಾಯ

ನವದೆಹಲಿ (ಪಿಟಿಐ): ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ, ಪ್ರತಿ ವಾರವೂ ಗೋಧಿ ದಾಸ್ತಾನು ಮಿತಿ ನಮೂದಿಸುವುದನ್ನು ಏಪ್ರಿಲ್ 1ರಿಂದ ಕಡ್ಡಾಯಗೊಳಿಸಿದೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವ್ಯಾಪ್ತಿಯ ವರ್ತಕರು, ಸಗಟುದಾರರು, ಚಿಲ್ಲರೆ ಮಾರಾಟಗಾರರು ಮತ್ತು ಸಂಸ್ಕರಣೆಗಾರರು ಸರ್ಕಾರದ ಆನ್‌ಲೈನ್ ಪೋರ್ಟಲ್‌ನಲ್ಲಿ ಪ್ರತಿ ಶುಕ್ರವಾರ ತಮ್ಮಲ್ಲಿರುವ ದಾಸ್ತಾನಿನ ಬಗ್ಗೆ ಕಡ್ಡಾಯವಾಗಿ ನಮೂದಿಸಬೇಕಿದೆ ಎಂದು ಸರ್ಕಾರ ತಿಳಿಸಿದೆ. ದೇಶದಲ್ಲಿ ಗೋಧಿ ದಾಸ್ತಾನು ಮತ್ತು ಬೆಲೆ ನಿಯಂತ್ರಣದ ಮೇಲೆ ಕೇಂದ್ರ ಆಹಾರ ಇಲಾಖೆಯು ನಿಗಾ ಇಟ್ಟಿದೆ.

1.5 ಕೋಟಿ ನಕಲಿ ಉತ್ಪನ್ನ ಪತ್ತೆ: ಅಮೆಜಾನ್

ನವದೆಹಲಿ (ಪಿಟಿಐ): ಕಳೆದ ವರ್ಷ ಜಾಗತಿಕ ಮಟ್ಟದಲ್ಲಿ 1.5 ಕೋಟಿಗೂ ಹೆಚ್ಚು ನಕಲಿ ಉತ್ಪನ್ನಗಳನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ (ಎ.ಐ) ಸಹಾಯದಿಂದ ಪತ್ತೆ ಹಚ್ಚಲಾಗಿದೆ ಎಂದು ಅಮೆಜಾನ್ ಕಂಪನಿ ಬುಧವಾರ ತಿಳಿಸಿದೆ.

ನಕಲಿ ಉತ್ಪನ್ನಗಳನ್ನು ಪತ್ತೆ ಹಚ್ಚಲು ಮತ್ತು ಗ್ರಾಹಕರನ್ನು ರಕ್ಷಿಸಲು ಸಾಕಷ್ಟು ಹಣ ವ್ಯಯಿಸಿತ್ತು. ಅಲ್ಲದೆ, ಮಷಿನ್ ಲರ್ನಿಂಗ್ ಸೈಂಟಿಸ್ಟ್ಸ್, ಸಾಫ್ಟ್‌ವೇರ್ ಡೆವಲಪರ್‌ಗಳು ಸೇರಿ ಸಾವಿರಾರು ಉದ್ಯೋಗಿಗಳನ್ನು ನೇಮಿಸಿಕೊಂಡಿತ್ತು. ಈ ಎಲ್ಲರೂ ನಕಲಿ ಬ್ರ್ಯಾಂಡ್, ಮಾರಾಟಗಾರರು, ಕೃತಕ ವಸ್ತುಗಳು, ವಂಚನೆಗಾರರಿಂದ ಗ್ರಾಹಕರನ್ನು ರಕ್ಷಿಸುವಲ್ಲಿ ನಿರತರಾಗಿದ್ದರು ಎಂದು ತಿಳಿಸಿದೆ.

ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಲೇಶ್ವರ (ಒಡಿಶಾ), (ಪಿಟಿಐ): ದೇಶೀಯವಾಗಿ ಅಭಿವೃದ್ಧಿಪಡಿಸಿದ ಕಡಿಮೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಸಾಮರ್ಥ್ಯ ಹೊಂದಿರುವ ಕ್ಷಿಪಣಿಯ (ವಿಎಲ್‌ಎಸ್‌ಆರ್‌ಎಸ್‌ಎಂ) ಪರೀಕ್ಷಾ ಉಡಾವಣೆ ಬುಧವಾರ ಯಶಸ್ವಿಯಾಯಿತು ಎಂದು ರಕ್ಷಣಾ ಮೂಲಗಳು ತಿಳಿಸಿವೆ.

ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ ಹಾಗೂ ಭಾರತೀಯ ನೌಕಾಪಡೆಯು ವಿಎಲ್‌ಎಸ್ ಆರ್‌ಎಸ್‌ಎಂ ಪರೀಕ್ಷಾ ಉಡಾವಣೆಯನ್ನು ಚಾಂದಿಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ ನಡೆಸಿದವು. ಕ್ಷಿಪಣಿಯಲ್ಲಿ ಅಳವಡಿಸಲಾಗಿದ್ದ ಸ್ಥಳೀಯ ರೇಡಿಯೊ ಫ್ರೀಕ್ವೆನ್ಸಿ ಸೀಕರ್, ಮಲ್ಟಿ ಫಂಕ್ಷನ್ ರೆಡಾರ್, ಶಸ್ತ್ರಗಳ ನಿಯಂತ್ರಣ ವ್ಯವಸ್ಥೆಯು ನಿರೀಕ್ಷೆಯಂತೆ ಕಾರ್ಯನಿರ್ವಹಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಕೋರ್ಟ್ ಮೊರೆ ಹೋಗಲು ಕೈಗಾರಿಕೆ ಸಂಘಗಳ ನಿರ್ಧಾರ

ವಿದ್ಯುತ್ ದರ ಏರಿಕೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿದ್ಯುತ್ ದರ ಏರಿಕೆ ನಿರ್ಧಾರವು ಅವೈಜ್ಞಾನಿಕವಾಗಿದೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಮತ್ತು ಪೀಣ್ಯ ಕೈಗಾರಿಕಾ ಸಂಘ (ಪಿಐಎ) ಆಕ್ಷೇಪ ವ್ಯಕ್ತಪಡಿಸಿವೆ.

ರಾಜ್ಯ ಸರ್ಕಾರವು ಏಪ್ರಿಲ್ 1ರಿಂದ ಪ್ರತಿ ಯೂನಿಟ್ ವಿದ್ಯುತ್‌ಗೆ 36 ಪೈಸೆ ದರ ಹೆಚ್ಚಳಕ್ಕೆ ಮುಂದಾಗಿದೆ. ಇದು ಕೈಗಾರಿಕಾ ವಲಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದ್ದು, ರಾಜ್ಯದ ಆರ್ಥಿಕತೆಗೂ ಪೆಟ್ಟು ನೀಡಲಿದೆ. ಹಾಗಾಗಿ, ನಿರ್ಧಾರವನ್ನು ಹಿಂಪಡೆಯಬೇಕು. ಇಲ್ಲವಾದರೆ ಇದನ್ನು ಪ್ರಶ್ನಿಸಿ, ಹೈಕೋರ್ಟ್‌ನ ಉನ್ನತ ಪೀಠ ಅಥವಾ ಸುಪ್ರೀಂ ಕೋರ್ಟ್‌ನ ಮೊರೆ ಹೋಗಲಾಗುವುದು ಎಂದು ಎಚ್ಚರಿಕೆ ನೀಡಿವೆ.

‘ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ವಿದ್ಯುತ್ ದರ ಹೆಚ್ಚಿದೆ. ಪದೇ ಪದೇ ಏರಿಕೆ ಮಾಡುವುದು ಸರಿಯಲ್ಲ. ಇದರಿಂದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಉತ್ಪಾದನಾ ವೆಚ್ಚ ಹೆಚ್ಚಲಿದೆ. ಬೆಲೆ ಏರಿಕೆ ಮಾಡುವುದರಿಂದ ಉತ್ಪನ್ನಗಳಿಗೆ ಬೇಡಿಕೆ ಕುಗ್ಗಲಿದೆ’ ಎಂದು ಬುಧವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಹೇಳಿದರು.

ಕೈಗಾರಿಕೆಗಳ ಲಾಭಾಂಶ ಕುಸಿಯಲಿದೆ. ಇದರಿಂದ ಉದ್ಯೋಗ ಕಡಿತವಾಗಲಿದೆ. ಅಲ್ಲದೆ, ಕೈಗಾರಿಕೆಗಳು ಬೇರೆ ರಾಜ್ಯಗಳಿಗೆ ವಲಸೆ ಹೋಗುವ ಸಾಧ್ಯತೆಯಿದೆ ಎಂದರು.

ರಾಜ್ಯದಲ್ಲಿ ವಿದ್ಯುತ್ ಸ್ಮಾರ್ಟ್ ಮೀಟರ್ ಅಳವಡಿಕೆಗೆ ನಮ್ಮ ವಿರೋಧವಿಲ್ಲ. ಆದರೆ, ಹಳೆಯ ಮೀಟರ್ ಅಳವಡಿಕೆ ವೇಳೆ ಠೇವಣಿ ತೆಗೆದುಕೊಳ್ಳಲಾಗಿದೆ. ಮತ್ತೆ ಈ ಮೀಟರ್‌ಗೆ ತೆಗೆದುಕೊಳ್ಳುವುದು ಬೇಡ. ಉಚಿತವಾಗಿ ಅಳವಡಿಸಬೇಕು ಎಂದು ಒತ್ತಾಯಿಸಿದರು.

ಆಸ್ತಿ ತೆರಿಗೆ ಹೆಚ್ಚಳವು ಕೈಗಾರಿಕೆಗಳ ಬಂಡವಾಳ ಹೂಡಿಕೆ ಮೇಲೆ ನೇರ ಪರಿಣಾಮ ಬೀರಲಿದೆ. ಭೂಮಿಯ ವೆಚ್ಚ ಏರಿಕೆಯಾಗಲಿದೆ. ಹೀಗಾಗಿ, ಸರ್ಕಾರ ಸಮತೋಲಿತ ತೆರಿಗೆ ನೀತಿ ಅನುಸರಿಸಬೇಕು. ಇ-ಖಾತಾ ಪ್ರಕ್ರಿಯೆಯಲ್ಲಿ ಎದುರಾಗಿರುವ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಏ. 5ರಂದು ಉದ್ಯೋಗ ಮೇಳ

ಬೆಂಗಳೂರಿನ ಎಫ್‌ಕೆಸಿಸಿಐ ಕಚೇರಿಯಲ್ಲಿ ಏಪ್ರಿಲ್ 5ರಂದು ಉದ್ಯೋಗ ಮೇಳ ಆಯೋಜಿಸಲಾಗಿದ್ದು, ಈಗಾಗಲೇ 5 ಸಾವಿರಕ್ಕೂ ಹೆಚ್ಚು ಯುವಜನರು ನೋಂದಾಯಿಸಿಕೊಂಡಿದ್ದಾರೆ. 110 ಕಂಪನಿಗಳು ಭಾಗವಹಿಸಲಿವೆ.

ಎಫ್‌ಕೆಸಿಸಿಐ, ಕಾಸಿಯಾ ಮತ್ತು ಪಿಐಎನಿಂದ ಜಂಟಿಯಾಗಿ ಮೇ 30ರಿಂದ ಮೂರು ದಿನದವರೆಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಇಂಡಿಯಾ ಎಂಎಸ್‌ಎಂಇ ಸಮಾವೇಶ ಆಯೋಜಿಸಲಾಗಿದೆ. ಆಗಸ್ಟ್ 1ರಿಂದ ಮೂರು ದಿನದವರೆಗೆ ಬೆಂಗಳೂರು ಅಂತರ-ರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ‘ಅಗ್ರಿಟೆಕ್’ ಹೆಸರಿನಡಿ ಕೃಷಿ ಆಧರಿತ ಆಹಾರ ಸಂಸ್ಕರಣಾ ವಸ್ತು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ.

ಯುದ್ಧವಿಮಾನ: ಎಂಜಿನ್ ಪೂರೈಕೆ ಆರಂಭಿಸಿದ ಅಮೆರಿಕ

ನವದೆಹಲಿ (ಪಿಟಿಐ): ತೇಜಸ್ ಲಘು ಯುದ್ಧ ವಿಮಾನ ಯೋಜನೆಯ ಭಾಗವಾಗಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ (ಎಚ್‌ಎಎಲ್) 99 ಎಫ್-404 ಎಂಜಿನ್‌ಗಳನ್ನು ಪೂರೈಸುವ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ ಎಂದು ಅಮೆರಿಕದ ರಕ್ಷಣಾ ಸಂಸ್ಥೆ ಜಿ.ಇ ಏರೋಸ್ಪೇಸ್ ಬುಧವಾರ ಹೇಳಿದೆ.

ಭಾರತೀಯ ವಾಯುಪಡೆಗೆ 83 ತೇಜಸ್ ಎಂಕೆ-1ಎ ಯುದ್ಧವಿಮಾನಗಳನ್ನು ನಿರ್ಮಿಸಿಕೊಡುವ ₹48 ಸಾವಿರ ಕೋಟಿ ವೆಚ್ಚದ ಯೋಜನೆ ಬಗ್ಗೆ ರಕ್ಷಣಾ ಇಲಾಖೆಯು 2021 ಫೆಬ್ರುವರಿಯಲ್ಲಿ ಎಚ್‌ಎಎಲ್ ಜೊತೆ ಒಪ್ಪಂದ ಮಾಡಿಕೊಂಡಿತ್ತು. ಎಚ್‌ಎಎಲ್‌ನಿಂದ ಯುದ್ಧ ವಿಮಾನ ಹಸ್ತಾಂತರ ಪ್ರಕ್ರಿಯೆಯು ಕಳೆದ ವರ್ಷ ಮಾರ್ಚ್‌ನಿಂದ ಆರಂಭವಾಗಬೇಕಿತ್ತು. ಆದರೆ, ಈವರೆಗೆ ಒಂದೂ ವಿಮಾನವನ್ನು ಹಸ್ತಾಂತರ ಮಾಡಿಲ್ಲ.

ಅಮೆರಿಕದ ಸಂಸ್ಥೆಯು ಎಂಜಿನ್ ಪೂರೈಕೆಯನ್ನು ವಿಳಂಬಗೊಳಿಸಿದ ಕಾರಣಕ್ಕೆ ವಿಮಾನ ನಿರ್ಮಾಣ ಪ್ರಕ್ರಿಯೆ ವಿಳಂಬವಾಗಿದೆ ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ. ಇದೀಗ ಎಂಜಿನ್ ಪೂರೈಕೆಯು ಆರಂಭಗೊಂಡಿರುವುದರಿಂದ ಶೀಘ್ರದಲ್ಲಿ ಯುದ್ಧ ವಿಮಾನಗಳು ಸೇನೆಗೆ ಹಸ್ತಾಂತರವಾಗುವ ನಿರೀಕ್ಷೆಯಿದೆ.

ಭಾರತದಿಂದ ಫೆಂಟಾನಿಲ್ ಕಳ್ಳಸಾಗಣೆ: ಅಮೆರಿಕ

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ಡ್ರಗ್ಸ್‌ಗಳ ಕಳ್ಳಸಾಗಣೆಗೆ ಸಂಬಂಧಿಸಿ ಅಮೆರಿಕ ಗುಪ್ತಚರ ಸಂಸ್ಥೆ ವರದಿ ಸಿದ್ಧಪಡಿಸಿದ್ದು, ಈ ಕೃತ್ಯಗಳಲ್ಲಿ ತೊಡಗಿರುವ ದೇಶಗಳ ಪೈಕಿ ಭಾರತ ಮತ್ತು ಚೀನಾ ಪ್ರಮುಖವಾಗಿವೆ ಎಂದು ಉಲ್ಲೇಖಿಸಲಾಗಿದೆ.

ಮಾದಕದ್ರವ್ಯ ‘ಫೆಂಟಾನಿಲ್’ ತಯಾರಿಕೆಗೆ ಅಗತ್ಯವಿರುವ ರಾಸಾಯನಿಕಗಳು ಹಾಗೂ ಫೆಂಟಾಲಿನ್ ಮಾತ್ರೆಗಳ ತಯಾರಿಕೆಗೆ ಬಳಸುವ ಉಪಕರಣ ಪೂರೈಸುವ ಪ್ರಮುಖ ದೇಶ ಕೂಡ ಭಾರತ ಎಂದು ಹೇಳಲಾಗಿದೆ. 2024ರ ಅಕ್ಟೋಬರ್‌ಗೆ ಅಂತ್ಯಗೊಂಡ ಹಿಂದಿನ 12 ತಿಂಗಳಲ್ಲಿ ಫೆಂಟಾನಿಲ್ ಸೇವಿಸಿ ದೇಶದಲ್ಲಿ 52 ಸಾವಿರಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ ಎಂದೂ ಹೇಳಲಾಗಿದೆ.

ಹಮಾಸ್ ವಿರುದ್ಧ ಪ್ಯಾಲೆಸ್ಟೀನಿಯನ್ನರ ಪ್ರತಿಭಟನೆ

ಕೈರೊ/ ಜೆರುಸಲೇಮ್ (ಎಪಿ): ಹಮಾಸ್ ಬಂಡುಕೋರರ ವಿರುದ್ಧ ಪ್ಯಾಲೆಸ್ಟೀನಿಯನ್ನರ ಆಕ್ರೋಶ ಸ್ಫೋಟಗೊಂಡಿದ್ದು, ಅವರ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ.

ಅಪರೂಪವೆಂಬಂತೆ, ಹಮಾಸ್ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟಿಸಿರುವ ಪ್ಯಾಲೆಸ್ಟೀನಿಯನ್ನರು, ಯುದ್ಧವನ್ನು ಕೊನೆಗೊಳಿಸುವಂತೆ ಆಗ್ರಹಿಸಿದ್ದಾರೆ. ಪ್ರತಿಭಟನೆ ಕುರಿತ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ.

ಹಮಾಸ್ ಹಾಗೂ ಇಸ್ರೇಲ್ ನಡುವೆ ಯುದ್ಧ ಆರಂಭಗೊಂಡು 17 ತಿಂಗಳು ಗತಿಸಿದ್ದು, ಅಪಾರ ಸಾವು-ನೋವು ಸಂಭವಿಸಿವೆ. ಆದರೆ, ಈಗ ಹಮಾಸ್ ವಿರುದ್ಧವೇ ಪ್ಯಾಲೆಸ್ಟೀನಿಯನ್ನರು ಆಕ್ರೋಶ ಹೊರಹಾಕಿದ್ದಾರೆ.

ಕೆಲ ಪ್ರತಿಭಟನಕಾರರು ‘ಹಮಾಸ್ ತೊಲಗಲಿ’ ಎಂಬ ಘೋಷಣೆಗಳನ್ನು ಕೂಗುತ್ತಿರುವುದು ಹಾಗೂ ಹಮಾಸ್ ಬೆಂಬಲಿಗರು ಪ್ರತಿಭಟನಕಾರರನ್ನು ಚದುರಿಸುತ್ತಿರುವ ದೃಶ್ಯಗಳು ಸಹ ವಿಡಿಯೊದಲ್ಲಿವೆ.

ತೆರವಿಗೆ ಇಸ್ರೇಲ್ ಆದೇಶ: ಹಮಾಸ್ ಗುರಿಯಾಗಿಸಿ ದಾಳಿಗಳನ್ನು ತೀವ್ರಗೊಳಿಸಿರುವ ಇಸ್ರೇಲ್, ಗಾಜಾ ಪಟ್ಟಿಯ ಜಿತೌನ್, ಟೆಲ್ ಅಲ್-ಹವಾ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಂದ ಜನರನ್ನು ತೆರವುಗೊಳಿಸುವಂತೆ ಬುಧವಾರ ಆದೇಶಿಸಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಶೂರೆನ್ಸ್ ಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001

Cook

ಬ್ರಾಹ್ಮಣ ಅಡುಗೆ ಭಟ್ಟರು ಬೇಕಾಗಿದ್ದಾರೆ ಶೇಷಾದ್ರಿಪುರಂ ಬೆಂಗಳೂರು. ಊಟ ವಸತಿಯೊಂದಿಗೆ ವೇತನ 25000 ರಿಂದ 30000/- Ph: 9019626612

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾಜೇಶ್ವರಿ ಚಾರಿಟಬಲ್ ಟ್ರಸ್ಟ್ (ರಿ)
ದೂಪದಹಳ್ಳಿ, ಕೊಟ್ಟೂರು (ತಾ), ವಿಜಯನಗರ(ಹೊಸಪೇಟೆ) (ಜಿ)-583134
ಇವರ ಅಡಿಯಲ್ಲಿ
“ಆಶ್ರಯ ಆರೈಕೆ ಕೇಂದ್ರ”
ಆರಂಭವಾಗಿದ್ದು
ಅನಾಥರಿಗೆ, ವಯೋವೃದ್ಧರಿಗೆ, ನಿಶ್ಯಕ್ತರಿಗೆ ನಿಲುಕುವ ನೆಮ್ಮದಿಯ ತಾಣವಾಗಿದೆ
ಹೆಚ್ಚಿನ ಮಾಹಿತಿಗೆ ಈ ಕೆಳಗಿನ ದೂರವಾಣಿಗಳಿಗೆ ಸಂಪರ್ಕಿಸಲು ಕೋರಲಾಗಿದೆ
73538 38248, 79751 99067, 63647 79342

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

★ಶ್ರೇಯಸ್ ಟೂರ್ಸ್★ 06.04.2025,27.04.2025 18.05.2024 12/15/21ದಿನ ಈಶಾನ್ಯ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ 25.03.2025.25.04.2025 25.5.2025 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಚಲಿಂಗ್ 14.05.2025 12ದಿನಗಳು ಆದಿಕೈಲಾಸಓಂಪರ್ವತ್ ನೈನಿತಾಲ್,ಭೀಮ್‌ತಾಲ್ ಜಾಗೇಶ್ವರ,ಪಾತಾಳೇಶ್ವರ. 9743351212 9206979202

09.04.2025 10 ದಿನಗಳ ಕಾಶಿ,ಅಯೋಧ್ಯ ಪ್ರಯಾಗ್‌ರಾಜ್. 16.04.2025 17 ದಿನಗಳ ಪೂರಿಜಗನ್ನಾಥ್ ಕೊನಾರ್ಕ್ ಗಯಾ,ಕಾಶಿ,ನೇಪಾಳ ಮುಕ್ತಿನಾಥ ಅಯೋಧ್ಯ. 07.05.2025 21.05.2025 14 ದಿನಗಳ ಗಂಗೋತ್ರಿ ಯಮುನೋತ್ರಿ ಬದರಿನಾಥ್ ಕೇದಾರನಾಥ್ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು-70. 9342287551 8050629305

★ಶ್ರೇಯಸ್ ಟೂರ್ಸ್★ 10.05.2025,10.06.2025 10ದಿನ ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ ಸಹಿತ)ಅಯೋಧ್ಯೆ 23.05.25,24.06.25 7ದಿನ ನೈಮಿಷಾರಣ್ಯಾ,ಅಯೋಧ್ಯ ಪ್ರಯಾಗ್‌ರಾಜ್,ಕಾಶಿ,ಗಯಾ ದೇವಘರ್.04.06.2025, 28.06.2025,12.07.2025 26.07.25 12ದಿನ ಚಾರ್ ದಾಮ್‌ಯಾತ್ರಾ,ಕೇದಾರನಾಥ ಬದರಿನಾಥ,ಯಮುನೋತ್ರಿ ಗಂಗೋತ್ರಿ,ಇತರೆ. 9743351212, 9206979202, 9606032154

8.4.2025 ಪುರಿ ಜಗನ್ನಾಥ, ಕಲ್ಕತ್ತಾ 22.4.2025 ಜಾರ್ಖಂಡ್ ವೈದ್ಯನಾಥ ಕಾಶಿ ಗಯ ಅಯೋಧ್ಯೆ: 3.5.2025 ಶ್ರೀಶೈಲ ಮಂತ್ರಾಲಯ ಹೈದರಾಬಾದ್: 13.5.2025 ಶಿರಡಿ ಮೂರು ಜ್ಯೋತಿರ್ಲಿಂಗ: 28.5.2025: ತಮಿಳುನಾಡು ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

ರಿಯಾಯಿತಿ ದರದಲ್ಲಿ ಪ್ರವಾಸಗಳು 7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಇಂಡೋನೇಷ್ಯಾ,ಬಾಲಿ ಪ್ರವಾಸಗಳು. 8 ದಿನಗಳ ನೇಪಾಳ (ಶ್ರೀಮುಕ್ತಿನಾಥ).9 ದಿನಗಳ ಕಾಶಿ ಅಯೋಧ್ಯೆ,ಗಯಾ ಪ್ರವಾಸಗಳು. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900099252 9900080793

7ದಿನಗಳ ಕಾಶಿ ಅಯೋಧ್ಯಾ ಗಯಾ,ಬುದ್ಧಗಯಾ. 13 ದಿನಗಳ ಚಾರ್ಧಾಮಯಾತ್ರೆ. 7 ದಿನಗಳ ಅಮರನಾಥ್. 10 ದಿನಗಳ ನೇಪಾಳ ಮುಕ್ತಿನಾಥ,ಅಯೋಧ್ಯಾ. ಸಂಪರ್ಕಿಸಿ: ನಂದಿ ಹಾಲಿಡೇಸ್ ಗಾಂಧಿಬಜಾರ್ ಬಸವನಗುಡಿ ಬೆಂಗಳೂರು-04. 9740228186 9980270467

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ರಾಯಲ್ಸ್‌ಗೆ ಸತತ ಎರಡನೇ ಸೋಲು; ಕ್ವಿಂಟನ್ ಅಬ್ಬರದ ಬ್ಯಾಟಿಂಗ್; ವರುಣ್, ಮೊಯಿನ್ ಕೈಚಳಕ

ಕೋಲ್ಕತ್ತಕ್ಕೆ ಮೊದಲ ಗೆಲುವಿನ ಸಿಹಿ

97 ರನ್ | 61 ಎಸೆತ | 8 ಬೌಂಡರಿ | 6 ಸಿಕ್ಸರ್

ರಾಜಸ್ಥಾನ ರಾಯಲ್ಸ್ ವಿರುದ್ಧ ಅರ್ಧ ಶತಕ ಬಾರಿಸಿ ಸಂಭ್ರಮಿಸಿದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡದ ಕ್ವಿಂಟನ್ ಡಿ ಕಾಕ್

ಗುವಾಹಟಿ (ಪಿಟಿಐ): ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಮೊದಲ ಜಯದ ಸಿಹಿಯುಂಡಿತು.

ಬರ್ಸಾಪರ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಕೋಲ್ಕತ್ತ ತಂಡವು 8 ವಿಕೆಟ್‌ಗಳಿಂದ ರಾಜಸ್ಥಾನ ರಾಯಲ್ಸ್ ವಿರುದ್ಧ ಗೆದ್ದಿತು. ಸ್ಪಿನ್ ಜೋಡಿ ವರುಣ್ ಚಕ್ರವರ್ತಿ (17ಕ್ಕೆ2) ಮತ್ತು ಮೊಯಿನ್ ಅಲಿ (23ಕ್ಕೆ2) ಅವರ ಮೋಡಿಯಿಂದಾಗಿ ರಾಯಲ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 151 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಕೋಲ್ಕತ್ತದ ಆರಂಭಿಕ ಬ್ಯಾಟರ್ ಕ್ವಿಂಟನ್ ಡಿಕ ಕಾಕ್ (ಅಜೇಯ 97; 61ಎ) ಅವರು ತಮ್ಮ ಅಬ್ಬರದ ಆಟದ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ತಂಡವು 17.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 153 ರನ್ ಗಳಿಸಿತು. ರಾಜಸ್ಥಾನ ತಂಡವು ಸತತ ಎರಡನೇ ಪಂದ್ಯದಲ್ಲಿ ಸೋತಿತು.

ಟಾಸ್ ಗೆದ್ದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶುಷ್ಕ ಪಿಚ್‌ನಲ್ಲಿ ಬ್ಯಾಟಿಂಗ್ ಸುಲಭವಾಗಿರಲಿಲ್ಲ. ಈ ಪರಿಸ್ಥಿತಿಯ ಲಾಭ ಪಡೆಯುವಲ್ಲಿ ಸಫಲರಾದ ಕೋಲ್ಕತ್ತ ತಂಡದ ಸ್ಪಿನ್ ಜೋಡಿ ವರುಣ್ ಮತ್ತು ಮೋಯಿನ್ ಅಲಿ ರಾಯಲ್ಸ್ ಬ್ಯಾಟಿಂಗ್ ಪಡೆಯನ್ನು ಕಾಡಿದರು. ಅವರಿಗೆ ವೇಗಿ ವೈಭವ್ ಅರೋರಾ(33ಕ್ಕೆ2) ಹಾಗೂ ಹರ್ಷಿತ್ ರಾಣಾ (36ಕ್ಕೆ2) ಕೂಡ ಉತ್ತಮ ಜೊತೆ ನೀಡಿದರು.

ಯಶಸ್ವಿ ಜೈಸ್ವಾಲ್ (29; 24ಎ) ಮತ್ತು ಸಂಜು ಸ್ಯಾಮ್ಸನ್ (13; 11ಎ) ಅವರು ಮೊದಲ ವಿಕೆಟ್ ಜತೆಯಾಟದಲ್ಲಿ 33 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಕೋಲ್ಕತ್ತದ ವೇಗಿ ವೈಭವ್ ಅವರು ಸಂಜು ವಿಕೆಟ್ ಉರುಳಿಸಿ ಜೊತೆಯಾಟ ಮುರಿದರು. ಕ್ರೀಸ್‌ಗೆ ಬಂದ 'ಸ್ಥಳೀಯ ಹೀರೊ' ರಿಯಾನ್ ಪರಾಗ್ 15 ಎಸೆತಗಳಲ್ಲಿ 25 ರನ್ ಸಿಡಿಸಿದರು. ಅದರಲ್ಲಿ ಭರ್ಜರಿ 3 ಸಿಕ್ಸರ್‌ಗಳಿದ್ದವು.

ಯಶಸ್ವಿ ಮತ್ತು ಪರಾಗ್ ಅವರ ಜೊತೆಯಾಟವು ದೀರ್ಘವಾಗಿ ಬೆಳೆಯುವ ನಿರೀಕ್ಷೆ ಮೂಡಿತ್ತು. ಈ ಸಂದರ್ಭದಲ್ಲಿ ದಾಳಿಗಿಳಿದ ವರುಣ್ ಎಸೆತವನ್ನು ಆಡುವ ಧಾವಂತದಲ್ಲಿ ಪರಾಗ್ ದಂಡ ತೆತ್ತರು. ನಂತರದ ಓವರ್‌ನಲ್ಲಿ ಯಶಸ್ವಿ ಆಟಕ್ಕೆ ಮೊಯಿನ್ ಅಲಿ ತಡೆಯೊಡ್ಡಿದರು. ನಂತರ ಬೌಲರ್‌ಗಳು ಇನಿಂಗ್ಸ್ ಮೇಲೆ ಹಿಡಿತ ಸಾಧಿಸಿದರು.

ಇಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಧ್ರುವ ಜುರೇಲ್ (33; 28ಎ) ತಮ್ಮ ತಂಡದ ಮೊತ್ತ ಹೆಚ್ಚಿಸುವ ಪ್ರಯತ್ನ ಮಾಡಿದರು. ಐದು ಬೌಂಡರಿ ಹೊಡೆದರು. ಕೊನೆಯ ಹಂತದಲ್ಲಿ ಜೋಫ್ರಾ ಆರ್ಚರ್ ಅವರು 2 ಸಿಕ್ಸರ್ ಸಿಡಿಸಿದರು. 7 ಎಸೆತಗಳಲ್ಲಿ 16 ರನ್ ಗಳಿಸಿದರು. ಆದರೂ ದೊಡ್ಡ ಮೊತ್ತ ಗಳಿಸಲು ತಂಡಕ್ಕೆ ಸಾಧ್ಯವಾಗಲಿಲ್ಲ.

ಗುರಿ ಬೆನ್ನಟ್ಟಿದ ಕೋಲ್ಕತ್ತ ತಂಡಕ್ಕೆ ಮೊಯಿನ್ ಅಲಿ ಮತ್ತು ಕ್ವಿಂಟನ್ ಉತ್ತಮ ಆರಂಭ ಒದಗಿಸಿದರು.

ರಿಯಾನ್ ಪರಾಗ್ ಅವರ ಚುರುಕಿನ ಫೀಲ್ಡಿಂಗ್ ನಿಂದಾಗಿ ಮೊಯಿನ್ ಅಲಿ ರನ್‌ಔಟ್ ಆದರು. ನಾಯಕ ರಹಾನೆ ಜೊತೆಗೆ ಡಿಕಾಕ್ ಅವರು ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು.

ಸ್ಪಿನ್ನರ್ ವಣಿಂದು ಹಸರಂಗಾ ಅವರ ಬೌಲಿಂಗ್‌ನಲ್ಲಿ ರಹಾನೆ ದೊಡ್ಡ ಹೊಡೆತಕ್ಕೆ ಯತ್ನಿಸಿದರು. ತುಷಾರ್ ದೇಶಪಾಂಡೆ ಕ್ಯಾಚ್ ಪಡೆದರು.

ಆದರೆ ಇದರ ನಂತರ ರಾಜಸ್ಥಾನ ತಂಡಕ್ಕೆ ಸಂಭ್ರಮಿಸುವ ಅವಕಾಶವನ್ನು ಡಿಕಾಕ್ ಮತ್ತು ಅಂಗಕ್ರಿಷ್ ರಘುವಂಶಿ (ಔಟಾಗದೇ 22) ನೀಡಲಿಲ್ಲ. ತಂಡವನ್ನು ಗೆಲುವಿನ ದಡ ಮುಟ್ಟಿಸಿದರು.

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್: 9ಕ್ಕೆ 151 (20 ಓವರುಗಳಲ್ಲಿ)
ಜೈಸ್ವಾಲ್ ಸಿ ಹರ್ಷಿತ್ ರಾಣಾ ಬಿ ಅಲಿ 29 (24, 4x2, 6x2)
ಸ್ಯಾಮ್ಸನ್ ಬಿ ಆರೋರಾ 13 (11ಎ, 4x2)
ಪರಾಗ್ ಸಿ ಡಿಕಾಕ್ ಬಿ ವರುಣ್ 25 (15, 6x3)
ನಿತೀಶ್ ರಾಣಾ ಬಿ ಅಲಿ 8 (9)
ಹಸರಂಗ ಸಿ ಅಜಿಂಕ್ಯ ಬಿ ವರುಣ್ 4 (4ಎ)
ಜುರೆಲ್ ಬಿ ಹರ್ಷಿತ್ 33 (28, 4x5)
ಶುಭಂ ದುಬೆ ಸಿ ರಸೆಲ್ ಬಿ ಆರೊರಾ 9 (12, 4x1)
ಹೆಟ್ಮೆಯರ್ ಸಿ ರಘುವಂಶಿ ಬಿ ಹರ್ಷಿತ್ 7 (8, 4x1)
ಆರ್ಚರ್ ಬಿ ಜಾನ್ಸನ್ 16 (7ಎ, 6x2)
ತೀಕ್ಷಣ ಔಟಾಗದೇ 1 (1ಎ)
ದೇಶಪಾಂಡೆ ಔಟಾಗದೇ 2 (1ಎ)
ಇತರೆ: 4 (ವೈಡ್ 4)
ವಿಕೆಟ್ ಪತನ: 1–33 (ಸಂಜು ಸ್ಯಾಮ್ಸನ್, 3.5), 2–67 (ರಿಯಾನ್ ಪರಾಗ್, 7.5), 3–69 (ಯಶಸ್ವಿ ಜೈಸ್ವಾಲ್, 8.4), 4–76 (ವನಿಂದು ಹಸರಂಗ, 9.5), 5–82 (ನಿತೀಶ್ ರಾಣಾ, 10.6), 6–110 (ಶುಭಂ ದುಬೆ, 14.6), 7–131 (ಧ್ರುವ್ ಜುರೆಲ್, 18.1) 8–138(ಶಿಮ್ರಾನ್ ಹೆಟ್ಮೆಯರ್, 18.6), 9–149 (ಜೋಫ್ರಾ ಆರ್ಚರ್, 19.5).
ಬೌಲಿಂಗ್: ಸ್ಪೆನ್ಸರ್ ಜಾನ್ಸನ್ 4–0–42–1; ವೈಭವ್ ಆರೋರಾ 4–0–33–2; ಹರ್ಷಿತ್ ರಾಣಾ 4–0–36–2; ಮೊಯಿನ್ ಅಲಿ 4–0–23–2; ವರುಣ್ ಚಕ್ರವರ್ತಿ 4–0–17–2

ಕೋಲ್ಕತ್ತ ನೈಟ್‌ರೈಡರ್ಸ್2ಕ್ಕೆ153 (17.3 ಓವರ್‌ಗಳಲ್ಲಿ)
ಮೊಯಿನ್ ರನ್‌ಔಟ್ (ತೀಕ್ಷಣ/ರಿಯಾನ್) 5 (12ಎ)
ಕ್ವಿಂಟನ್ ಔಟಾಗದೇ 97 (61ಎ, 4X8, 6X6)
ರಹಾನೆ ಸಿ ತುಷಾರ್ ಬಿ ಹಸರಂಗಾ 18 (15ಎ, 4X1, 6X1)
ರಘುವಂಶಿ ಔಟಾಗದೇ 22 (17ಎ, 4X2)
ಇತರೆ: 11 (ಲೆಗ್‌ಬೈ 2, ವೈಡ್ 9)
ವಿಕೆಟ್ ಪತನ: 1–41 (ಮೊಯಿನ್ ಅಲಿ; 6.1), 2–70 (ಅಜಿಂಕ್ಯ ರಹಾನೆ; 10.1)
ಬೌಲಿಂಗ್: ಜೋಫ್ರಾ ಆರ್ಚರ್ 2.3–0–33–0, ಮಹೀಷ ತೀಕ್ಷಣ 4–0–32–0, ರಿಯಾನ್ ಪರಾಗ್ 4–0–25–0, ಸಂದೀಪ್ ಶರ್ಮಾ 2–0–11–0, ವಣಿಂದು ಹಸರಂಗಾ 3–0–34–1, ನಿತೀಶ್ ರಾಣಾ 1–0–9–0, ತುಷಾರ ದೇಶಪಾಂಡೆ 1–0–7–0
ಪಂದ್ಯದ ಆಟಗಾರ: ಕ್ವಿಂಟನ್ ಡಿ ಕಾಕ್.

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ 8 ವಿಕೆಟ್‌ಗಳ ಜಯ.

ಸನ್ ಸ್ಫೋಟಕ ಆಟ ತಡೆವ ಸವಾಲು

ಹೈದರಾಬಾದ್– ಲಖನೌ ಪಂದ್ಯ ಇಂದು

ರಿಷಭ್ ಪಂತ್ ಪಿಟಿಐ ಚಿತ್ರ

ಪ್ಯಾಟ್ ಕಮಿನ್ಸ್

ಹೈದರಾಬಾದ್ (ಪಿಟಿಐ): ಈ ಹಿಂದಿನ ಋತುವಿನಂತೆ ಆಕ್ರಮಣಕಾರಿ ಆಟದಿಂದ ಎದುರಾಳಿಗಳನ್ನು ಕಂಗೆಡಿಸುವ ತಂತ್ರವನ್ನು ಸನ್‌ರೈಸರ್ಸ್ ಈ ಆವೃತ್ತಿಯಲ್ಲೂ ಮುಂದುವರಿಸಿದೆ. ಸನ್‌ರೈಸರ್ಸ್ ತಂಡದ ಈ ಮನೋಭಾವದ ಆಟ, ಗುರುವಾರ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಆ ತಂಡವನ್ನು ಎದುರಿಸಲಿರುವ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಸವಾಲಾಗಲಿದೆ.

2024ರಲ್ಲಿ ಆಡಿದ ರೀತಿಯನ್ನೇ ಮುಂದುವರಿಸಿರುವ ಸನ್‌ರೈಸರ್ಸ್ ತಂಡ, ರಾಜಸ್ಥಾನ ರಾಯಲ್ಸ್ ವಿರುದ್ಧ ಮೊದಲ ಪಂದ್ಯದಲ್ಲಿ ತನ್ನದೇ ಹೆಸರಿನಲ್ಲಿದ್ದ ಅತ್ಯಧಿಕ ಮೊತ್ತದ ದಾಖಲೆಯನ್ನು (287) ಬರೇ ಎರಡು ರನ್‌ಗಳಿಂದ ಕಳೆದುಕೊಂಡಿತು. 44 ರನ್‌ಗಳ ದೊಡ್ಡ ಅಂತರದ ಗೆಲುವು ಆ ತಂಡಕ್ಕೆ ಮೊದಲ ಸುತ್ತಿನ ಪಂದ್ಯಗಳ ನಂತರ ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಸ್ಥಾನ ನೀಡಿದೆ.

ತಂಡಕ್ಕೆ ಹೊಸದಾಗಿ ಸೇರಿಕೊಂಡ ಇಶಾನ್ ಕಿಶನ್, ಉಪ್ಪಳದ ರಾಜೀವ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಹಾಲಿ ಐಪಿಎಲ್‌ನ ಮೊದಲ ಶತಕ (106, 47ಎ) ಹೊಡೆದರು. ಐಪಿಎಲ್ ತಂಡಗಳಲ್ಲೇ ಸನ್‌ರೈಸರ್ಸ್ ಆಕ್ರಮಣದ ಆಟವಾಡುವ ತಂಡ ಎನಿಸಿದೆ.

ಕಿಶನ್ ಜೊತೆ ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್ ಮತ್ತು ಹೆನ್ರಿಚ್ ಕ್ಲಾಸೆನ್ ಅಂಥ ಸ್ಫೋಟಕ ಆಟವಾಡಬಲ್ಲ ಪಡೆ ಆ ತಂಡದಲ್ಲಿದೆ. ನಿತೀಶ್ ಕುಮಾರ್ ರೆಡ್ಡಿ ಕೂಡ ತಾವೇನೂ ಕಡಿಮೆಯಿಲ್ಲ ಎಂದು ಹಿಂದಿನ ಪಂದ್ಯದಲ್ಲಿ 200ಕ್ಕಿಂತ ಹೆಚ್ಚಿನ ಸ್ಟ್ರೈಕ್‌ರೇಟ್‌ನಲ್ಲಿ ಆಡಿದರು.

ಹೀಗಾಗಿ ಲಖನೌ ತಂಡ ತನ್ನ ಬೌಲಿಂಗ್ ತಂತ್ರದಲ್ಲಿ ಸ್ಪಷ್ಟತೆ ಹೊಂದಿರಬೇಕಾಗಿದೆ. ಸ್ವಲ್ಪ ಎಡವಟ್ಟಾದರೂ ಅಪಾಯ ತಪ್ಪಿದ್ದಲ್ಲ.

ಈ ಬಾರಿಯ ಐಪಿಎಲ್‌ನಲ್ಲಿ ಬ್ಯಾಟರ್‌ಗಳ ಅಬ್ಬರ ಎದ್ದುಕಂಡಿದೆ. ಮೊದಲ ಐದು ಪಂದ್ಯಗಳಲ್ಲಿ 119 ಸಿಕ್ಸರ್‌ಗಳು ದಾಖಲಾಗಿವೆ.

ರೋಚಕ ಹೋರಾಟದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಒಂದು ವಿಕೆಟ್‌ನಿಂದ ಸೋತ ಲಖನೌ ತಂಡ, ಆ ಪಂದ್ಯದಲ್ಲಿ ಮಧ್ಯಮ ಹಂತದ ಓವರುಗಳಲ್ಲಿ ಚೆನ್ನಾಗಿ ದಂಡಿಸಿಕೊಂಡಿತು. ಅಪಾಯದಲ್ಲಿದ್ದ ಡೆಲ್ಲಿ ಚೇತರಿಸಿದ್ದು ಆ ಹಂತದಲ್ಲಿಯೇ.

ಅಶುತೋಷ್ ಶರ್ಮಾ ಗೆಲುವಿನ ರೂವಾರಿಯಾದರು. ಲಖನೌ ತಂಡದ ನಾಯಕ ಪಂತ್ ಬ್ಯಾಟಿಂಗ್‌ನಲ್ಲಿ ವಿಫಲರಾದರು. ಕೊನೆಯ ಓವರ್‌ನಲ್ಲಿ ನಲ್ಲಿ ಸ್ಟಂಪಿಂಗ್‌ನಲ್ಲಿ ಕೈತಪ್ಪಿದ್ದು ಸಹ ದುಬಾರಿಯಾಯಿತು.

ಲಖನೌ ತಂಡದ ನಿಕೋಲಸ್ ಪೂರನ್ ಅವರ ಆಕರ್ಷಕ ಸ್ಟ್ರೋಕ್ ಪ್ಲೇ ಹಾ ಗೂ ಮಿಚೆಲ್ ಮಾರ್ಷ್ ಅವರ ಅಮೋಘ ಆಟ ಲಖನೌ ತಂಡದ ಪಾಲಿಗೆ ಸಕಾರಾತ್ಮಕ ಅಂಶ.

ತಂಡದ ಅನುಭವಿ ಸ್ಪಿನ್ನರ್ ರವಿ ಬಿಷ್ಣೋಯಿ ಮೇಲೆ ತಂಡ ಹೆಚ್ಚಿನ ವಿಶ್ವಾಸ ಇಟ್ಟುಕೊಂಡಿದೆ. ಡೆಲ್ಲಿ ವಿರುದ್ಧ ಮಣಿಮಾರನ್, ಸಿದ್ಧಾರ್ಥ್ ಮತ್ತು ದಿಗ್ವೇಶ್ ರಾಥಿ ಅವರ ಬೌಲಿಂಗ್ ನಿಯಂತ್ರಣದಿಂದ ಕೂಡಿತ್ತು. ಆದರೆ ಆ ಪಂದ್ಯದಲ್ಲಿ ಎರಡು ವಿಕೆಟ್ ಪಡೆದರೂ, ಆಲ್‌ರೌಂಡರ್ ಶಾರ್ದೂಲ್ ಠಾಕೂರ್ ಅವರನ್ನು ಎರಡು ಓವರುಗಳಿಗೆ ಸೀಮಿತಗೊಳಿಸಿದ್ದು ಹುಬ್ಬೇರಿಸಿತ್ತು.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸ್ಟಾರ್ ಆ್ಯಪ್.

ಕೆನ್ಯಾ ರಾಷ್ಟ್ರೀಯ ರ್‍ಯಾಲಿ ಗೆದ್ದ ನವೀನ್–ಮೂಸಾ ಜೋಡಿ

ಕೆನ್ಯಾದ ರಾಷ್ಟ್ರೀಯ ರ್‍ಯಾಲಿ ಚಾಂಪಿಯನ್‌ಷಿಪ್ ಆರ್‌ಸಿ3 ಗೆದ್ದ ಬಳಿಕ ಸಂಭ್ರಮಪಟ್ಟ ಮೂಸಾ ಷರೀಫ್ (ಎಡಗಡೆ) ಮತ್ತು ನವೀನ್ ಪುಲ್ಲಿಗಿಲ್ಲ

ನೈರೋಬಿ (ಪಿಟಿಐ): ಹೈದರಾಬಾದ್‌ನ ನವೀನ್ ಪುಲ್ಲಿಗಿಲ್ಲ ಮತ್ತು ಸಹಚಾಲಕರಾದ ಕಾಸರಗೋಡಿನ ಮೂಸಾ ಷರೀಫ್ ಅವರನ್ನೊಳಗೊಂಡ ತಂಡ ಪ್ರತಿಷ್ಠಿತ ಆರ್‌ಸಿ3 ಕೆನ್ಯಾದ ರಾಷ್ಟ್ರೀಯ ರ್‍ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿದೆ.

ಪ್ರತಿಷ್ಠಿತ ಸಫಾರಿ ರ್‍ಯಾಲಿ ಕೆನ್ಯಾ 2025, ವಿಶ್ವ ರ್‍ಯಾಲಿ ಚಾಂಪಿಯನ್‌ಷಿಪ್‌ನ ಭಾಗವಾಗಿದೆ. ಆಫ್ರಿಕಾ ಇಕೊ ಮೋಟರ್‌ಸ್ಪೋರ್ಟ್ ತಂಡದಲ್ಲಿದ್ದ ಇವರು ಫೋರ್ಡ್ ಫಿಯೆಸ್ಟಾ ರ್‍ಯಾಲಿ3 ಚಲಾಯಿಸಿದರು.

ವಿಶ್ವ ರ್‍ಯಾಲಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುತ್ತಿರುವ ಭಾರತದ ಮೊದಲ ಪೂರ್ಣಪ್ರಮಾಣದ ತಂಡ ಎಂಬ ಹಿರಿಮೆ ಇವರದಾಯಿತು.

'ನಾವು ಸಾಗಬೇಕಾಗಿದ್ದ ಹಾದಿ ದುರ್ಗಮ ಮಾತ್ರ ಆಗಿರಲಿಲ್ಲ. ಮೊದಲ ಸಲ ಭಾಗವಹಿಸುವ ಸ್ಪರ್ಧಿಗಳಿಗೆ ಸವಾಲು ಒಡ್ಡುವಂತೆ ಇತ್ತು. ಹವಾಮಾನವೂ ಬದಲಾಗುತಿತ್ತು. ಆದರೆ ನಾವು ವೇಗ ಉಳಿಸಿಕೊಂಡು ಗುರಿ ತಲುಪಿದೆವು' ಎಂದು ನವೀನ್ ಹೇಳಿದರು.

ಸಹ ಚಾಲಕರಾಗಿ ಮೂಸಾ ಅವರು 33 ವರ್ಷಗಳ ರ್‍ಯಾಲಿ ಅನುಭವ ಹೊಂದಿದ್ದಾರೆ. 330 ರ್‍ಯಾಲಿಗಳಲ್ಲಿ ಭಾಗವಹಿಸಿದ್ದಾರೆ. ಇವುಗಳಲ್ಲಿ 91 ಅಂತರರಾಷ್ಟ್ರೀಯ ಮಟ್ಟದ್ದು. 10 ಬಾರಿ ರಾಷ್ಟ್ರೀಯ ಪ್ರಶಸ್ತಿ ಗೆದ್ದಿದ್ದಾರೆ. ಅವರು ಭಾರತದ ಹಾಲಿ ರಾಷ್ಟ್ರೀಯ ರ್‍ಯಾಲಿ ಚಾಂಪಿಯನ್ ಸಹ ಚಾಲಕ ಕೂಡ.

ಬೋಪಣ್ಣ ಅಕಾಡೆಮಿಗೆ ಎಫ್‌ಸಿಆರ್‌ಎ

ನವದೆಹಲಿ (ಪಿಟಿಐ): ರೋಹನ್ ಬೋಪಣ್ಣ ಟೆನಿಸ್ ಅಭಿವೃದ್ಧಿ ಪ್ರತಿಷ್ಠಾನಕ್ಕೆ ಕೇಂದ್ರ ಗೃಹ ಸಚಿವಾಲಯವು ವಿದೇಶಿ ಕೊಡುಗೆ ಕಾಯಿದೆ 2010ರ ಅಡಿಯಲ್ಲಿ ಎಫ್‌ಸಿಆರ್‌ಎ ಲೈಸೆನ್ಸ್ ನೀಡಿದೆ.



ರೋಹನ್ ಬೋಪಣ್ಣ

'ಪ್ರತಿಷ್ಠಾನವು ಲೈಸೆನ್ಸ್‌ಗಾಗಿ ಅರ್ಜಿ ಸಲ್ಲಿಸಿತ್ತು. ಅಗತ್ಯವಾದ ಎಲ್ಲ ಅಧಿಕೃತ ಮಾಹಿತಿಗಳನ್ನು ಒದಗಿಸಿದೆ. ಆದ್ದರಿಂದ ಲೈಸೆನ್ಸ್ ಮಂಜೂರಾಗಿದೆ' ಎಂದು ಸಚಿವಾಲಯದ ಮೂಲಗಳು ತಿಳಿಸಿವೆ.

ಯಾವುದೇ ಸಂಘಟನೆಯು ವಿದೇಶದಿಂದ ಧನಸಹಾಯ ಪಡೆಯಲು ಎಫ್‌ಸಿಆರ್‌ಎ ಲೈಸೆನ್ಸ್ ಹೊಂದಿರುವುದು ಕಡ್ಡಾಯ.

ಟೆನಿಸ್ ತಾರೆ ರೋಹನ್ ಬೋಪಣ್ಣ ಅವರು ಅಕಾಡೆಮಿಯನ್ನು ಸ್ಥಾಪನೆ ಮಾಡಿದ್ದಾರೆ.

ಬೆಂಗಳೂರಿನಲ್ಲಿ 2016ರಿಂದ ರೋಹನ್ ಬೋಪಣ್ಣ ಟೆನಿಸ್ ಅಕಾಡೆಮಿ (ಆರ್‌ಬಿಟಿಎ) ಕಾರ್ಯನಿರ್ವಹಿಸುತ್ತಿದೆ. ಯುವ ಆಟಗಾರರಿಗೆ ಟೆನಿಸ್ ತರಬೇತಿಯನ್ನು ನೀಡಲಾಗುತ್ತಿದೆ.

ಸಂಕ್ಷಿಪ್ತ ಸುದ್ದಿ

ಬಾಕ್ಸಿಂಗ್ ಫೆಡರೇಷನ್ ಚುನಾವಣೆ ಮುಂದಕ್ಕೆ

ನವದೆಹಲಿ (ಪಿಟಿಐ): ಇದೇ ತಿಂಗಳ 28ರಂದು ನಿಗದಿಯಾಗಿದ್ದ ಭಾರತ ಬಾಕ್ಸಿಂಗ್ ಫೆಡರೇಷನ್‌ನ (ಬಿಎಫ್‌ಐ) ಚುನಾವಣೆಯನ್ನು ಬುಧವಾರ ಮುಂದೂಡಲಾಗಿದೆ.

ಮತದಾರರ ಪಟ್ಟಿಯಿಂದ ಕೈಬಿಟ್ಟ ಹೆಸರುಗಳನ್ನು ಮರುಸೇರ್ಪಡೆ ಮಾಡುವಂತೆ ದೆಹಲಿ ಮತ್ತು ಹಿಮಾಚಲ ಪ್ರದೇಶ ಹೈಕೋರ್ಟ್ ನಿರ್ದೇಶನ ನೀಡಿದ ಬೆನ್ನಲ್ಲೇ ಗಡುವಿನೊಳಗೆ ಪೂರ್ವನಿಗದಿಯಂತೆ ಪ್ರಕ್ರಿಯೆ ಮುಗಿಸಲು ಅಸಾಧ್ಯವಾದ ಕಾರಣ ಬಿಎಫ್‌ಐ ಈ ನಿರ್ಧಾರಕ್ಕೆ ಬಂದಿದೆ.

'ಮಾರ್ಚ್ 28ಕ್ಕೆ ನಿಗದಿಯಾಗಿದ್ದ ಭಾರತ ಬಾಕ್ಸಿಂಗ್ ಫೆಡರೇಷನ್‌ನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು (ಎಜಿಎಂ) ಮುಂದೂಡಲಾಗಿದೆ' ಎಂದು ಬಿಎಫ್‌ಐ ತನ್ನ ಸದಸ್ಯ ಘಟಕಗಳಿಗೆ ಕಳುಹಿಸಿರುವ ಅಧಿಸೂಚನೆಯಲ್ಲಿ ತಿಳಿಸಿದೆ.

ಅರ್ಜೆಂಟೀನಾಕ್ಕೆ ಅವಳಿ ಸಂಭ್ರಮ

ಬ್ಯೂನೊ ಏರ್ಸ್ (ಅರ್ಜೆಂಟೀನಾ), (ಎಪಿ): ಅರ್ಜೆಂಟೀನಾ ತಂಡಕ್ಕೆ ಮಂಗಳವಾರ ಸಂಭ್ರಮದ ದಿನವಾಗಿತ್ತು. ಮೊದಲು, 2026ರ ವಿಶ್ವಕಪ್ ಫುಟ್‌ಬಾಲ್ ಟೂರ್ನಿಗೆ ಅರ್ಹತೆ ಪಡೆದ ರೋಮಾಂಚನ. ಕೆಲವೇ ಗಂಟೆಗಳ ನಂತರ ಕಟ್ಟಾ ಎದುರಾಳಿ ಬ್ರೆಜಿಲ್ ಮೇಲೆ ಪಡೆದ 4–1ರ ಚಾರಿತ್ರಿಕ ಗೆಲುವು, ಆ ಸಂತಸವನ್ನು ಇಮ್ಮಡಿಗೊಳಿಸಿತು.

ಬೊಲಿವಿಯಾ ತಂಡ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯದಲ್ಲಿ ಉರುಗ್ವೆ ತಂಡವನ್ನು ಸೋಲಿಸಲು ವಿಫಲವಾದ ಕಾರಣ ಅರ್ಜೆಂಟೀನಾ ತಂಡದ ವಿಶ್ವಕಪ್ ಅರ್ಹತೆ ಹಾದಿ ಸಲೀಸಾಯಿತು. ಉರುಗ್ವೆ ತಂಡದ ವಿರುದ್ಧ ಬೊಲಿವಿಯಾ ತವರಿನಲ್ಲಿ ನಡೆದ ಪಂದ್ಯವನ್ನು ಗೋಲಿಲ್ಲದೇ ಡ್ರಾ ಮಾಡುವುದಕ್ಕಷ್ಟೇ ಶಕ್ತವಾಯಿತು.

'ಡಬ್ಲ್ಯುಪಿಎಲ್: ತಂಡಗಳ ಸಂಖ್ಯೆ ಹೆಚ್ಚಳ ಸದ್ಯಕ್ಕಿಲ್ಲ'

ನವದೆಹಲಿ (ಪಿಟಿಐ): ಮೂರು ವರ್ಷಗಳ ಅವಧಿಯಲ್ಲಿ ಮಹಿಳಾ ಪ್ರೀಮಿಯರ್ ಲೀಗ್ ನಿರೀಕ್ಷೆ ಮೀರಿ ಬೆಳವಣಿಗೆ ಕಂಡಿದೆ. ಆದರೆ ಡಬ್ಲ್ಯುಪಿಎಲ್‌ನಲ್ಲಿ ಭಾಗವಹಿಸುವ ತಂಡಗಳ ಸಂಖ್ಯೆಯನ್ನು ಈಗಿನ ಐದರಿಂದ ಹೆಚ್ಚಿಸುವ ಇರಾದೆ ಸದ್ಯೊಭವಿಷ್ಯದಲ್ಲಿ ಇಲ್ಲ ಎಂದು ಐಪಿಎಲ್ ಚೇರ್‌ಮನ್ ಅರುಣ್ ಧುಮಾಲ್ ತಿಳಿಸಿದ್ದಾರೆ.

ಧುಮಾಲ್ ಡಬ್ಲ್ಯುಪಿಎಲ್ ಸಮಿತಿಯ ಭಾಗವಾಗಿದ್ದಾರೆ. ಡಬ್ಲ್ಯುಪಿಎಲ್ ಸಮಿತಿಗೆ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಮುಖ್ಯಸ್ಥರಾಗಿದ್ದಾರೆ. ಮೂರು ವರ್ಷಗಳ ನಂತರ ತಂಡಗಳ ಸಂಖ್ಯೆ ಹೆಚ್ಚಿಸಲು ಈ ಮೊದಲು ಯೋಚಿಸಲಾಗಿತ್ತು. ಆದರೆ ಈಗ ಲೀಗ್‌ಅನ್ನು ಇನ್ನಷ್ಟು ಬಲವರ್ಧನೆಗೊಳಿಸಲು ತೀರ್ಮಾನಿಸಲಾಗಿದೆ.

'ತಂಡಗಳ ಸಂಖ್ಯೆ ಹೆಚ್ಚಿಸುವ ಮೊದಲು ಡಬ್ಲ್ಯುಪಿಎಲ್‌ಗೆ ಇನ್ನಷ್ಟು ಶಕ್ತಿ ತುಂಬಲು ನಾವು ನಿರ್ಧರಿಸಿಯಿಲ್ಲ. ಸದ್ಯ ತಂಡಗಳ ಸಂಖ್ಯೆ ಹೆಚ್ಚಿಸುವ ಯೋಜನೆಗಳಿಲ್ಲ' ಎಂದು ಧುಮಾಲ್ ಪಿಟಿಐಗೆ ತಿಳಿಸಿದರು.

ಕೊಚ್ಚಿಯಲ್ಲಿ ಆಡಲಿದೆ ಅರ್ಜೆಂಟೀನಾ

ಅಕ್ಟೋಬರ್ 14ರಂದು ಪ್ರದರ್ಶನ ಪಂದ್ಯ ನಿಗದಿ

ನವದೆಹಲಿ (ಪಿಟಿಐ): ಭಾರತದ ಫುಟ್‌ಬಾಲ್ ಅಭಿಮಾನಿಗಳು, ವಿಶ್ವ ಖ್ಯಾತ ಆಟಗಾರ ಲಯೊನೆಲ್ ಮೆಸ್ಸಿ ಮತ್ತು ಅರ್ಜೆಂಟೀನಾ ತಂಡದ ಆಟವನ್ನು ಕಣ್ತುಂಬಿಕೊಳ್ಳುವ ಅವಕಾಶ ಪಡೆಯಲಿದ್ದಾರೆ. ವಿಶ್ವಕಪ್ ವಿಜೇತ ಅರ್ಜೆಂಟೀನಾ ತಂಡ ಈ ವರ್ಷದ ಅಕ್ಟೋಬರ್ 14ರಂದು ಕೊಚ್ಚಿಯಲ್ಲಿ ಪ್ರದರ್ಶನ ಪಂದ್ಯ ಆಡಲಿದೆ.

ಅರ್ಜೆಂಟೀನಾ ತಂಡದ ಭೇಟಿಯನ್ನು ಕೇರಳದ ಕ್ರೀಡಾ ಸಚಿವ ವಿ.ಅಬ್ದುರಹಿಮಾನ್ ಅವರು ಕಳೆದ ನವೆಂಬರ್‌ನಲ್ಲೇ ಪ್ರಕಟಿಸಿದ್ದರು. ಎಚ್‌ಎಸ್‌ಬಿಸಿ ಇಂಡಿಯಾ, ಅರ್ಜೆಂಟೀನಾ ತಂಡದ ಅಧಿಕೃತ ಪಾಲುದಾರನಾಗಿದ್ದು ದೇಶದಲ್ಲಿ ಫುಟ್‌ಬಾಲ್ ಪ್ರೋತ್ಸಾಹಕ್ಕೆ ಬೆಂಬಲ ನೀಡಲಿದೆ ಎಂದು ಬುಧವಾರ ಘೋಷಿಸಲಾಯಿತು.

ಮೆಸ್ಸಿ

'ಅರ್ಜೆಂಟೀನಾ ಫುಟ್‌ಬಾಲ್ ಫೆಡರೇಷನ್ (ಎಎಫ್‌ಎ) ಮತ್ತು ಎಚ್‌ಎಸ್‌ಬಿಸಿ, ಭಾರತ ಮತ್ತು ಸಿಂಗ ಪುರದಲ್ಲಿ ಒಂದು ವರ್ಷದ ಪಾಲುದಾರಿಕೆಗೆ ಬುಧವಾರ ಸಹಿ ಹಾಕಿವೆ. ಇದರ ಪ್ರಕಾರ 2026ರ ವಿಶ್ವ ಕಪ್‌ಗೆ ಪೂರ್ವಭಾವಿಯಾಗಿ ಸ್ಪರ್ಧಾತ್ಮಕ ಋತು ವಿಗೆ ಅರ್ಜೆಂಟೀನಾ ಸಹಕಾರ ನೀಡಲಿದೆ' ಎಂದು ಎಚ್‌ಎಸ್‌ಬಿಸಿ ಪ್ರಕಟಣೆ ತಿಳಿಸಿದೆ.

'ಈ ಪಾಲುದಾರಿಯ ಅನ್ವಯ, ದಿಗ್ಗಜ ಆಟಗಾರ ಮೆಸ್ಸಿ ಒಳಗೊಂಡಂತೆ ಅರ್ಜೆಂಟೀನಾ ರಾಷ್ಟ್ರೀಯ ತಂಡ 2025ರ ಅಕ್ಟೋಬರ್‌ನಲ್ಲಿ ಭಾರತಕ್ಕೆ ಭೇಟಿ ನೀಡಲಿದ್ದು, ಅಂತರರಾಷ್ಟ್ರೀಯ ಪ್ರದರ್ಶನ ಪಂದ್ಯ ಆಡಲಿದೆ' ಎಂದು ತಿಳಿಸಿದೆ. 2011ರಲ್ಲಿ ವೆನೆಜುವೆಲಾ ವಿರುದ್ಧ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯದಲ್ಲಿ ಮೆಸ್ಸಿ ಅರ್ಜೆಂಟೀನಾ ತಂಡದೊಡನೆ ಮೊದಲ ಬಾರಿ ಭಾರತಕ್ಕೆ ಬಂದಿದ್ದರು. ಕೋಲ್ಕತ್ತದಲ್ಲಿ ನಡೆದ ಪಂದ್ಯವನ್ನು ಅರ್ಜೆಂಟೀನಾ 1–0ಯಿಂದ ಗೆದ್ದುಕೊಂಡಿತ್ತು.

ಟಿ20 ಸರಣಿ 4–1ರಿಂದ ಗೆದ್ದ ನ್ಯೂಜಿಲೆಂಡ್

ಸೀಫರ್ಟ್ ಆಟಕ್ಕೆ ಬೆಚ್ಚಿದ ಪಾಕ್

ವೆಲಿಂಗ್ಟನ್ (ಎಎಫ್‌ಪಿ): ಕೇವಲ 38 ಎಸೆತಗಳಲ್ಲಿ ಅಜೇಯ 97 ರನ್ ಸಿಡಿಸಿದ ಆರಂಭ ಆಟಗಾರ ಟಿಮ್ ಸೀಫರ್ಟ್, ಬುಧವಾರ ನಡೆದ ಐದನೇ ಹಾಗೂ ಅಂತಿಮ ಟಿ20 ಕ್ರಿಕೆಟ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡ ಎಂಟು ವಿಕೆಟ್‌ಗಳಿಂದ ಪಾಕಿಸ್ತಾನ ತಂಡವನ್ನು ಸೋಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಸರಣಿಯನ್ನು ಆತಿಥೇಯರು 4–1 ರಿಂದ ಗೆದ್ದುಕೊಂಡರು.

ಜಹಾನ್‌ದಾದ್ ಖಾನ್ ಅವರ ಮೊದಲ ಓವರಿನಲ್ಲೇ 18 ರನ್ ಹೊಡೆದ ಸೀಫರ್ಟ್ ಆಕ್ರಮಣಕಾರಿ ಇನಿಂಗ್ಸ್‌ನಲ್ಲಿ ಹತ್ತು ಸಿಕ್ಸರ್, ಆರು ಬೌಂಡರಿಗಳನ್ನು ಚಚ್ಚಿದರು. ಮೊದಲ ವಿಕೆಟ್‌ಗೆ ಫಿನ್ ಅಲೆನ್ (27, 12ಎ, 4x5, 6x2) ಜೊತೆ ಬರೇ 6.2 ಓವರುಗಳಲ್ಲಿ 93 ರನ್ ಜೊತೆಯಾಟವಾಡಿದರು.

ಸೀಫರ್ಟ್

ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಪಾಕಿಸ್ತಾನ 20 ಓವರುಗಳಲ್ಲಿ 9 ವಿಕೆಟ್‌ಗೆ 128 ರನ್ ಹೊಡೆಯಿತು. ಮಧ್ಯಮ ವೇಗಿ ಜಿಮ್ಮಿ ನೀಶಮ್ 22 ರನ್ನಿಗೆ 5 ವಿಕೆಟ್ ಪಡೆದು ಪಾಕ್ ದೊಡ್ಡ ಮೊತ್ತ ಗಳಿಸದಂತೆ ತಡೆಯೊಡ್ಡಿದರು. ಉತ್ತರವಾಗಿ ನ್ಯೂಜಿಲೆಂಡ್ 10 ಓವರುಗಳಲ್ಲಿ 2 ವಿಕೆಟ್‌ಗೆ 131 ರನ್ ಬಾರಿಸಿತು. ಜಿಮ್ಮಿ ನೀಶಮ್ ಪಂದ್ಯದ ಆಟಗಾರನಾದರೆ, ಸೀಫರ್ಟ್ ಸರಣಿಯ ಸರ್ವೋತ್ತಮ ಗೌರವಕ್ಕೆ ಪಾತ್ರರಾದರು.

ಸ್ಕೋರುಗಳು: **ಪಾಕಿಸ್ತಾನ:** 29 ಓವರುಗಳಲ್ಲಿ 9 ವಿಕೆಟ್‌ಗೆ 128 (ಸಲ್ಮಾನ್ ಆಘಾ 51, ಶದಾಬ್ ಖಾನ್ 28; ಜಾಕೋಬ್ ಡಫಿ 18ಕ್ಕೆ2, ಜಿಮ್ಮಿ ನೀಶಮ್ 22ಕ್ಕೆ5); **ನ್ಯೂಜಿಲೆಂಡ್:** 10 ಓವರುಗಳಲ್ಲಿ 2 ವಿಕೆಟ್‌ಗೆ 131 (ಟಿಮ್ ಸೀಫರ್ಟ್ ಔಟಾಗದೇ 97, ಫಿನ್ ಅಲೆನ್ 27, ಸುಫಿಯಾನ್ ಮುಖೀಮ್ 6ಕ್ಕೆ2).

'ತಂಡಕ್ಕಾಗಿ ಶತಕ ಬಿಟ್ಟ ಶ್ರೇಯಸ್'

ಅಹಮದಾಬಾದ್ (ಪಿಟಿಐ): 'ನನ್ನ ಶತಕದ ಬಗ್ಗೆ ಯೋಚನೆ ಮಾಡಬೇಡ. ಪ್ರತಿ ಎಸೆತವನ್ನೂ ಬೌಂಡರಿ ಅಥವಾ ಸಿಕ್ಸರ್ ಹೊಡಿ ಎಂದು ಶ್ರೇಯಸ್ ಅಯ್ಯರ್ ಅವರೇ ನನಗೆ ಹೇಳಿದ್ದರು. ತಮ್ಮ ಶತಕಕ್ಕೆ ಕೇವಲ 3 ರನ್‌ಗಳಷ್ಟೇ ಬೇಕಾದಾಗಲೂ ಈ ರೀತಿ ಹೇಳಲು ದೊಡ್ಡ ಮನಸ್ಸು ಮತ್ತು ದಿಟ್ಟತನ ಇರಬೇಕಾಗುತ್ತದೆ. ಅದು ಶ್ರೇಯಸ್ ಅವರಲ್ಲಿದೆ' ಎಂದು ಪಂಜಾಬ್ ಕಿಂಗ್ಸ್ ತಂಡದ ಆಟಗಾರ ಶಶಾಂಕ್ ಸಿಂಗ್ ಹೇಳಿದರು.

ಮಂಗಳವಾರ ಗುಜರಾತ್ ಟೈಟನ್ಸ್ ಎದುರಿನ ಪಂದ್ಯದಲ್ಲಿ ಶ್ರೇಯಸ್ ಮತ್ತು ಶಶಾಂಕ್ ಅಬ್ಬರದ ಬ್ಯಾಟಿಂಗ್ ಮೂಲಕ ರನ್ ಸೂರೆ ಮಾಡಿದ್ದರು.

ಇನಿಂಗ್ಸ್‌ನ ಕೊನೆಯ ಓವರ್ ಆರಂಭವಾದಾಗ ಶ್ರೇಯಸ್ 97 ರನ್ ಹೊಡೆದು ನಾನ್‌ಸ್ಟ್ರೈಕ್ ಭಾಗದಲ್ಲಿದ್ದರು. ಆ ಓವರ್‌ನಲ್ಲಿ ಶಶಾಂಕ್ ಐದು ಬೌಂಡರಿ ಮತ್ತು ಎರಡು ರನ್ ಗಳಿಸಿದ್ದರು. ಇದರಿಂದಾಗಿ ಶ್ರೇಯಸ್‌ಗೆ ಶತಕ ಪೂರೈಸಲಾಗಲಿಲ್ಲ.

ಈ ಕುರಿತು ಪಂದ್ಯದ ನಂತರ ಮಾಧ್ಯಮದೊಂದಿಗೆ ಮಾತನಾಡಿದ ಶಶಾಂಕ್, 'ಪ್ರಾಮಾಣಿಕವಾಗಿ ಹೇಳುತ್ತೇನೆ. ನಾನು ಸ್ಕೋರ್ ಬೋರ್ಡ್ ನೋಡಿರಲಿಲ್ಲ.

ಕೊನೆಯ ಓವರ್‌ನ ಮೊದಲ ಎಸೆತವನ್ನು ಬೌಂಡರಿಗೆ ಬಾರಿಸಿದ ನಂತರ ಸ್ಕೋರ್‌ನತ್ತ ಗಮನ ಹರಿಸಿದೆ. ಆಗ ಶ್ರೇಯಸ್ 97 ರನ್ ಗಳಿಸಿರುವುದು ಗೊತ್ತಾಯಿತು. ನಾನು ಏನೂ ಹೇಳಲಿಲ್ಲ. ಅವರೇ ನನ್ನ ಬಳಿ ಬಂದರು. ಪ್ರತಿ ಎಸೆತವನ್ನೂ ಬೌಂಡರಿ ದಾಟಿಸು, ನನ್ನ ಶತಕದ ಬಗ್ಗೆ ಯೋಚನೆ ಬೇಡ' ಎಂದರು.

ಬೆಂಗಳೂರಿನಲ್ಲಿ ಏಪ್ರಿಲ್ 27ರಂದು ನಡೆಯಲಿರುವ ಓಟ

ಟಿಸಿಎಸ್ 10ಕೆ ರನ್: ಕಣದಲ್ಲಿ ಜೋಶುವಾ ಚೆಪ್ಟೆಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನೊಂದು ತಿಂಗಳು ನಂತರ ನಡೆಯಲಿರುವ ಟಿಸಿಎಸ್ ವಿಶ್ವ 10ಕೆ ಓಟದಲ್ಲಿ ಸ್ಪರ್ಧಿಸಲು 30 ಸಾವಿರಕ್ಕೂ ಹೆಚ್ಚು ಜನರು ಹೆಸರು ನೋಂದಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಟಿಸಿಎಸ್ ವಿಶ್ವ 10ಕೆ ಓಟದಲ್ಲಿ ಎಸಿಕ್ಸ್ ಫಿನಿಷರ್ ಟೀ ಬಿಡುಗಡೆ ಮಾಡಲಾಯಿತು (ಎಡದಿಂದ) ಪ್ರೊಕ್ಯಾಮ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್, ಏಯ್ಡ್‌ಬೀಸ್ ಸಿಎಂಒ ಝುಮರೂದಾ ಖಾಂಡೆ, ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಕಾರ್ಯದರ್ಶಿ ಎ. ರಾಜವೇಲು, ಮಾರುಕಟ್ಟೆ ನಿರ್ದೇಶಕ ಸೌರಭ್ ಶರ್ಮಾ, ಸಮರ್ಥನಂ ಟ್ರಸ್ಟ್ ಸಂಸ್ಥಾಪಕ ಮಹಾಂತೇಶ್ ಜಿ ಕಿವುಡಸಣ್ಣವರ, ಟಿಸಿಎಸ್ ಪ್ರಾದೇಶಿಕ ಮುಖ್ಯಸ್ಥ ಸುನೀಲ್ ದೇಶಪಾಂಡೆ, ಹಾಕಿ ಆಟಗಾರ ಮನಪ್ರೀತ್ ಸಿಂಗ್, ಶಾಸಕ ಎನ್‌.ಎ. ಹ್ಯಾರಿಸ್, ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಟಾರಿಯಾ, ಕ್ರೀಡಾ ಇಲಾಖೆ ಕಾರ್ಯದರ್ಶಿ ಡಿ. ರಂದೀಪ್, ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ದಕ್ಷಿಣ ವಲಯ ಮುಖ್ಯಸ್ಥ ನಿರೀಶ್ ಲಲ್ಲನ್ .

ಏಪ್ರಿಲ್ 27ರಂದು ನಡೆಯುವ ಈ ಓಟದಲ್ಲಿ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ದಾಖಲೆ ಮಾಡಿರುವ (5 ಸಾವಿರ ಮೀ ಮತ್ತು 10 ಸಾವಿರ ಮೀ) ಉಗಾಂಡ ದೇಶದ ಜೋಶುವಾ ಕಿಪ್ರುಯಿ ಚೆಪ್ಟೆಗಿ ಅವರು ಈ ಬಾರಿ ಭಾಗವಹಿಸಲಿರುವುದು ವಿಶೇಷ. ಮೂರು ಒಲಿಂಪಿಕ್ ಕೂಟಗಳಲ್ಲಿ ಸ್ಪರ್ಧಿಸಿರುವ ಜೊಶುವಾ ಅವರು 11 ವರ್ಷಗಳ ನಂತರ ಬೆಂಗಳೂರಿನಲ್ಲಿ ಸ್ಪರ್ಧಿಸಲಿದ್ದಾರೆ. ಅವರಲ್ಲದೇ ಇಂಡಿಯನ್ ಚಾಲೆಂಜ್ ವಿಭಾಗದ ಹಾಲಿ ಚಾಂಪಿಯನ್ ಮತ್ತು ಕೂಟದ ದಾಖಲೆಯ ಒಡೆಯರಾಗಿರುವ ಕಿರಣ್ ಮಾತ್ರೆ ಮತ್ತು ಸಂಜೀವನಿ ಜಾಧವ್ ಕೂಡ ಕಣದಲ್ಲಿದ್ದಾರೆ.

ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಈ ಓಟದ ಪ್ರವರ್ತಕರಾದ ಪ್ರೊಕ್ಯಾಮ್ ಇಂಟರ್‌ನ್ಯಾಷನಲ್ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿವೇಕ್ ಸಿಂಗ್, 'ವರ್ಷದಿಂದ ವರ್ಷಕ್ಕೆ ಟಿಸಿಎಸ್ 10ಕೆ ಓಟದ ಜನಪ್ರಿಯತೆ ಹೆಚ್ಚಾಗುತ್ತಿದೆ. ನೋಂದಣಿಗಳ ಸಂಖ್ಯೆಯಲ್ಲಿ ದಾಖಲೆಯ ಏರಿಕೆ ಕಾಣುತ್ತಿದೆ. ಓಟದ ಹವ್ಯಾಸವನ್ನು ಜನರು ಮೈಗೂಡಿಸಿಕೊಳ್ಳುತ್ತಿದ್ದಾರೆ. ಆ ಮೂಲಕ ಫಿಟ್‌ನೆಸ್ ಮತ್ತು ಆರೋಗ್ಯದ ಅರಿವು ಜನಸಮೂಹದಲ್ಲಿ ಮೂಡುತ್ತಿದೆ. ಈ ಓಟದ ಆಯೋಜನೆಯ ಪ್ರಮುಖ ಉದ್ದೇಶವೂ ಆರೋಗ್ಯದ ಅರಿವು ಮೂಡಿಸುವುದೇ ಆಗಿದೆ' ಎಂದರು.

'ಈ ಸಲವೂ ಫೀಲ್ಡ್ ಮಾರ್ಷಲ್ ಮಣೇಕ್ ಶಾ ಪರೇಡ್ ಗ್ರೌಂಡ್‌ನಿಂದಲೇ ಓಟ ಶುರುವಾಗಲಿದೆ. ದೇಶದ ಮತ್ತು ಅಂತರರಾಷ್ಟ್ರೀಯ ಖ್ಯಾತಿಯ ಓಟಗಾರರು ಕಣಕ್ಕಿಳಿಯುವರು. ಅಲ್ಲದೇ ಮಜಾ ರನ್ ಕೂಡ ಇರಲಿದೆ' ಎಂದರು.

ಈ ಸಂದರ್ಭದಲ್ಲಿ ಭಾರತ ಹಾಕಿ ತಂಡದ ಆಟಗಾರ ಮನ್‌ಪ್ರೀತ್ ಸಿಂಗ್ ಅವರು ಓಟದ ಪೋಷಾಕು ಬಿಡುಗಡೆ ಮಾಡಿದರು.

'ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಕಂಚಿನ ಪದಕ ಗೆದ್ದ ಕ್ಷಣವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ನನ್ನ ನಾಯಕತ್ವದಲ್ಲಿ ಭಾರತ ತಂಡವು ಆ ಸಾಧನೆ ಮಾಡಿದ್ದು ಹೆಮ್ಮೆಯ ಕ್ಷಣವಾಗಿದೆ. 41 ವರ್ಷಗಳ ನಂತರ ಭಾರತಕ್ಕೆ ಹಾಕಿ ಕ್ರೀಡೆಯಲ್ಲಿ ಒಲಿಂಪಿಕ್ ಪದಕ ಒಲಿದ ಕ್ಷಣ ಅದು.

ನಮ್ಮ ದೇಶಕ್ಕೆ ಒಲಿಂಪಿಕ್ಸ್‌ನಲ್ಲಿ ಹಲವು ಪದಕಗಳು ಬಂದ ಕತೆಗಳನ್ನು ಕೇಳಿದ್ದೆವು. ನೋಡಿರಲಿಲ್ಲ. ಆದರಿಂದ ನಾವೇ ರಚಿಸಿದ ಇತಿಹಾಸದಿಂದಾಗಿ ಅಪಾರ ಖುಷಿಯಾಗಿತ್ತು. ಪ್ಯಾರಿಸ್ ಒಲಿಂಪಿಕ್ ಕೂಟದ ಕಂಚಿನ ಪದಕ ಜಯ ಕೂಡ ವಿಶೇಷವಾಗಿತ್ತು. ಅಲ್ಲಿ ನನ್ನ ಮಗಳು ಪ್ರೇಕ್ಷಕರ ಗ್ಯಾಲರಿಯಲ್ಲಿದ್ದಳು. ಗೆದ್ದ ಪದಕವನ್ನು ಅವಳ ಕೊರಳಿಗೆ ಹಾಕಿ ಸಂಭ್ರಮಿಸಿದ್ದೆ. ನಾವು ಮುಂದಿನ ಪೀಳಿಗೆಯ ಆಟಗಾರರಿಗೆ ಆತ್ಮವಿಶ್ವಾಸದ ಹಾದಿಯನ್ನು ತೋರಿದ್ದೇವೆ ಎಂಬ ಸಂತೃಪ್ತಿ ಇದೆ' ಎಂದು ಮನದೀಪ್ ಹೇಳಿದರು.

SAMSUNG
ಹೊಚ್ಚ ಹೊಸ
Galaxy A56 | A36 | A26 5G
Awesome Intelligence
Best Face
Instant Slo-mo
Auto Trim
Circle to Search with Google
Awesome Intelligence
Now available in trendy colours
ಅದ್ಭುತ ಆಫರ್‌ಗಳು
8/256 GBಗೆ ಪಾವತಿ ಮಾಡಿ.
12/256 GB ಪಡೆಯಿರಿ
₹3000## ಮೌಲ್ಯದ ಕೊಡುಗೆಯನ್ನು
ಅಥವಾ
₹3000* ವರೆಗೆ ಬ್ಯಾಂಕ್ ಕ್ಯಾಶ್‌ಬ್ಯಾಕ್
HDFC BANK
SBI card
+
ಸ್ಕ್ರೀನ್ ಪ್ರೊಟೆಕ್ಷನ್ @ ₹2999 ₹999#
Samsung Care+
+
18 ತಿಂಗಳುಗಳ ನೋ ಕಾಸ್ಟ್ EMI**
Samsung Finance+
BAJAJ FINSERV
TVS CREDIT
IDFC FIRST Bank
samsung.com
Scan for an awesome experience.
Or WhatsApp "Galaxy A" to 9870 494949 to buy now at Samsung Exclusive Store
Cheil-25291/25